
ಡಾ|| ಗೌರೀಶ ಕಾಯ್ಕಿಣಿ

ಬದುಕು ಬರಹ

'ನಾ. ಸು' – ಭರತನಹಳ್ಳಿ



ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು – ೧೮

BVP-1211- ૨૭|૧૨|૧૭
1223- (૫)

ಡಾ|| ಗೌರೀಶ ಕಾಯ್ಕಿಣಿ - ಬದುಕು ಬರಹ

'ನಾ. ಸು' – ಭರತನಹಳ್ಳಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–೫೬೦ ೦೧೮

Dr. GOUREESHA KAIKINI—A life sketch by
'Na. Su' - Bharatanahalli
Published by Kannada Sahitya Parishat,
Pampa Mahakavi Road, Chamarajpet,
Bangalore-560 018.
Pages : 112 + vi ; Price : Rs. 20-00, 1997.

ಮೊದಲನೆಯ ಮುದ್ರಣ : ೧೯೯೭
ಪ್ರತಿಗಳು : ೧೦೦೦

ಬೆಲೆ : ರೂ. ೨೦/-

ಮುದ್ರಣ : ಬಿ ಎಂ. ಶ್ರೀ. ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–೫೬೦೦೧೮

ಮುನ್ನುಡಿ

ಬಹುಶ್ರುತರೂ ಬಹುಭಾಷಾ ವಿಶಾರದರೂ ಆದ ಗೌರೀಶ ಕಾಯ್ಕಿಣಿಯವರು ಕನ್ನಡಮ್ಮನ ಅಭಿಮಾನೀ ಪುತ್ರರು. ಅವರ ನಿರಂತರ ಸೇವೆಯಿಂದಾಗಿ ಕನ್ನಡ ಸಾರಸ್ವತ ಕ್ಷೇತ್ರ ಶ್ರೀಮಂತವಾಗಿದೆ. ಸೃಜನಾತ್ಮಕ ರಚನೆಗಿಂತ ಸೃಜನೇತರದಲ್ಲಿ ಅವರದು ಬಹು ದೊಡ್ಡ ಹೆಸರು. ಕನ್ನಡ ವಿಚಾರ ಸಾಹಿತ್ಯದ ಆದ್ಯಪ್ರವರ್ತಕರೆಂದು ಹೇಳುವಲ್ಲಿ ಹೆಮ್ಮೆ ಇದೆ. ವಿಚಾರವಾದದ ಹಲವು ಮಗ್ಗಲುಗಳನ್ನು ಹಲವು ಮಜಲುಗಳಲ್ಲಿ ಗುರುತಿಸಿ ವಿಶ್ಲೇಷಿಸುವ ಮೂಲಕ ಕನ್ನಡ ಸಾಹಿತ್ಯದಲ್ಲಿ ವೈಚಾರಿಕತೆಯ ಹೊಸಕ್ಷಿತಿಜವನ್ನೇ ನಿರ್ಮಾಣ ಮಾಡಿದರು. ವಿಚಾರವಾದವು (Rationalists) ಪ್ರಜ್ಞಾವಾದ(Rationalitation)ದಿಂದ ಸಂಪೂರ್ಣ ಭಿನ್ನ ಹಾಗೂ ಅರ್ಥಪೂರ್ಣ ಎಂಬುದನ್ನು ಪ್ರತಿಪಾದಿಸುವಲ್ಲಿ ತಮ್ಮ ಸ್ವೋಪಜ್ಞತೆಯನ್ನು ಮೆರೆದು ಕನ್ನಡಕ್ಕೊಂದು ಹೊಸ ಆಯಾಮವನ್ನೇ ನಿರ್ಮಿಸಿಕೊಟ್ಟ ಕೀರ್ತಿ ಗೌರೀಶ ಕಾಯ್ಕಿಣಿಯವರಿಗೆ ಸಲ್ಲುತ್ತದೆ. 'ಗುಣಗೌರವ' ಗ್ರಂಥವನ್ನು ಅವಲೋಕಿಸುವಾಗ ಕಾಯ್ಕಿಣಿಯವರ ವ್ಯಕ್ತಿತ್ವದ ಎತ್ತರ ಬಿತ್ತರಗಳನ್ನು ಬೇರೆಯವರ ಕಣ್ಣುಗಳ ಮೂಲಕ ನೋಡಿದ್ದೆ, ಆದರೆ 'ವಿಚಾರವಾದ' ಕುರಿತ ಅವರ ಮೂರೂ ಪುಸ್ತಕಗಳನ್ನು ಓದಿದಾಗ ಅವರನ್ನೇ ನಾನು ಕಂಡೆ. ಆ ಮಹಾನ್ ವ್ಯಕ್ತಿತ್ವವನ್ನು ನಾನು ಮೆಚ್ಚಿದ್ದೇನೆ. ಮಾಸದ ಎರಡು ಮಾತುಗಳನ್ನಾಡಿ ಮಣಿದಿದ್ದೇನೆ.

ಗೌರೀಶರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಗೌರವ ಡಾಕ್ಟರೇಟ್ ಪ್ರಶಸ್ತಿಗಳು ಬಂದಿವೆ. ನೀಲಾಂಜನ, ಗುಣಗೌರವಗಳೆಂಬ ಸಂಸ್ಮರಣ ಸಂಚಿಕೆಗಳು ಪ್ರಶಂಸಿವೆ, ಹಲವು ಷಷ್ಠ್ಯಬ್ದಿ ಸಮಿತಿಗಳ. ಸಂಮಾನಿಸಿವೆ, ಆದರೂ ಆ ಪ್ರತಿಭೆಗೆ ಸೂಕ್ತ ಸ್ಥಾನವನ್ನು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ದೊರಕಿಸಿಕೊಟ್ಟಿಲ್ಲ ಎಂಬ ಮಾತು ಸತ್ಯಕ್ಕೆ ದೂರವಲ್ಲ. ಅವರ ಅನೇಕ ಅಪ್ರಕಟಿತ ಕೃತಿಗಳನ್ನು ಬೆಳಕಿಗೆ ತರುವ ಮೂಲಕ ಅವುಗಳನ್ನು ಕುರಿತ ವಿಚಾರ ಸಂಕಿರಣಗಳನ್ನೇರ್ಪಡಿಸುವ ಮೂಲಕ ಶ್ರೀಯುತರಿಗೆ ಕರ್ನಾಟಕ ತನ್ನ ಗೌರವ ಸಲ್ಲಿಸಲಿ ಎಂದು ಆಶಿಸುತ್ತೇನೆ.

ಇಂತಹ ಮನ್ನಣೆಯ ಮಕುಟವಿರಿಸುವ ದಿಸೆಯಲ್ಲಿ ಸಾಹಿತಿ ಮಿತ್ರ ಶ್ರೀ 'ನಾಸು' ಭರತನಹಳ್ಳಿಯವರದು ಒಂದು ಸ್ತುತ್ಯ ಪ್ರಯತ್ನ. ಅದು ಈ ಕಿರುಹೊತ್ತಗೆಯ ಮೂಲಕ ಪ್ರಕಾಶಕ್ಕೆ ಬಂದಿದೆ. ಸಿರಸಿ, ದಾಂಡೇಲಿ ಮತ್ತು ಹೊನ್ನಾವರಗಳಲ್ಲಿ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನಗಳಲ್ಲಿ ಭೇಟಿಯಾದಾಗ ಲೆಲ್ಲಾ ಭರತನಹಳ್ಳಿಯವರು ಗೌರೀಶರ ಕುರಿತ ಒಂದು ಪರಿಚಯಾತ್ಮಕ ಕೃತಿಯನ್ನು ಪ್ರಕಟಿಸಲು ಕೇಳುತ್ತಲೇ ಇದ್ದರು. ಪರಿಷತ್ತಿಗೆ ಆರ್ಥಿಕ ಮುಗ್ಗಟ್ಟಿದ್ದರೂ ಒಳ್ಳೆಯ ರಚನೆ ಹೊರಬರಲಿ ಎಂಬ ಸದುದ್ದೇಶದಿಂದ 'ಡಾ|| ಗೌರೀಶ ಕಾಯ್ಕಿಣಿ' ಪ್ರಕಟಿಸಿ ಸಹೃದಯರ ಕೈಗಿರಿಸಿದ್ದೇವೆ. ಸ್ವೀಕರಿಸಿ ಒಂದು ಅಪೂರ್ವ ಪ್ರಾತಿಭಜ್ಯೋತಿಯನ್ನು ಗೌರವಿಸಬೇಕಾಗಿ ವಿನಂತಿ.

ಕೃತಿಕಾರ 'ನಾಸು' ಭರತನಹಳ್ಳಿಯವರಿಗೆ, ಪರಿಷತ್ತಿನ ಪದಾಧಿಕಾರಿ ಮಿತ್ರರಿಗೆ, ಪ್ರಕಟಣ ಸಮಿತಿಗೆ ಹಾಗೂ ಮುದ್ರಕವರ್ಗಕ್ಕೆ ನಮನಗಳು.

ಸಾ. ಶಿ. ಮರುಳಯ್ಯ

೨-೬-೧೯೯೭ ಅಧ್ಯಕ್ಷ

ಲೇಖಕನ ಅರಿಕೆ

ಕನ್ನಡಕ್ಕೊಬ್ಬ ಕೈಲಾಸಂ, ಕನ್ನಡಕ್ಕೊಬ್ಬ ಕಾರಂತ ಅನ್ನುವುದುಂಟು. ಕನ್ನಡಕ್ಕೊಬ್ಬನೇ 'ಗೌರೀಶ ಕಾಯ್ಕಿಣಿ' ಎಂದೂ ಅನ್ನಬೇಕು. ಅಭಿನವ ಕಾರಂತರಾಗಿ ತಮ್ಮ ವಿಶಾಲ ಅನುಭವದಲ್ಲಿ ವಿಶ್ವತೋ ಮುಖರಾಗಿ, ವಿರಾಟ ರೂಪರಾಗಿ ಸಲ್ಲುವ ಡಾ||. ಗೌರೀಶ ಕಾಯ್ಕಿಣಿಯವರನ್ನು ಪರಿಚಯಿಸುವ ಕಾರ್ಯ ಸಾಮಾನ್ಯದ್ದಲ್ಲ ಎಂಬ ವಿನೀತ ಭಾವ ಹೊಂದಿಯೇ ಆ ಸಾಹಸ ಗೈದಿದ್ದೇನೆ. ಅತ್ಯಂತ ಪೂಜ್ಯರಾಗಿರುವ ಡಾ|| ಗೌರೀಶರನ್ನು ಅವರ ಬರಹಗಳೊಂದಿಗೆ ಪರಿಚಯಿಸಿಕೊಳ್ಳಬೇಕಾದ್ದೂ ಅವಿನಾ ಸಂಬಂಧ. ಆದರೆ ಅವರನ್ನಿಲ್ಲಿ ಪರಿಚಯಿಸಲು ನಾನೆಷ್ಟೇ ಹೆಣಗಿದರೂ ಅದು ಅಪೂರ್ಣವೇ ಸರಿ. ಈ ಪುಸ್ತಕದ ಪುಟಮಿತಿಯಲ್ಲಿ ಆದಷ್ಟು ವಿಹಂಗಮ ನೋಟ–ಓಟ ಕೈಕೊಂಡು ಸಿಕ್ಕಿದ್ದಷ್ಟನ್ನು ಅಪ್ಪಿ ತಂದಿರಿಸಿದ್ದೇನೆ. ಹಾಗೆ ಗೌರೀಶರ ಬರಹದತ್ತ ನನ್ನದಿಲ್ಲಿ ಸಮೀಕ್ಷೆಯೂ ಅಲ್ಲ ; ವಿಮರ್ಶೆಯೂ ಅಲ್ಲ. ಕೇವಲ ಪರಿಚಯಾತ್ಮಕ ಕಾರ್ಯವೆಂಬುದನ್ನು ವಿನಮ್ರತೆಯಿಂದ ಸ್ಪಷ್ಟಪಡಿಸುತ್ತೇನೆ.

ನನಗೊಂದು ಇದು ಪುಣ್ಯತಮ ಕಾರ್ಯ ; ಅಂಥ ಒಂದು ಧನ್ಯತಾಭಾವ. ಈ ಭಾಗ್ಯವನ್ನು ಒದಗಿಸಿಕೊಟ್ಟುದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸನ್ಮಾನ್ಯ ಸಾ. ಶಿ. ಮರುಳಯ್ಯನವರಿಗೆ ಪ್ರಪ್ರಥಮವಾಗಿ ಆಭಾರಿ. ಮಿತ್ರ ನರಹಳ್ಳಿ ಬಾಲಸುಬ್ರಹ್ಮಣ್ಯರು ಈ ಕಾರ್ಯಕ್ಕೆ ಪ್ರೇರಣೆಯಿತ್ತವರು, ಅವರಿಗೂ ಸ್ಮರಣೆಗಳು ಹಾಗೂ ಸನ್ಮಿತ್ರ ಟಿ. ಕೆ. ಮಹಮೂದ, ಈ ಬರಹ ಕಾರ್ಯದಲ್ಲಿ ಪ್ರತ್ಯಕ್ಷ ಪರೋಕ್ಷ ಒದಗಿಸಿಕೊಂಡ ಮಿತ್ರರಾದ ವಿ. ಎನ್. ಹೆಗಡೆ (ಹಳವಳ್ಳಿ); ವಿಷ್ಣು ನಾಯ್ಕ ಅಂಕೋಲಾ, ಡಾ|| ಎಂ.ಜಿ. ಹೆಗಡೆ, ಜಿ.ಎಸ್. ಅವಧಾನಿ, ಶ್ರೀಧರ ಬಳಗಾರ, ಡಾ|| ಆರ್. ವಿ. ಭಂಡಾರಿ ಹಾಗೂ ನನ್ನ ಮಕ್ಕಳು ಅಳಿಯಂದಿರು, ಮನೆಯವರುಗಳಿಗೆಲ್ಲಾ ಋಣಿ. ಪೂಜ್ಯ ಡಾ|| ಗೌರೀಶ ಕಾಯ್ಕಿಣಿ ; ಕಾಂತಾ ಕಾಯ್ಕಿಣಿಯವರಿಗೆ ದಿವ್ಯ ನಮನಗಳು.

'ನಿಸರ್ಗ' ಇಂತೀ
ಅಂಚೆ : ಕುಂದರಗಿ, ಯಲ್ಲಾಪುರ 'ನಾ. ಸು'
ಉ. ಕ. ೫೮೧ ೪೦೨

೧

ಉತ್ತರ ಕನ್ನಡ ಜಿಲ್ಲೆಯ ಸಮುದ್ರ ತೀರದೆಡೆ ಸುಂದರ ನಿಸರ್ಗ ರಮಣೀಯ ನೆಲೆಯಲ್ಲಿರುವ ಶ್ರೀ ಗೋಕರ್ಣ ಕ್ಷೇತ್ರವು ಇಡೀ ಹಿಂದೂಸ್ಥಾನದಲ್ಲೇ ಸುಪ್ರಸಿದ್ಧವಾಗಿರುವ ಒಂದು ಪುಣ್ಯಕ್ಷೇತ್ರ. 'ದಕ್ಷಿಣ ಕಾಶಿ' ಎಂದೇ ಪ್ರತೀತಿ. ಇಲ್ಲಿಯ ಮುಖ್ಯ ದೇವಾಲಯ ಶ್ರೀ ಮಹಾಬಲೇಶ್ವರ ದೇವರದ್ದು. ತಿರುಪಿದ ಮುರಿಯಂತಿರುವ ಶಿಲಾಲಿಂಗವು ವಿಶಿಷ್ಟವಾದ ಆಕಾರವುಳ್ಳದ್ದು. ಇದನ್ನು 'ಈಶ್ವರ' ಪ್ರಾಣಲಿಂಗವೆಂದು ಪುರಾಣಕಥೆ ಬಣ್ಣಿಸಿದೆ. ದೇಶದ ನಾನಾ ಸ್ಥಳಗಳಿಂದಲೂ ಪರಿಸೆ(ಯಾತ್ರಾರ್ಥಿ)ಗಳು ಈ ದೇವರ ದರ್ಶನ–ಸೇವೆಗೈಯ್ಯಲೆಂದು ಬರುತ್ತಲೇ ಇರುತ್ತಾರೆ.

ಹೀಗೆ ಗೋಕರ್ಣಕ್ಕೆ ಹಲವಾರು ದೈವಿಕಪ್ರಿಯ ಭಕ್ತಜನರು ದರ್ಶನಕ್ಕೆ ಬರುತ್ತಿರುವುದು ಆ ಪುರಾಣ ಪ್ರಸಿದ್ಧಿಯ ಮಹಾಬಲೇಶ್ವರ ದೇವರ ಮಂದಿರಕ್ಕಾಗಿದ್ದರೆ; ಇನ್ನು ಹಲವರು ಸಾಹಿತ್ಯಿಕ–ಸಾಂಸ್ಕೃತಿಕ ಭಕ್ತರು ಬರುತ್ತಿರುವುದು ಪ್ರಸ್ತುತ ಸಾರಸ್ವತ ಸುಪ್ರಸಿದ್ಧಿಯ ಡಾ॥ ಗೌರೀಶ ಎಂಬ ಜ್ಞಾನೇಶ್ವರರ ದರ್ಶನಕ್ಕೆ ಎಂದರೆ ಅತಿಶಯೋಕ್ತಿಯಲ್ಲ. ಗೋಕರ್ಣದ ವೈದಿಕ ಪುರೋಹಿತರಿಗೆ (ಇವರು ಬೇರೆಡೆ ಕ್ಷೇತ್ರದಲ್ಲಿಯ 'ಪಂಡರು'ಗಳಂತಲ್ಲ ತುಂಬಾ ಸಭ್ಯತೆ, ಔಚಿತ್ಯದ ಗಮನವುಳ್ಳವರೇ) ತಮ್ಮೊಂದಿನ ಮುಖಪರಿಚಿತರಲ್ಲದ ಯಾರೇ ಆ ರಥಬೀದಿಯಲ್ಲಿ (ಬಸ್ ನಿಲ್ದಾಣವೇ ಅಲ್ಲಿ) ಬಂದಿಳಿದು ಹೆಜ್ಜೆ ಹಾಕುತ್ತಿದ್ದಂತೆ ಅಲ್ಲಿಯ ಪೌರೋಹಿತ್ಯ ವೈದಿಕರ ಮಂದಿ–ತಮ್ಮ ತಮ್ಮ ಮನೆಗೆ ಸೆಳೆದೊಯ್ಯುವ ಹಂಬಲದಿಂದ ಕಾತರಿಸಿ ಬೆನ್ನಟ್ಟಿ "ಪರಿಸೇನಾ (ಯಾತ್ರಿಕರಾ ಎಂಬರ್ಥ) ಯಾರ ಮನೇಗೆ ? ನಮ್ಮನೆಗೆ ಬನ್ನಿ. ಎಲ್ಲಾ ಅನುಕೂಲವಿದೆ" ಹೀಗಿತ್ಯಾದಿ ಕೋರುತ್ತ ಬರುವುದು ಸಾಮಾನ್ಯ. ಬಂದವನು ಮಾತಾಡದೇ ಸ್ವಲ್ಪವೇ ಮುನ್ನಡೆಯುತ್ತಿರುವಷ್ಟರಲ್ಲಿ ಎದುರಾಗುವ ಮಹಾಬಲೇಶ್ವರ ದೇವಾಲಯದ ದಕ್ಷಿಣ ದ್ವಾರವನ್ನು ದಾಟಿ ಅಡಿಯಿಟ್ಟು ಎಡಕ್ಕೆ ಮುಖ ತಿರುವಿದನೋ ತಕ್ಷಣ ಬೆನ್ನಿಡಿದು ಬರತೊಡಗಿದ್ದ ಪೌರೋಹಿತ್ಯ

ಮಂದಿಯ ಬಾಯಿಂದ “ಓಹೋ! ಅವರು ಗೌರೀಶರ ಮನೆಗೆ ಹೋಗುವವರಾಗಿರಬಹುದು!” ಎಂಬ ಉದ್ಗಾರ ಹೊರಸೂಸುವುದು ಕಿವಿಗೆ ಕಲ್ಪುತ್ತದೆ. ಇದು ಅಲ್ಲಿಯ ಜನಜನಿತ ಗೌರೀಶರ ವ್ಯಕ್ತಿತ್ವದ ಸೆಳೆತದ ಮಾಹಿತಿಯನ್ನೂ ಅರುಹುತ್ತದೆ.

ಡಾ॥ ಗೌರೀಶರ ಸಂಬಂಧ ಸ್ನೇಹ, ಪ್ರಭಾವ ವಲಯವು ಅತಿ ವಿಸ್ತಾರವಾದುದು. ಅವರ ಆಪ್ತರು ಸಾಹಿತ್ಯಲೋಕದಲ್ಲಿಯೂ, ಪಂಡಿತ ಪಾಮರ ವರ್ಗದಲ್ಲಿಯೂ ತುಂಬಿಕೊಂಡಿದ್ದಾರೆ. ಕನ್ನಡ, ಮರಾಠಿ, ಆಂಗ್ಲ, ಸಂಸ್ಕೃತ ಇತ್ಯಾದಿ ಭಾಷೆಯಲ್ಲಿಯ ಪಂಡಿತೋತ್ತಮರೂ, ವಿದ್ವಾಂಸರೂ, ಕಲೆ ಸಂಗೀತ ಪಾರಂಗತರುಗಳಿಂದ ಹಿಡಿದು ಹೆಸರಾಂತ ಬರಹಗಾರರು, ವಿಮರ್ಶಕರು, ಸಾಹಿತ್ಯಧೀಮಂತರು, ಸಾಮಾನ್ಯ ಬರಹಗಾರರು, ಉದಯೋನ್ಮುಖ ಲೇಖಕರು, ವಿದ್ಯಾರ್ಥಿದೆಸೆಯವರು—ಹೀಗೆಲ್ಲರುಗಳೊಂದಿಗೂ ಗೌರೀಶರ ಸಾಂಗತ್ಯ, ಪ್ರಿಯಸಂಬಂಧ, ಸಂಪರ್ಕ ಸಹಯೋಗ ಸಿಹಿಯಾಗಿ ಬೆಸೆದು ಬೆಳೆದು ಕೊಂಡಿದೆ. ಅಷ್ಟೇ ಅಲ್ಲ; ಸಾಮಾಜಿಕ ಮುಖಂಡರು, ರಾಜಕೀಯ ಧುರೀಣರುಗಳಿಗೂ ಗೌರೀಶರ ಸಹವಾಸ ಬೇಕು.

“ಅವರವರ ಭಾವಕ್ಕೆ। ಅವರವರ ಭಕುತಿಗಂ। ಅವರವರ ತೆರನಾಗಿ। ಇರುತಿಹನು ಶಿವಯೋಗಿ॥” ಎಂಬ ನಿಜಗುಣರ ನುಡಿಯ ಸಾಕಾರತ್ವ ಡಾ॥ ಗೌರೀಶರು. ಅವರ ವಿಚಾರದ ಎತ್ತರವನ್ನು, ತಿಳುವಿನ ಆಳವನ್ನು, ಅರಿವಿನ ಹರವನ್ನು ಸರಿಯಾಗಿ ಇಡಿಯಾಗಿ ಅಳೆದವರಿಲ್ಲ. ಅಳೆದವರಿಗೂ ನಿಲುಕಲಿಲ್ಲ. ಇದಮಿತ್ಥಂ—ಇದುಇಷ್ಟು—ಎಂದು ಹೇಳಲಳವಡಲಿಲ್ಲ. ಅವರ ಓದಿಗೆ ಮಿತಿಯಿಲ್ಲ. ಆ ಗತಿಗೆ ವಿಶ್ರಾಂತಿಯಿಲ್ಲ. ಅಲ್ಲಿರುವುದು ಬರಿದೂ (Exhaust) ಆಗದ ತೋಡಲೂ ಆಗದ ಕಣಜ. ಆದರೆ ಅದು ತೆರೆದಿಟ್ಟ ಕಣಜವೂ ಕೂಡ. ‘ಮನೆ ಬಾಗಿಲಿಗೆ ಬಂದಾತ ತನ್ನ ಇಷ್ಟಾರ್ಥಕ್ಕನುಗುಣವಾಗಿ ಅದು ಎಷ್ಟೇ ಪುಟ್ಟದಾಗಿರಲಿ ಅಥವಾ ಎಷ್ಟೇ ದೊಡ್ಡದೂ, ಮಹತ್ವದ್ದೂ ಆಗಿರಲಿ—ವಸ್ತುಗಳನ್ನು ಯಾಚಿಸಬಹುದಿತ್ತು. ಹಾಗೆ ಯಾಚಿಸಿದ್ದನ್ನು ನೀಡದೇ ಹೊರಡುತ್ತಿರಲಿಲ್ಲ’ ಹೀಗೆಂದು ಮಹಾಭಾರತ ಕಥೆಯಲ್ಲಿಯ ಕರ್ಣನ ದಾನಶೂರತ್ವ ಶೀಲದ ಬಗ್ಗೆ ವರ್ಣಿಸುತ್ತಾರೆ. ತಮ್ಮಲ್ಲಿ ತುಂಬಿರುವ ಜ್ಞಾನ ಸಿರಿಸಂಪತ್ತಿನ ಕೊಡುಗೆಯ ಕಾರ್ಯದಲ್ಲಿಯೂ ಡಾ॥ ಗೌರೀಶರದೂ ಅದೇ ದಾನಶೂರ ಕರಣತ್ವ ಎಂದರೆ

ತಪ್ಪಿಲ್ಲ ಹೀಗಿದ್ದುದರಿಂದಲೇ ಅವರ ಮನೆಗೆ ಬರಹೋಗುವವರ ಅಥವಾ ದರ್ಶನಾಕಾಂಕ್ಷಿಗಳ ಸಾಲು ನಿರಂತರವಾಗಿರುತ್ತದೆ, ಉತ್ತರೋತ್ತರವಾಗಿರುತ್ತದೆ.

ನಲವತ್ತು ವರುಷಗಳಿಗೂ ಹಿಂದಿನ ಮಾತು–ನಾನು ಗೌರೀಶರ ಮೊದಲ ದರ್ಶನ ಪಡೆದುದು. ಆಗ ನಾನಿನ್ನೂ ಇಪ್ಪತ್ತರವ. ನನ್ನ ಸಾಹಿತ್ಯಾಸಕ್ತಿಯ ಹೊಮ್ಮಾಗಿ 'ಕಿರಿಬೆಳಕು' ಎಂಬ ಕೈಬರಹದ ಎರಡು ನೂರು ಪುಟಗಳಷ್ಟಿದ್ದ ಒಂದು ಸಾಹಿತ್ಯಿಕ ಸಂಪುಟವೊಂದನ್ನು ನನ್ನದೇ ಹಸ್ತಾಕ್ಷರದಿಂದ ಅಣಿಗೊಳಿಸಿದ್ದೆ ಅದರಲ್ಲಿ ಹಿರಿ–ಕಿರಿಯ ಸ್ನೇಹಿತರ ಕಥೆ, ಕವನ, ಲೇಖನ, ಬಿಡಿ ನುಡಿ ಮುತ್ತು ಹೀಗೆಲ್ಲಾ ತುಂಬಿಕೊಂಡಿದ್ದವು. ಕಾರ್ಯನಿಮಿತ್ತ ಗೋಕರ್ಣದಲ್ಲಿದ್ದಾಗ ಒಮ್ಮೆ ಅದನ್ನು ಗೌರೀಶರ ಕಣ್ಣಿಗೂ ಹಾಯಿಸಿ ಅವರ ಹರಸು ನುಡಿ ಬೇಡೋಣವೆಂದಿಚ್ಛೆಯಾಯಿತು. ಗೌರೀಶರು ಆಗಲೇ ಹೆಸರಾಂತ ಉದ್ದಾಮ ಸಾಹಿತಿಗಳೆಂದು ಪ್ರಸಿದ್ಧರಾಗಿ ಸಾಹಿತ್ಯದಲ್ಲಿ 'ದೊಡ್ಡವ'ರೆನಿಸಿಕೊಂಡಿದ್ದರು. ಗೌರೀಶರ ನನ್ನ ಮೊದಲ ಭೇಟಿಯೇ ಅದಾಗಿದ್ದರಿಂದ ಅವರ ಮನೆಯನ್ನು ಕೇಳಿ ಹುಡುಕಿಕೊಂಡು ಹೊರಟೆ. ಮಹಾಬಲೇಶ್ವರ ದೇವಾಲಯದ ಎಡಗಡೆ ಸಂದಿಯ ಚಿಕ್ಕ ಓಣಿಯಲ್ಲಿ–'ಮಣಿಭದ್ರ ಓಣಿ'ಯೆಂದು ಅದರ ಹೆಸರು–ನಾಲ್ಕೆಂಟು ಮನೆಗಳನ್ನು ದಾಟಿ ಕ್ರಮಿಸಿದಾಗ ಒಂದೆಡೆ ಸಮುದ್ರದ ತೆರೆಗಳು ತೀರ ಹತ್ತಿರದಲ್ಲೇ ಜೋರ್‍ರೆಂದು ಅಟ್ಟಹಾಸಗೈಯುತ್ತ ದಂಡೆಗೆ ಅಪ್ಪಳಿಸುತ್ತಿರುವ, ಹಾಗೇ ಕಣ್ಣೋಟ ಸಾಗುವವರೆಗೂ ಗೋಚರಿಸುವಂತೆ ವ್ಯಾಪಿಸಿ ಮಲಗಿರುವ ಹೊಳೆ–ಹೊಳೆ ಮಿನುಗುವ ಮಳಲ ರಾಶಿಯನ್ನೆರೆದ ಆ 'ತೀರ'ದ ದೃಶ್ಯವನ್ನೂ, ಇನ್ನೊಂದೆಡೆಯಲ್ಲಿ ತೆಂಗಿನಮರಗಳು ಚಾಮರ ಬೀಸಿ ಸುಂಯ್‌ಗುಡುವ ನಾದದೊಂದಿಗೆ ಚೆಲ್ಲುವ ನೆರಳನ್ನೂ ಸುತ್ತಿರಿಸಿಕೊಂಡಿರುವ ಹಂಚಿನ ಛಾವಣಿಯ ಅವರ ಮನೆ ಕಂಡಿತು. (ಈಗ ಅದೇ ಮನೆಯನ್ನು ಆಪರಣಗೊಳಿಸಿ ನವೀಕರಿಸಿದ್ದಾರೆ.)

ಖ್ಯಾತ ನಾಮರಾಗಿ ಜಿಲ್ಲೆಯ ಓದುಗ–ವಿಚಾರವಂತರ ಸಮೂಹದಲ್ಲಿ ನಿತ್ಯದ ಮಾತಾಗಿರುವ ಗೌರೀಶ ಕಾಯ್ಕಿಣಿಯವರ ಮನೆಯೆಂದರೆ ಹೇಗೋ ? ತೀರಾ ಅಪರಿಚಿತನಾದ ನನ್ನನ್ನು ಹೇಗೆ ಕಾಣುತ್ತಾರೋ, ಅವರೊಂದಿಗೆ ಹೇಗೆ ಮಾತನಾಡಬೇಕೋ? ಎಂಬ ಅಳುಕು ಕಂಪನದಿಂದಲೇ ಆ ಮನೆಯ ಬಾಗಿಲ

ಒಳಗೆ ಪ್ರವೇಶಿಸಿದ್ದೆ. ನನ್ನ ಪರಿಚಯವನ್ನೂ ಹೇಳಿಕೊಂಡು ನನ್ನಾ ಕೈಬರಹದ ಪತ್ರಿಕೆಯನ್ನು ಅವರ ಕೈಗಿತ್ತು "ಸರ್ ! ಇದಕ್ಕೊಂದು ನಿಮ್ಮಿಂದ 'ನುಡಿ' ಬರೆಸಿಕೊಳ್ಳಬೇಕೆಂದು ಬಂದಿರುವೆ. ಸಧ್ಯವೇ ಬಿಡುಗಡೆ ಕಾರ್ಯಕ್ರಮ" ಅಂತಂದೆ. ಆದರದಿಂದಲೇ ಬರಮಾಡಿಕೊಂಡಿದ್ದ ಅವರು ತಮ್ಮ ಬೈಠಕ್ ಖಾನೆಯಲ್ಲಿಯ ಸಾಲುಗಟ್ಟಿ ಇರಿಸಿದ್ದ ಆರಾಂಖುರ್ಚಿಯೊಂದರಲ್ಲಿ ನನ್ನನ್ನು ಕೂಡ್ರಿಸಿ ತಾವೂ ಕುಳಿತುಕೊಂಡು 'ಶಾಂತೂ' ಎಂದು ಪತ್ನಿಯನ್ನು ಕರೆದು ಆ ಕೊಂಕಣಿ ಆಡುಮಾತಿನಲ್ಲಿ 'ಕಷಾಯ'ವನ್ನು (ಹಾಲಿಗೆ ಕುತುಂಬರಿ, ಜೀರಿಗೆ ಪುಡಿ ಸೇರಿಸಿ ಮಾಡುವ ರುಚಿ ಪೇಯ. ಇದು ಉ. ಕ. ಜಿಲ್ಲೆಯಲ್ಲಿ ಸುಪ್ರಸಿದ್ಧ ಹಿತಕಾರೀ ಪೇಯ) ತಂದು ಕೊಡಲು ಹೇಳಿ ಕೈಬರಹದ ಸಂಚಿಕೆ 'ಕಿರಿಬೆಳಕು' ಪುಟ ತಿರುವುತ್ತ ಈಕ್ಷಿಸತೊಡಗಿದರು. ಕಷಾಯ ಕುಡಿದು ಮುಗಿಸುತ್ತಲೇ ಪೆನ್ನು ಹಿಡಿದು "ಕಿರಿದೇನು ಹಿರಿದೇನು ಬೆಳಕೆಲ್ಲ ಒಂದು" ಎಂಬ ನುಡಿಯಿಂದ ಆರಂಭಿಸಿ, ಕವನ ರೂಪದಲ್ಲಿಯೇ ಪುಟ ತುಂಬುವಷ್ಟು ಹರಸು ನುಡಿಯನ್ನು ಬರೆದು ಕೊಟ್ಟೇ ಬಿಟ್ಟರು. ಈ ರೀತಿಯ ಅವರ ಸೌಜನ್ಯ ಔದಾರ್ಯ ತುಂಬಿದ ಪ್ರೀತಿಯ ನಡೆ ಕೇವಲ ನನಗೊಬ್ಬನಿಗಾಗುವ ಅನುಭವವಲ್ಲ. ಮುನ್ನುಡಿ, ಬೆನ್ನುಡಿ, ಹರಸು ನುಡಿ, ಜಿಲ್ಲೆಯ ತೀರಾ ಪುಟ್ಟ ಪತ್ರಿಕೆಗಳಿಗೂ ಅದನ್ನು ಆಭೂಷಣಗೊಳಿಸುವಂತೆ ಲೇಖನ, ಚಿಕ್ಕ–ಪುಟ್ಟ ಶಾಲಾ ಕಾಲೇಜು ಸಂಘ ಸಂಸ್ಥೆಗಳವರು ಹೊರತರುವ ಸಂಸ್ಮರಣ ಸಂಚಿಕೆಗಳಿಗೆ ಲೇಖನ, ಹೀಗೆ ತತ್ಕಾಲಿಕ ಲೇಖನ 'ದಾನ'ವನ್ನು (ಪ್ರತಿಫಲ ಸಂಭಾವನೆ ಹಣ ಬಾರದ ಬರಹಗಳಿವೆಲ್ಲಾ ! ಆದ್ದರಿಂದ ಇವು ಲೇಖನ 'ದಾನ'ಗಳು) ಕೇಳಿಬರುವವರೆಲ್ಲರೂ ಪಡೆದುಕೊಳ್ಳುವಂಥ ಪುಲಕಿತಗೊಳಿಸುವ ಅನುಭವಗಳಿವು. ಗೌರೀಶರು ಹೀಗಿರುವುದರಿಂದಲೇ ಗೋಕರ್ಣದ ಮಹಾಬಲೇಶ್ವರ ಗುಡಿಯುಡಿಯಿದ್ದಂತೆ ಅವರ ಮನೆಯೆಡೆಯಲ್ಲೂ ಸಂದರ್ಶಕರ ಒಗ್ಗರ.

"ಜೀವನದಲ್ಲಿ ದುಃಖಪೀಡಿತರು, ಜಿಜ್ಞಾಸುಗಳು, ಸುಖ–ಸಂಪದಾಕಾಂಕ್ಷಿಗಳು ಜ್ಞಾನಿಗಳು ಎಂಬೀ ನಾಲ್ಕು ಬಗೆಯ ಜನರು ತನ್ನನ್ನು ಆರಾಧಿಸುತ್ತಾರೆ, ಸೇವಿಸುತ್ತಾರೆ" (ಚತುರ್ವಿಧಾ ಭಜಂತೇಮಾಮ್ ಜನಾ–ಆರ್ತೋ, ಜಿಜ್ಞಾಸುರರ್ಥಾರ್ಥಿ ಜ್ಞಾನೀಚಃ) ಹೀಗೆಂದು ಭಗದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳಿದನೆಂಬ ಒಂದು ಮಾತು ಬರುತ್ತದೆ. ಡಾ॥ ಗೌರೀಶ ಕಾಯ್ಕಿಣಿಯವರ

ಬಳಿಗೆ ಬರುವ ಜನರ ಬಗೆಗೂ ಈ ಮಾತನ್ನು ಅನ್ವಯಿಸಬಹುದು. ಆದರೆ ಇಲ್ಲಿ ಅರ್ಥೈಸಬೇಕಾದ ಪರಿವ್ಯಾಖ್ಯೆ, ಪರಿಕಲ್ಪನೆ ಸ್ವಲ್ಪ ಭಿನ್ನವಾದೀತು. ಅದು ಸಾಹಿತ್ಯಿಕ, ಬೌದ್ಧಿಕ ಕ್ರಿಯೆಗಳಿಗೇ ಮೀಸಲು. ಸಾಹಿತ್ಯಿಕ ವೈಚಾರಿಕ ಕ್ಷೇತ್ರ ದಲ್ಲಿಯ ಆರ್ತರು (ದುರ್ಬಲರೂ), ಜಿಜ್ಞಾಸುಗಳೂ, ಅರ್ಥ (ವ್ಯಾಖ್ಯಾನ) ಆಕಾಂಕ್ಷಿಗಳು ಮತ್ತು ಜ್ಞಾನಿ ವಿದ್ವಾಂಸರುಗಳು ಗೌರೀಶರಲ್ಲಿಗೆ ಬರುವ ಚತುರ್ವಿಧ ಸ್ವರೂಪರು.

ಮೊದಲೇ ಹೇಳಿರುವಂತೆ ಸಾಹಿತ್ಯಾಸಕ್ತಿ ಹೊಂದಿದ ವಿದ್ಯಾರ್ಥಿಗಳಿಂದ ಹಿಡಿದು ಉದಯೋನ್ಮುಖ ಬರಹಗಾರರು, ಅರೆಬರೆ ಬಲಿತವರಿಂದ ಹಿಡಿದು ಖ್ಯಾತನಾಮ ಪಂಡಿತರೂ, ಸಾಹಿತ್ಯ ದಿಗ್ಗಜಗಳೂ ಗೋಕರ್ಣದಲ್ಲಿ ವಾಸ ವಾಗಿರುವ 'ಗೌರೀಶರ' ದರ್ಶನ ಪಡೆದಿದ್ದಾರೆ, ಪಡೆಯುತ್ತಲೇ ಇದ್ದಾರೆ.

ಡಾ|| ಗೌರೀಶ ಕಾಯ್ಕಿಣಿಯವರನ್ನು ನಾನಿಂದು ಕಾಣುತ್ತಿರುವುದು ಗೋಕರ್ಣದ ನೆಲೆಯಲ್ಲಿ. ಆದರೆ ಗೌರೀಶರ ಕುಲಸ್ಥರ–ಕುಟುಂಬಸ್ಥರ ಮೂಲ ಸ್ಥಾನ ಗೋಕರ್ಣವಲ್ಲ.

*　　*　　*

೨

ಆ ಮೂಲ ಊರು ಕೈಕಿಣಿ (ಕಾಯ್ಕಿಣಿ)

'ಕಾಯ್ಕಿಣಿ' ಎಂಬ ಊರು ಉತ್ತರ ಕನ್ನಡ ಜಿಲ್ಲೆಯ ಈಗಿನ ಭಟಕಳ ತಾಲ್ಲೂಕಿನಲ್ಲಿರುವ ಪೌರಾಣಿಕ, ಐತಿಹಾಸಿಕ ಪ್ರಸಿದ್ಧಿ ಮಹತ್ವವುಳ್ಳ 'ಮುರ್ಡೇಶ್ವರ' ಎಂಬ ಗ್ರಾಮದಲ್ಲಿಯ ಒಂದು ಚಿಕ್ಕ ಮಜರೆ. (ಹಿಂದೆ 'ಮುರ್ಡೇಶ್ವರ'ಕ್ಕೆ 'ಮಾವಳ್ಳಿ' ಎಂಬ ನಾಮಧೇಯವಿತ್ತಂತೆ) ಈ 'ಕಾಯ್ಕಿಣಿ'ಗೆ ಬಹಳ ಕಾಲದ ಹಿಂದೆ ಕಾಶ್ಮೀರದಿಂದ ವಲಸೆ ಬಂದು ನೆಲೆಸಿದ್ದ ಒಂದು ಕುಟುಂಬವು ಶ್ರೀ ಗೌರೀಶರ ಕುಲ ವಂಶಾವಳಿಯ ಮೂಲಜರು. ಅವರು ಮೂಲತಃ ಕಾಶ್ಮೀರದಲ್ಲಿ 'ಪಂಡಿತರು' ಎಂದು ಗುರುತಿಸಲ್ಪಡುತ್ತಿದ್ದ ಕುಲಜರು. ಕಾಶ್ಮೀರದಿಂದ ಮೊದಲು ಗೋವಾಕ್ಕೆ ಆ 'ಪಂಡಿತರು' ಬಂದಿದ್ದರು. ಇವರು ನಮ್ಮಲ್ಲಿ ಗುರುತಿಸಲ್ಪಡುವ 'ಸಾರಸ್ವತ' ಎಂಬ ಪಂಗಡದಲ್ಲಿ ಒಂದಾಗಿ ಎಣಿಸಲ್ಪಡುವ ಬ್ರಾಹ್ಮಣ ವರ್ಗದವರು. 'ಗೋವಾ'ದಲ್ಲಿ ಬಂದು ನೆಲೆಸಿದ್ದ ಅವರಿಗೆ ಅಲ್ಲಿಯ ಪೋರ್ತುಗೀಸರಿಂದ ಮತಾಂತರದ ಭಯವುಂಟಾಗಿದ್ದರಿಂದ

ಅಲ್ಲಿಂದ ಗುಳೆ ಎದ್ದು ಗೋವೆಯ ಗಡಿದಾಟಿದ ಕರಾವಳಿಯ ಗುಂಟ ಹಬ್ಬಿ ಕೊಂಡು ಅನುಕೂಲ ಅವಕಾಶಗಳನ್ನು ನೋಡಿ ಅಲ್ಲಲ್ಲಿ ತಳ ಊರಿದರು ಆದರೆ ಹೀಗೆ ನೆಲೆಗೊಂಡ ಈ ಕುಟುಂಬಸ್ಥರಿಗೆ 'ಪಂಡಿತ' ಎಂಬ ಕುಲನಾಮ ಅಳಿಸಿ ಹೋಗಿ ಅಲ್ಲಲ್ಲಿ ಬೇರೆ ಬೇರೆಯಾದ ಕುಲನಾಮ (ಅಡ್ಡಹೆಸರು) ದಾಖಲೆ ಗೊಂಡಿತು. ಅನೇಕರಿಗೆ ಅವರು ನೆಲೆಸಿದ್ದ ಊರಿನ ಹೆಸರೇ ಅಡ್ಡಹೆಸರಾಗಿ ಕರೆಯಲ್ಪಟ್ಟಿತು. ಹಾಗೆ ಕಾಯ್ಕಿಣಿ ಊರಿನಲ್ಲಿ ಬಂದು ನೆಲೆಸಿದ್ದ ಶ್ರೀ ಗೌರೀಶರ ಮೂಲ ವಂಶಸ್ಥರಿಗೂ 'ಪಂಡಿತ' ಎಂಬ ಬದಲು 'ಕಾಯ್ಕಿಣಿ'ಯವರು ಎಂದೇ ಕುಲನಾಮ ರೂಢವಾಯಿತು ಎಂದು ಹೇಳಲಾಗಿದೆ. ಎಲ್ಲಾ ಬ್ರಾಹ್ಮಣ ವರ್ಗ ದವರಂತೆ ಇವರಿಗೂ ಕುಲ-ಕುಟುಂಬಗಳಿಗೆ ಬೇರೆ ಬೇರೆ 'ಕುಲದೇವರು' ಎಂಬ ಆರಾಧ್ಯ ದೇವರು ನಿಗದಿಗೊಂಡಿರುತ್ತದೆ. ಕಾಯ್ಕಿಣಿಯವರ ಕುಟುಂಬದ ಕುಲ ದೇವರು 'ಶಾಂತಾದುರ್ಗಾ'. (ಈ ದೇವಾಲಯ 'ಗೋವಾ'ದಲ್ಲಿ ಒಂದ ಸುಪ್ರಸಿದ್ಧ ದೇವಾಲಯ. ಅಲ್ಲಿಗೆ ಬಂದು ನೆಲಸಿದ ಮೇಲೆಯೋ ಈ ದೇವತೆಯನ್ನು ತಮ್ಮ ಕುಲದೇವತೆಯನ್ನಾಗಿ ಸ್ವೀಕರಿಸಿರಬಹುದು.) 'ಕಾಯ್ಕಿಣಿ' ಊರಿಗೆ ಬಂದು ನೆಲೆಸಿದ್ದ ಆ ಮನೆತನದ ವಂಶಾವಳಿ ದಾಖಲೆಯಲ್ಲಿ ನಮಗೆ ಇಂದು ಲಭ್ಯವಾಗುವ ಮೂಲಪುರುಷರೆಂದರೆ, 'ಬ್ರಹ್ಮಾನಂದ' ಎಂಬ ಸಂತ ಮಹಾತ್ಮ. ಈ ಬ್ರಹ್ಮಾನಂದರ ಕಾಲವನ್ನು ಸುಮಾರು ೧೭ನೇ ಶತಮಾನದಲ್ಲಿ ಎಂದು ಗುರುತಿಸಲಾಗಿದೆ. ಆಗ ದೇಶದಲ್ಲಿ ವಿಶೇಷತಃ ದಕ್ಷಿಣಾಪಥದಲ್ಲಿ ಪ್ರಖರ ಪ್ರಚುರತೆ ಹೊಂದಿದ್ದ ಭಕ್ತಿಪಂಥದ ಸಂಪ್ರದಾಯದ ಸೆಳೆತಕ್ಕೆ ಸಿಲುಕಿದ ಬ್ರಹ್ಮಾನಂದರು ತಮ್ಮ ಗ್ರಾಹಸ್ಥ್ಯ ಜೀವನವನ್ನು ತೊರೆದು ಸಂತರಾದರಂತೆ. ಇವರು, ಮಹಾರಾಷ್ಟ್ರದ ರತ್ನಾಗಿರಿ ಜಿಲ್ಲೆಯ ದಾಬೋಳಿಯಲ್ಲಿದ್ದ 'ಚಿದಾನಂದ ಸ್ವಾಮಿ' ಎಂಬುವರನ್ನು ಗುರುಗಳನ್ನಾಗಿ ಪಡೆದುಕೊಂಡಿದ್ದರು. ಚಿದಾನಂದರು ಮಹಾರಾಷ್ಟ್ರದಲ್ಲಿ ಸುಪ್ರಸಿದ್ಧ ಸಂತರು.

ಬ್ರಹ್ಮಾನಂದರು ಗೃಹಸ್ಥಾಶ್ರಮಿಯಾಗಿದ್ದಾಗ ಓರ್ವ ಗಂಡು ಮಗ ನನ್ನು ಪಡೆದಿದ್ದರು. ಆತನ ಹೆಸರು ಶಿವಾನಂದ. ಈ 'ಶಿವ' ಕೂಡಾ ಮೊದಲು ಗೃಹಸ್ಥಾಶ್ರಮಿಯಾಗಿ ನಂತರ ತಂದೆಯ ಮಾರ್ಗವನ್ನೇ ತುಳಿದು 'ಸಂತ'ತ್ವ ಸ್ವೀಕರಿಸಿದರು. 'ಕೈವಲ್ಯ ಯೋಗೇಶ್ವರ' ಎಂಬ ನಾಮಧೇಯ ಹೊಂದಿದರು. ವಾಡಿಕೆಯಲ್ಲಿ 'ಶಿವಮುನಿ' 'ಶಿವಾನಂದ ಸ್ವಾಮಿ' ಎಂದೇ ಪ್ರಸಿದ್ಧರಾಗಿದ್ದರು.

ಶಿವಮುನಿಯ ಜೀವಿತಾವಧಿ ಸನ್ ೧೬೬೭ ರಿಂದ ೧೭೫೩ ಎನ್ನಲಾಗಿದೆ. 'ಶಿವಮುನಿ' ಗೃಹಸ್ಥರಾಗಿದ್ದಾಗ ಇಬ್ಬರು ಮಕ್ಕಳನ್ನು ಪಡೆದಿದ್ದರು. ಹಿರಿಯ ಮಗ ಕೃಷ್ಣಯ್ಯ, ಎರಡನೆಯವ ತಿಮ್ಮಪ್ಪಯ್ಯ. ಇಡೀ ಕುಟುಂಬದಲ್ಲಿ ವಿದ್ವತ್ ವಾತಾವರಣ. ಸ್ವತಃ ಶಿವಮುನಿ ಮರಾಠಿ ಭಾಷೆಯಲ್ಲಿ ಉದ್ದಾಮ ಕವಿಗಳು. ಮಗ ತಿಮ್ಮಪ್ಪಯ್ಯ 'ತಿಮ್ಮಾಜಿ ಶಾಸ್ತ್ರಿ' ಎಂದೇ ಖ್ಯಾತಿಗೊಂಡ ಸಂಸ್ಕೃತ ಪಂಡಿತರು. ಕೃಷ್ಣಯ್ಯನವರೂ ವಿದ್ವತ್‌ವೇತ್ತರೇ. ಮುಂದುವರಿದ ಈ ವಂಶಾವಳಿಯಲ್ಲಿ ಶಿವಮುನಿಯ ಹಿರಿಯ ಮಗ ಕೃಷ್ಣಯ್ಯನವರ ಶಾಖೆಯೇ ಪ್ರಸ್ತುತದ ನಮ್ಮ ಡಾ॥ ಗೌರೀಶ ಕಾಯ್ಕಿಣಿಯವರವರೆಗೂ ಮತ್ತು ತದ ನಂತರವೂ ಬೆಳೆದು ಬಂದು ಹಬ್ಬಿಕೊಳ್ಳುತ್ತಿರುವ ವಂಶಬಳ್ಳಿ. ಕಾಯ್ಕಿಣಿಯ ಈ ವಂಶವು ನಮ್ಮಲ್ಲಿಯ ಬ್ರಾಹ್ಮಣ ವರ್ಗದಲ್ಲಿ ವೈಷ್ಣವ ಮತಾನುಯಾಯಿ ಗಳೆನಿಸಿಕೊಂಡಿದ್ದು ಮಾಧ್ವ ಸಂಪ್ರದಾಯದ ದ್ವೈತ ಪಂಥಕ್ಕೊಳಪಡುತ್ತದೆ. ಇವರ ಮನೆಮಾತು ಗೋವಾ ಮತ್ತು ಕರಾವಳಿ ಪ್ರದೇಶದಲ್ಲಿ ಹೆಚ್ಚು ಪ್ರಚಲಿತಗೊಂಡಿರುವ 'ಕೊಂಕಣಿ' ಎಂಬ ಉಪಭಾಷೆಗೆ ಸೇರುತ್ತದೆ. ಈ ಉಪಭಾಷೆ ಸ್ವಂತ ಲಿಪಿಯನ್ನು ಹೊಂದಿರುವುದಿಲ್ಲ. ಬೇರೆ ಬೇರೆ ಪ್ರದೇಶದಲ್ಲಿ ಅಲ್ಲಲ್ಲಿಯ ಲಿಪಿ ಮಾಧ್ಯಮವನ್ನು ಪಡೆದುಕೊಂಡಿದ್ದು ಉತ್ತರ ಕನ್ನಡ–ದಕ್ಷಿಣ ಕನ್ನಡದಲ್ಲಿ, ಕನ್ನಡ ಲಿಪಿಯನ್ನೇ ತನ್ನದಾಗಿಸಿಕೊಂಡಿದೆ. ಈ ಸಾರಸ್ವತ ಮಾಧ್ವರು ಈಗ ಭಟಕಳ ತಾಲ್ಲೂಕಿನ ಶಿರಾಲಿ ಬಳಿಯ ಚಿತ್ರಾಪುರ ಮಾಧ್ವ ಮಠದ ಅನುಯಾಯಿಗಳೆನಿಸಿಕೊಂಡಿದ್ದಾರೆ. ಹಾಗಿದ್ದರೂ ಈ ಕುಲಸ್ಥರು ಗೋವಾದಲ್ಲಿಯ ದೇವತೆಯನ್ನೇ ತಮ್ಮ ಮೂಲ ಕುಲದೇವರು ಎಂದು ಭಾವಿಸಿಟ್ಟುಕೊಂಡು ವರ್ಷಕ್ಕೊಮ್ಮೆಯಾದರೂ ಕುಲದೇವತೆಗೆ 'ದರ್ಶನ–ಪೂಜೆ' ಸಲ್ಲಿಸುವ ರೂಢಿ ಇಟ್ಟುಕೊಂಡಿದ್ದುದು ನಡೆದು ಬಂದ ವಂಶ ಪರಂಪರೆ.

ಶಿವ 'ಕೈವಲ್ಯಸ್ವಾಮಿ'ಯ ಹಿರಿಯ ಮಗ ಕೃಷ್ಣಯ್ಯನವರಿಂದ ಲೆಕ್ಕ ಹಿಡಿದರೆ ಆ ಏಳನೆಯ ತಲೆಮಾರಿನವರಾದ ವಿಠ್ಠಲರಾಯರು ನಮ್ಮ ಡಾ॥ ಗೌರೀಶ ಕಾಯ್ಕಿಣಿಯವರ ತಂದೆಯವರು. ಅಂದರೆ ಕೃಷ್ಣಯ್ಯನವರ ಎರಡನೆಯ ಮಗ ಮಂಜುನಾಥಯ್ಯನ ಎರಡನೇ ದತ್ತಯ್ಯ. ದತ್ತಯ್ಯನವರ ಎರಡನೆಯ ಮಗ ವೆಂಕಟರಾವ್. ಈ ವೆಂಕಟರಾವ್‌ರಿಗೆ ನಾಲ್ಕು ಗಂಡು

ಮಕ್ಕಳು. ಇವರಲ್ಲಿಯ ಹಿರಿಯ ಸುಬ್ಬರಾಯನ ಮಗ ವೆಂಕಟರಾವ್‌ನ ಮಗ ವಿಠ್ಠಲರಾಯರ ಏಕೈಕ ಪುತ್ರರು ಡಾ|| ಗೌರೀಶ.

(ಇದೇ ಮನೆತನದಲ್ಲಿ ಶಿವ ಕೈವಲ್ಯಮುನಿಯ ಎರಡನೇ ಮಗ ತಿಮ್ಮಾಜಿ ಶಾಸ್ತ್ರಿಯವರಿಂದ ಹೊರಟ ವಂಶಾವಳಿ ಶಾಖೆಯವರಾಗಿ ವಿಖ್ಯಾತ ವಿದ್ವಾಂಸರೂ, ಸಮಾಜ ಸೇವಾ ದುರಂಧರರೂ ಆದ ಶ್ಯಾಮರಾವ್ ವಿಠ್ಠಲ ರಾವ್ ಕಾಯ್ಕಿಣಿ ಎಂಬವರು ಖ್ಯಾತನಾಮರಾಗಿ ಆಗಿ ಹೋಗಿದ್ದು, ದಿವಂಗತ ಶ್ಯಾಮರಾವ್ ಕುರಿತು ಸ್ವತಃ ಡಾ|| ಗೌರೀಶ ಕಾಯ್ಕಿಣಿಯವರೇ ಒಂದು ಪರಿಚಯ ಹೊತ್ತಿಗೆ ಬರೆದಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತೇ ಅದನ್ನು ಪ್ರಕಟಿಸಿದೆ.)

ಡಾ|| ಗೌರೀಶ ಕಾಯ್ಕಿಣಿಯವರ ಮನೆತನದಲ್ಲಿ ಅನೇಕರು ಖ್ಯಾತ ನಾಮಾಂಕಿತರಾಗಿ ಗತಿಸಿ ಹೋಗಿದ್ದಾರೆ. ಶಿವಮುನಿ ಸಂತರೂ ಕವಿಗಳೂ ; ತಿಮ್ಮಾಜಿ ಶಾಸ್ತ್ರಿ ಕವಿಗಳೂ ಸಂಸ್ಕೃತ ವಿದ್ವಾಂಸರೂ ; ಶಿವರಾವ್ ಕೈಕಿಣಿ ಎಂಬವರು ಸುಪ್ರಸಿದ್ಧ ನ್ಯಾಯವಾದಿಗಳು. ಈ ಶಿವರಾವ್‌ರ ಹಿರಿಯ ಮಗಳೇ ಗೌರೀಶರ ಸೋದರಮಾವ ವಿಠ್ಠಲರಾವ್ ಕುಲಕರ್ಣಿ ಎಂಬವರಿಗೆ ಪತ್ನಿ ಯಾಗಿದ್ದಳು

ಈ ಕಾಯ್ಕಿಣಿ ಮನೆತನವು ಮೂಲದಿಂದ ಮುಂದೆ ಶಾಖೋಪಶಾಖೆ ಯಾಗಿ ಪಸರಿಸಿದಂತೆಯೇ ಬೇರೆ ಬೇರೆ ಹಲವು ಸ್ಥಳಗಳಿಗೂ ತೆರಳಿ ನೆಲೆ ಗೊಂಡಿದೆ. ಉದಾ : ಬೆಳ್ಕಿ, ಹಕ್ಕಲ, ಮುರ್ಡೇಶ್ವರ, ಸರಳಿಗೆ ಗೇರಸೊಪ್ಪೆ ಇತ್ಯಾದಿ ಊರುಗಳಲ್ಲಿ ಈ ಮನೆತನಸ್ಥರಿದ್ದು, ಅಲ್ಲಲ್ಲಿ ತಕ್ಕಂತೆ ಅವರವರ ಕುಲನಾಮ (ಅಡ್ಡಹೆಸರು) ಬದಲಾಗಿಕೊಂಡಿದೆ ಬೆಳ್ಕಿ ಮತ್ತು ಹಕ್ಕಲ ಶಾಖೆಗಳವರು ಮಾತ್ರ 'ಕಾಯ್ಕಿಣಿ' ಎಂದೇ ಕುಲನಾಮ ಮುಂದುವರಿಸಿ ಕೊಂಡಿದ್ದಾರೆ.

ಹೀಗೆ 'ಕಾಯ್ಕಿಣಿ'ಯ ಮೂಲ ವಂಶಾವಳಿ ಸಾಕಷ್ಟು ಪ್ರಸ್ಥಾನ-ಪ್ರಸ್ತಾರಗೊಂಡಿದ್ದರೂ ಡಾ|| ಗೌರೀಶ ಕಾಯ್ಕಿಣಿಯವರಿಗೆ ಅವುಗಳೊಂದಿಗೆ ಹೇಳಿಕೊಳ್ಳುವಂತಹ ಸಂಬಂಧ ಸಂಪರ್ಕವನ್ನು ಹೊಂದಿಸಿಕೊಳ್ಳಲಾಗಲಿಲ್ಲ. ಗೌರೀಶರ ಬಾಲ್ಯದ ಸ್ಥಿತಿ-ಗತಿ ಬೆಳೆದು ಬಂದ ಪರಿಸ್ಥಿತಿಯೇ ಹಾಗೆ ಕಾರಣ ವನ್ನುಂಟುಮಾಡಿತ್ತು.

ಗೌರೀಶರ ತಾಯಿ ಸೀತಾಬಾಯಿ, ರಾಮಚಂದ್ರ ಮಂಗೇಶ ಕುಲಕರ್ಣಿ ಎಂಬುವರ ಮಗಳು. ರಾಮಚಂದ್ರ ಕುಲಕರ್ಣಿಯವರು ಗೋಕರ್ಣದಿಂದ ಆರು ಕಿ.ಮೀ. ದೂರದಲ್ಲಿರುವ 'ಬಂಕಿಕೊಡ್ಲ' ಎಂಬ ಗ್ರಾಮದವರು. ಜಮೀನುದಾರ ವೃತ್ತಿಯವರು. ರೈತರಿಂದ ತಮ್ಮ ಜಮೀನನ್ನು ಸಾಗುವಳಿ ಕೃಷಿ ಮಾಡಿಸಿಕೊಳ್ಳುತ್ತ ತಾವು ಬೇರೆ ಬೇರೆ ವ್ಯವಹಾರಸ್ಥರಾಗಿರುವುದು ಆಗ ಸರ್ವಸಾಮಾನ್ಯ. ಹಾಗೆ ರಾಮಚಂದ್ರ ಕುಲಕರ್ಣಿಯವರು ತಮ್ಮ ವ್ಯಾವಹಾರಿಕ ಕಾರ್ಯಕ್ಕೆ ಅನುಕೂಲವಾಗುತ್ತದೆಂದು ಬಂಕಿಕೊಡ್ಲಿನಿಂದ ಸ್ಥಳಾಂತರಗೊಳಿಸಿ ತಮ್ಮ ವಾಸ್ತವ್ಯವನ್ನು ಗೋಕರ್ಣದಲ್ಲೇ ನೆಲೆಗೊಳಿಸಿ ಕೊಂಡಿದ್ದರು ಇವರ ಸಹೋದರ ಅನಂತರಾಯ ಕುಲಕರ್ಣಿ ವಕೀಲಿ ವೃತ್ತಿ ಕೈಕೊಂಡಿದ್ದರು.

ಗೌರೀಶರ ಅಜ್ಜ (ತಂದೆಯ ತಂದೆ) ವೆಂಕಟರಾವ್ ಅವರು ನ್ಯಾಯಾಲಯ ದಲ್ಲಿ ನೌಕರಿ ವೃತ್ತಿ ಮಾಡುತ್ತಿದ್ದವರಾಗಿದ್ದರಿಂದ ತಮ್ಮ ಮಗ ವಿಠ್ಠಲ ರಾಯರೂ ನೌಕರಿ ವೃತ್ತಿ ಅನುಸರಿಸುವಂತೆ ಮಾಡಿದರು. ವಿಠ್ಠಲರಾಯರು (ಗೌರೀಶರ ತಂದೆ) ಮೊದಲು ಕಂದಾಯ ಇಲಾಖೆಯಲ್ಲಿ ಶಿರಸ್ತೆದಾರರಾಗಿದ್ದು ಮುಂದೆ ಸೇವಾದಕ್ಷತೆಯಿಂದಾಗಿ ಶೀಘ್ರ ಮಾಮಲೇದಾರ (ತಹಶೀಲ್ದಾರ) ಹುದ್ದೆಯನ್ನು ಗಳಿಸಿಕೊಂಡಿದ್ದರು. ಮಾಮಲೇದಾರರಾಗಿ ವಿಜಾಪುರಕ್ಕೆ ವರ್ಗಾಯಿಸಲ್ಪಟ್ಟಾಗ ಪತ್ನಿ ಸೀತಾಬಾಯಿಯನ್ನೂ ಕೂಡಿಕೊಂಡು ಅಲ್ಲಿಗೆ ಹೋಗಿ ಉಳಿದರು. ವಿಜಾಪುರ ವಾಸ್ತವ್ಯ ಅವರ ಬದುಕಿನ ಮಹತ್ವದ ದಾಖಲೆ. ಪತ್ನಿ ಸೀತಾಬಾಯಿ ಅಲ್ಲಿಯೇ ಗರ್ಭವತಿ. ವಿಠ್ಠಲರಾಯರಿಗೆ ಅಲ್ಲಿಯ ಹವಾಮಾನ ಒಗ್ಗದೇ ವಿಪರೀತ ಅನಾರೋಗ್ಯದ ಸ್ಥಿತಿ ತುಂಬು ಗರ್ಭವತಿಯಾದಾಗ ಪತ್ನಿಯನ್ನು ಪ್ರಸೂತಿಗಾಗಿ ಗೋಕರ್ಣದ ತವರುಮನೆಗೆ ಕಳಿಸಿಕೊಟ್ಟರು. ಗಂಡನ ಅನಾರೋಗ್ಯದ ಸ್ಥಿತಿಯಲ್ಲಿ ತೊರೆದು ಬರಲಾಗದ ಮನೋಸ್ಥಿತಿಯಲ್ಲಿದ್ದ ಸೀತಾಬಾಯಿ ಅನಿವಾರ್ಯವಾಗಿ ಹೊರಟುಬಂದಿದ್ದರು. ಆ ದುಗುಡದಲ್ಲೇ ದಿನ ತುಂಬಿ ಸನ್ ೧೯೧೨ರ ಸೆಪ್ಟೆಂಬರ ೧೨ನೇ ದಿನಾಂಕ ದಂದು ಗೋಕರ್ಣದಲ್ಲಿ ರಾಮಚಂದ್ರರಾವ್ ಕುಲಕರ್ಣಿಯವರ ಮನೆಯ ಅಂಕಣದಲ್ಲಿ ಗಂಡು ಮಗು 'ಗೌರೀಶ'ರಿಗೆ ಜನ್ಮವಿತ್ತಳಾತಾಯಿ. ಮೊದಲ ಹೆರಿಗೆಯಲ್ಲೇ ಗಂಡು ಮಗುವನ್ನು ಹೆತ್ತ ಸಂಭ್ರಮ, ಸಂತೋಷವನ್ನೂ

ಆನ ಭವಿಸಲಾಗದಂತೆ ಆ ತಾಯಿಯ ಮನಸ್ಸನ್ನು ಎಡಬಿಡದೆ ಕಾಡುತ್ತಿದ್ದುದು ಪತಿಯನ್ನು ಕಾಣಬೇಕೆಂಬ ಚಿಂತೆ, ತವಕ. ಆದರೆ ಅವರ ಆಗಮನವಿಲ್ಲ. ಅನಾರೋಗ್ಯ ದಿನದಿನಕ್ಕೂ ಹದಗೆಡುತ್ತಲಿದೆ. ಪ್ರಯಾಣದ ಸ್ಥಿತಿಯಲ್ಲಿಲ್ಲ ಎಂಬ ವಾರ್ತೆ ಬಂದು–ಬಂದು ಚುಚ್ಚುತ್ತಲಿತ್ತು. ಮಗುವಿನ ನಾಮಕರಣಕ್ಕೆ ತಂದೆ ಬರಲೇಬೇಕಾದ ಸಂಪ್ರದಾಯಸ್ಥ ಕುಟುಂಬವಾಗಿದ್ದರೂ ಪತಿ ವಿಠ್ಠಲ ರಾವ್ ಅದಕ್ಕೂ ಬಂದಿರಲಿಲ್ಲ. ಬರುವಂತಿರಲಿಲ್ಲ. ಒಮ್ಮೆಯೂ ಮಗುವಿನ ಮುಖವನ್ನೂ ತನ್ನ ಪತಿ ಕಂಡಿಲ್ಲವಲ್ಲಾ! ಎಂದು ಮರುಗುತ್ತಿದ್ದರು. ತಾನೇ ಪುಟ್ಟ ಮಗುವನ್ನೆತ್ತಿ ಕರೆದೊಯ್ದು ಆ ತಂದೆಗೆ ತೋರಿಸಿಕೊಂಡು ಬರಬೇಕು ಎಂದು ಹೆತ್ತೊಡಲು ಹಂಬಲಿಸಿದರೂ ಹಸಿಮೈಯ ಬಾಣಂತಿಗೆ ಒಮ್ಮೆಲೇ ಅಷ್ಟು ದೂರದ ಪ್ರಯಾಣಕ್ಕೆ ಸಮ್ಮತಿ ದೊರೆಯದೇ ಕೊರಗುತ್ತಲಿದ್ದರು. ಕೊನೆಗೂ ಮಗುವಿನ ಮುಖವನ್ನೂ ನೋಡದಂತೆಯೇ ಆ ತಂದೆ ವಿಠ್ಠಲ ರಾಯರು ಅದೇ ಡಿಸೆಂಬರ ತಿಂಗಳಿನಲ್ಲಿ ಅಂದರೆ ಮಗು ಹುಟ್ಟಿದ ಮೂರನೆಯ ತಿಂಗಳಿನಲ್ಲಿಯೇ ಎಲ್ಲರನ್ನೂ, ಎಲ್ಲವನ್ನೂ ತೊರೆದು ಕಾಲಾಧೀನರಾಗಿ ಬಿಟ್ಟರು ಪತಿಯ ದಾರುಣ ಸಾವಿನ ಘಟನೆಯಿಂದಾಗಿ ಸೀತಾಬಾಯಿಯವರಿಗೆ ತೀವ್ರವಾದ ಮಾನಸಿಕ ಆಘಾತವುಂಟಾಯಿತು. ಪತಿಗೆ ಮಗುವಿನ ಮುಖ ವನ್ನೂ ಕಾಣಿಸಲಾಗಲಿಲ್ಲವಲ್ಲಾ ಎಂಬ ದುಗುಡ ಒಂದೆಡೆ; ಪತಿಯ ಶವ ಸಂಸ್ಕಾರಕ್ಕೂ ಹೋಗಲಾಗಲಿಲ್ಲವಲ್ಲಾವೆಂಬ ನೋವು ಇನ್ನೊಂದೆಡೆ. ಆಕೆ ದುಃಖತಪ್ತತೆಯಿಂದ ಬೇಯತೊಡಗಿದಳು. ಸಂಪ್ರದಾಯಸ್ಥ ಕುಟುಂಬದವರೂ, ನೆಂಟರೂ, ಬಳಗದವರೂ 'ಹುಟ್ಟಿದ ಕೂಡಲೇ ತಂದೆಯನ್ನು ಕಳೆದುಕೊಂಡ ಅನಿಷ್ಟ ಮಗು' ಎಂದು ನಿಕೃಷ್ಟವಾಗಿ ಆಡಿಕೊಳ್ಳುತ್ತಿರುವುದೂ ಬಂದು ಅಪ್ಪಳಿಸುತ್ತಲಿತ್ತು. ಮಗುವು ಹುಟ್ಟಿದ ತಿಥಿ ವಾರ ನಕ್ಷತ್ರಗಳು ಕುಲಾರಿಷ್ಟ ಕಾರಕವೆಂಬ ನುಡಿಗಳೂ ಕೇಳಿಬರುತ್ತಿದ್ದವು. ಸಂಪ್ರದಾಯದಂತೆ ಮಗುವನ್ನು ನೋಡಿ ಹರಸುವುದಕ್ಕೂ ಬಳಗದವರಾರೂ ಬಂದಿರಲಿಲ್ಲ. ಆ ಮನೆಯವ ರೆಲ್ಲರೂ ದಿಙ್ಮೂಢರಂತಿದ್ದರು. ಈ ಎಲ್ಲಾ ಸುಳಿಚಕ್ರದಲ್ಲಿ ಸಿಕ್ಕ ತಾಯಿ ಸೀತಾಬಾಯಿಯವರ ಕರುಳು ಒಣಗಿಬಂದಿತ್ತು. ಒಳಗಿನ ಮಮತೆ ವಾತ್ಸಲ್ಯ ಗಳ ಒರತೆ ಬತ್ತುತ್ತ ಮಗುವಿನ ಬಗೆಗೇ ತಾಯಿ ಹೃದಯ ತಿರಸ್ಕಾರ ಹೊಂದಿ

ಕಠಿಣವಾಗತೊಡಗಿತ್ತು. ಹಸುಳೆಯ ಲಾಲನೆ ಪಾಲನೆಯಲ್ಲಿಯೂ ನಿರಾಸಕ್ತಿ ಅಸಡ್ಡೆ.

ಬಾಣಂತನದ ನಂತರ ಸೀತಾಬಾಯಿಯವರು ಗೋಕರ್ಣದಲ್ಲೇ ಇದ್ದ ತನ್ನ ಅಕ್ಕ ಸಾವಿತ್ರಿಬಾಯಿಯವರ ಆಶ್ರಯದಲ್ಲಿರತೊಡಗಿದ್ದರು. ಈ ಆಶ್ರಯ ನೆಲೆಯು ಗೌರೀಶರ ಜೀವನ ಚರಿತ್ರೆಯ ಬುನಾದಿ.

ಸೀತಾಬಾಯಿಯ ಅಕ್ಕ—ಗೌರೀಶರ ದೊಡ್ಡಮ್ಮ—ಸಾವಿತ್ರಿಬಾಯಿ ಬಾಲವಿಧವೆ. ಅದು ಅಂದಿನ ಸಾಮಾಜಿಕ ಸ್ಥಿತಿಯ ಚಿತ್ರ. ಅತ್ಯಂತ ಭಾವಿಕತನದವರಾಗಿದ್ದ ಬಾಲವಿಧವೆ ಸಾವಿತ್ರಿಬಾಯಿ, ದೇವಸಾನ್ನಿಧ್ಯದಲ್ಲಿ ಶಾಂತವಾಗಿ ತಮ್ಮ ಆ ಸನ್ಯಸ್ತ ಬದುಕನ್ನು ನೂಕಲೆಂದು ತಂದೆಯವರ ಮನೆಯನ್ನು ತೊರೆದು ಅದೇ ಗೋಕರ್ಣದಲ್ಲಿ ತನ್ನದೇ ಆದ ತೆಂಗಿನ ಮಡಿಲ ಪರ್ಣಕುಟೀರವೊಂದನ್ನು ಕಟ್ಟಿಸಿಕೊಂಡು ಅದರಲ್ಲಿಯೇ ವಾಸಮಾಡಿಕೊಂಡಿದ್ದರು. (ಅಂದು ಪರ್ಣಕುಟೀರವಾಗಿದ್ದ ಆ ಮನೆಯ ನೆಲದಲ್ಲೇ ಇಂದಿಗೂ ಗೌರೀಶರ ವಾಸ್ತವ್ಯದ ಮನೆ ಎಂಬುದು ಅರ್ಥಪೂರ್ಣ ಸಂಕೇತ. ಆದರೆ ಅಂದಿನ ಆ ಪರ್ಣಕುಟೀರ ಬದಲಾಗಿ ಚಿಕ್ಕ ಹಂಚಿನ ಛಾವಣಿಯುಳ್ಳ ಮನೆಯಾಯಿತು. ಇತ್ತೀಚೆಗಷ್ಟೇ ಹಂಚಿನ ಚಿಕ್ಕಮನೆ ಸಿಮೆಂಟ ಟಾರ್ಸಿ ಛಾವಣಿಯಿಂದ ಸುತ್ತು ಆವರಣಗೊಳಿಸಿಕೊಂಡು ನವೀಕೃತ ವಿಶಾಲ ಮನೆಯಾಗಿ ಪರಿವರ್ತಿತಗೊಂಡಿದೆ.)

ಹಾಗೆ, ಸಾವಿತ್ರಿಬಾಯಿಯವರ ಮನೆಯಲ್ಲಿ ಬೆಳೆಯತೊಡಗಿದ್ದ ಪುಟ್ಟ ಗೌರೀಶಗೆ ತಾಯಿಯ ಲಾಲನೆ ಪೋಷಣೆ ಮಮತೆಗಿಂತಲೂ ದೊಡ್ಡಮ್ಮನ ಪ್ರೀತಿಯ ತೆಕ್ಕೆಯ ಮಡಿಲೇ ಪೋಷಣೆಯಾಗಿ ಒದಗಿಕೊಂಡಿತ್ತು. ಗೌರೀಶರ ಬಾಲ್ಯದ ಆ ದಿನಗಳ ಕುರಿತು ವಿವರಿಸುತ್ತ ಪತ್ನಿ ಶ್ರೀಮತಿ ಶಾಂತಾ ಕಾಯ್ಕಿಣಿಯವರು ತಮ್ಮದೊಂದು ಲೇಖನದಲ್ಲಿ ಹೀಗೆ ಬಣ್ಣಿಸುತ್ತಾರೆ: "ಅವರು (ಗೌರೀಶರು) ತಮ್ಮ ತಂದೆ ತಾಯಿಯರ ಪ್ರೀತಿಯಿಂದ ವಂಚಿತರು. ದೊಡ್ಡಮ್ಮನೇ ಪ್ರೀತಿಯಿಂದ ಸಾಕಿದರು. ದೇವರ ಪೂಜೆ ಭಜನೆ ಪುರಾಣ ಅಂತ ಆಶ್ರಮದ್ದೇ ವಾತಾವರಣ ಮನೆಯಲ್ಲಿ....ದೊಡ್ಡಮ್ಮನೇ ಇವರಿಗೆ ತಂದೆ, ತಾಯಿ, ದೇವರು ಎಲ್ಲಾ ಆಗಿದ್ದರು." ದೊಡ್ಡಮ್ಮನೆಂದರೆ ತುಂಬಾ ಪ್ರೀತಿ ಭಕ್ತಿ. ಬಾಲ್ಯ ಕೌಮಾರ್ಯದಲ್ಲಿ ಆ ದೊಡ್ಡಮ್ಮನ ಜೀವಿತ ಕಾಲದವರೆಗೂ

ನಿತ್ಯ ಮೂರೂ ಹೊತ್ತೂ ಸನಿಹದ ಮಹಾಬಲೇಶ್ವರ ದೇವರ ದರ್ಶನಕ್ಕೆ ದೊಡ್ಡಮ್ಮನ ಜೊತೆಗೆ ಹೋಗಲೇಬೇಕಿತ್ತು. ಪ್ರತಿದಿನವೂ ಭಕ್ತಿಗೀತೆ, ಭಜನೆ, ಮನೆದೇವರ ಪೂಜೆ ಇವು ಚಾಚೂ ತಪ್ಪದೇ ಜರುಗಬೇಕು. ಗೌರೀಶರೂ ಪಾಲ್ಗೊಳ್ಳಬೇಕು. ಇಡೀ ಮನೆಯಲ್ಲೂ ಭಾರೀ ಆಧ್ಯಾತ್ಮಿಕ ವಾತಾವರಣ. ನಿರಂತರವಾಗಿ ಮಹಾಭಾರತ, ರಾಮಾಯಣ, ಪುರಾಣಗಳ ಪ್ರವಚನ ಜರುಗುತ್ತಲೇ ಇರುತ್ತಿತ್ತು. ಗೌರೀಶರ ತಾಯಿ ಮತ್ತು ದೊಡ್ಡಮ್ಮರ ಸ್ವಂತ ವಾಚನವೆಂದರೆ ಯೋಗವಾಸಿಷ್ಠ, ಭಗವದ್ಗೀತೆ ಇತ್ಯಾದಿ. (ಅವೂ ಮರಾಠಿ ಭಾಷೆಯಲ್ಲಿ, ಅವರಿಗೆ ಕಂಠಪಾಠ.)

ಶ್ರೀ ಕದಂಬೇಶ್ವರ ಭಟ್ಟ ಎಂಬವರು (ಹೈದರಾಬಾದಿನವರು) ಸುಮಾರು ೧೮-೨೦ ವರುಷಗಳಷ್ಟು ಕಾಲ ಗೌರೀಶರ ಆ ಆಶ್ರಮ ಮನೆಯಲ್ಲಿಯೇ ವಾಸ ಎಂಬಷ್ಟು ನಿಕಟರಾಗಿದ್ದರು. ಈ ಭಟ್ಟರು ದೊಡ್ಡಜ್ಞಾನಿ ಪುರುಷರಾಗಿದ್ದರಂತೆ. ಸಾತ್ವಿಕ ಸಮಾಜ ಪ್ರಿಯವ್ಯಕ್ತಿ. ಅವರು ಆಗಮಿಸಿದಾಗಲೆಲ್ಲಾ ಪ್ರಾಜ್ಞರ ಕೂಟ, ಆಧ್ಯಾತ್ಮಿಕ ಚರ್ಚೆ, ಆಧ್ಯಾತ್ಮಿಕದ್ದೇ ಮಾತು. ಅವನ್ನೆಲ್ಲಾ ಕೇಳುತ್ತಾ ಕುಳಿತಿರಲು ಗೌರೀಶರಲ್ಲಿಯೂ ತುಂಬಾ ಆಸಕ್ತಿ ಕೆರಳುತ್ತಿತ್ತು. ಮುಂದೆ ಶಿಕ್ಷಣಕ್ಕಾಗಿ ಕುಮಟಾಕ್ಕೆ ಹೋಗಿದ್ದರೂ ಅವರ ಸಾನ್ನಿಧ್ಯಕ್ಕಾಗಿ ಹಾತೊರೆದು ಬರುತ್ತಲಿರುತ್ತಿದ್ದರು. ಹಾಗೆಯೇ ಆ ಕಾಲಕ್ಕೆ ಶಾಂಡಿಲ್ಯ ಮಹಾರಾಜ ಎಂಬ ಜಟಾಗಡ್ಡಧಾರಿ ತಪಸ್ವಿ ವ್ಯಕ್ತಿ ಗೌರೀಶರ ಮನೆಗೆ ಬಹುವಾಗಿ ಬರುತ್ತಲಿದ್ದರು. 'ಅವರ ಗಂಭೀರ ಜ್ಞಾನ ಸಂಪನ್ನ ವ್ಯಕ್ತಿತ್ವಕ್ಕೆ ತಾನು ಮಾರುಹೋಗಿದ್ದೆ'ನೆಂದು ಗೌರೀಶರು ನೆನಪಿಸಿಕೊಳ್ಳುತ್ತಾರೆ.

ವಿದ್ಯಾರ್ಥಿ ದೆಸೆಯಲ್ಲಿರುವಾಗಿನ ಈ ವಾತಾವರಣ ಕುಮಾರ ಗೌರೀಶಗೆ ಎಷ್ಟು ಪ್ರಭಾವ ಬೀರಿತ್ತೆಂದರೆ, ಬರೆಯುವ ಪ್ರತಿಭೆಯೊಂದು ಹೆಡೆಯೊಡೆದು 'ಶಾಂಡಿಲ್ಯ ಪ್ರೇಮಸುಧಾ' ಎಂಬ ಭಜನಾಕೃತಿಯೊಂದನು ರಚಿಸಲು ಕಾರಣವಾಯಿತು. ಅದು ಗೌರೀಶರ ಪ್ರಪ್ರಥಮ ಕೃತಿಯಾಗಿ (೨೦ರ ದಶಕ) ಪ್ರಕಟಣೆಯನ್ನೂ ಕಂಡು ದಾಖಲೆಗೊಂಡಿತು. ಗೌರೀಶರ ಬರಹದ ಪ್ರಾರಂಭಿಕ ಹುಟ್ಟು ಕನ್ನಡ, ಮರಾಠಿಗಳಲ್ಲಿ ಬರೆಯಲ್ಪಡುತ್ತಿದ್ದ ಸಾಂಪ್ರದಾಯಿಕ ಪದ್ಯಗಳ ರೂಪದಲ್ಲಿ ಅವರ ಬಾಲ್ಯ, ಕೌಮಾರ್ಯದ ಸಂದರ್ಭಗಳಿವು.

ಗೌರೀಶರ ತಾಯಿ ಸೀತಾಬಾಯಿ ಗಂಡನನ್ನು ಕಳೆದುಕೊಂಡು ವಿಧವೆಯಾದ ದುಃಖದಲ್ಲೇ ವ್ಯಸ್ತಗೊಂಡು ಸುತ್ತಲಿನ ಎಲ್ಲವುಗಳಿಂದಲೂ ನಿರ್ಲಿಪ್ತರಾಗಿ ಉಳಿದಿದ್ದರೂ ಕುಟುಂಬದಲ್ಲಿಯ ಬದ್ಧ ಪರಂಪರಾಗತ ವ್ರತ–ಪೂಜೆ, ನಿಷ್ಠೆ–ನಿಯಮಗಳಲ್ಲೆಲ್ಲಾ ಚಾಚೂ ತಪ್ಪದೇ ಪಾಲ್ಗೊಳ್ಳುತ್ತಿದ್ದರಂತೆ. ಅದು ಅವರಲ್ಲಿ ವ್ಯಾಪಿಸಿಕೊಂಡಿದ್ದ ಸಾಂಪ್ರದಾಯಿಕತೆಯ ನಿಷ್ಠೆ, ಭಾವುಕತನದ ಪರಿಣಾಮವಾಗಿತ್ತು. ಆದರೆ ಒಳಗೇ ಕೊರಗು ತುಂಬಿದ ಬೇಗೆಯಲ್ಲಿ ಬೇಯುತ್ತಲಿದ್ದ ಆಜೀವ ಬಹುಬೇಗ ದೈಹಿಕ ಸ್ವಾಸ್ಥ್ಯವನ್ನು ಕಳೆದುಕೊಂಡಿತು. ಆ ಪರಿಣಾಮವಾಗಿ ಮಗು ಗೌರೀಶ ಇನ್ನೂ ಆರನೇ ವರುಷದಲ್ಲಿರುವಾಗಲೇ ೧೯೧೯ರಲ್ಲಿ ತಾಯಿ ಸೀತಾಬಾಯಿ ಸಾವನ್ನಪ್ಪಿಬಿಟ್ಟರು. ಆಗಂತೂ ಪೂರ್ಣ ಆಶ್ರಯ ಏಕಾಕಿ ದೊಡ್ಡಮ್ಮನದೇ ! ತಂದೆ–ತಾಯಿಗಳಿಬ್ಬರನ್ನೂ ಕಳೆದುಕೊಂಡ ಅನಾಥ ಬಾಲಕ ಗೌರೀಶ– ಚಿಕ್ಕಂದಿನಲ್ಲೇ ಗಂಡನನ್ನು ಮನೆಮಾರು ಕುಟುಂಬವನ್ನೂ ಕಳೆದುಕೊಂಡ ಅನಾಥ ಬಾಲವಿಧವೆ ಸಾವಿತ್ರಿಬಾಯಿ ! ಈ ಈರ್ವರ ಒಳಲುವ ಬದುಕನ್ನು ಕಾಣುತ್ತ ಇರಲಾಗದ ರಾಮಚಂದ್ರ ಕುಲಕರ್ಣಿಯವರು ತನ್ನ ದೊಡ್ಡ ಮಗಳು, ಚಿಕ್ಕಮೊಮ್ಮಗ ಇವರ ಯೋಗಕ್ಷೇಮದ ಖುದ್ದು ಹೊಣೆ ಹೊತ್ತರು. ಅಂದಿನಲಾಗಾಯ್ತು ಗೌರೀಶಗೆ–ತಾನೊಬ್ಬ ಅನಾಥಮಗ ಎಂಬ ಕುಗ್ಗಿನಿಂದ ಬೆಳೆಯದಂತೆ ದೊಡ್ಡಮ್ಮ ಹಾಗೂ ಅಜ್ಜನಮನೆ ಅಜ್ಜರು ಅತ್ಯಂತ ಮುತವರ್ಜಿಯಿಂದ ಪ್ರೀತಿ–ವಾತ್ಸಲ್ಯ ನೀಡಿ ಪೋಷಣೆ ಒದಗಿಸುತ್ತ ಬಂದರು.

೩

ಶಿಕ್ಷಣದ ದಿನಗಳಲ್ಲಿ

ಅಜ್ಜನ ಕಾಳಜಿಯ ನೆರಳಲ್ಲಿ ಬಾಲಕ ಗೌರೀಶಗೆ ಪ್ರಾಥಮಿಕ ಶಿಕ್ಷಣವು ಗೋಕರ್ಣದ ೧ನೇ ನಂಬರಿನ ಶಾಲೆಯಲ್ಲಿ ಪ್ರಾರಂಭಗೊಂಡಿತು. ೧೯೧೮ರ ಜೂನ ತಿಂಗಳಲ್ಲಿ ಒಂದನೇ ವರ್ಗವನ್ನು ಪ್ರವೇಶಿಸಿದರು. ಆ ಎಳವೆಯಲ್ಲಿಯೇ ಬಾಲಕ ಗೌರೀಶ ಮಾತಿನಲ್ಲಿಯೂ ಜಾಣ, ಅಭ್ಯಾಸದಲ್ಲಿಯೂ ಚುರುಕು. ಎಲ್ಲಾ ಉಪಾಧ್ಯಾಯರುಗಳಿಗೂ ತುಂಬಾ ಅಚ್ಚುಮೆಚ್ಚು. ಗುರುಗಳ ಪ್ರೇರಣೆಯಿಂದ ಕನ್ನಡವಲ್ಲದ ಮನೆಮಾತಿನ (ಆಡುಮಾತು ಕೊಂಕಣಿ) ಗೌರೀಶ ಪ್ರಾಥಮಿಕ ಶಿಕ್ಷಣದ ದಿನಗಳಲ್ಲಿಯೇ ಕನ್ನಡದ ವಿವಿಧ ಬಗೆಯ ಓದಿಗೆ

ಒಳಗಾದರು. ಕನ್ನಡಕ್ಕೆ ಪಕ್ಕಾದರು. ಪಠ್ಯದ ಜೊತೆಗೇ ಪಠ್ಯೇತರ ಕ್ರಿಯೆಯಲ್ಲಿಯೂ ಮುಂದಾದರು. ಶಾಲೆಯ ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ಅದಮ್ಯ ಆಸಕ್ತಿ. ಅಭಿನಯದ ಗೀಳು. ಕನ್ನಡ–ಮರಾಠಿ ನಾಟಕಗಳಲ್ಲೆಲ್ಲಾ ತಪ್ಪದೇ ಪಾತ್ರವಹಿಸಿ ಅಭಿನಯಿಸುತ್ತಿದ್ದರು. ಸ್ತ್ರೀ, ಪುರುಷ ಪಾತ್ರಗಳೆರಡರಲ್ಲಿಯೂ ಮಿಂಚುತ್ತಿದ್ದರು.

ಪುಟ್ಟ ಬಾಲಕನಲ್ಲಿಯ ಖುಶಿ ಕೊಡುವಂಥ ಜಾಣ್ಮೆ ಚಾಕಚಕ್ಯತೆ ವಿಚಾರಶಕ್ತಿಗಳನ್ನೆಲ್ಲಾ ಕಂಡ ದೊಡ್ಡಮ್ಮನಿಗೆ ಪುಳಕಿತ. ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪುಷ್ಟಿಯನ್ನೊದಗಿಸಲೆಂದು ಮನೆಪಾಠ(Tution)ದ ಏರ್ಪಾಟೂ ಮಾಡಿದಳು. ಶಾಲೆಯಲ್ಲಿ ಕನ್ನಡ ಭಾಷೆಯ ಬೋಧನೆ ದೊರೆಯುತ್ತಿದ್ದರೆ–ಮನೆಯಲ್ಲಿ ದೊಡ್ಡಮ್ಮನಿಂದ ಮರಾಠಿ ಭಾಷೆಯ ಸಹವಾಸ. ಅವಳು ಕಲಿಸುತ್ತಿದ್ದ ಭಜನೆಗಳೆಲ್ಲವೂ ಮರಾಠಿಯಲ್ಲಿ. ಸಂತ ಶ್ರೇಷ್ಠರ ಚರಿತ್ರೆ ಕಥೆಗಳೂ ಮರಾಠಿಯವು. ಹೀಗೆ ದ್ವಿಭಾಷಾ ಪುಷ್ಟಿಯೊಂದಿಗೇ ಸಂಸ್ಕೃತ, ಇಂಗ್ಲಿಷುಗಳೂ ಹತ್ತಿರ–ಹತ್ತಿರ.

ಗೌರೀಶರು ಪ್ರಾಥಮಿಕ ಶಿಕ್ಷಣದ ನಾಲ್ಕನೆಯ ವರ್ಗದವರೆಗೆ ಮಾತ್ರ ಗೋಕರ್ಣದಲ್ಲಿ ಕಲಿತರು. ಆಗ ಈ ಪ್ರಾಥಮಿಕದ ನಾಲ್ಕನೆಯ ವರ್ಗದ ನಂತರದಲ್ಲಿ ನೇರವಾಗಿ ಹೈಸ್ಕೂಲಿಗೇ ಒಳಪಡಬೇಕಿತ್ತು. ಗೋಕರ್ಣದಲ್ಲಿ ಹೈಸ್ಕೂಲು ಇರಲಿಲ್ಲ. ಗೌರೀಶರು ತನ್ನ ಮುಂದಿನ ಶಿಕ್ಷಣಕ್ಕಾಗಿ ಕುಮಟಾ ನಗರಕ್ಕೆ ಹೋಗಿ ಅಲ್ಲಿಯ ಗಿಬ್ ಹೈಸ್ಕೂಲನ್ನು ಸೇರಬೇಕಾಗಿ ಬಂತು. ಅದು ಆಗ ಜಿಲ್ಲೆಯಲ್ಲೇ ಸುಪ್ರಸಿದ್ಧ ಹೈಸ್ಕೂಲು. (ಸ್ವಾತಂತ್ರ್ಯ ಪೂರ್ವದಲ್ಲಿ ಉತ್ತರ ಕನ್ನಡದ ಘಟ್ಟದ ಮೇಲಿನ ಐದು ತಾಲೂಕುಗಳಿಗೆ ಶಿರಸಿ ಪಟ್ಟಣದಲ್ಲೊಂದು ಹಾಗೂ ಘಟ್ಟದ ಕೆಳಗಿನ (ಕರಾವಳಿ) ಪ್ರದೇಶಕ್ಕೆ ಕುಮಟಾ, ಹೊನ್ನಾವರ, ಅಂಕೋಲಾ, ಕಾರವಾರಗಳಲ್ಲಿ ಮಾತ್ರ ಹೈಸ್ಕೂಲು ಶಿಕ್ಷಣ ಲಭ್ಯವಿತ್ತು)

ಗೌರೀಶರು ಕುಮಟಾದಲ್ಲಿದ್ದ ತನ್ನ ಸೋದರಮಾವ ಶ್ರೀ ಮಂಜುನಾಥ ದೇವರಾಯ ಕುಲಕರ್ಣಿಯವರ ಮನೆಯಲ್ಲಿ ಅಶನಾಶ್ರಯ ಪಡೆದು ಗಿಬ್ ಹೈಸ್ಕೂಲಿನ ಮಾಧ್ಯಮಿಕ ೫ನೇ ವರ್ಗ (ಹೈಸ್ಕೂಲಿನ ಮೊದಲ ವರ್ಗ) ಸೇರಿಕೊಂಡರು. ೫ನೇ ವರ್ಗದಲ್ಲಿ ಕನ್ನಡಕ್ಕೆ ಬದಲಾಗಿ ಸಂಸ್ಕೃತವನ್ನು ದ್ವಿತೀಯ

ಭಾಷೆಯನ್ನಾಗಿಯೂ ಇಂಗ್ಲಿಷನ್ನು ಪ್ರಥಮ ಭಾಷೆಯನ್ನಾಗಿಯೂ ಆಯ್ಕೆ ಮಾಡಿಕೊಳ್ಳಬೇಕಾಗಿ ಬಂತು. ಸುತ್ತಲೂ ವೈದಿಕ ಆಚರಣೆಯ ಸಂಪ್ರದಾಯಗಳ ಮಧ್ಯೆ ಬೆಳೆದಿದ್ದ ಗೌರೀಶರಿಗೆ ಸತ್ಯದ ಪಾಠ ಪಠಣವಾಗಿ ರೂಢಿಯಲ್ಲಿದ್ದ ಆ ಸಂಸ್ಕೃತವು ಬೋಧನೆಯ ಭಾಷೆಯಾಗಿ ಎದುರಾದಾಗ ಸುಲಭವಾಗಿ ಅಳವಟ್ಟಿತು. ಹೈಸ್ಕೂಲಿನ ಕೊನೆಯ ಮೆಟ್ರಿಕ್ಯುಲೇಶನ್ ಮುಗಿಸುವವರೆಗೂ ಸತತ ಜಾಣ ವಿದ್ಯಾರ್ಥಿ ಸಾಲಿನಲ್ಲೇ ಮುಂದುವರಿದು ಅಧ್ಯಾಪಕರ ಅಚ್ಚುಮೆಚ್ಚಿನವರಾಗಿಕೊಂಡಿದ್ದರು.

ಆ ಹೈಸ್ಕೂಲು ವಿದ್ಯಾರ್ಥಿ ದೆಸೆಯಲ್ಲಿಯೇ ಕವನಗಳನ್ನು ರಚಿಸತೊಡಗಿದ್ದ ಗೌರೀಶ ಆ ಬಗ್ಗೆ ಪಾರಿತೋಷಕಗಳನ್ನೂ ಗಳಿಸಿದ್ದರು. ಸಾಹಿತ್ಯ ವಿಷಯದತ್ತ ಮೋಹಿತಗೊಂಡ ಅವರಲ್ಲಿ ಸಹಜವಾಗಿಯೇ ತರಗತಿಯ ಅಭ್ಯಾಸದ ಕಟ್ಟುಪಾಡಿನ ವಿಷಯಗಳತ್ತ ಗಮನ ಕುಂಠಿತಗೊಳ್ಳತೊಡಗಿತ್ತು. ಹೀಗಾಗಿ ೧೯೨೯ರಲ್ಲಿ ಜರುಗಿದ ಹೈಸ್ಕೂಲ ಶಿಕ್ಷಣದ ಅಂತಿಮದ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಸಂಸ್ಕೃತದಲ್ಲಿ ಅತಿ ಹೆಚ್ಚಿನ ಅಂಕ ದೊರೆತಿದ್ದರೂ ಗಣಿತ ಮತ್ತು ವಿಜ್ಞಾನದಲ್ಲಿ ಅಂಕಗಳ ಕೊರತೆಯುಂಟಾಗಿ ಅನುತ್ತೀರ್ಣರಾಗುವಂತಾಯಿತು. (ಡಾ॥ ಶಿವರಾಮ ಕಾರಂತರೂ ಗಣಿತ ವಿಷಯದಲ್ಲೇ ಖೋತಾ ಹೊಡೆದು ಇಂಟರ್‌ಮಿಡಿಯಟ್ ಪರೀಕ್ಷೆಗೇ ಶಿಕ್ಷಣಕ್ಕೆ ಶರಣು ಹೊಡೆದಿದ್ದರಂತೆ) ಆದರೆ ಗೌರೀಶರು ಅಷ್ಟಕ್ಕೇ ಬಿಟ್ಟುಬಿಡುವಂತಿರಲಿಲ್ಲ. ಪುನಃ ೧೯೩೦ರಲ್ಲಿ ಎಲ್ಲ ವಿಷಯಗಳಲ್ಲಿಯೂ ಮರು ಪರೀಕ್ಷೆಗೆ ಒಡ್ಡಿಕೊಂಡು ತೇರ್ಗಡೆ ಪಡೆದರು.

ಶಿಕ್ಷಣವನ್ನು ಮುಂದುವರಿಸುವಂತೆ ದೊರೆತ ಪ್ರೋತ್ಸಾಹದಿಂದಾಗಿ ಮುಂದಿನ ಕಾಲೇಜ್ ಶಿಕ್ಷಣಕ್ಕಾಗಿ ಧಾರವಾಡಕ್ಕೆ ತೆರಳಿ, ಅಲ್ಲಿಯ ಕರ್ನಾಟಕ ಕಾಲೇಜನ್ನು ಪ್ರವೇಶಿಸಿದರು. ಧಾರವಾಡದಲ್ಲಿ ವಾಸ್ತವ್ಯ ಮಾಡಿಕೊಂಡಿದ್ದ ಖಾಸಾ ಸೋದರಮಾವ ವಿಠ್ಠಲ ರಾಮಚಂದ್ರ ಕುಲಕರ್ಣಿಯವರ ಮನೆಯಲ್ಲೇ ಆಶ್ರಯ ಲಭಿಸಿದ್ದರಿಂದ ಸುಗಮವಾಯಿತು. ಹೈಸ್ಕೂಲಿನಲ್ಲಿ ಸಂಸ್ಕೃತ ವಿಷಯದಲ್ಲಿ ಪರೀಕ್ಷೆ ಹೊಂದಿದವರಿಗೆ ಮಾತ್ರ ಆಗ ಕರ್ನಾಟಕ ಕಾಲೇಜಿಗೆ ಪ್ರವೇಶ ಲಭ್ಯವಿತ್ತು. ಗೌರೀಶರಿಗೆ ಅದೂ ಸುಗಮವಾಯಿತು. ಪ್ರಭಾವೀ ವಿದ್ಯಾರ್ಥಿಯಾಗಿಯೇ ಮುಂದುವರಿದು ೧೯೩೧ರಲ್ಲಿ ಕಾಲೇಜಿನ ಪ್ರಥಮ ವರ್ಷದ ಪರೀಕ್ಷೆ ಎಫ್. ವೈ. ಎ. ನಲ್ಲಿ ಉತ್ತೀರ್ಣರಾದರು. ಆದರೆ ಮುಂದಿನ

ಇಂಟರ್‌ಮೀಡಿಯೆಟ್ ತರಗತಿಯಲ್ಲಿ ಅಭ್ಯಸಿಸುತ್ತಿದ್ದಂತೆಯೇ ಎಡರು ಎದುರಾಯಿತು. ಧಿಡೀರ ದೈಹಿಕ ಆತಂಕ. ಮೂಗಿನ ಒಳಗಡೆ ಕಾಣಿಸಿಕೊಂಡ ಬೊಕ್ಕೆಯೊಂದು ಉಲ್ಬಣಗೊಂಡು ಗಂಟಾಗಿ ಬೆಳೆದು ತೀವ್ರ ಬಾಧೆಯೊಡ್ಡಿ ಚಿಕಿತ್ಸೆಗಾಗಿ ಆಸ್ಪತ್ರೆ ಸೇರುವಂತಾಯಿತು. ಸುಪ್ರಸಿದ್ಧ ಮಿರಜ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಯನ್ನು ಪಡೆದು ನಂತರ ಎರಡು ಮೂರು ವರುಷಗಳ ಕಾಲ ಔಷಧೋಪಚಾರಕ್ಕೊಳಗಾಗಬೇಕಾಗಿ ಬಂತು. ಈ ಘಟನೆಯಿಂದಾಗಿ ಅದು ವರೆಗೂ ಸ್ಫುರದ್ರೂಪಿಯೇ ಆಗಿದ್ದ ನಾಟಕಗಳಲ್ಲಿ ಸ್ತ್ರೀಪಾತ್ರವನ್ನೂ ಧರಿಸಿ ರಂಜಿಸುತ್ತಲಿದ್ದ ಯುವ ಗೌರೀಶರು ಶಾಶ್ವತವಾಗಿ ಜೀವನಮಾನವಿಡೀ ಹೊರ ಮೂಗಿನ ನೀಳ ಆಕಾರವನ್ನು ಕಳೆದುಕೊಂಡು ಛಿದ್ರನಾಸಿಕರಾಗಿ ತೋರು ವಂತಾಯಿತು. ಈ ಆತಂಕದ ಜೊತೆಗೇ ಅವರ ಉನ್ನತ ಶಿಕ್ಷಣದ ಮಹದಾಸೆಯೂ ಒಡೆದುಬಿತ್ತು. ಇಂಟರ್‌ಮೀಡಿಯೆಟ್ ಪರೀಕ್ಷೆಯನ್ನು ಹೇಗೊ ಮುಗಿಸಿ ಶಿಕ್ಷಣ ದಾರಿಯನ್ನು ತೊರೆದು ಮನೆಗೆ ಮರಳಿದರು. ಆರ್ಥಿಕ ಬಡತನವೂ ಶಿಕ್ಷಣದ ಮುಂದುವರಿಕೆಗೆ ಅಡ್ಡಕುಂಟೆ ಚಲ್ಲಿತ್ತು. ಹೀಗೆ ದೈಹಿಕತೆಯ ಹಾಗೂ ಬಡತನದ ಅಡ್ಡಗಾಲಿನಿಂದ ಉನ್ನತ ಶಿಕ್ಷಣ ಹೊಂದಿ ಮಹಾಶಿಕ್ಷಣವೇತ್ತರಾಗಬಹುದಾಗಿದ್ದ ಗೌರೀಶರ ಪಥಕ್ರಮಣ ಮೊಟಕಾದರೂ ಅವರ ಬೌದ್ಧಿಕ ಆಕಾಂಕ್ಷೆಗೆ ಸಾರಸ್ವತಲೋಕದ ಹೆಬ್ಬಾಗಿಲು ತೆರೆದುಕೊಂಡಿದ್ದು ಒಂದು ಸುಕೃತ. ಕುಲದ ಸಂಪ್ರದಾಯ, ಪರಂಪರೆಯಿಂದ 'ಸಾರಸ್ವತರು' ಎಂಬ ಒಂದು ಪಂಗಡದವರಾಗಿರುವ ಗೌರೀಶರು ವಾಸ್ತವಾರ್ಥದಲ್ಲೂ ಅನ್ವರ್ಥಕ ಗೊಳ್ಳುವಂಥ 'ಸಾರಸ್ವತ' ಗಣ್ಯರೇ ಆದರು. ಕಾಲೇಜಿನ ತರಗತಿಗಳಲ್ಲಿ ನಿಯಮಬದ್ಧ, ಪ್ರಮಾಣಬದ್ಧ ಅಧ್ಯಯನದಿಂದ ವಂಚಿತರಾದರೂ—ಕನ್ನಡ, ಹಿಂದಿ, ಮರಾಠಿ, ಇಂಗ್ಲೀಷು, ಸಂಸ್ಕೃತ ಈ ಎಲ್ಲ ಭಾಷೆಗಳಲ್ಲೂ, ಆ ವಾಙ್ಮಯ ಗಳಲ್ಲೂ ಸ್ವಯಂಭು ಪಾಂಡಿತ್ಯಗಳಿಸಿಕೊಂಡಿದ್ದು ಗೌರೀಶರ ಪ್ರಚ್ಛನ್ನ ಸಾಮರ್ಥ್ಯದ ಸಾದೃಶ್ಯ. ಶಿಕ್ಷಣ ಕ್ರಮದಲ್ಲಿ ಉಲ್ಲೇಖಿಸುವುದಾದಲ್ಲಿ ಮುಂದೆ ೧೯೪೫ರಲ್ಲಿ ಎಸ್.ಟಿ.ಸಿ. ಪರೀಕ್ಷೆಯನ್ನು ನೀಡಿ ಮುಂಬೈ ಪ್ರಾಂತಕ್ಕೇ ಪ್ರಥಮ ದರ್ಜೆಯಲ್ಲಿ ಪ್ರಥಮ ಸ್ಥಾನ ಪಡೆದರು.

೪

ವೃತ್ತಿ- ಪ್ರವೃತ್ತಿ

ಜಮೀನುದಾರಿಕೆ ಪರಂಪರೆಯುಳ್ಳ ದೊಡ್ಡ ಮನೆತನದವರಾಗಿದ್ದೂ ವಾಸಕ್ಕೊಂದು ಸ್ವಂತ ಮನೆಯೂ ಇರದ ; ಮಹಾಬೌದ್ಧಿಕ ಸಾಮರ್ಥ್ಯದ ಪ್ರತಿಭಾವಂತನಾಗಿದ್ದೂ ದೈಹಿಕ ಆತಂಕದಿಂದಾಗಿ ಉನ್ನತ ಶಿಕ್ಷಣದ ಏಣಿ ಕಳಚಿ ಉನ್ನತ ಹುದ್ದೆಯ ಭಾಗ್ಯವೂ ಕುಸಿದ ಯುವಕ ಗೌರೀಶ ಕಾಯ್ಕಿಣಿ ಯವರ ಪಾಲಿಗೆ ಜೀವನ ತೆರೆದುಕೊಂಡಿದ್ದು ಶಾಲಾ ಉಪಾಧ್ಯಾಯ ವೃತ್ತಿಯಲ್ಲಿ.

ಜೀವನ ನಿರ್ವಹಣೆಗೊಂದು ಆರ್ಥಿಕ ಆಸರೆಗೆ ಉದ್ಯೋಗ ಅವಶ್ಯವೆಂಬ ಕಾರಣಕ್ಕೆ ಸುಲಭ ಲಭ್ಯದ 'ಶಿಕ್ಷಕ' ವೃತ್ತಿಯನ್ನು ಸ್ವೀಕರಿಸಿದ್ದರೂ ಅದು ಅವರಿಗೆ ಜೀವನೋಪಾಯಕ್ಕೆ ವೇತನ ಪಡೆಯುವ ಒಂದು ಮಾರ್ಗ ಎಂಬ ಮಟ್ಟಕ್ಕಿರಿಸುವ ಕಾರ್ಯವೆಂದೆನಿಸಿಕೊಳ್ಳಲಿಲ್ಲ. ಆ ವೃತ್ತಿಯೊಳಗಣ ಪ್ರವೃತ್ತಿಯೇ ಮುಖ್ಯವಾಯಿತು; ಪ್ರಿಯವಾಯಿತು. ಅಧ್ಯಾಪನ-ಸ್ವಾಧ್ಯಾಯ ಗಳು ಸಮಾಂತರಗೊಂಡು ಬೆಳೆಯುತ್ತ ಶಿಕ್ಷಕ ಮತ್ತು ಸಾಹಿತಿ ಈ ಎರಡೂ ಮುಖದಲ್ಲಿ ಗೌರೀಶಂಕರ ಶಿಖರವಾಗಿ ಎತ್ತರಕ್ಕೆ ಎದ್ದುನಿಂತು ಕಾಣಿಸಿ ಕೊಂಡರು. ಶಿಕ್ಷಕ ವೃತ್ತಿ–ಸಾಹಿತ್ಯ ಪ್ರವೃತ್ತಿ ಎರಡೂ ಅವರ ಬದುಕಿನ ಸಮಾನ ಕ್ರಿಯೆಯಾಗಿ ಪೋಷೈಸಿ ಹಬ್ಬತೊಡಗಿತು.

ಗೌರೀಶರು ಮೊಟ್ಟಮೊದಲು ಸನ್ ೧೯೩೦ರಲ್ಲಿ ಗೋಕರ್ಣದ ಎ. ವ್ಹಿ. ಸ್ಕೂಲಿನಲ್ಲಿ ಸಹಾಯಕ ಶಿಕ್ಷಕರಾಗಿ ಪದಾರ್ಪಣೆಗೈದರು. ಆಗ ಈ ಹುದ್ದೆಗೆ ನಿಗದಿತ ವೇತನವೇ ಮಾಸಿಕ ಇಪ್ಪತ್ತು (೨೦) ರೂಪಾಯಿ. ಆದರೆ ಗೌರೀಶ ಕಾಯ್ಕಿಣಿಯವರಿಗೆ ಆ ಮೊತ್ತವೂ ಇಲ್ಲ. ಮಾಸಿಕ ಹನ್ನೆರಡು ರೂಪಾಯಿ ವೇತನಕ್ಕೊಪ್ಪಿ ದುಡಿಯತೊಡಗಿದರು. ಗೋಕರ್ಣದ ಆ ಪ್ರಾಥಮಿಕ ಶಾಲೆ ಅವರಿಗೆ ಸರಿಹೊಂದಲಿಲ್ಲ. ಎರಡೇ ವರುಷದಲ್ಲಿ ಅದನ್ನು ತೊರೆದು ಅಲ್ಲಿಂದ ೬ ಕಿ. ಮೀ. ಅಂತರದಲ್ಲಿರುವ ಬಂಕಿಕೊಡ್ಲ ಎಂಬ ಊರಿನಲ್ಲಿದ್ದ 'ಎ. ವಿ. ಮಿಡ್ಲಸ್ಕೂಲ' ಶಿಕ್ಷಕನಾಗಿ ಸೇರಿಕೊಂಡರು. ಬಂಕಿಕೊಡ್ಲ ಎ. ವಿ. ಶಾಲೆ ಯನ್ನು ಮಾಧ್ಯಮಿಕ ಶಾಲೆಯ ದರ್ಜೆಗೂ ನಂತರ ಅದನ್ನು ಪ್ರೌಢಶಾಲೆ (ಹೈಸ್ಕೂಲು) ದರ್ಜೆಗೂ ಪರಿವರ್ತಿಸುವಲ್ಲೂ ; ಆ ವಿದ್ಯಾಲಯದ ಮುಂದಿನ

ಶ್ರೇಯಸ್ಸಿಗಾಗಿ ದುಡಿದುದರಲ್ಲೂ ಗೌರೀಶ ಕಾಯ್ಕಿಣಿಯವರದು ಗಣ್ಯಪಾತ್ರ ವಾಗಿತ್ತೆಂಬುದು ಅಲ್ಲೀಗ ನೆನಪಿನ ದಾಖಲೆ.

ಈ ಬಂಕಿಕೊಡ್ಲ ಶಾಲೆಯಲ್ಲಿ ಸುಮಾರು ಹದಿನೈದು ವರುಷಗಳ ಕಾಲ ದುಡಿದಿದ್ದರೂ ವಾಸ್ತವ್ಯವು ಮಾತ್ರ ಗೋಕರ್ಣದಲ್ಲಿದ್ದ ಅವರದೇ ಆದ ಆಶ್ರಮ ಮನೆಯಲ್ಲಿ ಮುಂದುವರಿದಿತ್ತು. ಬೆಳಿಗ್ಗೆ ಮನೆಯಿಂದ ಹೊರಟು ಪ್ರತಿದಿನ ಶಾಲೆಯ ಸಮಯಕ್ಕೆ ಕರಾರುವಾಕ್ಕಾಗಿ ಪಾದಚಾರಿಯಾಗಿಯೇ ೬ ಕಿ. ಮೀ. ನಡೆದು ಶಾಲೆಯನ್ನು ತಲುಪಿ; ಹಾಗೇ ಪಾದಚಾರಿಯಾಗಿಯೇ ಸಂಜೆಗೆ ಮರಳು ತ್ತಿದ್ದುದು ಗೌರೀಶರ ನಿತ್ಯಕ್ರಮ ಕರ್ಮವಾಗಿತ್ತು. ಹೀಗೆ ಕಾಲುನಡುಗೆ ಯಿಂದ ಹೋಗುವಾಗ-ಬರುವಾಗ ದಾರಿಯುದ್ದಕ್ಕೂ ಒಂದಲ್ಲ ಒಂದು ಪುಸ್ತಕ ವನ್ನು ಓದುತ್ತಲೇ ಸಾಗುವುದು,ಹೆಜ್ಜೆ ಇಕ್ಕುವುದು ಅವರ ಶಾಶ್ವತ ಹವ್ಯಾಸ.

ಗೋಕರ್ಣದಿಂದ ಬಂಕಿಕೊಡ್ಲಿಗೆ ಹೋಗುವ ದಾರಿ ಗಟ್ಟದ ಇಳಿಜಾರಿ ನದು. ನಡೆದು ಹೋಗುವವರು ಕೊಂಚ ಅಡ್ಡಭಾವಿಸಿದರೂ ದಾರಿ ತುಂಬಾ ಚಲ್ಲಾಪಿಲ್ಲಿ ಬಿದ್ದಿರುವ ಗುಂಡುಕಲ್ಲಿಗೆ ಪಾದ ಜಪ್ಪಿಸಿಕೊಂಡು ಶಪಿಸಬೇಕು. ಅಂಥದೊಂದು ದಾರಿಯಲ್ಲಿ ಹಲವು ಪುಸ್ತಕಗಳನ್ನು ಕಂಕುಳಲ್ಲಿ ಅವಚಿಕೊಂಡು ಕೈಯಲ್ಲೊಂದು ಪುಸ್ತಕ ಹಿಡಿದು ತೆರೆದು ಓದುತ್ತ-ಓದುತ್ತ ಬರುವ ವ್ಯಕ್ತಿ ಯನ್ನು ಕಂಡರೆ ಅವರು 'ಗೌರೀಶ ಮಾಸ್ತರರು' ಎಂದೇ ಗುರುತಿಸುವುದು ಅಲ್ಲಿ ಮನೆಮಾತಾಗಿತ್ತು. 'ಕ್ಲಾಸಿನ ಬಾಗಿಲ ಒಳಗಡೆ ಸೇರುವವರೆಗೂ ದಾರಿ ತೋರಿಸುತ್ತಿದ್ದುದು ಅವರ ಕೈಯೊಳಗಿದ್ದ ಆ ಪುಸ್ತಕವೇ !'

"ಗೌರೀಶ ಕಾಯ್ಕಿಣಿ (ಮಾಸ್ತರರು) ಹಾಗೆ ಓದಿಕೊಂಡ ಪುಸ್ತಕಗಳ ಪಟ್ಟಿ ಮಾಡುವುದು ತುಂಬ ಕಠಿಣ. ಕನ್ನಡ, ಹಿಂದಿ, ಇಂಗ್ಲೀಷು, ಮರಾಠಿ, ಸಂಸ್ಕೃತ ಹೀಗೆ ಆ ಓದಿನ ಗ್ರಂಥಗಳಿಗೆ ಮಿತಿಯಿಲ್ಲ ; ನಿರ್ಬಂಧವಿಲ್ಲ" ಎಂದಿದ್ದಾರೆ. ಅವರು ಓದಿನಲ್ಲಿ ಏಕಪಾಠಿ ಒಮ್ಮೆ ಓದಿದ್ದು (ಇಂದಿಗೂ) ನೆನಪಿನಾಳದಲ್ಲಿ ಚಿರಸ್ಥಾಯಿ.

ಆ ಹದಿನೈದು ವರುಷಗಳ ನಂತರ (೧೯೫೪) ಗೌರೀಶರು ಪುನಃ ಬಂಕಿಕೊಡ್ಲ ತೊರೆದು ಗೋಕರ್ಣದ ಭದ್ರಕಾಳೀ ಹೈಸ್ಕೂಲಿಗೆ ಅಧ್ಯಾಪಕ ರಾಗಿ ಸೇರಿಕೊಂಡರು. ಶಿಕ್ಷಕ ವೃತ್ತಿಯ ಪ್ರವೃತ್ತಿಯ ಜೊತೆಗೇ ಸಾಹಿತ್ಯ ಕೃಷಿಯಲ್ಲಿಯೂ ಹುಲುಸುಗೊಳ್ಳತೊಡಗಿದರು.

ಯುವ ಗೌರೀಶರು ಮಾಸ್ತರಿಕೆ ವೃತ್ತಿಯಲ್ಲಿದ್ದುದರಿಂದ ಒದಗಿ ಬರುತ್ತಿದ್ದ ಶಾಲೆಯ ಕಾರ್ಯಕ್ರಮಗಳಿಗಾಗಿಯೋ, ಸಾಂಸ್ಕೃತಿಕ ಹಬ್ಬ ಮನರಂಜನೆಗಳಿಗಾಗಿಯೋ ಉತ್ಸುಕತೆಯಿಂದ ವಿವಿಧ ಪದ್ಯಗಳನ್ನು ಬರೆದುಕೊಡುವುದು (ಕೆಲವನ್ನು ಅಭಿನಯ, ನೃತ್ಯಗಳಿಗೂ ಯುಕ್ತವಾಗುವಂತೆ) ಹಾಗೂ ಆಯಾ ಸಂದರ್ಭಗಳಿಗೆ ಯುಕ್ತವಾಗುವಂಥ ಸ್ವಾಗತ ಗೀತೆಗಳನ್ನು ರಚಿಸಿಕೊಡುವುದು (ಆಗೊಮ್ಮೆ ಜಿಲ್ಲೆಯ ವರಪುತ್ರ ಎಂದೆಲ್ಲಾ ಕೊಂಡಾಡಿಸಿಕೊಳ್ಳುತ್ತಿದ್ದ ಶ್ರೀ ರಾಮಕೃಷ್ಣ ಹೆಗಡೆ ದೊಡ್ಮನೆ ಅವರು ಮೊದಲಬಾರಿಗೆ ರಾಜ್ಯದ ಸಚಿವರಾಗಿ ಗೋಕರ್ಣಕ್ಕೆ ಪ್ರಪ್ರಥಮವಾಗಿ ಭೆಟ್ಟಿ ಇತ್ತ ಕಾರ್ಯಕ್ರಮವೊಂದಕ್ಕೆಂದು 'ರಾಮ–ಕೃಷ್ಣರು ಮನೆಗೆ ಬಂದರು ಬಾಗಿಲ ತೆರೆಯಿರೋ' ಎಂಬ ಬಹು ಮಾರ್ಮಿಕ, ಅರ್ಥಗರ್ಭಿತ, ಹೃದಯಂಗಮ ಸ್ವಾಗತ ಪದ್ಯವನ್ನು ರಚಿಸಿ ಕೊಟ್ಟು ಹಾಡಿಸಿದ್ದು ಆಗ ಜಿಲ್ಲೆಯಲ್ಲೆಲ್ಲಾ ಜನಜನಿತ.) ಇತ್ಯಾದಿಯಾಗಿ ಅವರೊಳಗಿನ 'ಕವಿತ್ವ' ಹೊರಹೊಮ್ಮುತ್ತಲಿತ್ತು.

ಗೋಕರ್ಣದಲ್ಲಿಯ ಸಾಹಿತ್ಯ ಸೇವಾ ಸಂಘದ ಸಂಸ್ಕೃತಪ್ರಿಯ ರಸಿಕ ಯುವಕರು ಗೌರೀಶರ ನಿಕಟ ಒಡನಾಡಿಗಳಾಗಿದ್ದರು. ಅವರಿಂದಾಗಿ ಇವರಿಗೆ ಸಂಸ್ಕೃತ ಸಾಹಿತ್ಯದ ಅಭಿರುಚಿ. (ಸಂಸ್ಕೃತ ಭಾಷಾಜ್ಞಾನ ಮೊದಲೇ ಕರಗತ) ಇವರಿಂದಾಗಿ ಅವರಿಗೆ ಇಂಗ್ಲೀಷ್ ಸಾಹಿತ್ಯ ಪರಿಚಯ ಹೀಗೆ ಅನ್ಯೋನ್ಯಗೊಂಡಿತ್ತು. ಆ ಯುವಕರು ನಾಟ್ಯ ಪ್ರೇಮಿಗಳಾಗಿದ್ದರು. ಸಂಸ್ಕೃತ ಮತ್ತು ಕನ್ನಡದಲ್ಲಿ ನಾಟಕಗಳನ್ನು ಕಲಿತು ಆಡುವುದು ಅವರ ವಾರ್ಷಿಕ ಹವ್ಯಾಸ. ಅವರ ಆ ನಾಟಕ ಪ್ರಯೋಗಗಳಿಗೆ ಗೀತರಚನೆ, ಗೀತಗಳಿಗೆ ಸಂಗೀತ ಜೋಡಣೆ ಗೌರೀಶರದು. ಇದಲ್ಲದೇ ಬೇರೆ ಬೇರೆ ನಾಟಕ ಕಂಪನಿಗಳೂ ಗೋಕರ್ಣಕ್ಕೆ ಆಗಮಿಸಿ ತಿಂಗಳುಗಟ್ಟಲೆ ತಂಬು ಊರಿ ನಾಟಕ ಪ್ರದರ್ಶಿಸುವುದೂ ಪ್ರಚಲಿತ. ಅಂಥ ನಾಟಕಗಳನ್ನು ನೋಡಲೂ ಅವನ್ನು ಅಳವಡಿಸಿಕೊಳ್ಳಲೂ ಗೌರೀಶರಿಗೆ ಅತುಲ ಆಸಕ್ತಿ. ಅಂಥ ಕಂಪನಿಯೊಂದರ ಪ್ರಯೋಗಕ್ಕಾಗಿ ಮರಾಠಿಯಲ್ಲಿದ್ದ 'ಭೂಕೈಲಾಸ' ನಾಟಕವನ್ನು ಕನ್ನಡಕ್ಕಿಳಿಸಿಕೊಟ್ಟಿದ್ದರು. ಗೌರೀಶರು ಧಾರವಾಡದಲ್ಲಿ ವಿದ್ಯಾರ್ಥಿಯಾಗಿರುವಾಗಲೂ ನಾಟಕದ ಪ್ರಭಾವ, ಪರಿಸರವೇ ಒದಗಿಕೊಂಡಿತ್ತು. ಆಗ ಗೌರೀಶರಿಗೆ ಪ್ರಾಧ್ಯಾಪಕರೂ ಆಗಿದ್ದ ಖ್ಯಾತ ನಾಟಕಕಾರ 'ಶ್ರೀರಂಗ'ರು (ಆರ್. ವಿ.

ಜಹ[illegible]ದಾರರು) ಸ್ವತಃ ನಾಟಕಗಳನ್ನು ರಚಿಸುವುದು, ಅವನ್ನು ವಾಚಿಸು ವುದು, ಸ್ವತಃ ತಾನೂ ಪಾತ್ರವಹಿಸಿ ನಿರ್ದೇಶನವನ್ನೂ ಗೈದು ನಾಟಕಗಳನ್ನು ಪ್ರದರ್ಶಿಸುತ್ತಿರುವುದು ಈ ಎಲ್ಲವುಗಳ ಪ್ರಭಾವ ಗೌರೀಶರ ಮೇಲೆ ದಟ್ಟ ಗೊಂಡಿತ್ತು. ಆ ಸೆಳೆತದಿಂದ ಶ್ರೀರಂಗರ ನಿಕಟವರ್ತಿಗಳೂ ಆಗಿದ್ದರು. ಸುತ್ತುವರಿದ ಈ ಎಲ್ಲಾ ಪ್ರಭಾವಳಿಯಿಂದಾಗಿ ಗೌರೀಶರ ಒಳಗಡೆಯೂ 'ನಾಟಕಕಾರ' ಉದ್ಭವಗೊಂಡಿದ್ದ.

ಶಿಕ್ಷಕ ವೃತ್ತಿಯಲ್ಲಿ ತೊಡಗಿಕೊಂಡ ಬಳಿಕ ತಮ್ಮ ವಿದ್ಯಾರ್ಥಿಗಳಿಗಾಗಿ ಆಗಾಗ ನಾಟಕಗಳನ್ನು ರಚಿಸಿ, ತಕ್ಕ ಗೀತಗಳನ್ನೂ ತಾವೇ ಬರೆದು, ಸ್ವತಃ ಹಾರ್ಮೋನಿಯಂ ಹಿಡಿದು ಸಂಗೀತ ರಾಗ-ತಾಳ ಜೋಡಿಸಿ ಹಾಡನ್ನೂ ನಾಟಕ ವನ್ನೂ ಮಕ್ಕಳಿಗೆ ಕಲಿಸಿ ತೃಪ್ತಿಪಡುತ್ತಲಿದ್ದ ಗೌರೀಶರೊಳಗಿನ ನಾಟಕ ಸೃಜನತೆ ಮುಂದೆ ಎಲ್ಲೆ ಕಟ್ಟು ದಾಟಿ ಬೆಳೆದುಕೊಂಡಿತು. ನಾಟಕ, ಕಾವ್ಯ, ಗದ್ಯ ಸಾಹಿತ್ಯ, ವಿಮರ್ಶೆ, ಪತ್ರಿಕಾಲೇಖನ ಹೀಗೆ ವಿವಿಧ ಮುಖದಲ್ಲಿ ಬೆಳೆ ಯುತ್ತ ಹೆಸರು ಮಾಡುತ್ತಲಿದ್ದ ಗೌರೀಶರು ಹೊರಗಿನ ಜನಕ್ಕೆ ಓರ್ವ ಸಾಹಿತಿಯಾಗಿ ಪ್ರಿಯರಾಗುತ್ತಿದ್ದರೂ ಆ ಸುತ್ತಲಿನವರಿಗೆ ಹಾಗೂ ಮುಖ್ಯ ವಾಗಿ ತುಂಬಿರುವ ಶಿಷ್ಯ ಬಳಗದವರಿಗೆ ಅವರೊಬ್ಬ ಅಚ್ಚುಮೆಚ್ಚಿನ, ಗಣ್ಯ ಪ್ರಭಾವೀ 'ಗೌರೀಶ ಮಾಸ್ತರರು' ಎಂದೇ ಅಚ್ಚಳಿಯದ ಅಚ್ಚೊತ್ತಿ ಕೊಂಡಿದ್ದರು.

ಅವರೊಬ್ಬ ಆದರಣೀಯ ಶಿಕ್ಷಕರಾಗಿ ವಿದ್ಯಾರ್ಥಿಗಳೊಂದಿಗೆ ತೀರಾ ನಿಕಟವರ್ತನೆ, ಸ್ನೇಹಪರತೆ, ಅಧ್ಯಯನ, ಅಧ್ಯಾಪನದಲ್ಲಿ ಶಿಸ್ತಿನ ವರ್ತನೆ, ಅಷ್ಟೇ ಬಿಗುಮಾನ ಇತ್ಯಾದಿ ತಮ್ಮ ಶೀಲದಿಂದಾಗಿ ವಿದ್ಯಾರ್ಥಿಗಳಲ್ಲಿ ಭಯ–ಭಕ್ತಿ, ಪ್ರೀತಿ, ಗೌರವ ಗಳಿಸಿಕೊಂಡಿದ್ದರು.

"ವಿದ್ಯಾರ್ಥಿ ವೃಂದದೊಡನೆ ಬೆರೆತು ಸಮರ್ಥಮಾರ್ಗದರ್ಶನ ಮಾಡಿದ ದಾರ್ಶನಿಕರಿವರು. ಶಿಕ್ಷಣ ನೀಡುವುದು ಪವಿತ್ರ ದೇವಕಾರ್ಯವೆಂದು ಭಾವಿಸಿ ನಡೆದುಕೊಂಡವರು"

"ಅವರ ತರಗತಿಗಳು ಹಾಸ್ಯದ ಮಡುವಾಗಿದ್ದವು. ಲಭಿಸಲಿರುವ ಪುಂಖಾನುಪುಂಖ 'ಜೋಕು'ಗಳಿಗಾಗಿ ವಿದ್ಯಾರ್ಥಿಗಳು ಪ್ರಸನ್ನ ಚಿತ್ತದಿಂದ ಕುತೂಹಲದಿಂದ ಕುಳಿತಿರುತ್ತಿದ್ದರು.

"ಹಾಸ್ಯದ ರಸಗುಲ್ಲಾ, ದ್ವಂದ್ವಾರ್ಥದ ಶ್ಲೇಷೆ, ಅವರದೇ ಸೃಷ್ಟಿಯ ಹೊಸ ಹೊಸ ಜೋಡುನುಡಿ, ಪಡೆನುಡಿಗಳ ಹಾಸ್ಯಲಾಸ್ಯದ ಸಿಂಚನದಿಂದ ಇಡೀ ವರ್ಗ ಪುಳಕಿತ"

"ವಿದ್ಯಾರ್ಥಿಗಳಿಗೆ ಪರಮಾವಧಿ ವಿದ್ಯಾರ್ಜನೆ. ಹೈಸ್ಕೂಲಿನಲ್ಲಿರುವಾಗಲೇ ಸಾಹಿತ್ಯಿಕ ಉನ್ನತ ಮಟ್ಟದ ಜ್ಞಾನ, ವಿಮರ್ಶಾತ್ಮಕ ಅಧ್ಯಯನವು ಕಾಲೇಜು ದಿನಗಳಲ್ಲಿಯೂ ಲಭಿಸುತ್ತಿರಲಿಲ್ಲ"

—ಹೀಗೆ ಗೌರೀಶರ ಮಾಸ್ತರಿಕೆಯ ಶ್ರೇಷ್ಠತೆಯ ನೆನಪನ್ನು ಅವರ ಅನೇಕ ಗಣ್ಯ ಶಿಷ್ಯರು ಮೆಲಕಿಸಿದ್ದಾರೆ. ಅವರು ಜ್ಞಾನದ ಬುತ್ತಿಯನ್ನೇ ಕಟ್ಟಿ ಕೊಟ್ಟದ್ದನ್ನು ಸ್ಮರಿಸುತ್ತಾರೆ. ಕನ್ನಡ ಮುಂತಾದ ಭಾಷಾವಿಷಯವಂತೂ ರಸಸ್ವಾದದ ಊಟ. ಜೊತೆಗೇ ಗಣಿತ, ವಿಜ್ಞಾನದಂಥ ಬೋರ್ ಆಗುವ ವಿಷಯಗಳೂ ಗೌರೀಶರಿಂದ ಪಾಯಸವಾಗಿ ಉಣಿಸಲ್ಪಡುತ್ತಿತ್ತು. ಪೌರನೀತಿ ಭೂಗೋಲವೂ ಅಷ್ಟೇ—ಹೀಗೆಂದೂ ನೆನಪಿಸಿಕೊಳ್ಳುತ್ತಾರೆ.

ಬಡ ವಿದ್ಯಾರ್ಥಿಗಳೆಂದರಂತೂ ಅವರಿಗೆ ದೇವದೂತರಿದ್ದಂತೆ. ಮೈಲುಗಟ್ಟಲೆ ನಡೆದು ಮನೆಯತನಕ ಹೋಗಿ ಕಲಿಸಿ ಪ್ರೋತ್ಸಾಹಿಸುತ್ತಿದ್ದರು. ವಿದ್ಯಾರ್ಥಿಗಳಲ್ಲಿಯ ಪ್ರತಿಭೆಯನ್ನು ತಕ್ಕ ರೀತಿಯಲ್ಲಿ ಗುರುತಿಸಿ ಚಿಗುರಿನಲ್ಲೇ ಬೆನ್ನು ಚಪ್ಪರಿಸಿ ಬೆಳೆಸುವುದು ಅವರಿಗೆ ಪ್ರೀತಿ, ತಾನು ಕಲಿಸಿದ್ದ ವಿದ್ಯಾರ್ಥಿ ಕವಿಯಾಗಿಯೋ, ಲೇಖಕನಾಗಿಯೋ ಬೆಳೆದು ಕಾಣಿಸಿಕೊಂಡಾಗ ಅವರಿಗೆ ಹಿರಿ ಹಿರಿ ಹಿಗ್ಗು. ಧನ್ಯತೆ. ಹೀಗೆ ಅವರ ಗರಡಿಯಲ್ಲಿ ತಾಲೀಮು ಪಡೆದು, ಪುಷ್ಟಿಗಳಿಸಿ ಬಲಿತ ಬಲ್ಲಿದ ಸಾಹಿತಿಗಳಲ್ಲಿ ಗಂಗಾಧರ ಚಿತ್ತಾಲ, ಯಶವಂತ ಚಿತ್ತಾಲ, ಅರವಿಂದ ನಾಡಕರ್ಣಿ, ಸುಂದರ ನಾಡಕರ್ಣಿ, ಡಾ|| ಕೆ. ಜಿ. ಶಾಸ್ತ್ರಿ, ಎಂ. ಎಸ್. ಪ್ರಭು ಮುಂತಾದ ಖ್ಯಾತನಾಮರು ಸೇರುತ್ತಾರೆ. ಜಿಲ್ಲೆಯ ತುಂಬಾ ನಿಂತಿರುವ ಎಷ್ಟೋ ಹಿರಿ ಕಿರಿಯ ಕವಿಗಳೂ ಲೇಖಕರೂ ಗೌರೀಶ ಕಾಯ್ಕಿಣಿಯವರ ಶಿಷ್ಯ ವರ್ಗದವರೇ ಆಗಿದ್ದಾರೆ.

ಹೀಗೆ ಜನಪ್ರೀತಿಯ ಸರ್ವಮಾನ್ಯ ಸಂಪನ್ನ, ಸರ್ವಸಮ್ಮತ ಶ್ರೇಷ್ಠ ಶಿಕ್ಷಕರೆನಿಸಿ, ಆದರ್ಶ ಗುರುವೆನಿಸಿ ದುಡಿದ ಗೌರೀಶ ಕಾಯ್ಕಿಣಿಯವರಿಗೆ ನಿವೃತ್ತಿಗೆ ಮೂರು ವರ್ಷಗಳ ಮೊದಲು ೧೯೬೩ರಲ್ಲಿ ವೃತ್ತಿ ಗೌರವವಾಗಿ

'ರಾಜ್ಯ ಶ್ರೇಷ್ಠ ಶಿಕ್ಷಕ' ಪ್ರಶಸ್ತಿ ಲಭಿಸಿತು. ಅವರು ೧೯೭೬ರಲ್ಲಿ ಶಿಕ್ಷಕ ವೃತ್ತಿಯಿಂದ ಸರಕಾರೀ ನಿಯಮಾನುಸಾರ ನಿವೃತ್ತರಾಗಬೇಕಾಯಿತು.

೫

ದಾಂಪತ್ಯ–ಕುಟುಂಬ

ಡಾ॥ ಗೌರೀಶ ಕಾಯ್ಕಿಣಿಯವರ ವೃತ್ತಿ ಹಾಗೂ ಅಲ್ಲಿಯ ಪ್ರವೃತ್ತಿಯು ದಾಖಲೆಗೊಳ್ಳುವಂತಿದ್ದುದರ ಜೊತೆಗೇ ಅವರ ವೈಯಕ್ತಿಕ ಬದುಕಿನ ಕುಟುಂಬ ಸಂಗತಿಯೂ ಗಮನಾರ್ಹವಾದುದು. ವಿಶಿಷ್ಟತೆಯುಳ್ಳದ್ದು.

ಗೌರೀಶರ ತಾರುಣ್ಯದ ಅಂದಿನ ಆ ಕಾಲ ಪ್ರಪಂಚದಲ್ಲಿ ಗಂಡು ಮಗ ಇಪ್ಪತ್ತರ ಹರಯಕ್ಕೆ ಬರುತ್ತಿರುವಷ್ಟಕ್ಕೇ ಮದುವೆ ಮಾಡಿಬಿಡುವ ತರಾತುರಿ ಅವರವರ ಪಾಲಕರಲ್ಲಿ. ಆದರೆ ಗೌರೀಶರ ಪಾಲಿಗೆ ಅಂಥ ಪಾಲಕರೇ ಇಲ್ಲ. ಸಾಕುತಾಯಿ ದೊಡ್ಡಮ್ಮನೂ ವೃದ್ಧೆ. ತನ್ನ ವಯಸ್ಸಿನ ಇಪ್ಪತ್ತೈದರಲ್ಲಿ ವೃತ್ತಿಜೀವನಕ್ಕಿಳಿದ ಗೌರೀಶರಿಗೆ ಕೌಟುಂಬಿಕ ಬಡತನದ ಬಾಧೆ; ಹಾಗೂ ತನ್ನ ಮುಖ ಸೌಂದರ್ಯಕ್ಕೆ ಉಂಟಾದ ಧಕ್ಕೆಯ ದುಗುಡ ಕಾಡುತ್ತಿದ್ದುದರಿಂದಲೋ ಏನೋ ಅವರು ಮದುವೆ ವಿಚಾರಕ್ಕೆ ವಿಮುಖರಾಗಿಬಿಟ್ಟಿದ್ದರೆನ್ನಬಹುದು. ಸಂಬಂಧಿಕರು, ಬಳಗದವರುಗಳಲ್ಲಿಯೂ ಆ ಕುರಿತು ಗಮನಿಸುವವರಿರಲಿಲ್ಲ. ಈ ಬಗೆಯ ಸ್ಥಿತಿಯಲ್ಲಿ ಗೌರೀಶರ ಹೊರಮುಖ, ಹೊರಬದುಕನ್ನು ನೋಡದೇ ಒಳಗಡೆ ತುಂಬಿದ್ದ ವ್ಯಕ್ತಿತ್ವದ ಸೌಂದರ್ಯವನ್ನು ಕಂಡು ಬೆನ್ನತ್ತಿ ಬಂದು ಅಂಟಿಕೊಂಡು ಬಾಳ ಸಂಗಾತಿಯಾದವರು ಶ್ರೀಮತಿ ಶಾಂತಾಬಾಯಿ.

ಗೌರೀಶರು ಅಂದು ಬಂಕಿಕೊಡ್ಲದಲ್ಲಿ ಉಪಾಧ್ಯಾಯರಾಗಿದ್ದ ದಿನಗಳಲ್ಲಿ ಗೋಕರ್ಣದಲ್ಲೇ ಖಾಸಗಿಯಾಗಿ ಇಂಗ್ಲೀಷ್ ವಿಷಯದ ಪಾಠ ಹೇಳುತ್ತಿದ್ದರು. ಆಗ ಪ್ರಾಥಮಿಕ ಶಿಕ್ಷಣದ ಮುಲ್ಕಿ (ಏಳನೇ ವರ್ಗದ) ಪರೀಕ್ಷೆ ಮುಗಿದ ನಂತರ ಒಮ್ಮೆಗೇ ಇಂಗ್ಲೀಷಿನ ಮೂರನೆಯ ತರಗತಿಯವರೆಗಿನದೂ ಅಧ್ಯಯನ ಮುಗಿಸಿ ಪರೀಕ್ಷೆಗೆ ಕಟ್ಟಿ ತೇರ್ಗಡೆಯಾದರೆ ನೇರವಾಗಿ ಮುಂದಿನ ತರಗತಿಗೇ ಸೇರಿಕೊಳ್ಳುವ ಅವಕಾಶ. ಹಾಗೆ ಬಯಸಿದ ವಿದ್ಯಾರ್ಥಿಗಳಿಗೆಲ್ಲಾ ಗೌರೀಶರು ನಡೆಸುತ್ತಿದ್ದ ಖಾಸಗೀ ಪಾಠಕ್ರಮ ದೊಡ್ಡ ಆಸರೆ. ಆ ರೀತಿ ಖಾಸಗೀ ಪಾಠ ಹೇಳಿಸಿಕೊಳ್ಳಲು ಬರುತ್ತಿರುವವರಲ್ಲಿ ಪಕ್ಕದ ತದಡಿ ಗ್ರಾಮದ ಶ್ರೀ ರಾಮಚಂದ್ರ ವೆಂಟೇಕರ ಎಂಬುವರ ಪುತ್ರಿ ಶಾಂತಾಬಾಯಿ ಒಬ್ಬಳು.

ಹೆಣ್ಣುಮಗಳೋರ್ವಳು ಖಾಸಗೀ ವರ್ಗಕ್ಕೆ ಬರುವುದು ; ಅದರಲ್ಲೂ ಆಕೆ ಸೈಕಲ್ಲನ್ನೇರಿ ಬರುತ್ತಿರುವುದೂ ಅಂದಿನ ವಿಶೇಷ ಸಂಗತಿಗಳಲ್ಲೊಂದು.

ಗೌರೀಶ ಕಾಯ್ಕಿಣಿಯವರಲ್ಲಿ ತುಂಬಿಕೊಂಡಿದ್ದ ಚುರುಕು ಬುದ್ಧಿಮತ್ತೆ, ವಿದ್ಯಾರ್ಥಿಗಳನ್ನು ನಗೆಗಡಲಲ್ಲಿ ತೇಲಿಸುವಂಥ ವಿನೋದಲಹರಿ, ಚಾಟೂಕ್ತಿ ಸಂಪನ್ನತೆ ಮುಂತಾದವುಗಳನ್ನು ಕಂಡ ಶಾಂತಾ ವಿಶೇಷ ಆಕರ್ಷಣೆಗೊಳಪಟ್ಟಳು ಆ ಖಾಸಗೀ ಪಾಠ ಮುಗಿದ ನಂತರದ ದಿನಗಳಲ್ಲಿಯೂ ಸಂಗೀತ ಬಲ್ಲವರಾಗಿದ್ದ ಗೌರೀಶರಲ್ಲಿಗೆ ಸಂಗೀತ ಪ್ರಿಯೆ ಯುವತಿ ಶಾಂತಾ ಸಂಗೀತವನ್ನು ಕಲಿಯಲೆಂದು ಬರಲು ಉಪಕ್ರಮಿಸಿದ್ದರಿಂದ ಅವರಿಬ್ಬರ ಸಂಪರ್ಕ ಸಂಬಂಧ ಸತತ ಕೊಂಡಿ ಚಾಚಿತು. ವ್ಯಕ್ತಿತ್ವದ ಆಕರ್ಷಣೆಯೊಂದಿಗೆ ಸಾಮೀಪ್ಯಗೊಂಡ ಸಂಬಂಧ ಪರಸ್ಪರ 'ಪ್ರೇಮ'ವಾಗಿ ಮಾರ್ಪಟ್ಟಿತು. ಆಗ ಭಾವನೆಗಳ ವಿನಿಮಯದ ಪತ್ರವ್ಯವಹಾರದಲ್ಲಿಯೇ ಸಾಂಗತ್ಯ ಸಾನ್ನಿಧ್ಯಗೊಂಡಿದ್ದ ಆ ಪ್ರೇಮವು ತಾಳಿ–ತಾಳಿ ಹತ್ತು ವರುಷಗಳಷ್ಟು ದೀರ್ಘ ಕಾಲಾವಧಿಯ ನಂತರದಲ್ಲಿ ೧೯೫೩ನೇ ಇಸ್ವಿಯಲ್ಲಿ ವಿವಾಹ ರೂಪ ಹೊಂದಿ ಬೆಸೆದು ಗೌರೀಶ–ಶಾಂತಾರವರು ಪತಿ ಪತ್ನಿಯರಾದರು. ಆಗ ಗೌರೀಶರಿಗೆ ನಾಲವತ್ತೊಂದು ವರ್ಷ ವಯಸ್ಸು. ಶಾಂತಾರಿಗೆ ಇಪ್ಪತ್ತಮೂರು. ಅವರಿಬ್ಬರಲ್ಲಿ ಸಹಜವಾದ ಪ್ರೇಮಾಂಕುರವಾಗಿದ್ದರೂ—'ತನ್ನ ದೈಹಿಕ (ಮುಖಮಂಡಲ) ರೂಪಾಕರ್ಷಣೆ ಇಲ್ಲದಿರುವುದನ್ನು ಭಾವಿಸಿಕೊಂಡಿದ ಗೌರೀಶರು, ಆ ಕಾರಣದಿಂದಾಗಿ ಆಕರ್ಷಣೆ ಕಳಚಿಬಿದ್ದು ಮುಂದೊಂದು ದಿನ ಪ್ರೇಮಾಂಬುಧಿಯು ಬರತೆ ಬತ್ತಿದರೆ ? ಎಂಬ ಸಂದೇಹ, ಸಂಕೋಚವನ್ನು ನಿವಾರಿಸಿಕೊಳ್ಳಲು ವಿವೇಚನೆಗೊಂಡಿದ್ದರ ಪ್ರತಿಕ್ರಿಯೆಯಾಗಿ ಅಷ್ಟು ದೀರ್ಘ ಕಾಲ ತನ್ನ ಪ್ರೇಮದ ಪರೀಕ್ಷೆ ನಡೆಸಿದ್ದರು. ಕೊನೆಗೂ ತನ್ನದೇ ದೃಢ ನಿರ್ಧಾರದಿಂದ ಉತ್ತೀರ್ಣಳಾದೆ'—ಹೀಗೆಂದು ಶಾಂತಾ ಅವರು ಇಂದಿಗೂ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಖುಶಿ ಅನುಭವಿಸುತ್ತಾರೆ.

ಸೂಕ್ಷ್ಮ ಕರ್ಮಠ ಸಂಪ್ರದಾಯಸ್ಥರ ದೃಷ್ಟಿಯಲ್ಲಿ ಇವರದು ಒಂದು ಬಗೆಯ ಅಂತರ್ಜಾತೀಯ ವಿವಾಹ. ಆದರೆ ಇಬ್ಬರದೂ ಮೇಲ್ವರ್ಗದಲ್ಲೇ ಗುರುತಿಸಲ್ಪಟ್ಟ ಜಾತಿಪಂಗಡ. ಗೌರೀಶರದು 'ಸಾರಸ್ವತ'ರು ಎಂಬ ಬ್ರಾಹ್ಮಣ ವರ್ಗಕ್ಕೆ ಸೇರಿದ ಒಂದು ಪಂಗಡ; ಶಾಂತಾರವರದು'ವಾಣಿ–ವೈಶ್ಯ'

ಎಂಬ ವರ್ಗಕ್ಕೆ ಸೇರಿದ ಜಾತಿ. ಈ ಇಬ್ಬರು ಹತ್ತು ವರ್ಷಗಳನ್ನು ದೀರ್ಘ ಕಾಲ ಪ್ರೇಮಿಗಳಾಗಿ (ವಿವಾಹ ಬಂಧನವಿಲ್ಲದೆ) ವರ್ತಿಸುತ್ತಿರುವುದು ಸಮಾಜ ದಲ್ಲಿ ಬಹಿರಂಗಗೊಂಡಿದ್ದ ಸಂಗತಿಯಾಗಿದ್ದರೂ ಅವರ ಕುರಿತು ಸುತ್ತಲಿನ ಜನರಿಂದ ನಿಂದನೆಯಾಗಲೀ, ಕಟುಕಿ ನುಡಿಯಾಗಲೀ, ಅಪಪ್ರಚಾರವಾಗಲೀ ಕೇಳಿಬರುತ್ತಿರಲಿಲ್ಲವೆಂಬುದು ಅಂದಿನ ಸಾಮಾಜಿಕರ ಮನೋಸ್ಥಿತಿಯ ನೆಲೆ ಯಲ್ಲಿ ಬಹು ಮಹತ್ವದ್ದೇ. 'ಗೌರೀಶ ಮಾಸ್ತರರ' ಕುರಿತು ಜನರಲ್ಲಿ ಒಡ ಮೂಡಿಕೊಂಡಿದ್ದ ಪ್ರೀತ್ಯಾದರ ಸದ್ಭಾವನೆಯ ಪ್ರತಿಕೃತಿಯಿದು. ಗೌರೀಶರ ವಿವಾಹವು ಅವರ ಮನೆಯಲ್ಲಿಯೇ ಅತ್ಯಂತ ಸರಳವಾಗಿ 'ರಿಜಿಸ್ಟರ್' ಪದ್ಧತಿ ಯಿಂದ ಜರುಗಲ್ಪಟ್ಟಿತ್ತು. ಸಂಪ್ರದಾಯಪ್ರಿಯರಾದ ಬಂಧು ಬಾಂಧವರಾರೂ ವಿವಾಹ ಸನ್ನಿವೇಶದಲ್ಲಿ ಪಾಲ್ಗೊಂಡಿರಲಿಲ್ಲ. 'ಸಾಕುತಾಯಿ ದೊಡ್ಡಮ್ಮನಿಗೆ ಸಂಪ್ರದಾಯ ವಿರುದ್ಧದ ಈ ಬಗೆಯ ವಿವಾಹ ಸಂಬಂಧ ಕ್ರಮಕ್ಕೆ ಸಮಾಧಾನ ವಿದ್ದಿಲ್ಲವಾದರೂ ಮಗ ಗೌರೀಶನ ಮೇಲಿನ ಅತೀವ ಮಮತೆಯಿಂದಾಗಿ ಪ್ರತಿರೋಧ ನುಡಿಯದೇ ಮೌನವಾಗಿ ಆಶೀರ್ವದಿಸಿದ್ದರು. ಇಬ್ಬರನ್ನೂ ಕಕ್ಕುಲತೆಯಿಂದಲೇ ಕಂಡರು' ಎಂಬಿತ್ಯಾದಿಯಾಗಿ ಶಾಂತಾರವರು ನೆನಪಿಸಿ ಕೊಡುತ್ತಾರೆ.

ಗೌರೀಶ ಕಾಯ್ಕಿಣಿಯವರ ಪತ್ನಿ ಶಾಂತಾ ಕೂಡಾ ಪ್ರತಿಭಾವಂತ ದಿಟ್ಟ ಧೀರ ಮಹಿಳೆ. ಪದವೀಧರೆಯೂ ಆಗಿರುವ ಆಕೆ ಕೆಲಕಾಲ ಶಿಕ್ಷಕಿ ಯಾಗಿಯೂ ದುಡಿದರು. ಗರ್ಆಳರಲ್ಲಿ ಪ್ರತಿಭಾನ್ವಿತ ಪುತ್ರ ಜಯಂತನಿಗೆ ಜನ್ಮವಿತ್ತ ನಂತರ ಜೀವನ ನಿರ್ವಹಣೆಯ ಅಗತ್ಯಕ್ಕೆಂದು ವೃತ್ತಿ ದುಡಿಮೆಯಲ್ಲಿ ತೊಡಗಿಕೊಳ್ಳುವುದಕ್ಕಿಂತಲೂ ಮಿಗಿಲಾಗಿ ಕರುಳಿನ ಕುಡಿ ಮಗುವಿನ ಲಾಲನೆ ಪಾಲನೆಯೇ ಮಹತ್ವದ್ದು ಎಂಬ ಪತಿಯ ಅಂಬೋಣವನ್ನನುಸರಿಸಿ ಶಿಕ್ಷಕ ವೃತ್ತಿಯನ್ನು ತೊರೆದರೂ ಬೌದ್ಧಿಕ ಸಹವಾಸದಿಂದ ದೂರಾಗಲಿಲ್ಲ. ಹಲವು ಬಗೆಯ ಬಿಡಿ ಬರಹಗಳ ಮೂಲಕ ಸಾರಸ್ವತದ ಸಹಚರ ಸಹಧರ್ಮಿಣಿಯಾಗಿ ಕಾಣಿಸಿಕೊಂಡರು. ಜೊತೆ ಜೊತೆಗೇ ವಿವಿಧ ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿ ಯಾಗಿ, ಕಾರ್ಯಕರ್ತೆಯಾಗಿ, ರಾಜಕೀಯ ಪಕ್ಷದಲ್ಲಿಯೂ ಒಡನಾಡಿಯಾಗಿ– ಪದಾಧಿಕಾರಿಯೂ ಆಗಿ ಹೀಗೆ ಸಾಮಾಜಿಕ, ರಾಜಕೀಯ ಸೇವೆಗಳಲ್ಲಿಯೂ ತಮ್ಮನ್ನು ಸಕ್ರಿಯಗೊಳಿಸಿಕೊಂಡರು.

ಈ ಪತಿ–ಪತ್ನಿಯರದು ಆದರ್ಶನೀಯ ಸಾಹಚರ್ಯ. ಪತಿಯ ಆಹಾರ ವಿಹಾರ, ಆರೋಗ್ಯದತ್ತವೂ, ಕಾಯಕ ಕರ್ಮಗಳಿಗೂ ಶಾಂತಾರವರದು ಅತೀವ ಮುತುವರ್ಜಿ. ಪತಿಯ ಬರವಣಿಗೆಯ ಕೈಂಕರ್ಯಕ್ಕೂ ಎಡರು ತೊಡರು ಅನಾನುಕೂಲವೊದಗದಂತೆ ಸದಾ ಎಚ್ಚರವಹಿಸಿ ನೆರಳಿನಂತೆ ಹಿಂಬಾಲಿಸಿ ಬಂದವರು. ಗೌರೀಶರ ಬೌದ್ಧಿಕ ಕ್ರಿಯೆಗೆ ನೆಮ್ಮದಿಯ ನೆರಳಿನ ಛತ್ರಿ ಹಿಡಿದವರು. ಪತಿ ಗೌರೀಶರು ಎಲ್ಲಿಗೇ ಹೊರಡಲಿ–ಸಭೆ, ಸಮಾರಂಭ, ಪ್ರಯಾಣ ಪ್ರವಾಸ ಯಾವುದಕ್ಕಿರಲಿ ಅಲ್ಲೆಲ್ಲಾ ಶಾಂತಾ ಕಾಯ್ಕಿಣಿ ಜೊತೆಗೂಡಿ ಇದ್ದೇ ಇರಬೇಕಾದ್ದು ಕಟ್ಟುನಿಟ್ಟಾಗಿ ಅನುಸರಿಸಿಕೊಂಡು ಬಂದಿರುವ ಪರಿಕ್ರಮ ಹೋದೆಡೆಯಲ್ಲಿ ತನ್ನ ಆರೋಗ್ಯದ ಬಗ್ಗೆ ಅಥವಾ ಆಹಾರ ವಿಶ್ರಾಂತಿಗಳಲ್ಲಿ ಅಲಕ್ಷಿಸಿ (ಅದು ಅವರ ಸಹಜ ಸ್ವಭಾವ) ಪತಿ ಅನಾನುಕೂಲವುಂಟುಮಾಡಿಕೊಂಡಾರೆಂಬ ಚಡಪಡಿಕೆಯಿಂದ ಪತ್ನಿ ಶಾಂತಾರವರು ಅಂಥ ಕಾಳಜಿ ವಹಿಸಲಿಕ್ಕಾಗೇ ಸದಾ ಬೆನ್ನಿಡಿದು ಹೋಗುತ್ತಿದ್ದರು. 'ಶಾಂತಾ' ನಿಜದರ್ಥದ ಸಹಧರ್ಮಿಣಿ ಸಹಚಾರಿಣಿ. ಈ ಕುರಿತು ಒಂದು ವಿನೋದದ ಪ್ರಸಂಗ ಜನಜನಿತ. ಅದೊಂದು ಸಮಾರಂಭ. ಗೌರೀಶ ಕಾಯ್ಕಿಣಿಯವರು ಪತ್ನಿಯೊಂದಿಗೆ ಅಲ್ಲಿ ತಲ್ಪಿದಾಗ ಸ್ವಾಗತಕಾರರು ಅಲ್ಲಿದ್ದ ಅನ್ಯಗಣ್ಯರೊಬ್ಬರಿಗೆ ಗೌರೀಶರನ್ನು ಪರಿಚಯಿಸುತ್ತಾ ಪಕ್ಕದಲ್ಲಿ ನಿಂತಿದ್ದ ಶಾಂತಾರವನ್ನೂ 'ಇವರು ಗೌರೀಶರ ಧರ್ಮಪತ್ನಿ ಶಾಂತಾ ಕಾಯ್ಕಿಣಿ' ಎಂದು ಪರಿಚಯಿಸಿದರಂತೆ.

ತಕ್ಷಣವೇ ಗೌರೀಶರು 'ಹೌದು. ನನಗೆ ಅಧರ್ಮಪತ್ನಿ ಬೇರೆ ಇಲ್ಲ. ಧರ್ಮಪತ್ನಿ ಅಧರ್ಮಪತ್ನಿ ಎಲ್ಲಾ ಇವಳೇ' ಎಂದುಬಿಟ್ಟಾಗ ಅಲ್ಲೆಲ್ಲಾ ನಗೆಗಡಲು. ಅವರ ದಾಂಪತ್ಯ ಜೀವನ ಸೊಗಸಿನ ಇಂಗಿತಾರ್ಥವೂ ಈ ಮಾತಿನಲ್ಲಿ ವೇದ್ಯ :

'ಶಾಂತಾ ಯಸ್ಯ ಚ ಪತ್ನೀ
ಗೌರೀ ರೂಪಾ ಪತಿವ್ರತಾ ಕಾರ್ಯಜ್ಞಾ
ದೃಶ್ಯಃ ಸ ತಯಾ ಸುಸುಖಿಃ
ಸರ್ವತ್ರಾನ್ಯೋನತಾ ಪ್ರದರ್ಶನ ಚತುರಾ

—ಎಂದು ವಿದ್ವಾಂಸ ದಿ|| ಬಿ. ಎಚ್. ಶ್ರೀಧರರು ಅಭಿಪ್ರಾಯಪಟ್ಟಿದ್ದು ಉಲ್ಲೇಖನೀಯ. ಗೌರೀಶರ ಮಾತಿನ ಶೈಲಿಯಲ್ಲಿ ಇಡಿಯಾಗಿ ಇಂಥ ನಿರರ್ಗಳ ವಿನೋದ ಸ್ವಾರಸ್ಯವು ತುಂಬಿಕೊಂಡಿರುವುದು ಅವರ ಸಹಜ ಪ್ರವೃತ್ತಿ.

ಈ ಪತಿ–ಪತ್ನಿಯರದು ಆದರ್ಶನೀಯ ಸಾಹಚರ್ಯ. ಪತಿಯ ಆಹಾರ ವಿಹಾರ, ಆರೋಗ್ಯದತ್ತವೂ, ಕಾಯಕ ಕರ್ಮಗಳಿಗೂ ಶಾಂತಾರವರದು ಅತೀವ ಮುತುವರ್ಜಿ. ಪತಿಯ ಬರವಣಿಗೆಯ ಕೈಂಕರ್ಯಕ್ಕೂ ಎಡರು ತೊಡರು ಅನಾನುಕೂಲವೊದಗದಂತೆ ಸದಾ ಎಚ್ಚರವಹಿಸಿ ನೆರಳಿನಂತೆ ಹಿಂಬಾಲಿಸಿ ಬಂದವರು. ಗೌರೀಶರ ಬೌದ್ಧಿಕ ಕ್ರಿಯೆಗೆ ನೆಮ್ಮದಿಯ ನೆರಳಿನ ಛತ್ರಿ ಹಿಡಿದವರು. ಪತಿ ಗೌರೀಶರು ಎಲ್ಲಿಗೇ ಹೊರಡಲಿ–ಸಭೆ, ಸಮಾರಂಭ, ಪ್ರಯಾಣ ಪ್ರವಾಸ ಯಾವುದಕ್ಕಿರಲಿ ಅಲ್ಲೆಲ್ಲಾ ಶಾಂತಾ ಕಾಯ್ಕಿಣಿ ಜೊತೆಗೂಡಿ ಇದ್ದೇ ಇರಬೇಕಾದ್ದು ಕಟ್ಟುನಿಟ್ಟಾಗಿ ಅನುಸರಿಸಿಕೊಂಡು ಬಂದಿರುವ ಪರಿಕ್ರಮ ಹೋದೆಡೆಯಲ್ಲಿ ತನ್ನ ಆರೋಗ್ಯದ ಬಗ್ಗೆ ಅಥವಾ ಆಹಾರ ವಿಶ್ರಾಂತಿಗಳಲ್ಲಿ ಅಲಕ್ಷಿಸಿ (ಅದು ಅವರ ಸಹಜ ಸ್ವಭಾವ) ಪತಿ ಅನಾನುಕೂಲ ವುಂಟುಮಾಡಿಕೊಂಡಾರೆಂಬ ಚಡಪಡಿಕೆಯಿಂದ ಪತ್ನಿ ಶಾಂತಾರವರು ಅಂಥ ಕಾಳಜಿ ವಹಿಸಲಿಕ್ಕಾಗೇ ಸದಾ ಬೆನ್ನಿಡಿದು ಹೋಗುತ್ತಿದ್ದರು. 'ಶಾಂತಾ' ನಿಜದರ್ಥದ ಸಹಧರ್ಮಿಣಿ ಸಹಚಾರಿಣಿ. ಈ ಕುರಿತು ಒಂದು ವಿನೋದದ ಪ್ರಸಂಗ ಜನಜನಿತ. ಅದೊಂದು ಸಮಾರಂಭ. ಗೌರೀಶ ಕಾಯ್ಕಿಣಿಯವರು ಪತ್ನಿಯೊಂದಿಗೆ ಅಲ್ಲಿ ತಲ್ಪಿದಾಗ ಸ್ವಾಗತಕಾರರು ಅಲ್ಲಿದ್ದ ಅನ್ಯಗಣ್ಯರೊಬ್ಬರಿಗೆ ಗೌರೀಶರನ್ನು ಪರಿಚಯಿಸುತ್ತಾ, ಪಕ್ಕದಲ್ಲಿ ನಿಂತಿದ್ದ ಶಾಂತಾರವನ್ನೂ 'ಇವರು ಗೌರೀಶರ ಧರ್ಮಪತ್ನಿ ಶಾಂತಾ ಕಾಯ್ಕಿಣಿ' ಎಂದು ಪರಿಚಯಿಸಿದರಂತೆ.

ತಕ್ಷಣವೇ ಗೌರೀಶರು 'ಹೌದು. ನನಗೆ ಅಧರ್ಮಪತ್ನಿ ಬೇರೆ ಇಲ್ಲ. ಧರ್ಮಪತ್ನಿ ಅಧರ್ಮಪತ್ನಿ ಎಲ್ಲಾ ಇವಳೇ' ಎಂದುಬಿಟ್ಟಾಗ ಅಲ್ಲೆಲ್ಲಾ ನಗೆಗಡಲು. ಅವರ ದಾಂಪತ್ಯ ಜೀವನ ಸೊಗಸಿನ ಇಂಗಿತಾರ್ಥವೂ ಈ ಮಾತಿನಲ್ಲಿ ವೇದ್ಯ :

'ಶಾಂತಾ ಯಸ್ಯ ಚ ಪತ್ನೀ
ಗೌರೀ ರೂಪಾ ಪತಿವ್ರತಾ ಕಾರ್ಯಜ್ಞಾ
ದೃಶ್ಯಃ ಸ ತಯಾ ಸುಸುಖಃ
ಸರ್ವತ್ರಾನ್ಯೋನತಾ ಪ್ರದರ್ಶನ ಚತುರಾ

—ಎಂದು ವಿದ್ವಾಂಸ ದಿ॥ ಬಿ. ಎಚ್. ಶ್ರೀಧರರು ಅಭಿಪ್ರಾಯಪಟ್ಟಿದ್ದು ಉಲ್ಲೇಖನೀಯ. ಗೌರೀಶರ ಮಾತಿನ ಶೈಲಿಯಲ್ಲಿ ಇಡಿಯಾಗಿ ಇಂಥ ನಿರರ್ಗಳ ವಿನೋದ ಸ್ವಾರಸ್ಯವು ತುಂಬಿಕೊಂಡಿರುವುದು ಅವರ ಸಹಜ ಪ್ರವೃತ್ತಿ.

"ಅನುಭವದ ಘಟ್ಟವೇರಿಳಿದ ಭಾವಸಂತುಷ್ಟಿ! ವಾಸ್ತವದ ಕ್ಲೇಶ ಶ್ಲೇಷೆಯಲದ್ದಿ ಸಂಪುಷ್ಟ" ಹೀಗೆಂದು ಕವಿ ಚೆನ್ನವೀರ ಕಣವಿಯವರು ನುಡಿದಂತೆ ಎಂಥ ನೋವನ್ನೂ ಮರೆಸಿಹಾಕುವಂತೆ ಲಹರಿಯನ್ನೆಬ್ಬಿಸುವ ಜೋಡುನುಡಿಯ ಪದ ಲಾಲಿತ್ಯ ಶ್ಲೇಷಾರ್ಥ (ಇಬ್ಬಾಯ ಖಡ್ಗವೂ ಒಮ್ಮೊಮ್ಮೆ) ತುಂಬಿಕೊಂಡು ಸೆಳೆದುಕೊಳ್ಳುವುದು ಗೌರೀಶ ಕಾಯ್ಕಿಣಿಯವರ ವ್ಯಕ್ತಿತ್ವದ ವಿಶೇಷವೂ ಹೌದು. ಸಹಜ ಪ್ರವೃತ್ತಿಯೂ ಹೌದು.

ಅವರ ಆದರ್ಶನೀಯ ಕೌಟುಂಬಿಕ ದಾಂಪತ್ಯ ಬದುಕನ್ನು ಕಂಡಾಗ ಅನನ್ಯಾಶ್ಚಿಂತಯಂತೋಮಾಂ। ಯೇಜನಾ ಪರ್ಯುಪಾಸತೇ । ತೇಷಾಂ ನಿತ್ಯಾಭಿ ಯುಕ್ತಾನಾಂ । ಯೋಗಕ್ಷೇಮ ವಹಾಮ್ಯಹಂ ॥ ಎಂಬ ಈ ಮಾತು (ಶ್ರೀಕೃಷ್ಣ ಹೇಳಿದ್ದೆಂದಾದರೂ) ಇಲ್ಲಿ ಅನ್ವಯಗೊಂಡಂತೆನಿಸುತ್ತದೆ. ಗೌರೀಶರು ಪತ್ನಿ ಶಾಂತಾಳನ್ನು ಅನನ್ಯತೆಯಿಂದ ಕಾಣುತ್ತಾರೆ. ಪತ್ನಿ ಶಾಂತಾ ಪತಿಯ ಯೋಗಕ್ಷೇಮವನ್ನು ನಿತ್ಯವೂ ಕಾಪಾಡುತ್ತಾರೆ. ಅದೇ ರೀತಿ ಪತಿ ಯದು ಪತ್ನಿಗೆ. ಅವರಲ್ಲಿ ಆ ಪರಸ್ಪರತೆ. ಪತಿ ಗೌರೀಶರಿಗೆ ಎಂಬತ್ತನಾಲ್ಕು ; ಪತ್ನಿಗೆ ಅರವತ್ತಾರು. ಈ ಇಳಿವಯದಲ್ಲಿಯೂ ನಿತ್ಯಗೊಂಡಿರುವ ಅದೇ ಪರಿಯಿ. ಇವರಿಗೆ ಅವಳು–ಅವಳಿಗೆ ಇವರು ಆಸರೆ.

ಸಾರ್ಥಕ ಪುತ್ರ

ಗೌರೀಶ ಕಾಯ್ಕಿಣಿ ದಂಪತಿಗೆ ಒಬ್ಬನೇ ಒಬ್ಬ ಪುತ್ರ. ಕುಲಕ್ಕೆ ರತ್ನ ಜಯಂತ ಕಾಯ್ಕಿಣಿ; ಜನಿಸಿದ್ದು ೧೯೫೫ರಲ್ಲಿ. ಜಯಂತನೂ ಜನ್ಮತಃ ಮಹಾ ಪ್ರತಿಭಾವಂತ. ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎಸ್‌ಸಿ. ಪದವಿ ಯನ್ನು ಪ್ರಥಮ ದರ್ಜೆಯ ಪ್ರಥಮ ಸ್ಥಾನದಲ್ಲಿ ಪಡೆದವ. ತಂದೆಯಂತೆಯೇ ಮಗನೂ ಕೂಡಾ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡವ. ಕಥೆ, ಕವನ, ನಾಟಕಗಳನ್ನು ರಚಿಸಿ ಈಗಾಗಲೇ ಸಾಹಿತ್ಯ ಕ್ಷೇತ್ರದಲ್ಲಿ ಪ್ರಶಸ್ತಿ ಪುರಸ್ಕಾರ ಗಳನ್ನೂ, ಗಣ್ಯತೆಯನ್ನೂ ಗಳಿಸಿಕೊಂಡಿದ್ದಾನೆ. ಜಯಂತರ ಪ್ರಥಮ ಕವನ ಸಂಕಲನ 'ರಂಗದಿಂದೊಂದಿಷ್ಟು ದೂರ'ಕ್ಕೆ ೧೯೭೪ರಲ್ಲಿ ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಕಥಾಸಂಕಲನ 'ತೆರೆದಷ್ಟೇ ಬಾಗಿಲು' ೧೯೮೨ರ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದರೆ, ಮೂರನೇ ಕವನ ಸಂಕಲನ

'ದಗಡು ಪರಬನ ಅಶ್ವಮೇಧ'ಕ್ಕೆ ೧೯೮೯ರಲ್ಲಿ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಜಯಂತರ ಪತ್ನಿ ಸ್ಮಿತಾಳೂ ಎಂ.ಎಸ್‌ಸಿ. ಪದವೀಧರಳೇ. ಈ ದಂಪತಿಗಳಿಗೂ ಒಂದು ಮಗು. ಅಜ್ಜನಿಗೊಬ್ಬ ಮುದ್ದು ಮೊಮ್ಮಗ. ದುರ್ದೈವವೆಂದರೆ ವೃದ್ಧಾಪ್ಯದ ಇಳಿಜಾರಿನಲ್ಲಿದ್ದ ಗೌರೀಶ ದಂಪತಿಗಳಿಗೆ ಮಗ ಸೊಸೆ ಮೊಮ್ಮಗ ಸನಿಹದಲ್ಲಿಲ್ಲ. ಈ ಪ್ರತಿಭಾವಂತ ಪದವೀಧರ ದಂಪತಿಗಳಿಗೆ ಕರ್ನಾಟಕ ಒಂದು ವೃತ್ತಿಯನ್ನೂ ನೀಡಲಿಲ್ಲ. ದೂರದ ಮುಂಬಯಿಯಲ್ಲಿ ಕಂಪನಿಯೊಂದರಲ್ಲಿ ದುಡಿಯುತ್ತಿದ್ದಾರೆ. ಆಗಾಗ ಬಂದು ತಂದೆ ತಾಯಿಯರ ಯೋಗಕ್ಷೇಮ ಗಮನಿಸಿ ಹೋಗುವುದಷ್ಟೇ ಸಾಧ್ಯ.

೬

ಬರಹ ವ್ಯಕ್ತಿತ್ವ

ಬದುಕು ಮತ್ತು ಬರಹಗಳಲ್ಲಿ ಬೃಹತ್ತಾಗಿ ಬೆಳೆದುಕೊಂಡು ನಿಂತಿರುವ ಡಾ॥ ಗೌರೀಶ ಕಾಯ್ಕಿಣಿಯವರ ಆ ವ್ಯಕ್ತಿತ್ವದ ಗಾತ್ರ–ಘನತೆಯನ್ನು ಪರಿಮಾಣಗೊಳಿಸುವುದು ಸುಲಭಸಾಧ್ಯ ಸಂಗತಿಯಲ್ಲ. ಅದು ಸಮುದ್ರದೊಳಗಿಳಿದು ಹುಡುಕಾಡಿದಂತೆ. ಅನೇಕ ವ್ಯಕ್ತಿಗಳು ತಾನು ಇದ್ದುದಕ್ಕಿಂತಲೂ ಅತಿಶಯಗೊಳಿಸಿಕೊಂಡು ಕಾಣಿಸಿಕೊಳ್ಳಲು ಯತ್ನಿಸುತ್ತಾರೆ ಆದರೆ ಗೌರೀಶ ಕಾಯ್ಕಿಣಿ ಕಾಣಿಸಿಕೊಳ್ಳುವುದಕ್ಕಿಂತಲೂ, ಕಾಣಲು ಸಾಧ್ಯವಾಗುವುದಕ್ಕಿಂತಲೂ ಅತಿಶಯವಾಗಿ ತಮ್ಮ ಒಳಗಡೆ ಮಹತಿಯನ್ನು ತುಂಬಿಕೊಂಡಿದ್ದಾರೆ ಎಂಬುದು ವಾಸ್ತವಾಂಶ. ಅದು ಬಳುವಳಿಯಲ್ಲ. ಸ್ವಯಂ ಉದ್ಭವ ಕ್ರಿಯೆ. ಅವರಲ್ಲಿ ತುಂಬಿರುವ ನವನವೋನ್ವೇಶ ಪ್ರತಿಭಾ ಸಂಪತ್ತು. ಭಗೀರಥ ಸಾಧನೆಯಿಂದ ಪ್ರವಹಿಸಿದ ಜ್ಞಾನಗಂಗೆ. "ಹತ್ತು ಕಡೆ ಕೈಚಾಚಿ, ಮರಳುದಂಡೆಯ ಬುರುಗು ತೊರೆದು, ತೆರೆಮರೆಗಿಳಿದು ಮುತ್ತು ಹವಳವ ಬಾಚಿ"–ಕವಿ ಕಣವಿ ಎಂದಂತೆ ತಮ್ಮದೇ ಸ್ವೋಪಜ್ಞತೆಯ ಶಕ್ತಿಯಿಂದ ಕನ್ನಡಕ್ಕೂ ಅದರಾಚೆಗೂ ಸುತ್ತಲಿನ ಪರಿಸರಕ್ಕೂ ಗೌರೀಶರು ನೀಡಿದ ಬಹುಮುಖ ಸಾರಸ್ವತ ಕೊಡುಗೆ ಅಪಾರ; ಅಪರಿಮಿತ. ಗೌರೀಶರ ವ್ಯಕಿತ್ವದ ಅಳತೆಗೆ–"ಎಲ್ಲಿದೆ ಎಲ್ಲೆ ಕಟ್ಟು?" ಅವರು ಬರೆದ ಕೃತಿಗಳನ್ನಷ್ಟೇ ಮಾನದಂಡವಾಗಿಟ್ಟುಕೊಂಡರೆ ಸಾಲದು. ಅವರಲ್ಲಿರುವ ಸಹಜ ಬುದ್ಧಿಮತ್ತೆ, ಅವರ ಅಲಲಿತವಾದ ಮನದಂಗಳ,

ಹಾಸ್ಯದ ಹೊನಲು‌ತೊರೆ, ಲೋಕಾನುಭವ ಕಣಜ ಹಾಗೂ ಅವರಲ್ಲಿರುವ ಪ್ರಾಸ ಪರಿಶಿಷ್ಟ ಗದ್ಯ, ಚೂಟಿ ಚಾಟಿಯ ವಾಕ್‌ಪ್ರತಿಭೆ ಈ ಎಲ್ಲವೂ ಅಲ್ಲಿ ಸಾಂಗತ್ಯಗೊಳ್ಳುತ್ತವೆ. "ಅವರಂಥ ಚಾಟೋಕ್ತಿ, ಪ್ರಾಸ, ಶ್ಲೇಷೆಯ ಸಾಮರ್ಥ್ಯವುಳ್ಳವರು ಕನ್ನಡದಲ್ಲಿ ಮತ್ತೊಬ್ಬರಿಲ್ಲ" ಎಂದಿರುವ ಅಭಿಪ್ರಾಯ ಅತಿಶಯೋಕ್ತಿಯಲ್ಲ. ಬರಹದಲ್ಲಿಯೂ, ಬದುಕಿನ ಒಡನಾಟದಲ್ಲಿಯೂ ವ್ಯಾಪಿಸಿಕೊಂಡಿರುವಂಥದು. ಸಂಭಾಷಣೆಯಲ್ಲಂತೂ ಅವರು ನಿಸ್ಸೀಮರು. ಗೌರೀಶರು ಮಾತಾಡಿದ್ದನ್ನು ಬರೆದಿಟ್ಟರೆ ಅದೊಂದು ಬೃಹತ್ ಗ್ರಂಥವೇ ಆದೀತು.

ಡಾ॥ ಗೌರೀಶರ ಬರಹದಲ್ಲಿಯ ಯಾವುದೋ ಒಂದು ವಾಕ್ಯವನ್ನೋ, ಪರಿಚ್ಛೇದವನ್ನೋ ಎತ್ತಿಕೊಂಡು ಅವರ ಬರಹದ ವ್ಯಕ್ತಿತ್ವವನ್ನು ಕಟ್ಟಿ ಕೊಡುವುದು ಸಮರ್ಪಕವಾಗುವುದಿಲ್ಲ. ಲೇಖನದಲ್ಲಿ ಎತ್ತಿಕೊಂಡಿರುವ ವಿಚಾರವನ್ನು ಹಲವು ಪರಿಕರಗಳೊಂದಿಗೆ ಸಮುಪಾಕಗೊಳಿಸಿ ಸಿದ್ಧಗೊಳಿಸಿ ಸಾಕಾರಗೊಳಿಸಿ ಮಂಡನೆ ಖಂಡನೆ ವಿಧಾನದಲ್ಲಿ ಸಾಗುವ ಅವರ ಬರಹವನ್ನು ಒಟ್ಟಾರೆ ಗ್ರಹಿಕೆಯಲ್ಲಿ ಒಳಪಡಿಸಿಕೊಂಡು ಪರಿಸಮಾಪ್ತಿಯಲ್ಲಿ ಪರಿಮಾರ್ಜನೆಯಲ್ಲಿ ಅದರ ಅರ್ಥದ ಬುತ್ತಿಯನ್ನು ಬಿಚ್ಚಿಕೊಂಡು ಜಗಿದಾಗ ಪೂರ್ಣ ರಸ ಸಾರ ಸಾರರಸ ಪಡೆಯುವುದು ಸೂಕ್ತವಾದೀತು.

ಗೌರೀಶರು ಏನನ್ನೇ ಬರೆಯುವುದಾಗಲೀ ಅಥವಾ ಯಾರದೇ ಗ್ರಂಥವನ್ನು ಓದುವುದಾಗಲೀ ಆ ಬಗ್ಗೆ ಮನಸ್ಸನ್ನು ಮುಕ್ತವಾಗಿರಿಸಿಕೊಂಡು ಅಲ್ಲಿ ಯಾವ ಪೂರ್ವ ಗ್ರಹಿಕೆಯ 'ಪೂರ್ವಾಗ್ರಹ'ವನ್ನಿರಿಸಿಕೊಳ್ಳದೇ ರಸಾಸ್ವಾದನೆಗೈದು ವಿಷಯ ಸಂಪನ್ನತೆಯೊಂದಿಗೆ ನಲಿದು ಈಚೆಗೆ ಬಂದು ಮಾತಾಡುತ್ತಾರೆ. ಈ ಕುರಿತು ಅವರದೇ ಒಂದು ವ್ಯಾಖ್ಯಾನ ಹೀಗಿದೆ: "ನಮ್ಮ ವಿಚಾರವನ್ನು ಮಲಿನಗೊಳಿಸುವ ಬಣ್ಣಗೆಡಿಸುವ ಎರಡನೆಯ ವಿಕಾರ 'ಪೂರ್ವ ಗ್ರಹಿಕೆ' ನವಗ್ರಹಗಳಿಗಿಂತಲೂ ಈ 'ಪೂರ್ವಗ್ರಹ' ನಮ್ಮ ಮುಕ್ಕಾಲು ಪಾಲು ಬಾಳನ್ನು ಬಾಧಿಸುವ 'ದಶಮಗ್ರಹ', ಪೂರ್ವಗ್ರಹಿಕೆಯು ಒಂದು ವಿಪರೀತ ಸಂಸ್ಕಾರ. ನಮಗೆ ಕೆಲವೊಂದು ವ್ಯಕ್ತಿಗಳ ಕುರಿತು, ಸಂಸ್ಥೆಗಳ ಕುರಿತು, ಪದ್ಧತಿಗಳ ಕುರಿತು, ವ್ಯವಹಾರಗಳ ಕುರಿತು ವಿನಾಕಾರಣ ಒಂದು ತಿರಸ್ಕಾರವೋ, ತಾತ್ಸಾರವೋ, ಅಸಹನೆಯೋ ಇರುವುದುಂಟು. ಎಷ್ಟೋ ಸಲ

ಇಪಕ್ಕೆ ವಿಪರೀತವಾಗಿ ಏನೂ ಇಲ್ಲದುದರ ಪ್ರಶಂಸೆಗಳೂ ಅನಿಸುವುದುಂಟು." (ವಿಚಾರವಾದ–೨) ಇದನ್ನೇ ಇನ್ನೊಂದೆಡೆ 'ಪ್ರಿಜ್ಯೂಡೀಸ್–Pre-Judice ಎಂದರೆ ಮೊದಲೇ ಜಡ್ಜ್‌ಮೆಂಟ್ ಬರೆದಿಟ್ಟು, ನಂತರ ವಿಚಾರಣೆ ನಡೆಸಿ ಅದನ್ನು ಓದಿ ಹೇಳುವಂತೆ. ಸಿದ್ಧ ಬದ್ಧ ಅಭಿಪ್ರಾಯದ ಅಪಾಯ ಇದರಲ್ಲಿದೆ– ಎಂದೂ ವಿವರಿಸುತ್ತಾರೆ.

"'ಪೂರ್ವಗ್ರಹಿಕೆ' ಅಭಿಪ್ರಾಯವು ಎಂದೂ ಸಮಂಜಸ ಇಲ್ಲವೇ ಸರಿ ತೂಕದ್ದು ಇರುವುದಿಲ್ಲ" ಎಂಬ ತಮ್ಮೀ ನಿಲುವು ಧೋರಣೆಯನ್ನು ಡಾ॥ ಗೌರೀಶರು ತಮ್ಮೆಲ್ಲಾ ಬರಹ ಕಾರ್ಯಗಳಲ್ಲಿಯೂ ಸ್ಪಷ್ಟವಾಗಿ ಅನುಸರಿಸಿದ್ದಾರೆ. ಹಾಗಾಗಿಯೇ ವಿಭಿನ್ನ ಕೋನಗಳಲ್ಲಿ ವಿಚಾರ ವಿಷಯ, ವಸ್ತುಗಳನ್ನು ಅಲ್ಲಲ್ಲಿಯೇ ನಿಂತು ಅಲ್ಲಿರುವ ಬಾಂಧುಗಡಿ, ಇತಿಮಿತಿ, ವಿಸ್ತಾರ, ಅಂಕುಡೊಂಕು, ಅಂದಚಂದ ಈ ಎಲ್ಲವನ್ನೂ ಇದ್ದದ್ದು ಇದ್ದಾಂಗೇ ಚಿತ್ತಾರಗೊಳಿಸಿ ವರ್ಣನಾತ್ಮಕಗೊಳಿಸಿ ವ್ಯಾಖ್ಯಾನಿಸಿ ಹೇಳಬಲ್ಲ ಸಮರ್ಥ ಸರ್ವಜ್ಞ ಸರ್ವೇಕ್ಷಣಾ ಕಾರ್ಯ ಅವರ ಬರೆಹದ ಜಾಯಮಾನ.

ಡಾ॥ ಗೌರೀಶ ಕಾಯ್ಕಿಣಿಯವರ ಬರೆಹದಲ್ಲಿಯ ಸತ್ವ ಮಹತ್ವ ಸತ್ಯಾನ್ವೇಷಣಾಕ್ರಿಯೆ, ವಿಷಯಗಳ ಮೇಲಿನ ಆಳಜ್ಞಾನ, ನಿರ್ಣಯಾತ್ಮಕ ಅಭಿವ್ಯಕ್ತಿಯ ಪ್ರಭುತ್ವ ಇತ್ಯಾದಿ ಬರಹ ವ್ಯಕ್ತಿತ್ವವನ್ನು ಈಗಾಗಲೇ ಅನೇಕ ಗಣ್ಯ ಬರೆಹಗಾರರು ಉಲ್ಲೇಖಿಸಿದ್ದಾರೆ; ಅಭಿಪ್ರಾಯ ದಾಖಲಿಸಿದ್ದಾರೆ :

"ಗೌರೀಶರಂಥ ಲೇಖಕರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಇನ್ನೊಬ್ಬರಿಲ್ಲ. ....ಗೌರೀಶರ ಸಾಹಿತ್ಯ ಸೃಷ್ಟಿಯ ವ್ಯಾಪ್ತಿ ಆಶ್ಚರ್ಯಕರವಾದದ್ದು. ಅವರ ವಿಶಿಷ್ಟ ಕಾಣಿಕೆ ವೈಚಾರಿಕ ಗ್ರಂಥಗಳ ರಚನೆ. ಮಾರ್ಕ್ಸವಾದ, ವಿಚಾರವಾದ ಲೈಂಗಿಕ ಸಂಬಂಧಗಳು, ನಾಸ್ತಿಕತೆ ಇಂಥ ಕ್ಲಿಷ್ಟ ವಿಷಯಗಳನ್ನು ಕುರಿತೂ ಗೌರೀಶರು ಬರೆದಿದ್ದಾರೆ. ಕನ್ನಡದಲ್ಲಿ ವೈಚಾರಿಕ–ಗ್ರಂಥವನ್ನು ಬರೆದವರೇ ಕಡಿಮೆ. ಶಂ. ಬಾ. ಜೋಶಿ, ಶ್ರೀರಂಗ, ಡಿ.ವಿ.ಜಿ. ಇಂಥ ಕೆಲ ಹೆಸರುಗಳು ಮಾತ್ರ ನಮಗೆ ಸಿಕ್ಕುತ್ತವೆ. ಆದರೆ ಇಂಥ ಸಾಹಿತ್ಯಕ್ಕೆ ಮಾತ್ರ ಗೌರೀಶರ ಸೃಷ್ಟಿ ಸೀಮಿತವಾಗಿಲ್ಲ. ಮರಾಠಿ, ಹಿಂದಿ, ಇಂಗ್ಲಿಷುಗಳಿಂದ ಅವರು ಮಾಡಿರುವ ಅನುವಾದಗಳು, ಗೀತರೂಪಕಗಳು, ವಿಮರ್ಶಾ ಗ್ರಂಥಗಳು ಹೀಗೆ ಹಲವಾರು ಕ್ಷೇತ್ರಗಳಲ್ಲಿ ಅವರು ಕೃಷಿಮಾಡಿದ್ದಾರೆ" (ಜಿ.ಎಸ್. ಆಮೂರ).

"ಗೌರೀಶರ ವಿಮರ್ಶೆಯಲ್ಲಿ ಕಂಡುಬರುವ ತನ್ಮಯತೆ ಉತ್ಸಾಹದಿಂದ ವಿಮರ್ಶೆಯ ಭಾಷೆಗೂ ಸೃಜನಶೀಲ ಸಾಹಿತ್ಯದ ಪರಿಮಾಣ ಬಂದಿದೆ ಎಂಬುದನ್ನು ಗಮನಿಸಿದಾಗ ಈ ಕ್ಷೇತ್ರದಲ್ಲಿಯ ಅವರ ಸಿದ್ಧಿಯು ಅರಿವಾಗುತ್ತದೆ.... ಗೌರೀಶರ ಗದ್ಯಕ್ಕೆ ಪದ್ಯದ ಔನ್ನತ್ಯ ಹಾಗೂ ಅನುರಣನ ಬರುವುದು ಪದಗಳನ್ನು ಪದಪುಂಜಗಳನ್ನು, ವಾಕ್ಯಾಂಶಗಳನ್ನು ಎಚ್ಚರಿಕೆಯಿಂದ ಜೋಡಿಸುವ ಕುಶಲ ಕರ್ಮದಿಂದ, ಸ್ವಭಾವೋಕ್ತಿ, ಚಾಟೂಕ್ತಿ, ವಕ್ರೋಕ್ತಿ, ವಿರೋಧಾಭಾಸ, ವ್ಯಾಜಸ್ತುತಿ ಮೊದಲಾದವುಗಳ ಉಚಿತ ಬಳಕೆಯಿಂದ...." (ಡಾ॥ ಜಿ. ಎಂ. ಹೆಗಡೆ).

"ಗೌರೀಶ ಕಾಯ್ಕಿಣಿಯವರ ಸಾಹಿತ್ಯದಲ್ಲಿ ಎಂಥ ವೈವಿಧ್ಯತೆ ಇದೆಯೋ ಅವರ ವಿದ್ವತ್ತಿನಲ್ಲಿಯೂ ಸಹ ಅಷ್ಟೇ ಆಳವಿದೆ. ಸಂಭಾಷಣೆಯಲ್ಲಿ ಚಾತುರ್ಯ ಇದೆ....ಕೇವಲ ಮಾಸ್ತರಾಗಿದ್ದವರು ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಕೆಲಸ ಮಾಡಿ ವಿಶಿಷ್ಟವಾದ ಯಶಸ್ಸನ್ನು ಪಡೆದವರಾದ ವ್ಯಕ್ತಿ. ಕರ್ನಾಟಕದ ಮಟ್ಟಿಗೆ ಗೌರೀಶರೊಬ್ಬರೇ....ಗೌರೀಶರು ಕನ್ನಡ ಗದ್ಯಕ್ಕೇ ಒಂದು ಶೈಲಿಯನ್ನು ಬೆಳವಣಿಗೆಯನ್ನೂ ಒದಗಿಸಿದ ಗಣ್ಯರಲ್ಲಿ ಒಬ್ಬರು. ಅವರ ಗದ್ಯಶೈಲಿ ವಾಸ್ತವಿಕ ಗುಣವುಳ್ಳದ್ದು. ಅಲ್ಲಲ್ಲಿ ಒಳಪ್ರಾಸ, ಪ್ರಾಸಕ್ಕೊಂದು ಹಾಸ್ಯ, ಶ್ಲೇಷೆಯನ್ನು ಒದಗಿಸುತ್ತ ತನ್ನ ಪ್ರಾಸ್ತಾವಿಕ ಗುಣದಿಂದ ಸೃಜನಾತ್ಮಕತೆಯನ್ನೇ ಪಡೆಯುತ್ತದೆ" (ಡಾ॥ ಆರ್. ವಿ. ಭಂಡಾರಿ).

"ಅವರ (ಗೌರೀಶರ) ವಿಚಾರ ಲಹರಿ ಏಕಮುಖಿಯಾದದ್ದಲ್ಲ. ಕೇವಲ ಕಲ್ಪನೆಯ ಬೆನ್ನುಹತ್ತಿದ್ದು ಅಲ್ಲ. ಕಡಲಿನ ಹಾಗೆ ಆಳವೂ ವಿಸ್ತಾರವೂ ಉಳ್ಳದ್ದು ಪ್ರಶ್ನೆಗೆ ಮರಿಪ್ರಶ್ನೆ ಪರಿಪ್ರಶ್ನೆಗಳನ್ನು ಮುಂದಿಟ್ಟುಕೊಂಡು ವಿಚಿಕಿತ್ಸಕ ನೋಟದಿಂದ ನಿರ್ವಹಿಸುತ್ತಾರೆ" (ಜಿ. ಎಸ್. ಅವಧಾನಿ).

ಇಷ್ಟು ಮಾತ್ರವಲ್ಲ—

"ಕನ್ನಡದ ವೈಚಾರಿಕತೆ ಬಗ್ಗೆ ಮಾತನಾಡುವಾಗಲೆಲ್ಲ ಗೌರೀಶರನ್ನು ಬಿಟ್ಟು ಯೋಚಿಸುವುದಕ್ಕೆ ಸಾಧ್ಯವಾಗದು....ಗೌರೀಶರು ಕನ್ನಡ ಗದ್ಯ ಬರವಣಿಗೆಯ ಕುತೂಹಲಗಳಲ್ಲಿ ಒಂದಾಗಿದ್ದಾರೆ" (ಟಿ. ಪಿ. ಅಶೋಕ).

—ಡಾ॥ ಗೌರೀಶ ಕಾಯ್ಕಿಣಿಯವರು ಬೆಳೆದು ಬಂದ ಬಗೆ, ಅವರ ಬಾಲ್ಯ, ಅಂದಿನ ಅವರ ಸುತ್ತುವರಿದುಕೊಂಡಿದ್ದ ಪರಿಸರ, ಸ್ವಂತ ಮನೆ

ಯಲ್ಲಿಯ ಆಗಿನ ವಾತಾವರಣ ಇವನ್ನೆಲ್ಲಾ ಗಮನಿಸಿದರೆ ಅವರು ಓರ್ವ ವಿಚಾರವಾದಿಗಳಾಗಿ ವಿಚಾರ ಸಾಹಿತ್ಯಕ್ಕೆ ಒಲಿದು ಆಕೃಷಿಗೈದಿರುವುದೂ ಕೂಡಾ ಒಂದು ಕುತೂಹಲವೇ !

* * *

ಡಾ॥ ಗೌರೀಶರ ಬರವಣಿಗೆಯು ರಾಶಿ ರಾಶಿಯಾಗಿವೆ. ಅವು ನಾಲ್ಕಂಕೆಯನ್ನು ಸಮೀಪಿಸುವಷ್ಟಾಗಿವೆ. ಅವುಗಳಲ್ಲಿ ಪ್ರಕಟಗೊಂಡ ಗ್ರಂಥಗಳು— ಕನ್ನಡ ೪೯, ಮರಾಠಿ ೨, ಇಂಗ್ಲಿಷ್ ೩, ಪ್ರಕಟಣೆಗೆ ಬಯಸಿರುವಂಥವು ನಾಟಕ ರೂಪಕ ೧೫, ಇನ್ನಿತರ ಗ್ರಂಥಗಳು ೫. (ಇವಲ್ಲದೇ ಗೌರೀಶರು ಬರೆದ ಪತ್ರಿಕಾ ಲೇಖನಗಳು ೫೦೦ರ ಅಂಕಿ ದಾಟಿವೆ. ಸ್ಮರಣ ಸಂಚಿಕೆ, ಅಭಿನಂದನಾ ಗ್ರಂಥಗಳಲ್ಲಿಯ ಮೌಲಿಕ ಲೇಖನ, ವ್ಯಕ್ತಿಚಿತ್ರಣಗಳು ೪೦ ರಷ್ಟು. ಇವಾವೂ ಸಂಕಲನ ರೂಪಕ್ಕಿಳಿಯಲಿಲ್ಲ.) ಗೌರೀಶರ ಸಮಗ್ರ ಸಾಹಿತ್ಯ' ಸಂಪುಟಗಳನ್ನಾಗಿ ಈ ಎಲ್ಲವನ್ನೂ ಕ್ರೋಢೀಕರಿಸಿ ಪ್ರಕಟಿಸುವ ಪ್ರಯತ್ನ, ಸಾಹಸ ಅಂಕೋಲಾದ ರಾಘವೇಂದ್ರ ಪ್ರಕಾಶನ ಕೈಗೆತ್ತಿಕೊಂಡು ಮುನ್ನಡೆದಿದೆ.

ಹೀಗೆ ಗೌರೀಶರ ಒಟ್ಟು ಬರಹಗಳನ್ನು ಗಮನಿಸಿದಾಗ ಅವುಗಳನ್ನು ಸ್ಥೂಲವಾಗಿ–೧) ವೈಚಾರಿಕ ಸಾಹಿತ್ಯ, ೨) ಸಾಹಿತ್ಯ ಸಮೀಕ್ಷೆ, ೩) ವ್ಯಕ್ತಿ ವಿಚಾರ, ೪) ಬಾನುಲಿ ರೂಪಕಗಳು, ೫) ಅನುವಾದ ಕಾರ್ಯ, ೬) ಪತ್ರಿಕಾ ಲೇಖನಗಳು ಎಂಬೀ ಬಗೆಯಲ್ಲಿ ವಿಂಗಡಿಸಿ ಗುರುತಿಸಿಕೊಳ್ಳಬಹುದಾಗಿದೆ.

* * *

೭

ವೈಚಾರಿಕ ಉತ್ತುಂಗ

ಗೌರೀಶ ಕಾಯ್ಕಿಣಿಯವರ 'ಬರಹ ವ್ಯಕ್ತಿತ್ವ'ವನ್ನು ಒಂದು ಗೆರೆ ಎಳೆದು ಹೀಗೆಂದು ಗುರುತಿಸುವುದು ಜಟಿಲವಾದುದು. ಅದು ಗಾಢವಾದುದು, ಸಂಕೀರ್ಣವಾದುದು. ಕುತೂಹಲ ಕೆರಳಿಸುವಂಥ ಹಲವಾರು ವೈಚಿತ್ರ್ಯಗಳನ್ನು ನಾವು ಅಲ್ಲಿ ಕಾಣುತ್ತೇವೆ.

ಮೊದಲು ಅವರು ಬರೆಯಲು ತೊಡಗಿಸಿಕೊಂಡಿದ್ದು ಪದ್ಯದಲ್ಲಾಗಿತ್ತು. ಅದೂ ಮರಾಠಿಯಲ್ಲಿ. ಭಕ್ತಿಗೀತ, ಲೌಕಿಕ ಗೀತಗಳಾಗಿದ್ದವು. ಮುಂದೆ ನಾಟಕ, ಗೀತರೂಪಕಗಳಲ್ಲೂ ಅವರ ಸೃಜನತೆ ದುಡಿಯತೊಡಗಿತು. ಶಿಕ್ಷಕ ವೃತ್ತಿಯಲ್ಲಿದ್ದುದರಿಂದ ಆ ವೃತ್ತಿಯ ಸಂದರ್ಭದ ಒತ್ತಾಯದಿಂದ ಇಂಥ ಸೃಷ್ಟಿಕ್ರಿಯೆಯಲ್ಲಿ ತೊಡಗಿಕೊಂಡರೆನ್ನುವುದಾದರೂ ಅವು ಮಹತ್ವದ ಬಾನುಲಿ ಶ್ರವ್ಯಕೃತಿಗಳೇ ಆದವು.

'ಕನ್ನಡ ಸಾಹಿತಿಗಳಲ್ಲಿ ಬಹುಮಂದಿ ಶಿಕ್ಷಕ ವೃತ್ತಿಯವರೇ (ಉಪಾಧ್ಯಾಯ, ಪ್ರಾಧ್ಯಾಪಕ ಇ) ಆದುದರಿಂದ ಸಾಹಿತ್ಯ ಸೃಷ್ಟಿಯಲ್ಲಿ ವೈವಿಧ್ಯವಿಲ್ಲವೇ ಅದೇ ತಾನ ಅದೇ ತಾಳ'–ಎಂದ ಮಾತು ನಿಜವಿದ್ದರೂ ಗೌರೀಶರು ಆ ಮಾತಿಗೆ ಹೊರತಾಗಿಯೇ ಬೆಳೆದರು. ಇನ್ನಿತರ ಬಹುಮುಖ ಬರಹಗಳೊಂದಿಗೇ ವಿಚಾರವಾದಿ, ವೈಚಾರಿಕ ಲೇಖಕರಾಗಿ 'ಗಣ್ಯ'ರ ಅಗ್ರಸಾಲಿನಲ್ಲಿ ಸೇರಿದರು. 'ಅವರ ವೈಚಾರಿಕ ಗ್ರಂಥಗಳು ಕನ್ನಡ ಸಾಹಿತ್ಯಕ್ಕೇ ವಿಶಿಷ್ಟ ಕಾಣಿಕೆ' ಎಂಬ ಮಾನ ಪಡೆಯಿತು.

ವೈಚಾರಿಕ ಸಾಹಿತ್ಯ ಸೃಷ್ಟಿಯಲ್ಲಿ "ಶಂಬಾ ಜೋಶಿ, ಶ್ರೀರಂಗ, ಡಿ. ವಿ. ಜಿ. ಇಂಥ ಕೆಲವೇ ಗಣ್ಯ ಹೆಸರುಗಳು ಮಹತ್ವದ್ದಾಗಿ ಸಿಕ್ಕುತ್ತಿದ್ದು ಗೌರೀಶರೂ ಸಾಹಿತ್ಯ ಚರಿತ್ರೆಯ ಅಂಥ ಶ್ರೇಷ್ಠರಲ್ಲಿ ಸೇರಿದ್ದಾರೆ."

—ಇದು ಗೌರೀಶರಿಗೆ ಹೇಗೆ ಸಾಧ್ಯವಾಯಿತು ?

—ಅನೇಕರಿಗೆ ಕಾಡುವ ಕುತೂಹಲದ ಪ್ರಶ್ನೆ.

ಗೋಕರ್ಣದಲ್ಲಿಯ ಆ 'ಭಟ್ಟ'ರು, ವೈದಿಕರು–ಆಸ್ತಿಕರುಗಳ ಮಧ್ಯೆ ಅವರ ನಿತ್ಯದ ಬದುಕು, ನಿಕಟ ಒಡನಾಟ. ಬಾಲ್ಯದಿಂದಲೂ ಅದೇ ಪರಿಸರ, ವಾತಾವರಣದ ಪ್ರಭಾವ. ಇವುಗಳ ಮಧ್ಯೆ ಸಾಹಿತ್ಯ ಸೃಜನತ್ವ ಪಡೆದ ಗೌರೀಶರಲ್ಲಿ ಸುತ್ತುವರಿದ ಸಾಂಪ್ರದಾಯಿಕ ಕೋನದ ಸಂಸ್ಕೃತಿ ಪರಂಪರೆ ನೆಲೆಯ ಸಾಹಿತ್ಯ ಸೃಷ್ಟಿಕ್ರಿಯೆ ಒಡಮೂಡುವುದರ ಬದಲು ಅದರಿಂದ ಭಿನ್ನವಾದ ದೃಷ್ಟಿಹೊಂದಿ ಶೋಧನಾತ್ಮಕ, ಅನ್ವೇಷಿಕ, ವಿಚಿಕಿತ್ಸಕ, ವಿಚಕ್ಷಣ, ವೈಚಾರಿಕತೆ ಬರಹದಲ್ಲಿ ಕ್ರಿಯೆಗೊಂಡುದು ಒಂದು ಸೂಕ್ಷ್ಮಗ್ರಹಿಕೆಯ ಸಂಗತಿ.

'ತೇರು' ಬರುತ್ತಿರುವಾಗ ದೂರದಲ್ಲಿ ನಿಂತು ನೋಡುವವ ಆ ತೇರು ಅಡ್ಡತಿಡ್ಡ ಮುಖಮಾಡುವುದನ್ನು ಕಂಡು ಅದು ತೇರಿನಲ್ಲಿ ಕುಳಿತ ದೇವರದ್ದೇ ಲೀಲೆ ಎಂದು ಭಾವಿಸಿ ಭಾವುಕಗೊಳ್ಳುತ್ತಾನೆ. ಆದರೆ ತೇರಿನ ಹಗ್ಗ ಹಿಡಿದು ಎಳೆಯುತ್ತಿರುವವರಿಗೆ ಗುಟ್ಟು ಗೊತ್ತಿರುತ್ತದೆ. ತಾವು ಎಳೆಯುತ್ತಿರುವುದೇ ಅಂಕುಡೊಂಕು ಎಂದು. ಹಾಗೆಯೇ ಗೌರೀಶರಿಗೆ ಅಲ್ಲಿ ಒದಗಿದ್ದ ನಿಕಟತನ ದಲ್ಲಿಯು ಅರಿವು. 'ಸಂಪ್ರದಾಯದ ಕಟ್ಟಿನಲ್ಲಿ ಒಗ್ಗರದಲ್ಲಿ ಸಿಲುಕಿ ಕರ್ಮಠ ರಂತೆ ಕಾಯಾವಾಚಾ ನಡೆದುಕೊಳ್ಳುತ್ತಿರುವವರೇ ಹೆಚ್ಚು. (ಮನಸಾ ಅಲ್ಲ.) ಆ ಅವರಲ್ಲಿ ಅಂಥ ಧಾರ್ಮಿಕ ಶ್ರದ್ಧೆಯ ಧಾವತಿ ಇಲ್ಲ. ಅದು ಧಾರ್ಮಿಕ ಪ್ರಜ್ಞಾವಂತಿಕೆಯ ನಡವಳಿಕೆ ಅಲ್ಲ. ಅವರ ನಡೆನುಡಿಗಳ ಮೂಢಶ್ರದ್ಧೆ ಗಳಿಂದ ಅವರ ಧಾರ್ಮಿಕತೆಯು ಜಡವಾಡಿಕೆ (Dead Habits) ಅಂತನಿಸಿ ತೀರ ಹತ್ತಿರದಲ್ಲಿದ್ದೂ ಗೌರೀಶರಿಗೆ ಅಸಹ್ಯವೇ ಹುಟ್ಟಿಕೊಂಡಿತ್ತಂತೆ. "ದೇವಸ್ಥಾನದ ಹತ್ತಿರವಿದ್ದವರಿಗೆ ದೇವರು ದೂರ ! (Near the temple farther from God) 'Too much is too bad....' ಬಹುಶಃ Too much ವೇದಾಂತ ಕೇಳಿ ಕೇಳಿ, ಅವರೆಲ್ಲರ ಸನಿಹ ಸಾನ್ನಿಧ್ಯದಲ್ಲಿ ಒಳಹೊರಣ –ಒಳ ಆವರಣ ದರ್ಶನವಾಗಿ ನನ್ನಲ್ಲಿ ವಿರುದ್ಧ ಸಂಸ್ಕಾರವೇ ಒಡಮೂಡಿ ನನ್ನ ಮನೋವೃತ್ತಿ ವೈಚಾರಿಕ ವಿಚಿಕಿತ್ಸೆ ಕಲಿಯಿತೇನೋ !" ಎನ್ನುತ್ತಾರೆ ಗೌರೀಶರು.

ಗೌರೀಶರ ಬರಹಗಳಲ್ಲಿ, ವಿಚಾರ ಪ್ರಣಾಲಿಕೆಯಲ್ಲಿ ಕಂಡುಬರುವ ಧಾರ್ಮಿಕ ದೃಷ್ಟಿ ಬೌದ್ಧಿಕತೆಯದು. ತಾತ್ವಿಕ ವೈಚಾರಿಕ ನೆಲೆಯದು. ಅವರು ಖಾಸಗಿ ಆಚರಣೆಯಲ್ಲಿ ಬಾಲ್ಯದಿಂದಲೂ ರೂಢಿಗತವಾಗಿ ಬಂದ ನಿತ್ಯದ ಪರಿಪಾಠದಂತೆ ದೇವರ ಪೂಜೆಯನ್ನೂ, ಹಬ್ಬಗಳನ್ನೂ ಆಚರಿಸು ತ್ತಾರೆ. ಇದು ಹಲವರಿಗೆ ಕುಚೋದ್ಯ, ಕುತ್ಸಿತ. ಆದರೆ ಗೌರೀಶರಲ್ಲಿರುವ ಭಾವುಕತೆ ಭಿನ್ನ.

"ನಾನು ಸ್ವತಃ ಪರಮನಾಸ್ತಿಕ. ಆದರೆ ಬಾಲ್ಯದಿಂದಲೂ ನೋಡಿದ, ಮಾಡಿಕೊಂಡು ಬಂದಂಥ ದೇವರ ಪೂಜೆಯಲ್ಲಿ ನನಗೊಂದು ಆನಂದ, ಅಂದ, ಅಲ್ಲೊಂದು ಸೊಗಸು ಕಾಣುತ್ತದೆ. ನಾನು ಮೂರ್ತಿಭಂಜಕನೇನಲ್ಲ. ನನಗೆ ಆ ದೇವರು–ನನ್ನ ತಾಯಿ, ದೊಡ್ಡ ತಾಯಿ. ಅದು ಅವರ ಆಜೀವ ಶ್ರದ್ಧೆಯ

ಪ್ರತೀಕ. ಅದು ತಪ್ಪಿದಾಗ ಏನೋ ಕಳೆದುಕೊಂಡಂತೆ ಅನಿಸುತ್ತದೆ. ದಿನಾಲು ಬೆಳಿಗ್ಗೆ ಚಹಾ ಸೇವಿಸುವವರಿಗೆ ಅದು ತಪ್ಪಿದಾಗ ಅನಿಸುವ ಕಸಿವಿಸಿ ! ಬಾಲ್ಯದಿಂದಲೂ ಕುಲಾಚಾರವಾಗಿ ಅಂಟಿಕೊಂಡು ಬಂದ ಒಂದು ವಾಡಿಕೆಯನ್ನು ಬಿಟ್ಟುಬಿಡಬೇಕಾಗಿ ಅನಿಸದಿರುವ 'ಭಾವ'. ಸಮಾಜದಲ್ಲಿ ರೂಢಿಗೊಂಡಿರುವ ಪೂಜೆ, ಮದುವೆ, ಮುಂಜಿ ಇತ್ಯಾದಿಗಳಿಗೆ ಒಂದು ಸಾಂಸ್ಕೃತಿಕ ಮೂಲಗಳಿರುತ್ತವೆ ಅವುಗಳಿಂದ, ನಮ್ಮ ಸ್ವಂತಿಕೆಯ ಸಂಸ್ಕಾರಗಳಿಂದ ನಮ್ಮ ಮಕ್ಕಳು ಬೆಳೆಯುವ ಆ ತಲೆಮಾರಿನ ಭಾವಕೋಶ ಸಂಪನ್ನ ಶ್ರೀಮಂತವಾಗಿರುತ್ತದೆ. ಮುಂದೆ ಪ್ರಾಯಬದ್ಧರಾದಮೇಲೆ ತಮಗೆ ಉಚಿತವನ್ನು ಅವರು ನಿರ್ಧರಿಸಿಕೊಳ್ಳಲಿ. ನಮ್ಮ ವಿಚಾರಗಳನ್ನು ಅವರ ಮೇಲೆ ಬಲಾತ್ಕಾರದ ಹೇರಿಕೆ ಸರಿಯಲ್ಲ. ಅಂಥ ವೈರ ಜಗಳವೇಕೆ ? ಭಿನ್ನತೆ–ವಿಭಿನ್ನತೆ ಅವರವರ ಪಾಡಿಗೆ ಬಿಟ್ಟುಕೊಡುವುದೇ ಸೂಕ್ತ"—ಅಂತನ್ನುವುದು ಗೌರೀಶರ ದ್ವಂದ್ವರಹಿತ ನಿಲುವು ವೈಚಾರಿಕತೆಯೊಳಗಣ ಸಭ್ಯತೆ.

ಆತನಕದ ಬರಹ ಕ್ರಿಯೆಯ ಜಾಡಿನ ಮಧ್ಯೆ ಗೌರೀಶರು ವೈಚಾರಿಕ ದಾರಿ ತುಳಿಯಲು ವಿಶೇಷ ಪ್ರೇರಣೆ ಒದಗಿಸಿದ ಸಂದರ್ಭ–೪೦ರ ದಶಕದಲ್ಲಿ ಜರುಗಿದ್ದ ಬಹಾಯಿ ಸಂಘದ ಒಂದು ಅಂತಾರಾಷ್ಟ್ರೀಯ ಪ್ರಬಂಧ ಸ್ಪರ್ಧೆ. ಅದು ಅಮೆರಿಕದಿಂದ. ಅದಕ್ಕೊಂದು 'ಜಾಗತಿಕ ಯುದ್ಧಗಳು ಏಕೆ ಜರುಗಬೇಕು ?' ಎಂಬ ದೀರ್ಘಪ್ರಬಂಧವನ್ನು ಇಂಗ್ಲೀಷಿನಲ್ಲಿ ಬರೆದರು. ಆ ಕುರಿತು ಹಟದಿಂದ ರಾಜಕೀಯ, ವೈಚಾರಿಕ, ನೈತಿಕವಿಷಯದ ಹಲವು ಗ್ರಂಥಗಳನ್ನು ಓದಿದರು. ಜಾಗತಿಕ ಯುದ್ಧಘಟಿಸುವುದಕ್ಕೆ ಕಾರಣವಾಗುವಂಥ ರಾಜಕೀಯ, ಮಾನಸಿಕ, ಬೌದ್ಧಿಕಗಳ ಮೂಲಭೂತ ತಾತ್ವಿಕ ಭೂಮಿಕೆ ಏನು ? ಕಾರಣ ಪ್ರೇರಣೆಗಳು ಉಂಟಾಗುವುದು ಹೇಗೆ, ಯಾಕೆ ? ಎಂಬಿತ್ಯಾದಿ ವಿಮರ್ಶಕ ದೃಷ್ಟಿಯಿಂದ ವಿಶ್ಲೇಷಿಸಿದ ಪ್ರಬಂಧವಾಗಿತ್ತು. (ಮುಂದೆ ಅದನ್ನು ಕನ್ನಡಕ್ಕಿಳಿಸಿ, ಶಿರಸಿಯ ನಂದಿನಿ ಎಂಬ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿತು.) ಇದು ಅವರ ಪ್ರಕಟಿತ ಪ್ರಥಮ ವೈಚಾರಿಕ ಲೇಖನ ಎಂಬ ಮಹತ್ವದ ದಾಖಲೆಯಾಗಿದೆ.

ಈ ಕಾರಣಕ್ಕೆ ತೆರೆದುಕೊಂಡ ವೈಚಾರಿಕ ಗ್ರಂಥಗಳ ಓದಿನ ಚಟ ಗಂಭೀರವಾಗಿ ಅಂಟಿಕೊಂಡಿತು.

ತಮ್ಮ 'ವಿಚಾರವಾದಿ' ಆಳವಾದ ಸಂಸ್ಕಾರಕ್ಕೆ ಬರ್ಟೆಂಡ್ ರಸೆಲ್, ವಿಲ್‌ಡ್ಯೂರಾಂ, ರೂಸೋ ಮುಂತಾದವರ ಸಾಹಿತ್ಯದ ಪ್ರಭಾವ ಮೂಲದ ಕಾರಣ ಹಾಗೆಯೇ ಮಾನ್ಯ ಡಾ|| ಶಿವರಾಮ ಕಾರಂತ, ದ. ರಾ. ಬೇಂದ್ರೆ, ಶಂ. ಬಾ ಜೋಶಿ, ಶ್ರೀರಂಗ, ಮಾಸ್ತಿ ಇವರುಗಳು ಆ ಸತ್ವವನ್ನೂ, ಶೈಲಿಯನ್ನೂ, ದೃಷ್ಟಿಯನ್ನೂ ರೂಪಿಸಿದ ತನ್ನ ಪಂಚ ದೈವತಗಳು ಮತ್ತು ಶೈಲಿಯಲ್ಲಿ ಸೇರಿಕೊಂಡ ಚತುರೋಕ್ತಿಗೆ ಸಂಸ್ಕಾರವು ಮರಾಠಿಯ ವಿ. ಸ. ಖಾಂಡೇಕರ, ಕವಿ ಗೋವಿಂದನ್ನಜ ಗಡಕರಿ, ನಾ. ಸ. ಫಡಕೆ ಇವರುಗಳಿಂದಾಗಿದ್ದಲ್ಲದೇ ಕನ್ನಡದಲ್ಲಿಯ ಆರ್. ವಿ. ಜಹಗೀರದಾರ(ಶ್ರೀರಂಗ)ರಿಂದ ಎಂದು ಗೌರೀಶರು ಉಲ್ಲೇಖಿಸುತ್ತಾರೆ.

ಗೌರೀಶರಲ್ಲಿಯ ಅಧ್ಯಯನ ಕ್ರಿಯೆ ಆಳಕ್ಕಿಳಿಯತೊಡಗಿದಂತೆ ಬರವಣಿಗೆಯ ವಸ್ತು, ಚಿಂತನಾಕ್ರಮ ವಿಸ್ತೃತಗೊಳ್ಳತೊಡಗಿತು. ಮಗ್ಗಲು ಹೊರಳಿತು. ನೋಟದ ವಿವಿಧ ಸಾಧ್ಯತೆಯತ್ತ ಮುಖಮಾಡಿ ಅವುಗಳಲ್ಲಿಯ ಪರಿಶ್ರಮ, ಪರಿಕ್ರಮಣ ನಿರ್ಭಯವಾಗಿ ಅನಿರ್ಬಂಧವಾಗಿ ತೊಡಗಿಕೊಂಡಿತು.

ಪಾಶ್ಚಾತ್ಯ ಸಾಹಿತ್ಯದ ಓದು ಹೊಸ ಜ್ಞಾನ ಪರಂಪರೆಯ ಬಾಗಿಲನ್ನು ತೆರೆದಿದ್ದರೂ ಅಲ್ಲಿ ತಮ್ಮನ್ನು ಕಟ್ಟಿರಿಸಿಕೊಳ್ಳದೇ ಆ ಪಾಂಡಿತ್ಯದ ಆಧುನಿಕ ಬೌದ್ಧಿಕತೆಯೊಂದಿಗೆ ಜೀವನ ಸಂಸ್ಕೃತಿಗಳನ್ನು ತಮ್ಮೊಳಗಿನ ಸಂಸ್ಕೃತ ವಾಙ್ಮಯ, ಪೌರಾತ್ಯ, ಚಿಂತನೆಯೊಂದಿಗೆ ವೈಜ್ಞಾನಿಕ ಆಕರದಲ್ಲಿ ಬೆಸೆದು ಮುಕ್ತಚಿಂತನೆಯ ಕುಲುಮೆಯಲ್ಲಿಟ್ಟು ಅದಕ್ಕೆ ದೇಶೀಯ ಒಪ್ಪವನ್ನು ಸೊಗಡನ್ನು ತುಂಬಿಕೊಡುವ ಹಾಗೂ ಜೊತೆಗೇ ಪಾಶ್ಚಾತ್ಯ ಜ್ಞಾನವನ್ನು ಪ್ರಶ್ನಿಸುವ, ಉತ್ತರ ಹುಡುಕುವ ಗುಣವನ್ನು ಗೌರೀಶರು ತಮ್ಮ ಬರಹ ಕ್ರಿಯೆಗೆ ಧಾರಣ ಮಾಡಿಕೊಂಡಿದ್ದಾರೆ.

"ಗೌರೀಶರು ಹಳೆಯದೆಲ್ಲವನ್ನೂ ತಿರಸ್ಕರಿಸಲಿಲ್ಲ ಅವುಗಳನ್ನು ಹೊಸ ಬೆಳಕಿನಲ್ಲಿ ನೋಡುವ ಪ್ರಯತ್ನ ಮಾಡಿದರು ಹೊಸ ಅನುಭವಗಳ ಸಂದರ್ಭದಲ್ಲಿ ಹಳೆಯದರ ಪ್ರಸ್ತುತತೆ, ಔಚಿತ್ಯವನ್ನು ವಿಚಾರಿಸಿದರು." (ಟಿ ಪಿ. ಅಶೋಕ) ಈ ಅಭಿಪ್ರಾಯವು ಸಾದ್ಯಂತವಾದುದು ಅದು ಓರ್ವ ವಿಚಾರವಾದಿಯಾಗಿ ನಿರ್ವಹಿಸಿದ ನಿರೀಕ್ಷಕನ ಪಾತ್ರ. ಆದರೆ ಹೀಗೆ ವೀಕ್ಷಿಸುವಾಗ ಬೌದ್ಧಿಕ ಪ್ರಜ್ಞೆಯನ್ನು ಹೊಸತನಕ್ಕೆ ಹೊಸ ಸನ್ನಿವೇಶಕ್ಕೆ ಪ್ರಕ್ರಿಯಿಸುವ

ಪ್ರತಿಕ್ರಿಯಿಸುವ ಮಹತ್ವದ ಕೆಲಸವನ್ನೂ ಮಾಡಿದ್ದಾರೆ. ಕನ್ನಡಕ್ಕೇ ಪ್ರಪ್ರಥಮ ಹಾಗೂ ಪ್ರಮುಖವೆನ್ನುವ ಕೆಲವು ವಿಚಾರ ಸಾಹಿತ್ಯ ಗ್ರಂಥಗಳನ್ನೇ ನೀಡಿದ್ದಾರೆ. ಅಂಥವುಗಳಲ್ಲಿ ಮಾರ್ಕ್ಸವಾದ, ಮನೋವಿಜ್ಞಾನದ ನೆಲೆಯಲ್ಲಿಯ ಗಂಡು ಹೆಣ್ಣು ಪ್ರೀತಿ, ಬಾಳಿನ ಗುಟ್ಟು, ರೂಪರೇಷೆಗಳು ಇತ್ಯಾದಿ. ಮತ್ತು ಪಾಶ್ಚಾತ್ಯ ಪ್ರತಿಭೆಗಳು ಬರಹಕ್ಕೆ ಐತಿಹಾಸಿಕ ಮತ್ತು ಪ್ರಾತಿನಿಧಿಕ ಮಹತ್ವ ಲಭಿಸಿದೆ.

ಇವಲ್ಲದೇ ವೈಚಾರಿಕ ಸಾಹಿತ್ಯಕ್ಕೆ ವಿಚಾರವಾದ ೧–೨; ಪ್ರಜ್ಞಾವಾದ ನವಮಾನವತಾವಾದ, ನಾಸ್ತಿಕರು ಮತ್ತು ದೇವರು, ಲೋಕಾಯತ ಇತ್ಯಾದಿ ಮೌಲಿಕ ಕೃತಿಗಳನ್ನೂ ಕೊಡುಗೆ ಇತ್ತಿದ್ದಾರೆ.

೬

ವೈಚಾರಿಕ ಸಾಹಿತ್ಯಕ್ಕೆ ಗೌರೀಶರು ನೀಡಿದ 'ವಿಚಾರವಾದ' ಎಂಬ ಹೆಸರಿನ ಕೃತಿ ವಿವಿಧ ಅಧ್ಯಾಯಗಳಲ್ಲಿ ವಿಸ್ತೃತವಾದ ವಿಶ್ಲೇಷಣೆ ಪ್ರತಿಪಾದನೆಯೊಂದಿಗೆ ಆಕರಗಳನ್ನೊಳಗೊಂಡು ತಿಳಿಯಾದ, ಮನೋಜ್ಞವಾದ ಭಾಷೆಯಲ್ಲಿ ಕನ್ನಡಕ್ಕೆ ಲಭ್ಯವಾದ ಒಂದು ಅಪೂರ್ವ ಅನನ್ಯ ಕೊಡುಗೆ.

ಮನೋವಿಜ್ಞಾನ, ಪ್ರಾಣಿವಿಜ್ಞಾನ, ಇತಿಹಾಸ, ಸಂಸ್ಕೃತಿ ಸಮಾಜ ಜ್ಞಾನಗಳ ಎರಕದಲ್ಲಿ ಶಾಸ್ತ್ರೀಯವಾಗಿಯೂ ಚರ್ಚಿಸಿ ಒಪ್ಪಿಸುವ ಇಲ್ಲಿಯ ಪ್ರಯತ್ನ ಬೌದ್ಧಿಕ ಕ್ಷೇತ್ರಕ್ಕೊಂದು ಪುಷ್ಟಿ–ತುಷ್ಟಿ.

'ಮನುಷ್ಯನೂ ಪ್ರಾಣಿಯೇ. ಆದರೆ ಉಳಿದೆಲ್ಲಾ ಪ್ರಾಣಿ ಸೃಷ್ಟಿಯನ್ನು ಮಣಿಸಬಲ್ಲ. ಅದು ಕೇವಲ ಅವನ ಬುದ್ಧಿಯಿಂದ, ವಿಚಾರಶಕ್ತಿಯಿಂದ. ಅಂದರೆ ಬುದ್ಧಿಶಕ್ತಿಯ ಜ್ಞೋಪಾಸನೆ, ಬೌದ್ಧಿಕತೆಯ ಉಪಾಸನೆ ಇದೊಂದೇ ಆ ಮನುಷ್ಯತ್ವದ ದ್ಯೋತಕ ಮತ್ತು ಪೋಷಕ. ಆದ್ದರಿಂದಲೇ ಬುದ್ಧಿಯ ತೀಕ್ಷ್ಣತೆಯನ್ನೂ ಸೂಕ್ಷ್ಮತ್ವವನ್ನೂ ಅರಿತುಕೊಂಡು ವಿಚಾರ ತಂತ್ರ ಶುದ್ಧಿಯನ್ನೂ, ಸಿದ್ಧಿಯನ್ನೂ ಸಾಧಿಸುವ ಧ್ಯಾನವೂ, ಅಭ್ಯಾಸವೂ ನಾವು ಮಾಡಿದಷ್ಟು ಕಡಿಮೆ.'

'ಆದರೆ ಆ ನಿಟ್ಟಿನಲ್ಲಿ ನಮ್ಮ ವಿಶೇಷತಃ ಕನ್ನಡಿಗರ ಪ್ರಯತ್ನ ಸಾಕಷ್ಟು ಆಗಿಲ್ಲ. ಮುಖ್ಯ ಮಾತೆಂದರೆ ಕನ್ನಡನಾಡು ಬುದ್ಧಿವಾದಿಯಾಗಿಲ್ಲ. ಕನ್ನಡಿಗರು

ಭಾವಜೀವಿಗಳು. ವಿಚಾರದ ಲಂಗರು ಭದ್ರವಾಗಿರದಿದ್ದರೆ ತರ್ಕಶುದ್ಧ ಬುದ್ಧಿಯ ಚುಕ್ಕಾಣಿ ಸರಿಯಾಗಿ ಕೆಲಸ ಮಾಡದಿದ್ದರೆ ನಮ್ಮ ನಾಡ ಬಾಳಿನ ಹೊಸ ಹಡಗು ವಿಕಾರ ವಿಕ್ಷೋಭದ ಸುಳಿಯಲ್ಲಿ ಪಕ್ಷೋಪಪಕ್ಷಗಳ ಸುಂಟರಗಾಳಿಯಲ್ಲಿ ಸಿಲುಕಿ ಪ್ರಮಾದಗಳ ಬಂಡೆಗಳಿಗೆ ಅಪ್ಪಳಿಸಿ ಮುಳುಗಲು ಎಷ್ಟು ಕಾಲ ಬೇಕು ?'' ಹೀಗೆಂದು ಪ್ರಾರಂಭಿಸುವ ಗೌರೀಶರು ವಿಚಾರ ಶಕ್ತಿಯ ವಿಚಾರ ವಾದದ ಹಂತ ಹಂತವನ್ನು ಪದರು ಪದರುಗಳನ್ನು ಬಿಚ್ಚಿಡುತ್ತ ಅದರ ಮಹತ್ವವನ್ನು ಸಾಧಿಸುತ್ತ ಹೋಗುತ್ತಾರೆ.

"ಮಾನವನ ಪಶುತ್ವ ಮೂಲಪ್ರಕೃತಿ. ಇತಿಹಾಸದ ಉತ್ಕ್ರಾಂತಿ ವಿಕಾಸ ಮಾರ್ಗದಲ್ಲಿ ಬುದ್ಧಿಯ ಉದಯ. ಅದರ ಪ್ರಾಧಾನ್ಯವುಂಟಾಗಿರುವುದು ಸಂಸ್ಕೃತಿಯಾಯಿತು. ಆದರೆ ಇದಕ್ಕೆ ಸಂಸ್ಕಾರ ಅಗತ್ಯ. ಅದು, ಬುದ್ಧಿವಾದದ ಪ್ರತಿಪಾದನೆಯ ಒಂದು ಅಗತ್ಯ. ಸೃಷ್ಟಿಯಲ್ಲಿ ಶಕ್ತಿ ಮತ್ತು ಕ್ರಿಯೆ ಇವೆರಡೂ ಅವಿಭಾಜ್ಯ ಅನ್ಯೋನ್ಯ. ಬುದ್ಧಿಯ ಬಗೆಯೂ ಅದೇ. ಬುದ್ಧಿಯ ಕಾರ್ಯದಲ್ಲಿಯೇ ಅದರ ಸ್ವರೂಪ ; ಸ್ವರೂಪದಲ್ಲಿಯೇ ಅದರ ಕಾರ್ಯ."

"ಇವರ ಪ್ರಾಥಮಿಕ ಹಂತದಲ್ಲಿ ಮನಃಸ್ವಾಸ್ಥ್ಯಕ್ಕಾಗಿಯೇ ಮನಷ್ಯ ನಿಸರ್ಗದ ಗೂಢಗಳನ್ನೆಲ್ಲಾ ತನ್ನಂತೆಯೇ ಕಲ್ಪಿಸಿ, ಅನೇಕ ದೇವತೆಗಳನ್ನೂ, ಅದನ್ನೂ ಮೀರಿದ ದೈವವನ್ನೂ ದೇವರನ್ನೂ, ಪರಲೋಕವನ್ನೂ ಪುನರ್ಜನ್ಮವನ್ನೂ, ಪರಕಾಯ ಪ್ರವೇಶವನ್ನೂ, ಅವತಾರವನ್ನೂ, ಉದ್ಧಾರವನ್ನೂ, ಶಾಪ-ಉಶ್ಶಾಪವನ್ನೂ, ಸ್ವಪ್ನದೃಷ್ಟಾಂತಗಳನ್ನೂ, ಪುರಾಣ ಪುರುಷರ ಪವಾಡಗಳನ್ನೂ ಏನೆಲ್ಲಾ ಎಷ್ಟೆಲ್ಲಾ ಕಟ್ಟಿಕೊಂಡು ನಂಬಿ ಬಂದದ್ದು, ಆ ಭ್ರಮ ವಿಭ್ರಮವೇ ಬೌದ್ಧಿಕ ವಿಚಾರ ಸರಣಿಗೆ ದಾರಿಮಾಡಿಕೊಟ್ಟವು."

"ಬುದ್ಧಿಪೂರ್ವಕವಾದ ಬಾಳಿನ ಬಗೆಯೇನು ? ಅದಕ್ಕಾಗಿ ಏನು ಮಾಡಬೇಕು ? ಇವೆಲ್ಲವುಗಳ ಅನಿಸಿಕೆಗಳನ್ನೆಲ್ಲ ತಿಳಿಯಾಗಿ ಅರಿತುಕೊಳ್ಳುವ ಆಕಲನವ್ಯಾಪಾರವೇ ತತ್ವಬೋಧ, ಸತ್ಯಶೋಧಗಳ ಮೊದಲಿನ ಹೆಜ್ಜೆ. ನಿಜವಾದ ಯಥಾರ್ಥವಾದ ಸಂಬಂಧ ಸನ್ನಿವೇಶ ತಿಳಿಯುವ ತನಕ ಆತ ಕೆಲವೊಂದು ಕಾಲ್ಪನಿಕ ಸಂಬಂಧಗಳನ್ನು ಭಾವಿಸಿಕೊಂಡು (ಮೇಲೆ ಹೇಳಿದಂತೆ) ನಡೆದನು. ಇಂಥ ತಪ್ಪು ಕಲ್ಪನೆಯ ತಳದ ಸತ್ಯದೃಷ್ಟಿಯ ತಥ್ಯದ ಹುಡುಕಾಟವೇ ಮಾನವ ಮನಸ್ಸಿನ ಬುದ್ಧಿ ಧರ್ಮದ ನಿಯತಕರ್ಮ."

—ಆದರೆ ಕೇವಲ ಬೌದ್ಧಿಕತೆ ಆತ್ಮಸಮರ್ಥನೆ. ವಿಚಾರವಾದವಲ್ಲ.

—'ಈ ಬೌದ್ಧಿಕ ಆತ್ಮಸಮರ್ಥನೆ'ಯನ್ನೇ ಶ್ರೀಕೃಷ್ಣನು 'ಪ್ರಜ್ಞಾವಾದ'ವೆಂದುದು.

"ತನ್ನ ಅನಿಸಿಕೆ, ನೆನಸಿಕೆಗಳಿಗೆ ಧಾರಣೆ ಧೋರಣೆಗಳಿಗೆ ಹೇಗಾದರೂ ಬುದ್ಧಿಯ ಮೆರಗನ್ನು ವಿಚಾರವಂತಿಕೆಯ ಒಪ್ಪವನ್ನು ಕೊಡುವುದು, ತಾನು ಬುದ್ಧಿವಂತ. ತನ್ನ ನಡತೆಯು ಬುದ್ಧಿವಂತಿಕೆಯದಾಗಿರಬೇಕು. ಇಲ್ಲವೇ ಹಾಗೆ ತೋರಿಸಿಕೊಳ್ಳಬೇಕು ಎಂಬ ಹಂಬಲವು ಬೌದ್ಧಿಕ ಆತ್ಮಸಮರ್ಥನೆ ಅಥವಾ ಪ್ರಜ್ಞಾವಾದ. ಇದು 'ಕಲಿಸದೇ ಬರ್ಪ ಕೌಶಲ'. ಪ್ರಾಜ್ಞತೆಯ ಹೊರ ಲೇಪದ ಖೊಟ್ಟಿನಾಣ್ಯ. ಈ ಬೌದ್ಧಿಕ ಆತ್ಮಸಮರ್ಥನೆ ಪ್ರಜ್ಞಾವಾದದಿಂದ ನಾವು ತಪ್ಪಿಸಿಕೊಳ್ಳಬೇಕು. ಬುದ್ಧಿಪ್ರಾಮಾಣ್ಯ ಬರಬೇಕು. ಅದೇ ವಿಚಾರ ವಾದದ ಪ್ರಜ್ಞೆ ತರ್ಕಶುದ್ಧವಾದ ಪ್ರಜ್ಞೆ"—ಹೀಗೆಲ್ಲ ವಿವೇಚಿಸುವ ಗೌರೀಶರ ವಾಙ್ಮಯ ದೃಷ್ಟಿಯಲ್ಲಿ ಸುತ್ತಲೂ ನಾವು ಕಾಣುವ ಬೌದ್ಧಿಕತೆಯ (ಬುದ್ಧಿ ವಂತಿಕೆಯ) ಸಂಗತಿಗಳೆಲ್ಲಾ ಹೆಚ್ಚಾಗಿ 'ಪ್ರಜ್ಞಾವಾದ'ವೇ ವಿನಃ 'ವಿಚಾರ ವಾದ'ಕ್ಕೆ ಸಲ್ಲುವುದಿಲ್ಲ. ಪ್ರಜ್ಞಾವಾದವು (Rationalisation) ವಿಚಾರ ವಾದ (Rationalism) ಆಗುವುದಿಲ್ಲ ಎಂಬುದು ಮನದಟ್ಟುಗೊಳ್ಳುತ್ತದೆ. ಬುದ್ಧಿ ಸಮರ್ಥನೆಯ ಜಾಣತನದ ಹಲವು ಉದಾಹರಣೆ ನೀಡಿ ಸ್ಪಷ್ಟಗೊಳಿಸುತ್ತಾರೆ.

ಇಂಗ್ಲೀಷಿನಿಂದ ಬಂದ ಢೋಂಗಿ ಅಥವಾ ತೋರಿಕೆಯ ಬೌದ್ಧಿಕತೆಯ Rationalisation ಪದಕ್ಕೆ ಕನ್ನಡದಲ್ಲಿ ಅಥವಾ ಭಾರತೀಯ ಸಂದರ್ಭಕ್ಕೆ 'ಪ್ರಜ್ಞಾವಾದ' ಎಂಬ ಪರ್ಯಾಯ ನಾಮಕರಣವನ್ನುಗೈದ ಜನಕ ಗೌರೀಶರೇ. ಅದನ್ನು ಅವರು ಸಮರ್ಥಿಸಿದ ಬಗೆ ಸ್ವಾರಸ್ಯಕರ.

ಈ ವೈಚಾರಿಕ ವ್ಯಭಿಚಾರ Rationalisation ಇದಕ್ಕೆ 'ಪ್ರಜ್ಞಾವಾದ'ವೆಂಬ ಹೆಸರು ನನಗೆ ಸಿಕ್ಕಿದ್ದು ಭಗವದ್ಗೀತೆಯಲ್ಲಿ. ಗೀತೆಯ ಆರಂಭದಲ್ಲಿಯೇ ಅರ್ಜುನನು ತಾನು ಯುದ್ಧಮಾಡಲೊಲ್ಲೆ ಎಂದು ಕೈಚೆಲ್ಲಿ ಕೂಡುತ್ತಾನೆ. ಉಭಯ ಸೈನ್ಯಗಳ ನಡುವೆ ನಿಂತು ಸ್ವಜನ ಮೋಹದಿಂದ ಕಂಗೆಟ್ಟು 'ನರಗುಂದದು ಬಂದಾಯ' (Nervous breakdown) ಹೊಡುತ್ತಾನೆ. (ಇದು ಗೌರೀಶರ ವಿನೋದ ಪ್ರಜ್ಞೆ) ಆಗ ಆತ ಸ್ವಜನ ಸಂಹಾರ, ಕುಲಕ್ಷಯ,

ವರ್ಣಸಂಕರ, ಮಹತ್ಪಾಪ. ಇತ್ಯಾದಿಯಾಗಿ ಒಳ್ಳೆಯ ತರ್ಕಶುದ್ಧವಾಗಿ ಕಾಣುವಂತೆ ವಾಗ್ಮಿತೆಯಿಂದ ತನ್ನ ನಿಲುವನ್ನು ಸಮರ್ಥಿಸಿ (Justify) ಕೊಳ್ಳುತ್ತಾನೆ. ಆದರೆ ಅದನ್ನೆಲ್ಲ 'ಪ್ರಜ್ಞಾವಾದಾಂಶ್ಚ ಭಾಷಸೇ !' 'ಏನೆಲ್ಲಾ ಬುದ್ಧಿವಂತಿಕೆಯ ಮಾತುಗಳನ್ನಾಡುತ್ತಿ' ಎಂದು ಜರೆಯುತ್ತಾನೆ ಶ್ರೀಕೃಷ್ಣ. "ಈ ಪ್ರಜ್ಞಾವಾದ ಎಂಬುದು Rationalisation ಎಂಬುದಕ್ಕೆ ಸಮರ್ಪಕವಾದ ಪರ್ಯಾಯ ಪದಪ್ರಯೋಗವೆನಿಸಿತು" ಹೀಗೆ ಬೌದ್ಧಿಕ 'ಪ್ರಜ್ಞಾವಾದ' ಪದದ ಸೃಷ್ಟಿಯಾಗಿದೆ.

"ತಾನು ಆಡಿದ್ದೂ ಮಾಡಿದ್ದೂ ಸರಿ ಎಂಬಂತೆ ಇತರರು ಕಾಣಬೇಕೆಂದು ತರ್ಕದ ಬುದ್ಧಿವಂತಿಕೆಯ ವಾದ ಹೂಡಿ 'ಗಿಲೀಟು' ಕೊಡುವ ಚಾಲಾಕುತನವೇ 'ಪ್ರಜ್ಞಾವಾದ' ಎಂದಾದರೂ ಅದು ಪರ್ಯಾಯವಾಗಿ ವಿಚಾರವಾದಕ್ಕೆ ಮನ್ನಣೆ ಸಲ್ಲಿಸಿದಂತೆಯೇ" ಎಂದು ಗೌರೀಶರು ಸ್ವೀಕೃತಿ ನೀಡಿದರೂ 'ಆ ಪ್ರಜ್ಞಾವಾದವು ವಿಚಾರವಾದದ ನಕಲಿನಾಣ್ಯ. ಇದೊಂದು ಬುದ್ಧಿವ್ಯಾಪಾರ, ಬುದ್ಧಿಯ ದುರುಪಯೋಗ. ವೈಚಾರಿಕತೆಯ ವ್ಯಭಿಚಾರ'ವೆಂದೂ ಅಭಿಪ್ರಾಯಪಡುತ್ತಾರೆ.

'ವಿಚಾರವಾದದ ಅಪಕ್ವಸ್ಥಿತಿಯ ಈ ಬುದ್ಧಿ ಪ್ರಾಮಾಣ್ಯವು ವಿಚಾರವಾದಕ್ಕೇ ಕೆಲಮಟ್ಟಿನ ನಿರಾಶೆಯನ್ನು ಇಳಿಬಿಟ್ಟು ಅಲ್ಲೊಂದು ನಿರಾಶಾವಾದ ತಲೆದೋರಲು ಕಾರಣವಾಗಿದೆ' ಎಂಬುದನ್ನೂ ಬಿಚ್ಚಿಟ್ಟು ಅದಕ್ಕೊಂದು ನಿಮಿತ್ತವನ್ನೂ ವಿವರಿಸುತ್ತಾರೆ.

'ಈ ನಿರಾಶಾವಾದಕ್ಕೆ ಒಂದು ಕಾರಣ ಈಚಿನ ವೈಜ್ಞಾನಿಕ ಜ್ಞಾನದ ಅಪರ ಬಹುಮುಖ ಅಭಿವೃದ್ಧಿ ವಿನಿಯೋಗಗಳ ಸ್ಫೋಟ. ಈ ಸ್ಫೋಟದಿಂದುಂಟಾದ ಹಲವು ಅವಾಂತರಗಳನ್ನು ಗಮನಿಸಿ ಆಗ ಮನಸ್ಸಿಗೆ ಉಂಟಾಗುವ ಆತಂಕ, ನಿರುತ್ಸಾಹ, ನಿರಾಶೆಯ ಭಾವಸ್ಫುರಣವೇ 'ವಿಚಾರವಾದ'ಕ್ಕೆ ಒಡ್ಡಿಕೊಳ್ಳುವ 'ನಿರಾಶವಾದ' (ಫೆಸ್ಸಿಮಿಜಂ)ವಾಗಿದೆ. ಇದು ನಮ್ಮಲ್ಲಿ ಪ್ರಚಲಿತವಿರುವ ಸನಾತನ ನಂಬಿಗೆಯ ಅರಿಷಡ್‌ವರ್ಗದ ಸ್ಥಾನದಲ್ಲಿ–ಚಿಂತೆ, ಭಯ, ದ್ವೇಷ, ಸ್ಪರ್ಧೆ, ಅನಾಥಪ್ರಜ್ಞೆ ಮತ್ತು ನ್ಯೂನಗಂಡ ಎಂಬ ಹೊಸ ಷಡ್ವೈರಿಗಳನ್ನೇ ನಿರ್ಮಿಸಿದೆ ಎಂದು ವಿಷಾದಿಸುವ ಅವರು, 'ಆದರೆ ಇದು ಬುದ್ಧಿ

ಬೆಳೆದಂತೆ, ಭಾವುಕತೆ ಕಡಿಮೆ ಆದಂತೆ ಕೆಲಮಟ್ಟಿಗೆ ನಿರಾಶವಾದ ಅನಿವಾರ್ಯ ವೆಂದೇ ಭಾವಿಸುತ್ತಾರೆ.

ಮತ್ತೆ ಮಾರ್ಕ್ಸ್‌ನ ಮತವನ್ನು ಉಲ್ಲೇಖಿಸಿ "ಇತಿಹಾಸದ ವಿಕಾಸ ಕ್ರಮವು ಮುಗಿಯುವತನಕ ನಡುವಿನ ಯಾವುದೇ ಹಂತದಲ್ಲಿ ಬದುಕುವ ಮನುಷ್ಯನ ವೈಚಾರಿಕತೆಯ ಸ್ವರೂಪವು ಅಪೂರ್ಣವೇ ಆಗಿರುತ್ತದೆ. ಏಕೆಂದರೆ ಆಗ ಅವನ ವೈಚಾರಿಕತೆ ಆ ಮಟ್ಟದ ಐತಿಹಾಸಿಕ ವಿಕಾಸದ ಪ್ರಕ್ರಿಯೆಯಲ್ಲ. ಆ ಪರಿಮಿತಿಗೆ ಇನ್ನೂ ದೀರ್ಘಕಾಲಿಕ ಅವಧಿಯು ಅಗತ್ಯ. ನಿಸರ್ಗ ಕುರಿತು, ತನ್ನ ಕುರಿತು ಇತರ ಮಾನವರೊಂದಿಗೆ ತನ್ನ ಸಂಬಂಧಗಳ ಕುರಿತು ಮತ್ತು ತನ್ನ ಬದುಕಿನ ಮೌಲ್ಯಗಳ, ಶಾಶ್ವತಗುಣಗಳ ಗುರಿಗಳ ಕುರಿತು ಒಂದು ನಿರ್ಲಿಪ್ತವೂ, ನಿರುಪಾಧಿಕವೂ ಆದ ತಿಳುವಳಿಕೆಯನ್ನು ಆತ ಹೊಂದಬೇಕಾದರೆ ಐತಿಹಾಸಿಕ ಪ್ರಕ್ರಿಯೆಯು, ವಿಕಾಸಕ್ರಮವು ಪೂರ್ತಿಯಾಗಿ ಮುಗಿದಿರಬೇಕು. ಆಗ ಅವನ ವೈಚಾರಿಕತೆ, ಬುದ್ಧಿಶಕ್ತಿಯು ಯಾವುದೇ ವರ್ಗದ ಹಿತಾಸಕ್ತಿಯ ಗುಂಪಿನ ಹಂಗಿಲ್ಲದೇ ಸ್ವತಂತ್ರವಾಗಿ ಅನಿರ್ಬಂಧವಾಗಿ ವ್ಯವಹರಿಸಲು ಸಾಧ್ಯ" ಎಂಬ ಖಚಿತತೆಯನ್ನು ವ್ಯಕ್ತಪಡಿಸುತ್ತಾರೆ.

ಗೌರೀಶರ ಅಂಬೋಣದಲ್ಲಿ "ಕುರುಡು ಆಶಾವಾದ ಯುಗ ಎಂದೋ ಕಳೆದುಹೋಯಿತು. ಇಂದು ಮಾನವನು ತನ್ನ ದೌರ್ಬಲ್ಯ, ಅಸಹಾಯಕತೆ ಹಾಗೂ ಅಲ್ಪತೆಯನ್ನೂ ಅರಿತುಕೊಂಡೇ ಹೊಸ ಬಾಳ ಕಟ್ಟಬೇಕು. ವೈಚಾರಿಕ ನಿರಾಶೆಯಲ್ಲಿಯೂ ಒಂದು ನಿಷ್ಠುರ ಆನಂದವಿದೆ! ಈ ವಿಶಾಲ ವಿಶ್ವಾಸಕ್ಕೆ ಮಾನವನೇ ಕೇಂದ್ರವಲ್ಲ. ಅನ್ಯ ಕೇಂದ್ರಿತ ವಿಶ್ವದಲ್ಲಿ ಮಾನವ (ತನ್ನನ್ನೂ ಇರಿಸಿಕೊಂಡು) ವ್ಯವಹರಿಸುತ್ತಾನೆ ಎಂಬ ಅರಿವಿನೊಂದಿಗೆ ತನ್ನ ಎಲ್ಲ ದೌರ್ಬಲ್ಯವನ್ನೂ ಅರಿತುಕೊಂಡು ನಡೆಯುತ್ತಿರುವುದರಲ್ಲಿಯೇ ಮಾನವನ ನಿಜವಾದ ಸಾಮರ್ಥ್ಯವಿದೆ. ಅದೇ ಈ ನಿರಾಶಾವಾದವನ್ನು ಎದುರಿಸುವ ರೀತಿ."

ಗೌರೀಶರು ವಿಚಾರವಾದಕ್ಕೇ ಮೀಸಲಾಗಿರಿಸಿದ ತಮ್ಮ ಮುಖ್ಯ ಮೂರೂ ಕೃತಿಗಳಲ್ಲಿಯೂ ('ವಿಚಾರವಾದ', (೨) ವಿಚಾರವಾದ ಮತ್ತು ನಿರಾಶವಾದ (೩)ವಿಚಾರವಾದ-ಉತ್ತರಾರ್ಧ) ಒಟ್ಟಾರೆ ಆಲೋಚಿಸಿದ ಯೋಚನಾಕ್ರಮವು ತುಂಬ ಉನ್ನತ ಸ್ತರದಲ್ಲಿ ವಿಹರಿಸಿದೆ; ಅನನ್ಯವೆನಿಸಿಕೊಂಡಿದೆ. ಅವರು

ಈ ಕುರಿತು ಪ್ರತಿಪಾದಿಸಿದ ಇನ್ನಷ್ಟು ಮಾತುಗಳೂ ಉಲ್ಲೇಖನೀಯ, ಮನನೀಯ.

"ಯಾವ ಕ್ರಾಂತಿಗೂ ಪೂರ್ವದಲ್ಲಿ ವಿಚಾರ ಕ್ರಾಂತಿ ಅವಶ್ಯ (ಇದಕ್ಕಾಗಿ ಗೌರೀಶರು ಅನೇಕ ಸಾದೃಶ್ಯ ಉದಾಹರಣೆಗಳನ್ನು ನೀಡಿ ಬಿಂಬಿಸುತ್ತಾರೆ). ಅದಕ್ಕೆ ಮೊದಲು ಬೌದ್ಧಿಕ ಅಸಂತೋಷ ವಿಚಿಕಿತ್ಸೆ ಅಗತ್ಯ. ಶ್ರದ್ಧೆಗಿಂತ ಸಂದೇಹವೇ ಮನುಷ್ಯನ ಮನಸ್ಸಿನ ಮೂಲಧರ್ಮ. ಸಂದೇಹ ನಿವಾರಣೆಯಾದ ಹೊರತು ಕ್ಷೇಮವಿಲ್ಲ, ನೇಮವಿಲ್ಲ ಮತ್ತು ಸಂದೇಹವನ್ನು ಹತ್ತಿಕ್ಕುವುದು ಕೊನೆಗೂ ಸಾಧ್ಯವಿಲ್ಲ. ಈ ವಿಚಿಕಿತ್ಸೆಯ ವೃತ್ತಿ ಏಕೆ? ಮತ್ತು ಹೇಗೆ? ಇವೆರಡರ ತೆಕ್ಕೆಯಲ್ಲಿ ಸತ್ಯವನ್ನು ಸೆರೆ ಹಿಡಿಯದೇ ಸುಖವು ಸಂಪನ್ನವಾಗದು– ಎಂಬ ಕುರಿತು ಚರ್ಚಿಸಿ ವಿಚಾರವಾದದ ತತ್ವವೇನು? ತಂತ್ರವೇನು? ಪಂಥ ಪದ್ಧತಿಗಳೇನು?" ಇತ್ಯಾದಿಗಳು ಲೇಖನದಲ್ಲಿ ವಿವರವಾಗಿ ಆಕರಗಳಿಂದ ಸಾಕಾರಗೊಂಡು ಶಾಸ್ತ್ರೀಯವಾಗಿ ಚಿಂತಿಸಿ, ನಾವು ವಿಚಾರವಾದವನ್ನು ಅನುಸರಿಸಲು ಅಗತ್ಯವಾದ 'ವಿಚಾರವಾದದ ಪ್ರತಿಜ್ಞೆ', 'ಪಾಲಿಸಬೇಕಾದ ಪಥ್ಯ' ಇವನ್ನೆಲ್ಲಾ ವಿವರಿಸುತ್ತಾರೆ.

ಇಲ್ಲಿ ಗೌರೀಶರು ವಿಚಾರವಾದಕ್ಕೊಂದು ಷಡ್ದರ್ಶನವನ್ನು ಎತ್ತಿಟ್ಟುದು, ಅದನ್ನು ಒಂದೊಂದಾಗಿ ವಿಷದೀಕರಿಸಿರುವುದು ಅನನ್ಯವಾದುದು—ಅವುಗಳನ್ನು ೧) ವೈಜ್ಞಾನಿಕ ದೃಷ್ಟಿ, ೨) ಐತಿಹಾಸಿಕ ದೃಷ್ಟಿ, ೩) ತಾರತಮ್ಯ ದೃಷ್ಟಿ, ೪) ಪರಿಕ್ರಮ ದೃಷ್ಟಿ, ೫) ಆತ್ಮೋಪಮ್ಯ ಮತ್ತು ಪರೋಪಮ್ಯದ ದೃಷ್ಟಿ, ೬) ಔದಾರ್ಯ ದೃಷ್ಟಿ ಹೀಗೆ ವಿಂಗಡಿಸಿ ವಿಶ್ಲೇಷಿಸಿದ ಪ್ರಮೇಯ ಸಾಧನೆಯು ಮನದಟ್ಟುಗೊಳಿಸುವಲ್ಲಿ ಸಾಕಷ್ಟು ಸಿದ್ಧಿಸಿದುದು ವೇದ್ಯ.

'ತಲೆತಲೆಮಾರಿನಿಂದ, ಜನ್ಮದಿಂದ ಬಂದ ಶೂದ್ರನಿಗೆ (ಜನ್ಮನೋ ಜಾಯತೇ ಶೂದ್ರ) ಸಂಸ್ಕಾರ ಕೊಟ್ಟು ದ್ವಿಜನನ್ನಾಗಿ ಜಪಿಸಿ ತಂದಿದ್ದು 'ಧಿಯೋ ಯೋನಃ ಪ್ರಚೋದಯಾತ್' ಅರ್ಥಾತ್ ಬುದ್ಧಿ ಪ್ರಚೋದನೆಯು ವಿಚಾರವಾದಕ್ಕೆ ಪರಮಮಂತ್ರ. ಸತ್ಯವನ್ನೇ ಹುಡುಕಿ ಸತ್ಯವನ್ನೇ ಕಾಣಬೇಕು. ನಾವು ಕಂಡಷ್ಟು ಸತ್ಯವನ್ನು ನಂಬುವಾಗ ನಾವು ಕಂಡದ್ದೇ ಸತ್ಯವೆಂಬ ಹಟ; ಅನ್ಯರು ಕಂಡದ್ದು ಹೇವ–ಈ ಎರಡೂ ಸಲ್ಲ. ಈ ಪ್ರತಿಜ್ಞೆ

ವಿಚಾರವಾದದ ಪ್ರಥಮ ದೀಕ್ಷೆ." ವಿಚಿಕಿತ್ಸಕತೆ ಪಾರಮ್ಯ ಎಂಬ ಸಂದೇಶವನ್ನು ತಲ್ಪಿಸುವ ಗೌರೀಶರ ಸೂತ್ರ ತುಂಬ ಮನನೀಯ, ಮನೋಜ್ಞ.

"ವಿಚಾರವಾದದ ಆಂದೋಲನ, ಅದರ ಇತಿಹಾಸ ಅದರ ವಿಶಿಷ್ಟ ಸಾಹಿತ್ಯ ಆ ಕುರಿತು ಹೋರಾಡಿದ ಥಾಮಸ್ ಹಕ್ಸ್ಲೆಯಿಂದ ಬಟ್ರೆಂಡ ರಸೆಲರ ತನಕದ ಹಿಂದಿನ ಇಂದಿನ ಮಹಾರಥಿಗಳು, ವಿಚಾರ ವಾದಿಗಳ ಜಾಗತಿಕ ಹಾಗೂ ಭಾರತೀಯ ಸಂಘ ಸಂಸ್ಥೆಗಳು, ಭಾರತದಲ್ಲಿಯ ಆ ದಿಶೆಯ ಪ್ರಸಾರ-ಪ್ರಯತ್ನ ಹಾಗೂ ಪ್ರಚಲಿತ ಗ್ರಂಥ ಪ್ರಕಟಣೆಗಳು ಇತ್ಯಾದಿ ಅನೇಕ ವಿಷಯಗಳನ್ನು ತಾವು ಮುಟ್ಟಿಲ್ಲವೆಂದು ಗೌರೀಶರು ಇಲ್ಲಿ ಹೇಳಿಕೊಂಡುದರ ಹಿನ್ನೆಲೆಯಲ್ಲಿ ನಾವು ಗಮನಿಸಿದರೆ ಅವರಲ್ಲಿ ತುಂಬಿಕೊಂಡಿರುವ ವಿಚಾರವಾದೀ ಸರಕುಗಳೂ, ಸಿದ್ಧಗೊಂಡ ವಿಪಾಕವೂ ಅರಿವಾಗುತ್ತದೆ.

ಗೌರೀಶ ಕಾಯ್ಕಿಣಿಯವರಿಗೆ ಹೀಗೆ ಸಿದ್ಧಿಗೊಂಡಿರುವ ವಿಚಾರವಾದದ ಇನ್ನೊಂದು ಪರಿಚ್ಛೇದವನ್ನೂ ಇಲ್ಲಿ ಉಲ್ಲೇಖಿಸುವುದು ಅವಶ್ಯ :

"ಮಾನವನ ವೈಚಾರಿಕತೆ ಅಥವಾ ಬೌದ್ಧಿಕತೆ ಹಲವು ಶಕ್ತಿಗಳ ಮನೋಧರ್ಮಗಳ ಒಂದು ಸಂಯೋಗ ಮತ್ತು ಸಂಗತಿಯನ್ನು ಕೂಡಿದೆ. ವೈಚಾರಿಕತೆಯು ವಾಸ್ತವಿಕ ಸತ್ಯದ ಜ್ಞಾನವನ್ನಷ್ಟೇ ಸಿಗುವಂತೆ ಮಾಡುವುದಿಲ್ಲ. ಮಾನವನ ಸೃಜನಶೀಲತೆಯನ್ನೂ ನವನಿರ್ಮಾಣಶಕ್ತಿಯನ್ನೂ ಉಂಟು ಮಾಡುತ್ತದೆ. ಈ ಸೃಜನಶೀಲ ಪ್ರಜ್ಞೆಯಿಂದಾಗಿ ಮಾನವನ ಸ್ವಭಾವವು ಒಂದು ಸಿದ್ಧ ಸರಕಲ್ಲ; ನಿರ್ಣೀತ ವಸ್ತುವಲ್ಲ. ಈತನ ಈ ಸಾರಭೂತ ಸ್ವಭಾವದ ಒಂದು ಅಂಗವಾಗಿದೆ. ಈ ವೈಚಾರಿಕತೆ (Rationality) ಇದು ಖಚಿತ." ಹೀಗೆಂದು ಪ್ರತಿಪಾದಿಸುತ್ತ : 'ವಿಚಾರವಾದಿಗಳನ್ನು ಕೇವಲ ಭೌತಿಕಾಸಕ್ತರು (Materialists) ಕಣ್ಣಿಗೆ ಕಾಣುವಷ್ಟು, ತಮ್ಮ ಬುದ್ಧಿಗೆ ತೋಚುವಷ್ಟು, ಅರಿವಿಗೆ ಬರುವಷ್ಟು ಮಾತ್ರವೇ ಸತ್ಯವೆಂದು ವಾದಿಸುವವರು. ಅರ್ಥೈಸುವವರು. ವಸ್ತುವಿಷಯಗಳಲ್ಲೇ ಆಸಕ್ತಿ ಹೊಂದಿದ ಭೋಗಲಾಲಸಿಗಳು, ಲೋಲುಪರು ಎಂಬಿತ್ಯಾದಿಯಾಗಿ ವಿಕೃತಗೊಳಿಸಿ, ನಿಕೃಷ್ಟಗೊಳಿಸಿ ಅಥವಾ ಸರಳೀಕರಿಸಿ ಅಭಿಪ್ರಾಯಪಡುವ 'ನಿಂದಕ'ರಿಗೂ ಗೌರೀಶರು ಮಾರ್ಮಿಕವಾಗಿ ಉತ್ತರ ಹೇಳುತ್ತಾರೆ. ಅದು ಒಪ್ಪಂದವಾಗುವ (convincing) ರೀತಿಯಲ್ಲಿ ಶೈಲಿಯಲ್ಲಿ ಹಬ್ಬಿಕೊಂಡಿದೆ. ಅದು ಗೌರೀಶರ ಬರವಣಿಗೆಯ ಗಮ್ಯಗಣ್ಯತೆ, ವಿಶಿಷ್ಟತೆ

ಮತ್ತು ಸಾರ್ಥಕತೆ. ಈ ವೈಚಾರಿಕತೆ ಒಂದು ಜೈವಿಕ ಕ್ರಿಯೆ, ಜೈವಿಕ ದ್ರವ್ಯ. ಭೌತಿಕ ವಿಶ್ವದ ನಿಯಮಬದ್ಧವಾದ ನಿಯತಿಗೆ ಒಳಪಟ್ಟೇ ಮೂಡಿ ಬಂದ ಒಂದು ಮಿಶ್ರಿತ ವಿಸಾಕ. 'ಸತ್'ದೊಳಗಿಂದೇ ಮೊಗ ಪಡೆದ 'ಚಿತ್' ತತ್ವ. ಈ ವೈಚಾರಿಕತೆಯಲ್ಲಿಯೇ ಮಾನವತೆಯ ಸಾರವಿದೆ. ಗುರುದೇವ ರವೀಂದ್ರರು ಅಂದಂತೆ Reasion alone Justifies humanity.... ಎಂದು ನುಡಿದು ವಿರಮಿಸುತ್ತಾರೆ.

ತುಂಬ ಸುದೀರ್ಘವಾಗಿ ಕೇವಲ ವೈಚಾರಿಕತೆ, ವಿಚಾರವಾದ ಎಂಬುದರ ಬಗೆಗೇ ಅದರ ಅಂಗಾಂಗ, ಅವಯವ-ಸಾವಯವ, ಸುಂದರಾಂಗಿಕ, ವಿಕಲಾಂಗಿಕಗಳೆಲ್ಲವನ್ನೂ ರುಚಿಕಟ್ಟಾಗಿಯೇ ಚರ್ಚಿಸಿದ ಗೌರೀಶರ ವಿಚಾರ ಪ್ರಗಲ್ಭತೆ ಪ್ರಕಾಂಡವಾದುದು. ಹಾಗಿದ್ದೂ ಅವರ ವಿನೀತಭಾವ-ವಿಚಾರ ವಸ್ತುಭಂಡಾರದ ಶ್ರೀಮಂತಿಕೆಯ ಮೇಲಿರುವ ಗೌರವ, ಭಕ್ತಿ, ಪ್ರೀತಿ ಎಷ್ಟಿದೆ ಯೆಂದರೆ 'ಕೊಡ ಕಡಲನ್ನು ಕುಡಿಯಲಾರದು, ನಿಜ. ಆದರೆ ಕೊಡದ ನೀರು ಕಡಲಿಂದ ಬೇರೆಯಲ್ಲ' ಎಂದು ತಮ್ಮ ಭಾವಾಂಜಲಿಯ ಅರ್ಘ್ಯ ಅರ್ಪಿಸು ತ್ತಾರೆ. ಎಂದಾದರೊಂದು ದಿನ ಈ ಕೊಡದ ನೀರನ್ನು ಕುಡಿದೇ ಕುಡಿಯುತ್ತಾ ರೆಂಬುದು 'ವಿಚಾರವಾದ'ದ ಆಶಾವಾದ. ಇದಲ್ಲವೇ ವಿದ್ವಾಂಸರ ತುಂಬು ಹೃದಯ.

೬

ಗೌರೀಶ ಕಾಯ್ಕಿಣಿಯವರ ವಿಚಾರದ ಆ ಮೂಸೆಯಲ್ಲಿ ಹೊಕ್ಕು ಹೊರ ಬಂದ ಆ ಒರೆಗಲ್ಲಿಗೆ ತಿಕ್ಕುತ್ತೇದ ಸಂಗತಿಗಳು ಎಷ್ಟೆಂಬುದಕ್ಕೆ ಲೆಕ್ಕವಿಲ್ಲ. ಇವರ ವಿಚಾರದ ಪ್ರಶ್ನೆಯ ಕಕ್ಷೆಗೆ ಬರುವಂಥದು ಹೊಸ ಜ್ಞಾನಕ್ಷೇತ್ರಗಳಷ್ಟೇ ಅಲ್ಲ; ಹಳೆಯ ಕ್ಷೇತ್ರಗಳೂ ಹಾಗೂ ಈಗಾಗಲೇ ಕಂಡುಕೊಂಡ ಉತ್ತರಗಳೂ ತಡ ಕಾಡುತ್ತಿವೆ. ಮತ್ತೂ ಮತ್ತೂ ಪ್ರಶ್ನೆಗಳಾಗಿ ಅವರನ್ನು ಅತ್ತ ಹುಡುಕಾಡಲು ಹಚ್ಚುತ್ತವೆ.

'ಕೆಪ್ಲರ್, ಗೆಲಿಲಿಯೋ, ನ್ಯೂಟನ್, ಐನಸ್ಟೈನ್, ಫ್ರಾಯ್ಡ್, ಯಂಗ್, ಡಾರ್ವಿನ್, ರಸೆಲ್, ಮಾರ್ಕ್ಸ್, ಎಂ. ಎನ್. ರಾಯ್, ಬರ್ನಾಡ ಶಾ, ವಿಲ್ ಡ್ಯೂಂ ಮುಂತಾದ ಆಧುನಿಕ ಜಗತ್ತಿನ ಅನೇಕ ಪ್ರಶ್ನಕಾರರು ಗೌರೀಶ

ಕಾಯ್ಕಿಣಿಯವರನ್ನು ವೈಚಾರಿಕದತ್ತ ನೂಕಿದ್ದಾರೆ. ಅವರು ಅಲ್ಲಿ ತಡಕಾಡಿ ಶೋಧಿಸಿ ಏನೆಲ್ಲವನ್ನು ಎತ್ತಿ ತಂದು ಇಟ್ಟಿದ್ದಾರೆ; ಇಡುತ್ತಲೇ ಇದ್ದಾರೆ.

ಅಂಥವುಗಳಲ್ಲಿ ಜಗತ್ತಿನ ಜೀವಕುಲದಲ್ಲಿ ವಿಶೇಷತಃ ಮನುಜ ಕುಲದಲ್ಲಿ ಅನ್ಯೋನ್ಯ ಅವಲಂಬಿತ ಹೆಣ್ಣು ಗಂಡುಗಳ ಪರಸ್ಪರ ಪ್ರೀತಿಯ ಬೆಸುಗೆ ಸಂಬಂಧ ಒಲವುಗಳು ಇಷ್ಟು ಗಾಢವಾಗಿ ಅನಿವಾರ್ಯಗೊಂಡು ಅಬಾಧಿತವಾಗಿ ನಿರಂತರ ಜರುಗಿಕೊಂಡು ಬಂದ ಹಿಂದಲೆ–ಮುಂದಲೆಗಳತ್ತ ಹೊರಳಿ ಪ್ರಶ್ನೆ ಉತ್ತರಗಳನ್ನು ಹುಡುಕಾಡಿದ್ದು, ಬೆಳಕು ಚಲ್ಲಿದ್ದು ಉತ್ತರೋತ್ತರವಾಗಿದೆ. "ಕನ್ನಡದಲ್ಲಿ ಇಂಥದು ಇನ್ನೊಂದಿಲ್ಲವೆಂದರೆ ಅತಿಶಯೋಕ್ತಿ ಆಗಲಾರದು. ಕನ್ನಡ ಸಾಹಿತ್ಯಕ್ಕೆ 'ಉತ್ತರ ಕನ್ನಡವು' (ಜಿಲ್ಲೆ) ಇತ್ತ ಅತಿದೊಡ್ಡ ಕೊಡುಗೆಯಾಗಿದೆ. ಅದಕ್ಕೆ ಸಾಹಿತ್ಯ ಚರಿತ್ರೆಯಲ್ಲಿ ತನ್ನದೇ ಆದ ಸ್ಥಾನವಿದೆ. ಇದು ನಿರ್ವಿವಾದ"–ಖ್ಯಾತ ಸಾಹಿತಿ ಯಶವಂತ ಚಿತ್ತಾಲರು ಹೀಗೆ ಉದ್ಗರಿಸಿದ್ದಾರೆ. ಗೌರೀಶರಿಗೆ ಇದು ಸಲ್ಲಬೇಕಾದ್ದೇ.

೧೦

ಗೌರೀಶರು ಬರೆದ ಹಲವು ಮಹಾಪ್ರಬಂಧಗಳಲ್ಲಿ 'ಹೆಣ್ಣು–ಗಂಡು' ಕುರಿತು ಚರ್ಚಿಸಿದ್ದೂ ಒಂದು ಗಣ್ಯ ಕೃತಿ. ಕುತೂಹಲಗೊಳಿಸುತ್ತ ಸೆಳೆದುಕೊಳ್ಳುವ ಗ್ರಂಥ. ಇದಕ್ಕೆ ಅನುರಣನಗೊಂಡದ್ದು 'ಪ್ರೀತಿ' ಎಂಬ ಇನ್ನೊಂದು ಪ್ರಬಂಧ ಕೃತಿ.

ಪ್ರಸ್ತುತದ ಸಮಾಜದಲ್ಲಿ, ಕೌಟುಂಬಿಕ ನಿರ್ವಹಣೆಯಲ್ಲಿ ಪುರುಷ ಪ್ರಧಾನ, ಪುರುಷ ಕೇಂದ್ರಿತ ವ್ಯವಸ್ಥೆಯನ್ನೇ ಕಾಣುತ್ತೇವೆ. ಹೆಣ್ಣು, ಗಂಡಿನ ಅಧೀನವಾಗಿಯೋ ಅಥವಾ ಗಂಡು, ಹೆಣ್ಣನ್ನು ಆಳುವ ಅಹಂಕಾರಿಯಾಗಿಯೋ ಕಾಣಿಸುವುದು ಸರ್ವಸಾಮಾನ್ಯ ಚಿತ್ರ. ಈ ಮನೋಸ್ಥಿತಿ ಹೇಗೆ ? ಎಲ್ಲಿಂದ ? ಮೂಲದಲ್ಲಿ ಈ ಗಂಡಿನ ಪ್ರಾಬಲ್ಯವಾಗಲೀ, ಅಹಂಕಾರವಾಗಲೀ ಸ್ವತಂತ್ರವಲ್ಲ, ಉಪಾಧಿಕ, ನಿರುಕ್ತವಲ್ಲ, ಕ್ರಮಾಂತರದ ನಿಯುಕ್ತ. ವಾಸ್ತವದಲ್ಲಿ ಈ 'ಗಂಡು' ಎಂಬ ಪ್ರಾಣಿ, "ಹೆಣ್ಣಿನೊಂದಿಗೂ ನೆಮ್ಮದಿಯಾಗಿ ಬದುಕಲಾರ ! ಹೆಣ್ಣಿನ ಹೊರತಾಗಿಯೂ ಬದುಕಲಾರ"–ಇಂಥ ಒಗಟಿನ ವಾಸ್ತವಿಕ ಅಸ್ತಿತ್ವ ಹೆಣ್ಣಿನದು. ಈ ವಿಷಯವಾಗಿ ನಿಸರ್ಗದ ಜೀವರಾಶಿಯಲ್ಲಿ

ಹೆಣ್ಣು ಏನು ? ಗಂಡು ಏನು ? ಈ ಸಂಬಂಧದ ಜೋಡನ ಬಲೆಯ ಎಳೆ ಯಾವುದು ಎಂಬುದನ್ನು ಶೋಧಿಸಲು ಗೌರೀಶರು ಗಂಭೀರವಾಗಿ ಯೋಚಿಸ ತೊಡಗುತ್ತಾರೆ : ದಿಗಿಲಾಗುತ್ತದೆ.

"ಹೆಣ್ಣಿನ ಕುರಿತು ವಾಙ್ಮಯ ಅಷ್ಟಿಷ್ಟಲ್ಲ. ಅದರಷ್ಟು ಆಕರ್ಷಕ ವಾಙ್ಮಯ ಬೇರೊಂದಿಲ್ಲ. ಅದರಷ್ಟು ಅವಿಶ್ವಸನೀಯವು ಇನ್ನಾವುದಿಲ್ಲ. ಹೆಣ್ಣನ್ನು ನಚ್ಚುವಷ್ಟು ಜನ ನಂಬುವವರಿಲ್ಲ" ಹೀಗೆ ಪ್ರಸ್ತಾಪಿಸುತ್ತ ಒಳ ಪ್ರವೇಶಿಸತೊಡಗುವ ಗೌರೀಶರು—ಹೆಣ್ಣು, ಗಂಡಿನ ಸಂಬಂಧಗಳ ಕುರಿತು ಬರೆಯುವ ಪಾಡು ಅದರ ದಿಗಿಲು ಕುರಿತು ಇಬ್ಬರು ಆಧುನಿಕ ಋಷಿಗಳ ಮಾತನ್ನು ನೆನಪಿಸಿಕೊಳ್ಳುತ್ತಾರೆ. ಅದು ಹೀಗಿದೆ :

—"ಟಾಲ್‌ಸ್ಟಾಯ್ ಒಮ್ಮೆಲೇ ಅಂದನಂತೆ : 'ಮತ್ತೆ ನಾನು ಹೆಣ್ಣಿನ ಕುರಿತು ದಿಟವನ್ನೇ ಹೇಳಬೇಕೇ ? ಅದು, ಈಗಲ್ಲ ; ನನ್ನ ಒಂದು ಹೆಜ್ಜೆ ಗೋರಿಯಲ್ಲಿರಬೇಕು. ನನ್ನ ಶವ ಪೆಟ್ಟಿಗೆಯ ಮುಚ್ಚಳ ತೆಗೆದಿರಬೇಕು. ಆಗ ಹೇಳುವುದನ್ನೆಲ್ಲಾ ಹೇಳಿ ಪೆಟ್ಟಿಗೆಯೊಳಗೆ ಹಾರಿ ಮುಚ್ಚಳ ಮುಚ್ಚಿ ಕೊಳ್ಳುವೆ."

"ಯಾವ ಗಂಡನೂ ತನ್ನ ಹೆಂಡತಿಯ ಜೀವಮಾನದಲ್ಲಿ ಮದುವೆಯ ಕುರಿತು ಸತ್ಯವನ್ನು ಬರೆಯಲು ಧೈರ್ಯಪಡನು" ಜಾರ್ಜ್ ಬರ್ನಾಡ ಶಾ ನ ಉದ್ಗಾರ. (ಯಾಕೋ, ಗೌರೀಶರು ಭರತವರ್ಷದ ಋಷಿವರ್ಯರ ಮಾತು ಗಳನ್ನು ಎತ್ತಿಕೊಳ್ಳಲಿಲ್ಲ !)

ಗಂಡು—ಹೆಣ್ಣಿನ ಕುರಿತು ಬರೆಯುವಲ್ಲಿ ಗೌರೀಶರ ಉದ್ಗಾರ ಭಿನ್ನ :

"ಗಂಡಿಗೆ ಹೆಣ್ಣು ಒಮ್ಮೆ ದಾಸಿ ; ಒಮ್ಮೆ ದೇವಿ ; ಒಮ್ಮೆ ನರಕದ ಹೆದ್ದಾರಿ ; ಒಮ್ಮೆ ಸ್ವರ್ಗದ ಸುಂದರಿ ; ಒಮ್ಮೆ ಬರೇ ಭೋಗ ವ್ಯಕ್ತಿ ; ಒಮ್ಮೆ ಕೇವಲ ತ್ಯಾಗಮೂರ್ತಿ—ಹೀಗೆಲ್ಲ ತಿಳುವಳಿಕೆಯ ತೂಗಾಟದಲ್ಲಿ ಸಿಲುಕಿ ಗಂಡಿನ ಕಣ್ಣಿಗೆ ಹೆಣ್ಣು ಒಂದು ಒಗಟಾಗಿದ್ದಾಳೆ. ಮಾನವ ಜನಾಂಗದ ಕೊನೆಯ ಜಿಜ್ಞಾಸೆ ಮಾನವನ ಕುರಿತೇ ಆಗಿದೆ ; ಅದರ ಕೊನೆಯ ಶಾಸ್ತ್ರ ಮನೋ ವಿಜ್ಞಾನ ಮತ್ತು ಈ ಶಾಸ್ತ್ರ ಜಿಜ್ಞಾಸೆಗಳ ಕೊನೆಯ ವಿಷಯ 'ಹೆಣ್ಣು.'"

—ಹೀಗೆ ಚರ್ಚೆಗೆ ತೊಡಗಿಕೊಳ್ಳುವ ಗೌರೀಶರು : 'ಹೆಣ್ಣು—ಗಂಡು' ಮತ್ತು ಅಲ್ಲಿಯ ಪ್ರೀತಿ, ಬಂಧದ ಸೂತ್ರ ('ಪ್ರೀತಿ' ಎಂಬ ವಿಷಯಕ್ಕೇ ಒಂದು

ಸುದೀರ್ಘ ಪ್ರಬಂಧ ಕೃತಿಯನ್ನೇ ನೀಡಿದ್ದಾರೆ)–ಈ ಕುರಿತು ಚಿತ್ರಿಸುವಾಗ ಸತ್ಯಶೋಧಕ ದಾರ್ಶನಿಕನಂತೆ, ವಿಜ್ಞಾನಿಯಂತೆ ಬರೆಯುತ್ತ ಹೋಗುತ್ತಾರೆ. ಅವರ ಇಲ್ಲಿಯ ವಿವೇಚನೆಯ ದೃಷ್ಟಿಯು ಹೆಣ್ಣು ಗಂಡು ಯಾವುದೊಂದರ 'ಪರವಾದಿ'ಯೂ ಅಲ್ಲ, ಅ–ಪರ(ಪ್ರತಿ)ವಾದಿಯೂ ಅಲ್ಲ. ಶುದ್ಧ, ಬದ್ಧ, ವಿರುದ್ಧ ಎಲ್ಲವೂ ಒಂದೇ ಕಟ್ಟಿನಲ್ಲಿ. ಖನಿಜವನ್ನು ಅಗೆದ ಭೂವಿಜ್ಞಾನಿಯು ಕಲ್ಲು, ಮಣ್ಣು, ಅದುರು ಕಣ ಎಲ್ಲವನ್ನೂ ಒಂದೇ ಮುಷ್ಟಿಯೊಳಗೆತ್ತಿ ತಂದು ವಿಂಗಡಿಸಿ ತೋರಿಸಿದಂತೆ.

—"ಗಂಡು ಹೆಣ್ಣಿನ ಕುರಿತು ಮಾಡುವ ಅರ್ಧ ಸತ್ಯ, ಅಸತ್ಯಗಳ ಸ್ಥೂಲ ಪ್ರದರ್ಶನಕ್ಕಿಂತ ಹೆಣ್ಣು–ಗಂಡಿನ ವಿಷಯವು ಉಂಟುಮಾಡುವ ಸತ್ಯ ತಥ್ಯಗಳ ಸೂಕ್ಷ್ಮ ನಿದರ್ಶನವು ಮನಸ್ತತ್ವದ ಹಾಗೂ ಮನುಷ್ಯತ್ವದ ವ್ಯಾಪಕ ದರ್ಶನಕ್ಕೆ ಹೆಚ್ಚಿನ ಪೂರ್ಣತೆಯನ್ನು ತಂದುಕೊಡಬಹುದು" ಎಂದಿದ್ದು ಅವರ ಬರಹದ ನಿರ್ಲಿಪ್ತತೆ.

ಸದ್ಯದ ವಿದ್ಯಮಾನಗಳಲ್ಲಿ ತೋರಿಕೊಳ್ಳುವ ಹೆಣ್ಣು–ಗಂಡಿನ ಸ್ಥಿತಿ, ಅವರ ನಡುವಿನ ಸಂಬಂಧದ ಪರಿಕಲ್ಪನೆ, ಅಲ್ಲಿ ತುಂಬಿರುವ ಮನೋಸ್ಥಿತಿ ಹೇಗೂ ಇದ್ದಿರಬಹುದು, ಏನೋ ಆಗಿರಬಹುದು. ಅವನ್ನೆಲ್ಲ ಗಮನಿಸುವಲ್ಲಿ, ಪರಿವೀಕ್ಷಣೆಗೆಯ್ಯುವಲ್ಲಿ ಗೌರೀಶರು ತಮ್ಮ ಪೂರ್ಣಚಕ್ಷುವನ್ನು ತೆರೆದುಕೊಂಡು ನೋಡುತ್ತಲೇ ಅದರ ಬೇರನ್ನು ತೀರಾ ಆಳದಲ್ಲಿ ಮೂಲದಲ್ಲಿ ಹುಡುಕುತ್ತಾರೆ ಆ ಕುರಿತು ವ್ಯಾಖ್ಯಾನಿಸುತ್ತಾರೆ :

"ಜೀವಕೋಟಿಯಲ್ಲಿ ಹೆಣ್ಣು–ಗಂಡಿನ ಸಂಬಂಧ ಜೋಡಣೆ, ಅಸ್ತಿತ್ವವು ಸತತ ವಂಶವೃದ್ಧಿ, ಸಂತತಿ ಉತ್ಪತ್ತಿಯೇ ಮೂಲತತ್ವವಾಗಿ ಬೆಳೆದು ಕೊಂಡಿವೆ. ಈ ಕಾರ್ಯ ಉದ್ದೇಶದಲ್ಲಿ ಗಂಡು ಜೀವಕೋಶವು ನಿಮಿತ್ತ ಮಾತ್ರ. ವಂಶೋತ್ಪತ್ತಿಯ 'ಅಂಡಾಣು'ವನ್ನು ಧಾರಣಗೈದಂಥ ಹೆಣ್ಣು ಜಿವಕೋಶವೇ ಅಲ್ಲಿ ಪ್ರಾಬಲ್ಯ, ಪ್ರಾಧಾನ್ಯ. ಪ್ರಾಣಿರಾಶಿಯಲ್ಲಿ ಹೆಣ್ಣು ಆಕರ್ಷಣೆಯಲ್ಲೂ ಗಣ್ಯ. ಸಂತತಿ ಕುಟುಂಬ ನಿರ್ವಹಣೆಯಲ್ಲೂ ಗಣ್ಯಪಾತ್ರ. ಮನುಷ್ಯನನ್ನುಳಿದ ಮಿಕ್ಕ ಪ್ರಾಣಿ ಪ್ರಪಂಚದಲ್ಲಿ ನೈಸರ್ಗಿಕ ಸತ್ಯವಾಗಿ ಈಗಲೂ ಹೆಣ್ಣೇ ಪ್ರಧಾನ. ಬಹು ಹಿಂದಕ್ಕೆ ಹೋದರೆ ಮನುಷ್ಯರಲ್ಲೂ ಇಡೀ ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣಿನದೇ ಯಜಮಾನಿಕೆ ಇದ್ದುದು ಕಾಣಬರುತ್ತದೆ.

(ಕೆಲವು ಬುಡಕಟ್ಟು ಜನಾಂಗದಲ್ಲಿ ಈಗಲೂ ಈ ಪದ್ಧತಿಯು ಪಳೆಯುಳಿಕೆ ಕಾಣಬರುತ್ತದಲ್ಲವೇ ?) ಹಾಗಿದ್ದಾಗಲೂ ಆ ಹೆಣ್ಣು ಕೂಡಾ ಗಂಡಿನ ಶೌರ್ಯ–ವೀರ್ಯವನ್ನು ಬಯಸಿ ಆತನ ಪ್ರೀತಿಯನ್ನು ಬಯಸದೇ ಇದ್ದುದಿಲ್ಲ." ಈ ಎಲ್ಲ ಸಂಗತಿಗಳನ್ನು ಒಂದು ತಾತ್ವಿಕ ಚಿಂತನೆಯಲ್ಲಿಟ್ಟು ಮನೋವಿಜ್ಞಾನ, ಜೀವವಿಜ್ಞಾನ, ಸಮಾಜವಿಜ್ಞಾನದ ನೆಲೆಯಲ್ಲಿ ನಿಂತು ಚಿಂತಿಸಿ ಸಾಕಷ್ಟು ಮೂಲದ ಉದಾಹರಣೆ–ವಿಶ್ಲೇಷಣೆಗಳೊಂದಿಗೆ ಮುಂದಿಡು ತ್ತಾರೆ. ಹೆಣ್ಣನ್ನು ವಂಶದ ಸಂತತಿಯ ಸೇವೆಗೂ, ಗಂಡನ್ನು ಆ ಹೆಣ್ಣಿನ ಸೇವೆಗೂ ಮತ್ತು ಹೆಣ್ಣನ್ನೂ ಆಕೆಯಲ್ಲಿಯ ಸಂತತಿಯನ್ನು ಕಾಪಾಡಿಕೊಂಡು ರಕ್ಷಿಸಿಕೊಂಡು ಹೋಗಲಿಕ್ಕೂ ಬದ್ಧಗೊಳಿಸಲಾಗಿತ್ತು; ಕರ್ತವ್ಯವೆಂದು ವಿಧಿಸ ಲಾಗಿತ್ತು. "ನ ಸ್ತ್ರೀ ಸ್ವಾತಂತ್ರ್ಯಮರ್ಹತಿ'–ಎಂಬುದು ಮನುವಿನ ಹೇಳಿಕೆ ಮಾತ್ರವಲ್ಲ. ಇಡೀ ಮಾನವ ಸಮಾಜದ ಸಂಗತಿ" ಎಂಬುದನ್ನು ಗೌರೀಶರು ಸ್ಪಷ್ಟಗೊಳಿಸುತ್ತಾರೆ. ಆದರೆ ಅವರ ವ್ಯಾಖ್ಯಾನದ ದೃಷ್ಟಿಕೋನ ಕೇವಲ ವಸ್ತುಸ್ಥಿತಿಯ ಚಿತ್ರಣದ್ದು. ಅವರ ಸ್ವಂತ ಅಭಿಪ್ರಾಯದ್ದಲ್ಲ.

(ಮನುಸ್ಮೃತಿಯಲ್ಲಿ ಇಂಥ ಸಾಮಾಜಿಕ ಹೊಣೆಯನ್ನು ವಿಂಗಡಿಸಿ ಹೆಣ್ಣನ್ನು ಬಾಲ್ಯದಲ್ಲಿ ತಂದೆಯೂ, ಯೌವನದಲ್ಲಿ ಗಂಡನೂ, ವೃದ್ಧಾಪ್ಯದಲ್ಲಿ ಮಗನೂ ರಕ್ಷಿಸಬೇಕು. ಹೆಣ್ಣನ್ನು ಸ್ವತಂತ್ರವಾಗಿ ಅಂದರೆ ಅರಕ್ಷಿತವಾಗಿ ಬದುಕಲು ಬಿಡಬಾರದು ಎಂಬುದೇ ಮನುವಿನ ಅಭಿಪ್ರಾಯದ ಆಶಯ— ಪಿತಾ ರಕ್ಷತಿ ಕೌಮಾರೇ । ಭರ್ತಾ ರಕ್ಷತಿ ಯೌವನೇ । ರಕ್ಷಂತಿ ಸ್ಥಾವಿರೇ ಪುತ್ರಾ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ । ಮನು ೯, ೩–ಹೀಗೆಂದು ಖ್ಯಾತ ವಿದ್ವಾಂಸ ರಂಗನಾಥ ಶರ್ಮರು ವಿಶ್ಲೇಷಿಸಿದ್ದಾರೆ. ಇದೊಂದು ಸಾಮಾಜಿಕ ಶಿಷ್ಟಾಚಾರ. ಗಂಡಸಿನ ಹೊಣೆಗಾರಿಕೆ ಎಂಬುದರ ಅರ್ಥವನ್ನು ತಿರುಚಿ ಅಪಭ್ರಂಶಗೊಳಿಸಿದ್ದಾರೆ ಎಂಬುದನ್ನು ಸ್ಮರಿಸುವುದು ಯುಕ್ತ.)

ಮುಂದೆ ಮಾನವನ ಜೀವನ ಕ್ರಮದಲ್ಲಿ, ಇತಿಹಾಸದ ಪರಿಕ್ರಮಣದಲ್ಲಿ ಸಾಮಾಜಿಕ ಮನೋಸ್ಥಿತಿಯಲ್ಲಿ ಹೆಣ್ಣು ಬಂಧಿಯಾಗಿ ಗಂಡಿನ ಆಳ್ವಿಕೆಗೆ ದಾಸ್ಯಕ್ಕೆ ಒಳಪಟ್ಟ ಬೆಳವಣಿಗೆಯ ಚಿತ್ರವನ್ನೂ, ಅಲ್ಲಿಯ ಸಾಮಾಜಿಕ ಮಾನಸಿಕ ಸ್ಥಿತ್ಯಂತರದ ಗತಿಯನ್ನೂ ಗೌರೀಶರು ವಿಶ್ಲೇಷಿಸುತ್ತಾರೆ. ಈಗಿನ ಸಾಮಾಜಿಕದಲ್ಲಿಯ ಹೆಣ್ಣು–ಗಂಡನ್ನು ವೀಕ್ಷಿಸುವ ಅವರು :

"ಗಂಡಿನ ದಾಸ್ಯಕ್ಕೆ ಶತಶತಮಾನಗಳಿಂದಲೂ ಸಿಲುಕಿ ಬೇಸತ್ತ ಹೆಣ್ಣು ಜೀವದ ಪ್ರತಿಭಟನೆಯು ತಾನೂ ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯ ಪಡೆಯಬೇಕೆಂಬ ಮನಸ್ಸನ್ನು ಒತ್ತಾಯಪಡಿಸಿ ವಿವಿಧ ಕ್ಷೇತ್ರಗಳಲ್ಲಿ ಧುಮುಕಿ ಗಳಿಕೆಯ ಹವ್ಯಾಸಕ್ಕೆ ತೊಡಗಿತು. ಆದರೂ ಗಂಡಿನ ಶೌರ್ಯ, ವೀರ್ಯ ಅಧಿಕಾರ ಸಾಮರ್ಥ್ಯಕ್ಕೆ ಮೆಚ್ಚಿ ನಲಿಯುವ ಹೆಣ್ಣಿನ ಅತಿ ಪುರಾತನ ಮನೋವೃತ್ತಿ ಅಳಿದಿಲ್ಲ; ಅಳಿಯುವಂತೆಯೂ ಇಲ್ಲ. ಹಣ ಗಳಿಸಿ ಗಂಡಿಗೆ ಗಂಡಾಗಿಯೂ ಬಾಳುವ ಕೌಟುಂಬಿಕ, ಸಾಮಾಜಿಕ ಸ್ಥಾನಮಾನಗಳಲ್ಲಿ ಸರಿಸಾಟಿತನದ ಅವಕಾಶ ಲಭಿಸಿದ್ದರೂ ಸುಸಂಸ್ಕೃತ ಆಧುನಿಕ ಹೆಣ್ಣು ಕೂಡಾ ಗಂಡಿನ ಪ್ರಭಾವಿಯಾಗಿ ಸಮರ್ಥ ಗಂಡಿನ ಪೌರುಷದ ದಾಸ್ಯಕ್ಕೆ ಈಲಾಗುವುದೂ ಈಡಾಗುವುದೂ ನಿಸ್ಸಂದೇಹ." (ಗೌರೀಶರು ಬರೆದಿರುವ ಈ ಕೃತಿ ೧೯೪೭ರಷ್ಟು ಹಿಂದಿನದು.)

ಹೀಗೆ ಸಮತೆ, ಸ್ವಾತಂತ್ರ್ಯದ ಬಂಡು ಹೂಡಿ ಮನೆಯಿಂದ ಹೊರಬಿದ್ದು ತಂದೆಯೊಂದಿಗೋ, ಗಂಡನೊಂದಿಗೋ ಇರುವ ಸಂಕೋಲೆಯನ್ನು ಕಳಚಿಕೊಂಡಂತೆ ಭಾವಿಸಿದ್ದರೂ 'ಒಂದೆಡೆ ಗೆಲುವು ಪಡೆದಾಗಲೇ ಇನ್ನೊಂದೆಡೆಗೆ ಸೋಲು ಪಟ್ಟಿದ್ದು ಕಾಣುತ್ತದೆ. ದುಡಿಯುವಾಗ ಆ ವರಿಷ್ಠಾಧಿಕಾರಿಯದೋ ಪ್ರೊಡ್ಯುಸರನದೋ, ಮ್ಯಾನೇಜರನದೋ ಅಥವಾ ಇನ್ನಾವುದೋ ಮುಖ್ಯಸ್ಥನದೋ ಪ್ರಸನ್ನತೆಗಾಗಿ ಅವಳು ಹಾತೊರೆಯಬೇಕಾದುದು ಅರ್ಥಾತ್ ದಾಸ್ಯಕ್ಕೊಳಗಾಗುವುದು ಹೇಗೆಂದು ವಿವರಿಸಿ 'ಸಮಾಜದ ಎಲ್ಲೆಡೆಯಲ್ಲಿಯೂ ಗಂಡಿನ ಮೇಲುಗೈ ಇರುವ ತನಕವೂ ಹೆಣ್ಣಿಗೆ ಗಂಡಿನ ಅಧೀನತೆ ತಪ್ಪದೆಂಬ ಮಾತು ಮನದಟ್ಟಾಗುತ್ತದೆ' ಎಂದು ವಾಸ್ತವ ಸತ್ಯವನ್ನು ತೆರೆದಿಡುವ ಗೌರೀಶರು, ಅದೇ ಸತ್ಯಾಂಶದ ನೆಲೆಯಲ್ಲಿ 'ಸ್ವಾತಂತ್ರ್ಯ, ನಾಗರಿಕತೆ, ಆರ್ಥಿಕ ಸಮಾನತೆ ಇತ್ಯಾದಿ ಆಂದೋಲನವು ಹೆಣ್ಣಿನ ಸ್ವಾಭಾವಿಕ. ಪುರುಷಾವಲಂಬಿತ್ವದ ಪ್ರವೃತ್ತಿಯನ್ನು ತೊಡೆಯುವುದಿಲ್ಲ' ಎಂಬ ಮಾತನ್ನೂ ಬಿಚ್ಚಿಡುತ್ತಾರೆ.

ಮನೋಶಾಸ್ತ್ರದ ನೆಲೆಯಲ್ಲೇ ಹೆಚ್ಚೆಚ್ಚು ಚಿಂತಿಸಿದ 'ಹೆಣ್ಣು-ಗಂಡು' ಹಾಗೂ 'ಪ್ರೀತಿ' ಎಂಬ ಕೃತಿಯಲ್ಲಿ ಕೇವಲ ವೈಚಾರಿಕವಾಗಿಯೂ ಶೋಧಿಸಿದ ಹಲವಾರು 'ಮಾತು-ಮುತ್ತನ್ನು' ನಮಗೆ ಕಟ್ಟಿಕೊಡುವುದು ದಾಖಲಾರ್ಹ:

"ತತ್ವತಃ ಹೆಣ್ಣು-ಗಂಡು ಅನ್ಯೋನ್ಯ. ಸಮ್ಮುಖವಾಗಿಯೂ, ಸರಿಸಮಾನವಾಗಿಯೂ ಪರಿಪೂರಕವಾಗಿಯೂ ಇರುವ ಎರಡು ಶಕ್ತಿಗಳು. ಅವರೀರ್ವರಲ್ಲಿ ಹೆಚ್ಚು ಕಡಿಮೆ ಎಣಿಸುವುದು ಉಚಿತವಲ್ಲ. ಪ್ರತಿ ವ್ಯಕ್ತಿಯೂ ಅರ್ಧನಾರಿ ನರೇಶ್ವರನೇ. ಹೆಣ್ಣೂ ಹಾಗೇ!"

"ಹೆಣ್ಣಿನ ವ್ಯಕ್ತಿತ್ವದಲ್ಲಿ ಒಳಿತಿಗೆ ಪೋಷಕವಾಗುವ ಗುಣಗಳು ಬೆಳೆಯಲು ಅನುವು ಹೆಚ್ಚು....ವಿನಯ, ಸಾತ್ವಿಕತೆ, ಸೇವಾವೃತ್ತಿ, ಪರೋಪಕಾರ, ಸಹಾನುಭೂತಿ ಇವೆಲ್ಲವು ಹೆಣ್ಣಿನಲ್ಲಿ ಹುಟ್ಟುಗುಣವಾಗಿ ಬಂದುಬಿಡುತ್ತದೆ."

—"ಆದರೆ ಒಂದೆಡೆ ಗಂಡು ಆದರ್ಶವಾದಿಯಾಗಿ ಹೆಣ್ಣು ವ್ಯವಹಾರ ಬುದ್ಧಿಯುಳ್ಳವಳೂ ಆಗಿ ಕಾಣುತ್ತಾಳೆ. ಇನ್ನೊಂದೆಡೆ ಇದು ವಿರುದ್ಧ ದೆಸೆಯಲ್ಲಿ!"

"ಹೆಣ್ಣಿಗೆ ಉದ್ದೇಶ ಹೆಚ್ಚು. ಉದ್ಗಾರ ಕಡಿಮೆ. ಗಂಡಿಗೆ ಉದ್ಗಾರ ಹೆಚ್ಚು, ಉದ್ದೇಶ ಕಡಿಮೆ. ಸ್ವಭಾವದಿಂದಲೇ ಗಂಡು ಮಣಿಸಿ ಆಳುವವನು. ಹೆಣ್ಣು ಒಲಿಸಿ ಆಳುವವಳು."

"ಗಂಡಿಗಿಂತಲೂ ಹೆಣ್ಣು ಹೆಚ್ಚು ಸಾಮಾಜಿಕಳು. ಸಮಾಜಪ್ರಿಯಳು. ಅವಳಲ್ಲಿ ಪರ ಪ್ರಶಂಸಾಪ್ರೇಮ ಹೆಚ್ಚು. ಇದು ಅವಳ ಪರ ಪ್ರತ್ಯಯನೇಯ ಬುದ್ಧಿ. ಗಂಡಿಗಿಂತಲೂ ಹೆಣ್ಣಿನ ಮೇಲೆ ಲೋಕಮತ ಪ್ರಭಾವ ಬಹಳ ಬೇಗ ಆಗುತ್ತದೆ. ಗಂಡಿಗೆ ಈ ರೀತಿ ಜನ ಮರುಳುತನ ಕಡಿಮೆ."

"ಹೆಣ್ಣು ಬಯಕೆಯ ಈಡೇರಿಕೆಗೆ ದುಡುಕಳು. ಅವಳಲ್ಲಿ ದಮನಶಕ್ತಿ ಅಧಿಕ. ಹೆಣ್ಣಿನ ಹೃದಯ ಒಂದು ಸಮಾಧಿ. ಒಳಗೊಳಗೇ ಕುದಿವ ಭೂಕಂಪವಿದ್ದರೂ, ಹೊರ ಮೈಮೇಲೆ ಹುಲ್ಲಿನ ಹಸಿರು ತಂಪನ್ನು ಹಬ್ಬಿಸುವ ಭೂಮಿತಾಯಿ ಹೆಣ್ಣಿನ ಹೃದಯ."

"ಹೆಣ್ಣಿಗೆ ವಿಪರೀತ ಆತ್ಮಗೌರವ. ಆದರೆ ಅಷ್ಟೇ ಆತ್ಮವಿಶ್ವಾಸದ ಅಭಾವ. ಗಂಡು-ಗಂಡಿನಲ್ಲಿ ಭೇದ-ವೈವಿಧ್ಯವಿದ್ದಷ್ಟು ಹೆಣ್ಣು-ಹೆಣ್ಣಿನಲ್ಲಿ ಸಹಸಾ ಕಂಡುಬರುವುದಿಲ್ಲ. ಒಂದು ಹೆಣ್ಣನ್ನು ಅರಿತುಕೊಂಡರೆ ಎಲ್ಲರನ್ನೂ ತಿಳಿದುಕೊಂಡಂತೆಯೇ."

"ಗಂಡಿನಲ್ಲಿ ಹೆಣ್ಣಿನ ಬಗ್ಗೆ ಭೃಂಗವೃತ್ತಿ. ಪ್ರೇಮದಲ್ಲಿ ಏಕನಿಷ್ಠೆ ಇಲ್ಲದಿರುವುದು. ಹೆಣ್ಣಿನಿಂದ ಹೆಣ್ಣಿಗೆ ಹಗುರವಾಗಿ ಹಳಹಳವಿಲ್ಲದೇ ಪ್ರೀತಿ-(ಕಾಮ)ಗಾಗಿ ಹಾಯಬಹುದು. ಆತನಿಗೆ ಕಾಮ(ಪ್ರೀತಿ)ದ ಮಟ್ಟಿಗೆ ಹೆಣ್ಣು

ಹೆಣ್ಣಿನಲ್ಲಿ ವಿಶೇಷ ಅಂತರವೆನಿಸುವುದಿಲ್ಲ. ಹಲವು ಪತ್ನಿಯರನ್ನೋ, ಉಪ ಪತ್ನಿಯರನ್ನೋ, ಪ್ರೇಮಿಕೆಯರನ್ನೋ ಏಕ ಕಾಲಕ್ಕೇ ಬೇರೆ ಬೇರೆಯಾಗಿ ಮನವಾರೆ ಮೆಚ್ಚಬಲ್ಲ, ಮೆಚ್ಚಿಸಬಲ್ಲ."

"ಹೆಣ್ಣು ಒಂದೇ ಸಮಯಕ್ಕೆ ಒಂದಕ್ಕಿಂತ ಹೆಚ್ಚು ಪ್ರೇಮ ಸಂಬಂಧವನ್ನು ಬೆಳೆಸಿಕೊಳ್ಳಲಾರಳು. ಒಬ್ಬ ವಲ್ಲಭ ರಮಣನನ್ನು ಕಳೆದುಕೊಂಡ ನಂತರವೇ ಇನ್ನೊಬ್ಬ ಇನಿಯನ ಸಾನ್ನಿಧ್ಯ ಹೊಂದಬಲ್ಲಳು. ಪತಿ ಇದ್ದಂತೆಯೇ ಅಭಿಸಾರಿಕೆಯಾಗಿ ಇನ್ನೊಬ್ಬ ಪ್ರೇಮಿಯ ತೆಕ್ಕೆಗೆ ಅರ್ಪಿಸಿಕೊಳ್ಳುವಾಗಲೂ ಮನದಾಳದಲ್ಲಿ (ಗಂಡನ ಪ್ರೀತಿಯ ಅಭಾವ) ಇಂಥ ಸ್ಥಿತಿ ಉಂಟಾಗಿರುತ್ತದೆ."

"ಗಂಡಿಗೆ ಋತುವಿಗೊಂದು ರತಿಯಿದ್ದರೂ, ರತಿಗೆ ಒಂದೇ ರಮಣ."

"ಗಂಡಿಗೆ ಭೋಗದ ವಿಷಯ; ಹೆಣ್ಣಿಗೆ ಭಕ್ತಿಯ ವಿಷಯ."

ರತಿ ಮೋಹಕ್ಕೆ ಭೃಂಗವಾಗುವ "ಗಂಡು ಹಾದಿ ತಪ್ಪಿ ಹೆಜ್ಜೆ ಇಡಲು ದುಡುಕುತ್ತಾನೆಂದಾದರೂ ಅನುವಾಗುವುದು ಹೆಣ್ಣಿನ ಅನುಮತಿಯಿಂದ ಮಾತ್ರ. ಆಕೆಯ ಪ್ರಕಟ ಇಲ್ಲವೇ ಮೂಕ ಉತ್ತೇಜನವಿಲ್ಲದೇ ಗಂಡು ಕಾಮಾಚಾರ ಸ್ವೈರಕ್ಕೆ ಒಮ್ಮೆಲೇ ಇಳಿಯುವ ಅತಿ ಪ್ರಸಂಗಕ್ಕಿಳಿಯಲಾರ. ಅನುಮತಿ ಸಿಕ್ಕಮೇಲೆ ಗಂಡು ಅತಿಕ್ರಮಿಸಿ ನೀಚನಾಗಬಹುದು—ಬಲಾತ್ಕಾರದಂತಹ ಕ್ರೂರ ಪ್ರಸಂಗ ಅಪವಾದ ಕ್ರಿಯೆ...."

"ಪರರ ಮನೋಗತವನ್ನು, ಅಂತರಂಗದ ಇಂಗಿತವನ್ನು ಅವರವರ ಮುಖ ಲಕ್ಷಣಗಳಿಂದಲೇ ತಟ್ಟನೇ ತಪ್ಪದೇ ಊಹಿಸುವ ಶಕ್ತಿಯು ಹೆಣ್ಣಿನಲ್ಲಿ ಗಂಡಿಗಿಂತಲೂ ವಿಶೇಷ. ಆದರೆ ಅನ್ಯರಿಗೆ ಮಾತ್ರ ಹೆಣ್ಣೊಂದು ಗೋಪ್ಯ."

"ಹೆಣ್ಣಿನದು ಅನುಸರಣ ಹೆಜ್ಜೆ. ಗಂಡಿಗೇ ಮುಂದಾಗಲು ಬಿಡುವುದು, ತಾನು ಅನುಸರಿಸುವುದು ಸಾಮಾನ್ಯ ಸ್ವಭಾವ. ನೂರಕ್ಕೆ ತೊಂಬತ್ತು ಉದಾಹರಣೆಗಳಲ್ಲಿ ಗಂಡು ಮೊದಲು ಪ್ರೀತಿ ಮಾಡುತ್ತಾನೆ. ಹೆಣ್ಣು ಪ್ರೀತಿ ಮಾಡಲ್ಪಡುತ್ತಾಳೆ."

ಈ ಬಗೆಯಲ್ಲಿ ಹೆಣ್ಣು–ಗಂಡುಗಳ ಕುರಿತು ಪುಂಖಾನುಪುಂಖವಾಗಿ ಮನನೀಯವಾದ, ಮೌಲಿಕವಾದ ವಾಕ್ಯವೃಂದಗಳು ಮುತ್ತಿಕೊಂಡು ನಮ್ಮನ್ನು ಸೆಳೆದುಕೊಳ್ಳುತ್ತದೆ.

ಹೆಣ್ಣು-ಗಂಡಿನಲ್ಲಿಯ ಈ ಬಗೆಯ ವೈಷಮ್ಯ ತಾರತಮ್ಯವೂ, ಮನೋಧರ್ಮದ ವ್ಯತ್ಯಾಸವೂ ಮೂಲಭೂತವೇ? ಈ ವ್ಯತ್ಯಾಸ ಅರ್ಜಿತವೇ? ಅನುಷಂಗಿಕವೇ ? ಎಂಬ ಪ್ರಶ್ನೆಯನ್ನಿರಿಸಿಕೊಂಡು ಬಹುದೀರ್ಘ ಚರ್ಚೆ ಈ ಪ್ರಬಂಧವಲ್ಲಿದೆ. ಎಳೆಎಳೆಯಾಗಿ ಬಿಡಿಸಿ ಕೊಡುತ್ತ ಹೋಗುವ ರಂಜಕವೂ ಬೋಧಕವೂ ಆಗಿರುವ ಚರ್ಚೆಯಲ್ಲಿ ಒಂದೆಡೆ ಗೌರೀಶರು ಹೇಳುವ ಮಾತು— "ಹೆಣ್ಣು ಗಂಡಿನ ವ್ಯತ್ಯಾಸಗಳೆಲ್ಲಾ ಶಾರೀರಿಕ ರಚನೆಯ ಹಾಗೂ ದೈಹಿಕ ಧರ್ಮಗಳ ಹುಚ್ಚು ಚಟಗಳೊಡನೆ ಕೂಡಿಬಂದಿವೆಯಾದರೂ ಅವು ಬಹುಭಾಗ ಸಾಮಾಜಿಕ-ಸುಸ್ಕಾರದ ಫಲವಾಗಿ ಬಂದು ವೈಯಕ್ತಿಕವಾಗಿ ಸಂಪಾದಿಸಲ್ಪಟ್ಟಿರುವವು. ಕೆಲವೊಂದು ಕಾಲಖಂಡದಲ್ಲಿ ಕೆಲವೊಂದು ಭೂಖಂಡದಲ್ಲಿ ಗಂಡು ಸಾವಿರಾರು ಬಗೆಯ ಪಾರಿವಾರಿಕ ಪರಿಸ್ಥಿತಿಗಳ ಪ್ರಭಾವಗಳನ್ನು ಬೀರಿ ತನ್ನ ಉಪಯೋಗ, ಉಪಭೋಗಗಳಿಗಾಗಿ ಕೆಲವೊಂದು ಆದರ್ಶಗಳನ್ನು ಹೆಣ್ಣು ಜೀವನ ಮೇಲೆ ಹೇರಿಬಂದುದರ ಪರಿಣಾಮವಾಗಿ, ಪರಿಪಾಕವಾಗಿಯೇ ಹೆಣ್ಣು ಗಂಡಿನ ಮೂಲ ವ್ಯತ್ಯಾಸವು ಜಟಿಲ, ಕುಟಿಲ ವೈಷಮ್ಯಗಳ ವಿಕೃತ ರೂಪ ತಾಳಿದೆ. ಗಂಡಿಗೆ ವ್ಯಕ್ತಿತ್ವದ ಸರ್ವ ಸ್ವತಂತ್ರಕ್ಕೆ ಆಸ್ಪದವಾಗಿದೆ. ಹೆಣ್ಣಿಗೆ ಶತಮಾನಗಳಿಂದಲೂ ವಿಧೇಯತೆ, ವಿನಯ ಒನಪು, ಒಯ್ಯಾರಗಳನ್ನೇ ಕಲಿಸಲಾಗಿದೆ"-ಎಂಬ ಸ್ಪಷ್ಟತೆಯನ್ನು ಮುಂದಿಡುತ್ತದೆ.

ಹೆಣ್ಣು-ಗಂಡಿನ ಪ್ರೇಮದ ಮೂಲದ ಸೆಲೆಯು 'ಕಾಮ'. ಕಾಮಕ್ಕೆ ಕಲ್ಪನೆ ಕೂಡಿ ಪ್ರೇಮದ ರೂಪವುಂಟಾಗುತ್ತದೆ. ಕಾಮದ ಭಾಷ್ಪೀಭವನವೇ ಪ್ರೇಮದ ಉಗಮ. ಸಂಯಮವಿಲ್ಲದ ಕಾಮುವೇ ಆಕ್ರಮಣ. ಸಂಯಮವುಳ್ಳ ಕಾಮವು ಪ್ರೇಮವಾಗಿ ಮುಂದುವರಿದಿರುತ್ತದೆ. ಆದಿಯಲ್ಲಿ ಇದು ಸಮಾನ ಸ್ಥಿತಿ ಸ್ಥಾನ ಹೊಂದಿದ್ದರೂ-'ಗಂಡು ಹೆಣ್ಣಿನ ಮೇಲೆ ತನ್ನ ಖಾಸಗೀ ಒಡೆತನ ಸ್ಥಾಪಿಸಿ, ಅವನ್ನೆಲ್ಲ ತನ್ನ ವಶವರ್ತಿ, ಆಜ್ಞಾನುವರ್ತಿಯಾಗಿರುವಂತೆ ನೋಡಿಕೊಂಡ'-ಎಂದು ವ್ಯಾಖ್ಯಾನಿಸುವಲ್ಲಿ ಗೌರೀಶರ ವಿಚಾರವಾದೀ ಪ್ರಜ್ಞೆಯು ಗಂಡಿನಲ್ಲಿಯ 'ಬಂಡವಾಳ'ಶಾಹಿತ್ವದ ಶೀಲವನ್ನೇ ಪ್ರಶ್ನಿಸುತ್ತದೆ. ಸಮಾಜವಾದೀ ವೈಚಾರಿಕತೆಯ ಹಿನ್ನೆಲೆಯಲ್ಲಿ ವಿಷಯಗಳನ್ನು ಹಿಂಜಿ ನೋಡುವ ಗೌರೀಶರ ಧ್ವನಿಯು ಹೆಣ್ಣಿನ ಗೌರವ-ಪ್ರತಿಷ್ಠೆಯನ್ನು ಎತ್ತಿ

ಹಿಡಿಯುವುದಕ್ಕಾಗಿ "ದೇವರನ್ನು ಕಿತ್ತೊಗೆದು ಆ ಸ್ಥಾನದಲ್ಲಿ ಹೆಣ್ಣನ್ನು ಕೂಡ್ರಿಸಬೇಕು" ಎಂದೇ ಮೊಳಗಿರುತ್ತದೆ.

ಹಾಗೆಂದು ಗಂಡಿನ ಬಂಡವಾಳಶಾಹಿತ್ವದ ಪ್ರಭುತ್ವದ ಸ್ಥಾನದಲ್ಲಿ ಆತನನ್ನು ಕಿತ್ತು ಹೆಣ್ಣು ಕುಳಿತುಕೊಳ್ಳಬೇಕೆಂಬ 'ಹುಸಿಕ್ರಾಂತಿ'ಯನ್ನು ಪ್ರತಿಪಾದಿಸುವುದಿಲ್ಲ. ಅಲ್ಲಿರುವುದು ಬದುಕಿನ ಸೌಂದರ್ಯದ ಸೌಗಂಧದ ಕಾಳಜಿ. ದಾಂಪತ್ಯ ಕುಟುಂಬದ ಸಾಮರಸ್ಯದ ಮಾಧುರ್ಯಪ್ರಿಯತೆಯನ್ನೇ ಮೆಚ್ಚಿಕೊಳ್ಳುತ್ತಾರೆ. ಕಾಮವು ವಂಶಾಭಿವೃದ್ಧಿಯ ಹೇತುವಿನಿಂದ ಸಾಮಿಪ್ಯಗೊಂಡು ಅದೇ ಪ್ರೀತಿ–ಪ್ರೇಮವಾಹಿನಿಯಾಗಿ ಬೆಸೆದುಕೊಂಡಿರಬೇಕು, ಪರಸ್ಪರಗೊಂಡಿರಬೇಕು. ಈ ಪ್ರೀತಿ ಇಲ್ಲದ ದಾಂಪತ್ಯವೂ ಒಂದು ಧರ್ಮಾಜ್ಞೆ ಪಡೆದ ವ್ಯಭಿಚಾರ. "ಪ್ರೀತಿಯ ಸ್ಪರ್ಶವಿಲ್ಲದವನು ಕತ್ತಲೆಯಲ್ಲಿ ನಡೆಯುತ್ತಾನೆ." ಗಂಡು–ಹೆಣ್ಣು ಅನುಸರಿಸುವ ವ್ಯಭಿಚಾರವು ಕೇವಲ ಕಾಮ ಚಪಲತೆಯೆಂದರ್ಥವಲ್ಲ. ಪರಪುರುಷ, ಪರದಾರಾ ಸಂಬಂಧ ಹೊಂದುವ ಪ್ರವೃತ್ತಿಯಲ್ಲಿ ಗಂಡಿನ ಪ್ರಭುತ್ವ ಪ್ರವೃತ್ತಿ, ಹೆಣ್ಣಿನ ಸಮರ್ಪಣಾ ಪ್ರವೃತ್ತಿಯು ತನ್ನ ಕರಾಮತ್ತನ್ನು ನಡೆಸುತ್ತದೆ. ಕಾಮದಲ್ಲಿ ಅಂತರ್ವಾಹಿನಿಗೊಳ್ಳಬೇಕಾದ ಪ್ರೇಮ ಮಾಧುರ್ಯದ ಅಭಾವ ಎಳಸುತ್ತದೆ—ಎಂದು ಹುಡುಕುವ ಗೌರೀಶರು–"ಸಹವಾಸ ಸುಖದ ಸಾಲೋಕ್ಯದಲ್ಲಿ ದೇಹಗಳ ಸಾಮೀಪ್ಯ ಕೂಡಿ ಭಾವದ ಸಾರೂಪ್ಯದಿಂದ ಆತ್ಮಗಳ ಸಾಯುಜ್ಯವನ್ನು ಸಾಧಿಸುವುದೇ ಮೋಹದಿಂದ ಮೋಕ್ಷಕ್ಕೆ ಒಯ್ಯುವ ಪ್ರೀತಿಯ ಉತ್ಕಂಟತೆ, ದ್ವೈತದಲ್ಲಿ ಸಾಧಿಸಬೇಕಾದ 'ಅದ್ವೈತ' ಯೋಗಾಯೋಗ. ಹೆಣ್ಣು–ಗಂಡು ದ್ವಿಚಕ್ರವಾಹನ 'ಬೈಸಿಕಲ್'ನ ಎರಡು ಚಕ್ರ. ಗಂಡು ತ್ರಾಣ, ಹೆಣ್ಣು ಪ್ರಾಣ. ಹೀಗೆ ಇದರಲ್ಲಿ ಭೇದವೇಕೆ ?" ಎಂಬ ದಿವ್ಯ ಸಾಮರಸ್ಯ ಚಿಂತನೆಯನ್ನು ಕಬ್ಬನ್ನು ಜಗಿದು ರಸ ಹೀರಿಕೊಳ್ಳಬೇಕಾದ ರೀತಿಯಲ್ಲಿ ನಮ್ಮ ಕೈಗಿತ್ತಿದ್ದಾರೆ.

* * *

೧೧

'ಮನೋವಿಜ್ಞಾನ' ಗೌರೀಶರಿಗೆ 'ತತ್ವಶಾಸ್ತ್ರ' ವಿಚಾರ ಸಾಹಿತ್ಯದಷ್ಟೇ ಪ್ರಿಯವಾದ ಶಾಸ್ತ್ರ. ಆ ಪ್ರೀತಿಯ ಆಳವಾದ ಅಧ್ಯಯನವು ಹೊರಬಂದು

ಕನ್ನಡಿಗರ ಕೈಗೆ ಲಭಿಸಿದ್ದು ಸುಕೃತವಷ್ಟೇ ಅಲ್ಲ ; ಗೌರೀಶರನ್ನು ಪ್ರೀತಿಸುವಂತೆ ಮಾಡಿದೆ. ಮನಶಾಸ್ತ್ರದ ಕುರಿತು ಚಿಂತಿಸಿದ, ಸಂಶೋಧಿಸಿ ತತ್ವವನ್ನು ಹೊರ ಚೆಲ್ಲಿದ ಜಗತ್ತಿನ ನಾಮಾಂಕಿತ ಮನಶಾಸ್ತ್ರಜ್ಞ – ಪ್ಲೇಟೋ, ಅರಿಸ್ಟಾಟಲ್, ಥೋಮಸ್ ಹೆಬ್ರಿ, ಡೆಕ್ಯಾರ್ಡೆ, ಜೊನ್ ಲೋಕ್, ಡೆವ್ಹಿಡ್ ಹೂವ್, ವಿಲ್ ಹೆಲ್ಮ್, ಜೋನ್ಸ್, ಫ್ರೆಡ್ ರಿಕ್ ಹರ್ ಬರ್ಟ್, ಫ್ರೆಂರ್ಝ್ ಜೊಃಫಿಗಾಲ, ಸರ್ ಚಾರ್ಲ್ಸ್ ಬೆಲ್, ಚಾರ್ಲ್ಸ್ ಡಾರ್ವಿನ್, ವಿಲ್ ಹೆಲ್ಮೆಂಟ, ವಿಲಿಯಮ್ ಜೇಮ್ಸ್, ಅಲ್ ಫ್ರೆಡ್ ಬಿನೆಟ್, ಇವ್ಹಾನ್ ಪೆಟ್ರೊವಿಟ್, ವೆಲ್ವಗೆಂಗ್, ಕೋಹಲ್, ಡಾ|| ಫ್ರೈಡ್, ಅಲ್ ಫ್ರೆಡ್ ಎಡ್ಲರ್ ಹೀಗೆ ಅನೇಕರ ವಿಚಾರ ವಾಹಿನಿಯಲ್ಲಿ ಈಜಾಡಿ ಅಲ್ಲಿಯ ವಿಚಾರ ಗಂಗೆಯನ್ನು ತಂದು ತಮ್ಮ 'ಮನೋವಿಜ್ಞಾನ'–ಜೀವವಿಜ್ಞಾನ (ಬಾಳಿನ ಗುಟ್ಟು) ವಿಚಾರವಾದ ಮುಂತಾದ ಬರಹಗಳಲ್ಲಿ ನಮಗೆ ಪಾನ ಮಾಡಿಸಿದ್ದಾರೆ. 'ವಿಚಾರವಾದ', 'ಹೆಣ್ಣು ಗಂಡು', 'ಪ್ರೀತಿ' ಮುಂತಾದವುಗಳೆಲ್ಲ ಕೇವಲ ಅವರಲ್ಲಿಯ ಓದಿನ ಪ್ರಭಾವವು ಉಕ್ಕಿ ಸ್ವಂತ ಜಿಜ್ಞಾಸೆಯಲ್ಲಿ ಪ್ರಭೆಗೊಂಡಿವೆ. ಮನೋವಿಜ್ಞಾನದಲ್ಲಿ ಅದು ಹೆಚ್ಚು ಅವತರಣಿಕೆ, ಉದ್ಗೃತ ಆಗಿ ಜಿಜ್ಞಾಸೆ ಲಭಿಸಿದೆ. ಓರ್ವ ಅಧ್ಯಾಪಕನಾಗಿ ಮಕ್ಕಳ ಮನಶ್ಶಾಸ್ತ್ರ ಅರಿತಿರಬೇಕಾದ್ದು ಆದ್ಯ ಹೊಣೆಗಾರಿಕೆಯೆಂಬ ಮಾತಿದೆ. ಆದರೆ ಗೌರೀಶರು ತಮ್ಮ 'ಜೀವವಿಜ್ಞಾನ' ಗ್ರಂಥದಲ್ಲಿ ವಿವರಿಸಿದ್ದು ಅಧ್ಯಾಪಕನಲ್ಲಿರುವ ಪ್ರಾಥಮಿಕ ಜ್ಞಾನವನ್ನಲ್ಲ. ಅದು ಕೇವಲ ಒಂದು ಕನ್ನಡದ ಬರಹವಲ್ಲ. ಮಕ್ಕಳ ಲಾಲನೆ–ಪಾಲನೆ, ಪ್ರವೃತ್ತಿ, ಶೀಲ ಆಸಕ್ತಿ ಸಾಮರ್ಥ್ಯಗಳನ್ನು ಗುರುತಿಸಿಕೊಳ್ಳಲು, ಅವುಗಳನ್ನು ಪಾಲಿಸಲು ಅಗತ್ಯವಾದ ಸುದೀರ್ಘವಾದ, ವಿವರವಾದ ಉನ್ನತ ಚಿಂತನೆಗಳನ್ನೊಳಗೊಂಡಿದೆ ಬರಹ.

ಉದ್ಗೃತ ಸಂಗತಿಗಳನ್ನೂ ತಮ್ಮ ಸ್ವವಿಚಾರದೊಂದಿಗೆ ನಿಕಷನಗೊಳಿಸಿಡುವ ಗೌರೀಶರ ವೈಖರಿಯನ್ನು ನೋಡಿ : ಹೆಗಲ್ ಹೇಳಿದ್ದ "ಪ್ರಪಂಚದ ಇತಿಹಾಸವು ತತ್ವಜ್ಞಾನದ ಇತಿಹಾಸವು ಆದರೆ ಕಾರ್ಲಮಾರ್ಕ್ಸನು– 'ಪ್ರಪಂಚದ ಇತಿಹಾಸವು ಸಮಾಜದಲ್ಲಿಯ ವರ್ಗಕಲಹದ ಇತಿಹಾಸ'ವೆಂದನು. ಆದರೆ ಈ ವರ್ಗಗಳಿಗೆ ಕಲಹ ಮಾಡಿಕೊಳ್ಳಬೇಕೆಂಬ ಕಲ್ಪನೆ ವಿಚಾರ ಯೋಚನೆ–ಯೋಜನೆಗಳು ಹೊಳೆದದ್ದು ಹೇಗೆ? ಅದೆಲ್ಲ ಆಯಾ ವರ್ಗಗಳ

ಕೆಲವಾದರೂ ಮುಂದಾಳುಗಳ ಮನಸ್ಸಿನಲ್ಲಿ ಮೂಡಿಬಂದ ಸಂಗತಿಗಳು ತಾನೆ? ಅಂದರೆ ವರ್ಗಕಲಹದ ಹಿಂದೆ ವಿಚಾರ ಕಲಹ, ವೈಚಾರಿಕ ಘರ್ಷಣೆ ಮೊದಲು ಇರಬೇಕು.” (ಗೌರೀಶರ ವಿಚಾರವಾದ ಕೃತಿಯಲ್ಲಿ ಈ ವಿಷಯ ವಿಷದವಾಗಿ ಚರ್ಚೆ ಅನುರಣನಗೊಂಡಿದ್ದನ್ನು ಗಮನಿಸಬಹುದು.)

—“ಪ್ಲೇಟೋನ ಸಂವಾದಗಳು ಪ್ರಪಂಚದ ಅಮೂಲ್ಯ ನಿಧಿ. ಅವುಗಳಲ್ಲಿ ‘ರಿಪಬ್ಲಿಕ್’ ಅತ್ಯುತ್ತಮವಾದದ್ದು....‘ವ್ಯಾಸ ಮಹರ್ಷಿಯು ಮಹಾಭಾರತದ ಕುರಿತು ತೆಗೆದ ಉದ್ಗಾರ ಪಾಶ್ಚಾತ್ಯ ತತ್ವಪ್ರಪಂಚದ‘ರಿಪಬ್ಲಿಕ್’ಗೆ ಅನ್ವಯಿಸುವಂತಿದೆ. ‘ಯತ್ ಇಹ ಅಸ್ತಿ ತತ್ ಅನ್ಯತ್ರಯತ್, ನ ಇಹ ಅಸ್ತಿ ನ ತತ್ ಕ್ವಚಿತ್ (ಇಲ್ಲಿ ಇದ್ದದ್ದು ಬೇರೆಡೆಗೂ ಇದೆ. ಇಲ್ಲಿ ಇಲ್ಲದ್ದು ಎಲ್ಲಿಯೂ ಇಲ್ಲ.) (ನೋಡಿ : ‘ಗ್ರೀಕ್ ದಾರ್ಶನಿಕರು’ ಗ್ರಂಥ)

ಒಮ್ಮೊಮ್ಮೆ ಗೌರೀಶರು ಬರಹದಲ್ಲಿ ಶಬ್ದಗಳೊಂದಿಗೆ ಚಲ್ಲಾಟವಾಡುವುದನ್ನು ನೋಡಿ :—“ಮನ್ಮಥನು ಮನಸ್ಸನ್ನು ಮಥಿಸಿದಾಗ ಪ್ರೀತಿಯ ಬೆಣ್ಣೆಯು ಹೊರಟಿತು. ಸ್ನೇಹದ ಎಣ್ಣೆಯು ಹರಿಯಿತು. ಕಾಯಜವಾದ, ಆಂಗಿಕವಾದ, ವಾಸನೆಯು ಅನಂಗವಾದ ಅಂಗವನ್ನು ಮೀರಿ, ಅಂಗವು ಎದುರಿಗೆ ಇಲ್ಲವಾದರೂ ಗುಂಗಿನಲ್ಲಿ ಇರಿಸುವಂತಾಯಿತು. ಕಾಮನು ಅನಿರುದ್ಧನು. ಅದಕ್ಕೆ ‘ನಿರೋಧ’ವಿಲ್ಲ. ನೇರವಾದ ಭೋಗವದು. ಭೋಗ ‘ಸ್ಮರ’ವಾದಾಗ ಸ್ಮರಣದಲ್ಲಿ ಸುತ್ತಾಡುತ್ತಿರುವಾಗಲೇ ಪ್ರದ್ಯುಮ್ನವಾಗುವುದು.” ಇಂಥ ಶಬ್ದಲಾಸ್ಯವನ್ನು, ಪ್ರಾಸಬದ್ಧ ವಾಕ್ಯಸರಣಿಯನ್ನು ಎಲ್ಲಾ ಬರಹಗಳುದ್ದಕ್ಕೂ ಪಡೆದು ಆನಂದಿಸುತ್ತೇವೆ.

—‘ಉದಾಸೀನ ವೃತ್ತಿ ; ವೈರಾಗ್ಯ ನಿವೃತ್ತಿ ಪ್ರೀತಿಯ ಪ್ರವೃತ್ತಿಯಲ್ಲ.’—‘ದೂರವಿದ್ದರೂ ದೂರದರ್ಶಿಯಾದ ದೂರಾಲೋಚನೆಯಿಂದ’—(ಪ್ರೀತಿ).

‘ಸಂದೇಹದ ಹೊಟ್ಟೆಯಲ್ಲಿ ಜಿಜ್ಞಾಸೆ ಹುಟ್ಟಬೇಕು. ಬೆರಗಿನಿಂದ ಬೆಳಕು. ಬೆಳಕಿನಿಂದ ಬದುಕು’—(ವಿಚಾರವಾದ) ‘ಗುಣದ ಉತ್ಕರ್ಷಕ್ಕೆ ಪರಿಮಾಣದ ಅಪಕರ್ಷ ಅವಶ್ಯ.’ (ಮಾರ್ಕ್ಸವಾದ)

—ಈ ರೀತಿ ಕಾವ್ಯಮಯ ಪದಪುಂಜಗಳ ರಿಂಗಣ ಕೇವಲ ಶಬ್ದಲಾಸ್ಯವೋ, ವಾಕ್‌ಸರಣಿಯೋ ಆಗಿರದೆ ಅರ್ಥಾನುವರ್ತಿಯ ಸತ್ವವನ್ನು

ವ್ಯಾಪ್ತಿಯನ್ನೂ ತುಂಬಿಕೊಂಡಿರುತ್ತವೆ ಎಂಬುದು ಗಮನಾರ್ಹ-ಗೌರೀಶರು 'ವಾಕ್ಸರಣಿ' ಎಂಬ ಪದಕ್ಕೆ (ಇಂಗ್ಲೀಷಿನ Diction ಎಂಬ ಶಬ್ದಕ್ಕೆ ಸಮಾನ) ಕನ್ನಡದಲ್ಲಿ 'ಶಬ್ದಶಯ್ಯೆ' ಅಥವಾ 'ಪದಮೈತ್ರಿ' ಎಂದು ಹೊಸ ಶಬ್ದ ಪ್ರಯೋಗವನ್ನೇ ಮಾಡಿದ್ದಾರೆ.

ಹೀಗೆ ಗಂಭೀರ ವೈಚಾರಿಕ ಬರಹವೂ ಅವರ ವಿಶಿಷ್ಟ ವಿಚಾರ ಸರಣಿಯ ಮೂಲಕ ಸುವಾಚ್ಯವಾಗಿ, ಸುಬೋಧಕವಾಗಿ, ರಸವತ್ತಾಗಿ ಸಾದರಗೊಂಡು ಅನನ್ಯವೆನಿಸಿಕೊಳ್ಳುತ್ತದೆ.

* * *

೧೨

ಗೌರೀಶರು ಕಾರ್ಲಮಾರ್ಕ್ಸ್‌ನನ್ನು ಬಹುವಾಗಿ ಮೆಚ್ಚಿಕೊಂಡವರು. ಅವನನ್ನೂ ಆತನ ವಿಚಾರಧಾರೆಯನ್ನೂ ಪ್ರೀತಿಸಿ ಸ್ವೀಕರಿಸಿಕೊಂಡವರು. ರಾಜಕೀಯ ಕ್ಷೇತ್ರದಲ್ಲಿ ಆಸಕ್ತಿಯನ್ನು ತೋರಿಸಿಕೊಂಡಿದ್ದ ಅಂದಿನ ಸಮಯದಲ್ಲಿ ಗೌರೀಶರು ನಿರ್ದಿಷ್ಟಕಾರ್ಯಕರ್ತರಂತೆ ಒಂದು ಪಕ್ಷದ ಕಾರ್ಯದಲ್ಲಿ ಬದ್ಧಗೊಳಿಸಿಕೊಂಡಿರದಿದ್ದರೂ ಬೌದ್ಧಿಕ ಸ್ತರದಲ್ಲಿ ಮಾತ್ರ ಸಂಚಲನವಾಗಿದ್ದರೂ ಜನ ಅವರನ್ನು 'ಸೋಶಿಯಾಲಿಷ್ಟ ಪಾರ್ಟಿ'ಯವರು ಎಂದೇ ಗೆರೆ ಎಳೆಯುತ್ತಿದ್ದುದುಂಟು. ಉತ್ತರ ಕನ್ನಡದ ಆಚಾರ್ಯ ಕೃಪಲಾನಿ-ಸುಚೇತಾ ಕೃಪಲಾನಿ ಅಂದರೆ ಈ ಗೌರೀಶ ಕಾಯ್ಕಿಣಿ-ಶಾಂತಾ ಕಾಯ್ಕಿಣಿ ದಂಪತಿಗಳು ಎಂದು ಜನ ಆಡಿಕೊಳ್ಳುತ್ತಿದ್ದುದು ಕೇಳಿಬರುತ್ತಲಿತ್ತು. ಆಗ ಗೌರೀಶರದು 'ಪ್ರಜಾ ಸಮಾಜವಾದಿ ಪಕ್ಷದ ಪ್ರತಿಪಾದನೆಯಾಗಿದ್ದರೆ, ಪತ್ನಿ ಶಾಂತಾ ಅವರದು ಅವಿಭಕ್ತ ಕಾಂಗ್ರೆಸ್ ಪಕ್ಷದ ಅನುಯಾಯಿತ್ವ. ಈ ಪರಸ್ಪರ ವಿರುದ್ಧ ದಿಸೆಯಲ್ಲಿ ವಾಕ್ ವಿವಾದ ಸ್ವಗೃಹವೇದಿಕೆಯಲ್ಲಿ. ಜನಕ್ಕೆ ವಿನೋದ ಬೌದ್ಧಿಕ ಪ್ರಾಜ್ಞತೆಯುಳ್ಳ ಅವರಲ್ಲಿ ಈ ಬಗೆಯ ವೈಚಾರಿಕ ಭಿನ್ನ ಧೋರಣೆಯು ಎಂದೂ ಖಾಸಗೀ-ವೈಯಕ್ತಿಕ ಭಿನ್ನತೆಯನ್ನಾಗಲೀ-ಭಿನ್ನಾಭಿಪ್ರಾಯವನ್ನಾಗಲೀ ಉಂಟುಮಾಡದಂತಿದ್ದ ಬೌದ್ಧಿಕ ನಿರ್ಲಿಪ್ತತೆಯ ಹದವಿತ್ತು.

ಪ್ರಜಾ ಸಮಾಜವಾದೀ ಪಕ್ಷದ ಉ. ಕ. ಜಿಲ್ಲೆಯ ಮಹಾನಾಯಕ ದಿನಕರ ದೇಸಾಯಿಯವರೊಂದಿಗೆ ಗೌರೀಶರದು ನಿಕಟ ಒಡನಾಟ, ಸ್ನೇಹ

ಸಂಬಂಧ ಬೆಸೆದುಕೊಂಡಿದ್ದುದರಿಂದಾಗಿ ಅವರನ್ನು ಆ ಪಕ್ಷದೊಂದಿಗೆ ಗುರುತಿಸಲು ಕಾರಣವಾಗಿದ್ದಿರಬಹುದು. ಹಾಗೆ ನೋಡಿದರೆ ಗೌರೀಶರು ಶಿಕ್ಷಕ ವೃತ್ತಿಯಲ್ಲಿದ್ದ ಕಾರಣದಿಂದಲೋ ಏನೋ ಅಧಿಕೃತವಾಗಿ ರಾಜಕೀಯಕ್ಕೆ ಧುಮಿಕಿದ್ದಿಲ್ಲ. ಒಮ್ಮೆ ಮಾತ್ರ ಶಿಕ್ಷಕ ಮತಕ್ಷೇತ್ರದಿಂದಲೇ ವಿಧಾನ ಪರಿಷತ್ತಿಗೆ ಸ್ಪರ್ಧಿಸಿ (ಕಾಂಗ್ರೆಸ್ ವಿಭಾಗಿಸಲ್ಪಟ್ಟಮೇಲೆ) ಸೋಲುಂಡಿದ್ದರು. ಇಬ್ಭಾಗಗೊಂಡ ಕಾಂಗ್ರೆಸ್ಸಿನ ವಿಮುಖ ಶಾಖೆಯಲ್ಲಿ ಪ್ರಜಾ ಸಮಾಜವಾದಿ ಪಕ್ಷವೂ ಲೀನಗೊಂಡ ನಂತರ ಸ್ವಾಭಾವಿಕವಾಗಿಯೇ ಗೌರೀಶರ ಭಾವನಾತ್ಮಕ ಒಲವು ಅತ್ತ ಹೊಂದಿಕೊಂಡಿತು. ಆದರೆ ಅವರ ವೈಚಾರಿಕ ನಿಲುವು ಮಾರ್ಕ್ಸ್ ಪ್ರಣೀತ ವಿಚಾರವಾದೀ–ಸಮಾಜವಾದೀ ಧೋರಣೆಯಲ್ಲೇ ವಿಹರಿಸುತ್ತಲಿದೆ.

ಗೌರೀಶರು ಓರ್ವ ಶ್ರೇಷ್ಠ ಗಣ್ಯ ವಿಚಾರವಾದೀ ಲೇಖಕರೆಂದು ಗುರುತಿಸಲ್ಪಟ್ಟಂತೆ ಅವರ ಎಲ್ಲ ವೈಚಾರಿಕ ಬರಹಗಳು ಮಾರ್ಕ್ಸ್‌ವಿಚಾರದ ಸೆಲೆನೆಲೆಯಲ್ಲಿಯೇ ಪ್ರವಹಿಸಿ, ಪರಿವೇಷ್ಟನಗೊಂಡು ಚಹರೆಗೊಳ್ಳುವುದನ್ನೂ ಮನಗಾಣಬಹುದು. ಆದರೆ ಅದೇ ಪ್ರಭೆ–ಪ್ರಭಾವ ಅಲ್ಲ. ಸ್ವಯಂಭಾವದ ತೊರೆ–ತ್ವರೆ ಅಲ್ಲಿ ಪರಿಪುಷ್ಟವಾಗಿದೆ. ತನ್ನಷ್ಟಕ್ಕೇ ತನ್ನ ಇರುವನ್ನು ಕಂಡುಕೊಂಡಿದೆ.

ಅವರು ಕನ್ನಡಕ್ಕೆ ನೀಡಿರುವ 'ಮಾರ್ಕ್ಸ್‌ವಾದ' ಎಂಬ ಹೊತ್ತಿಗೆಯ ಉದ್ದೇಶವೂ ಆ ಉತ್ಕಂಠತೆಯನ್ನು ಉಕ್ಕಿಸಿದೆ. ಪ್ರಬೋಧಕವಾಗಿಸಿದೆ.

"'ಮಾರ್ಕ್ಸ್‌ವಾದ', ಕನ್ನಡದಲ್ಲಿ ಮಾರ್ಕ್ಸ್‌ನ ವಿಚಾರಧಾರೆಯನ್ನು ಪರಿಚಯ ಮಾಡಿಕೊಡುವ ಪ್ರಪ್ರಥಮ ಸ್ವತಂತ್ರ ಕೃತಿ. ಇದಕ್ಕಿಂತ ಮೊದಲು ನಿರಂಜನರ ಅನುವಾದ ಗ್ರಂಥವೊಂದೇ ಈ ಕುರಿತಾಗಿದ್ದ ಕೃತಿ–ಈ ಮಾತು ಅರ್ಧ ಸತ್ಯ. ನಿರಂಜನರು ನೀಡಿದ ಅನುವಾದ ಕೃತಿ ನೇರ ಅನುವಾದು. ಗೌರೀಶರದು 'ಮಾರ್ಕ್ಸ್‌ವಾದ'ವನ್ನು ಚರ್ಚಿಸಿ ಅದನ್ನು ಬಿಂಬಿಸಲು ಪ್ರಯತ್ನಿಸುವ ಬೋಧಕ ಮಾರ್ಗ. ಅಲ್ಲಿಯ ಸುವರ್ಣದ 'ಘಟ್ಟಿ'ಯನ್ನು ತಂದು ಅದಕ್ಕೆ ಒಪ್ಪಹಾಕಿ ದೇಶೀಯ ಶೈಲಿಯಲ್ಲಿ ಕಲಾಕುಸುರು Design ಗೊಳಿಸಿ ಕಂಠಾಭರಣವನ್ನೋ, ತೋಳಬಂದಿಯನ್ನೋ ಸಿದ್ಧಗೊಳಿಸಿ ಕೊಡುವ ಚಿನಿವಾಲನಂತೆ ಗೌರೀಶರ ಕಾರ್ಯ. ಮಾರ್ಕ್ಸ್ ಚಿಂತನೆಯನ್ನು ಮತಿತಾರ್ಥ–ಚಿಂತಿತಾರ್ಥದೊಂದಿಗೆ 'ಉಪನ್ಯಾಸ'ಗೊಳಿಸುವ ಕೃತಿಯಾಗಿರುವುದರಿಂದ ಪೂರ್ಣ ಸ್ವತಂತ್ರ

ಕೃತಿ. "ಈ ಶತಮಾನದ ಬೌದ್ಧಿಕ ಪ್ರಜ್ಞೆಯನ್ನು ಆಧುನೀಕರಿಸುವ ಪ್ರಕ್ರಿಯೆ ಯಲ್ಲಿ ಮಹತ್ವದ ಕೆಲಸ ಮಾಡಿದ ಪ್ರಮುಖ ಪ್ರವೇಶಿಕೆಗಳಾಗಿ ಗೌರೀಶರ 'ಮಾರ್ಕ್ಸವಾದ', ಮನೋವಿಜ್ಞಾನದ ಗ್ರಂಥಗಳು ಹಾಗೂ 'ಪಶ್ಚಿಮದ ಪ್ರತಿಭೆ' ಇವುಗಳಿಗೆ ಐತಿಹಾಸಿಕ ಮಹತ್ವವಿದೆ" (ಡಾ|| ಎಂ. ಜಿ. ಹೆಗಡೆ) ಎಂದು ಹೇಳಿರುವುದರಲ್ಲಿ ಅತಿಶಯೋಕ್ತಿಯಿಲ್ಲ.

* * *

೧೩

"ಕಾರ್ಲಮಾರ್ಕ್ಸನು ಒಬ್ಬ ಯಹೂದಿ ವಕೀಲನ ಮಗನು. ಅವನು ಹುಟ್ಟಿದ್ದು ಜರ್ಮನಿಯ ಪ್ರುಸಿಯಾ ಪ್ರಾಂತದ ರ್‍ಹಾಹಿನ್ ಪ್ರದೇಶದ ಟ್ರೀವ್ಹ್ಸ್ ಎಂಬ ಊರಿನಲ್ಲಿ ; ೧೮೧೮ನೆಯ ವರ್ಷದ ಮೇ ತಿಂಗಳ ೫ನೆಯ ದಿನದಲ್ಲಿ. ಕಾರ್ಲನು ಆರು ವರ್ಷದವನಿದ್ದಾಗಲೇ ಅವನ ತಂದೆಯು ಸಕುಟುಂಬ ವಾಗಿ ಕ್ರೈಸ್ತಧರ್ಮವನ್ನು ಸ್ವೀಕರಿಸಿದನು. ಅವರು ಪ್ರೊಟೆಸ್ಟಂಟ ಪಂಥದವ ರಾದರು." —ಹೀಗೆ ಕಾರ್ಲಮಾರ್ಕ್ಸನ ಹುಟ್ಟು ಬೆಳವಣಿಗೆಯ ಕಿರು ಪರಿಚಯದ ರೇಖೆಯನ್ನೆಳೆದು ಪ್ರಾಥಮಿಕ ಪರಿಚಯವನ್ನಿತ್ತು ಮಾರ್ಕ್ಸನ ಬೆಳೆದುಕೊಂಡ ವ್ಯಕ್ತಿತ್ವದ ಮಹತ್ವವನ್ನು ಗೌರೀಶರು ಹೀಗೆ ದಾಖಲಿಸು ತ್ತಾರೆ :

"ಕಾರ್ಲಮಾರ್ಕ್ಸನು ಮಹಾಪುರುಷನು. ಮನ್ವಂತರವನ್ನೇ ಮಾರ್ಪಡಿ ಸುವ ಮಹಾವಿಚಾರಧಾರೆಯನ್ನೇ ಹರಿಸಿ ಹೋದ—ದೀನದಲಿತ ಜನತೆಯ ಭಾಗ್ಯವನ್ನು ಹರಿಸಿಹೋದ ಪ್ರತಿಭಾವಂತನು ! ವಿಶ್ವಕ್ರಾಂತಿಯ ಮಂತ್ರ ವನ್ನೂ ತಂತ್ರವನ್ನೂ ಅರಿತು ಅರುಹಿದ ಋಷಿಯೇ ಈತನೆಂದರೆ ಅತ್ಯುಕ್ತಿ ಯಾಗಲಾರದು. ಋಷಿಯಾಗಲು ಬೇಕಾದ ಕ್ರಾಂತಿಯ ದರ್ಶನ ಆಯಿತು. ಇವನ ತತ್ವದಿಂದ ಪ್ರೇರಣೆ ಪಡೆದವರನೇಕರು ತಮ್ಮ ತಮ್ಮ ದೇಶಕ್ಕೆ ಮಹಾ ಯುಗಪುರುಷರೆನಿಸಿಕೊಂಡರು. ೧೯೧೭ರಲ್ಲಿ ರಶಿಯಾದಲ್ಲಿ ಕಮ್ಯುನಿಸ್ಟ ಕ್ರಾಂತಿ ಯಾಯಿತು. ಧ್ವಜವು ಲೆನಿನ್‍ನದಾದರೂ ಅವರಿಗೆ ಸ್ಫುರಣವಿತ್ತ ಧ್ವನಿಯು ಕಾರ್ಲಮಾರ್ಕ್ಸನದೇ ! ಇಂದು ಜಗತ್ತಿನಲ್ಲಿ ಕಮ್ಯುನಿಸ್ಟ ಬಿರುಗಾಳಿಯು

ಬೀಸುತ್ತಿರುವಲ್ಲೆಲ್ಲ, ಆ ಕೆಂಪು ಮಿಂಚಿನ ಗುಡುಗಿನಲ್ಲೆಲ್ಲ ಕಾರ್ಲಮಾರ್ಕ್ಸನ ಅಶರೀರವಾಣಿಯೇ ಮೊಳಗುತ್ತದೆ."

"ಕಾರ್ಲಮಾರ್ಕ್ಸನು ಶಾಸ್ತ್ರೀಯವಾದ ಸಾಮ್ಯವಾದವನ್ನು (ಕಮ್ಯುನಿಸಂ ತತ್ವವನ್ನು) ಪ್ರತಿಪಾದಿಸಿದನು; ಪ್ರತಿಷ್ಠಾಪಿಸಿದನು. ಆಧುನಿಕ ಕಮ್ಯುನಿಸ್ಟ ಮತದ ಎಲ್ಲ ಸಿದ್ಧಾಂತ ಪದ್ಧತಿಗಳಿಗಾಗಿ ಅವನೇ ಆದ್ಯ ಆಚಾರ್ಯನು. ಈ ಮತದ ಪ್ರಭಾವವು ಇನ್ನೂ ಹೆಚ್ಚಾಗಿ ಇಂದಿನಿಗಿಂತಲೂ ಹಿರಿದಾಗಿ ಕಂಡು ಬರದೇ ಹೋಗಲಿಕ್ಕಿಲ್ಲವೆಂದು ನನ್ನ ಮತ." (ಇದು ೧೯೪೯ರಲ್ಲೇ ಗೌರೀಶರು ಬರೆದ ಕೃತಿ)

ಗೌರೀಶರು ಹೀಗೆ ಅಭಿಪ್ರಾಯಪಡುವಾಗ ಅವರಲ್ಲಿ ತುಂಬಿಕೊಂಡಿರುವ ಮಾರ್ಕ್ಸ ತತ್ವದ ಪ್ರೀತಿ, ಶ್ರದ್ಧೆ ಎಷ್ಟು ಗಾಢವಾಗಿತ್ತು, ಆ ಬಗ್ಗೆ ಎಷ್ಟು ಭರವಸೆಯುಂಟಾಗಿತ್ತು ಎಂಬುದು ವೇದ್ಯ. ಇದು ರಾಜಕೀಯದ ಚರಿತ್ರೆಯ ಮಾತಾಗಿ ಆಡಿದ್ದಲ್ಲ. 'ಈ ಒಲವಿನ ತಾಳಿ ಉದ್ದಕ್ಕೂ ಬಾಳಿ' ನಡೆದಿದೆ.

"ಮಾರ್ಕ್ಸನ ಸಿದ್ಧಾಂತಗಳು, ಸುಸಂಗತಿಗಳು ಮತ್ತು ಪ್ರಾಮಾಣಿಕತೆಗಳು ಹೇಳತಕ್ಕಂಥವಾಗಿವೆ. ಅವು ಎಷ್ಟು ಸುಸಂಗತ ಹಾಗೂ ಸಪ್ರಾಮಾಣಿಕವಾಗಿರುವುದೆಂಬುದನ್ನು ಅವನ ಮತದ ವಿರೋಧಿಗಳೂ ಕೂಡ ಒಪ್ಪಿಕೊಳ್ಳುತ್ತಾರೆ"—ಎಂದ ಈ ಮಾತಿನಲ್ಲಿ ಗೌರೀಶರ ಗ್ರಹೀತ ಭಾವನೆ ಸುಸ್ಪಷ್ಟ. ಮುಂದುವರಿದ ಅವರ ಸ್ವವಿವೇಚನೆಯಲ್ಲಿ 'ಮಾರ್ಕ್ಸನ ಮತವು ಅತ್ಯಂತ ವ್ಯಾಪಕವಾಗಿಕೊಂಡಿದೆ. ಅದು ಆಧುನಿಕ ಭೌತಿಕ ವಾದವನ್ನೂ, ಶಾಸ್ತ್ರೀಯ ಸಮಾಜ ವಾದವನ್ನೂ ಒಳಪಟ್ಟಿದೆ. ಬರೇ ವಿಚಾರ ಕ್ಷೇತ್ರದ ತಾತ್ವಿಕವಾದವಾಗಿ ಅದು ನಿಂತಿಲ್ಲ. ಒಂದು ಶಕ್ತಿ, ಒಂದು ಸ್ಫೂರ್ತಿ, ಒಂದು ಸಂಘಟನೆಯೇ ಆಗಿ ಆ ವಾದ ವ್ಯವಹರಿಸುತ್ತಿದೆ' ಎಂದಿದ್ದಾರೆ.

'ಮಾರ್ಕ್ಸವಾದಿಗಳು ಆ ವಾದವನ್ನು ಬರೇ ಮಂತ್ರದಂತೆ ಜಪಿಸುತ್ತಿಲ್ಲ; ಧರ್ಮದಂತೆ ನಂಬುತ್ತಾರೆ. ಭಕ್ತಿಯಂತೆ ನೆಚ್ಚುತ್ತಾರೆ. ವ್ರತದಂತೆ ನಡೆಯಿಸುತ್ತಾರೆ. ಜಗತ್ತಿನ ಎಲ್ಲಾ ನಾಗರಿಕ ಮತ್ತು ಸುಸಂಸ್ಕೃತ ದೇಶದಲ್ಲಿ ನಡೆಯುತ್ತಿರುವ ದುಡಿಮೆಗಾರರ ಚಳುವಳಿಗೂ ಈ ವಾದವು ಒಂದು ಸಿದ್ಧಾಂತವನ್ನೂ, ಒಂದು ಕಾರ್ಯವನ್ನೂ, ಹಿಡಿಯಲಿಕ್ಕೆ ಒಂದು ಧ್ವಜವನ್ನೂ, ನುಡಿಯಲಿಕ್ಕೆ

ಒಂದು ಧ್ವನಿಯನ್ನೂ, ದುಡಿದು–ಮಡಿಯಲಿಕ್ಕೆ ಒಂದು ಧ್ಯೇಯವನ್ನೂ ದಯ ಪಾಲಿಸುತ್ತದೆ'–ಎಂದು ಗೌರೀಶರ ಅಭಿಪ್ರಾಯ ತೋರೆಯುತ್ತದೆ.

ಈ ಮಾರ್ಕ್ಸವಾದಕ್ಕೆ ಒಂದು ಜಾಗತಿಕ ದೃಷ್ಟಿಯ ವಿಶ್ವವ್ಯಾಪಕ ತತ್ವ ಜ್ಞಾನವಿದೆ ಎಂಬುದನ್ನು ವಿಶ್ಲೇಷಿಸಿ ಅದರ ಸ್ಥೂಲ ದಾರ್ಶನಿಕ ಸ್ವರೂಪ ವನ್ನೂ, ಸಿದ್ಧಾಂತವನ್ನೂ ಪರಿಚಯಿಸಲು ಮುಂದುವರಿಯುತ್ತಾರೆ. ಆಗ ಅಂಥ ತನ್ನ ಕಾರ್ಯವು ಬರೇ ದೂರದರ್ಶನವೇ ಹೊರತು ಸೂಕ್ಷ್ಮದರ್ಶನ ವಲ್ಲವೆಂದು ಹೇಳಿಕೊಳ್ಳುವ ಗೌರೀಶರ ವಿನಯ ಬಹು ಎತ್ತರದ್ದಾಗಿಯೇ ಗೋಚರವಾಗುತ್ತದೆ.

ಮಾರ್ಕ್ಸವಾದದ ತತ್ವಜ್ಞಾನವನ್ನು ವಿಶ್ಲೇಷಿಸುವಾಗ ಅದರಲ್ಲಿ ಮುಖ್ಯ ವಾಗಿ ಅಡಕಗೊಂಡಿರುವುದು – (೧) ಭೌತಿಕ ತತ್ವಜ್ಞಾನ, (೨) ವಿರೋಧ ವಿಕಾಸ ಕ್ರಮದ ಸಿದ್ಧಾಂತ ಮತ್ತು (೩) ಐತಿಹಾಸಿಕ ಉಪಪತ್ತಿ–ಎಂದು ಮೂರು ಖಂಡಗಳನ್ನು ಮಾಡಿಕೊಂಡು ಪರಿಚಯಿಸುತ್ತಾರೆ

'ಭೌತಿಕ ತತ್ವಜ್ಞಾನ' ಗೌರೀಶರ ಬುದ್ಧಿ–ಮನಸ್ಸುಗಳನ್ನೆಲ್ಲಾ ವ್ಯಾಪಿಸಿಕೊಂಡ ಸಂಗತಿ. ಆ ಕುರಿತು ಅವರ ಚಿಂತನೆ ಅಧ್ಯಯನ ಬಹಳ ವಿಸ್ತಾರವಾದುದು. ಇಲ್ಲಿ ಇದು (ಭೌತಿಕ ತತ್ವ) ಒಂದು ಹಕ್ಕಿನೋಟ ಮಾತ್ರ. ಇದೊಂದೇ ವಿಷಯಕ್ಕಾಗಿ ಸಾವಿರ ಪುಟಗಳನ್ನೂ ಬರೆಯಬಹುದು' –ಎಂದು ಹೇಳಿರುವ ಗೌರೀಶರ ನಿವೇದನೆ ಕೇವಲ ಸಾಂದರ್ಭಿಕವಲ್ಲ. ಗೌರೀಶ ರನ್ನು ಬಲ್ಲವರಿಗೆ ಈ ಮಾತಿನ ಹಿಂದೆ ತುಂಬಿ ತುಳುಕುವುದು ಅವರೊಳಗಿನ 'ಸತ್ವ' ಎಂಬುದು ಗೊತ್ತಿದೆ. ಹಾಗೂ ಭೌತಿಕ ತತ್ವದ ವೈಶಾಲ್ಯತೆ ಎಷ್ಟು ಗಂಭೀರ ಎಂಬುದನ್ನೂ ಧ್ವನಿಸುತ್ತದೆ.

"ತತ್ವಜ್ಞಾನದಲ್ಲಿ ಮುಖ್ಯವಾಗಿ ಎರಡು ಪಂಗಡ : ೧. ಆದರ್ಶವಾದಿ ೨. ಭೌತಿಕವಾದಿ."

—"ಪ್ರಕೃತಿಗಿಂತ ಆತ್ಮ ಮೊದಲು. ನಿಸರ್ಗ ಚೇತನೆಯೇ ಮೂಲ ಎಂದು ಪ್ರತಿಪಾದಿಸುವವರನ್ನು ಆದರ್ಶವಾದಿಗಳೆಂದು ಕರೆಯಬಹುದು. ಇವರಿಗೆ 'ಆಯ್‌ಡಿಯಾಲಿಸ್ಟ' ಎನ್ನಬಹುದು. ಈ ವಾದದ ಒಳಭೇದಗಳು ಬಹಳ ಇವೆ (ಗೌರೀಶರು ಈ ಕುರಿತೇ ಒಂದು ಬೃಹತ್ ಗ್ರಂಥವನ್ನು ಬರೆದಾರು.) ವಸ್ತುಗಿಂತ ತತ್ವ; ಆಚಾರಕ್ಕಿಂತ ವಿಚಾರ, ಕೃತಿಗಿಂತ ಪ್ರವೃತ್ತಿ ;

ಜೀವನಕ್ಕಿಂತ ಕಲೆ, ಪುರುಷಾರ್ಥಕ್ಕಿಂತ ಪರಮಾರ್ಥ—ಇವೆಲ್ಲಾ ಶ್ರೇಷ್ಠವೆಂದು ಅನ್ನುವವರೆಲ್ಲ 'ಆದರ್ಶವಾದಿ'ಗಳ 'ಗೋತ್ರದವರೇ' ಸರಿ."(ಗೌರೀಶರ ಒಟ್ಟಾರೆ ಬರಹದಲ್ಲೂ ಬಳಸುವ ಶಬ್ದಗಳಲ್ಲಿ ಅಗಾಧ ಅರ್ಥವ್ಯಾಪ್ತಿ, ಪ್ರತಿಮೆಗಳು ತುಂಬಿರುವುದನ್ನೂ ಗಮನಿಸಬೇಕು.)

'ಇದಕ್ಕೆ ಪ್ರತಿಯಾಗಿ ನಿಂತ ಗೋತ್ರ ಭೌತಿಕವಾದುದು. ವಾಸ್ತವವಾದುದು. ಜಡದಿಂದ ಜೀವ, ನಿಸರ್ಗವೇ ಮೂಲ, ಚೇತನೆ ಅದರ ಫಲ. ಪ್ರಕೃತಿ ಅಥವಾ ಸೃಷ್ಟಿ ಒಂದು ಪೂರ್ವ ಯೋಜನೆ ಅಥವಾ ಕಲ್ಪನೆಯಿಂದ ನಿರ್ಮಿತವಾದದ್ದಲ್ಲ. ಪದಾರ್ಥವೇ ಅನಾದಿ, ಅನಂತವೆಂದು ಸಾಧಿಸುವ ಬೇರೆ ಬೇರೆ ವಾದಗಳೆಲ್ಲವೂ ಭೌತಿಕ ವಾದಿಗಳ ಸಂಗಡದವು. ಇದು 'ಮೆಟೀರಿಯಾಲಿಝಂ', 'ಮ್ಯಾಟರ್'—ಅಂದರೆ ಅಳೆಯಬಹುದಾದ, ಅರಿಯಬಹುದಾದ ಪದಾರ್ಥ. ವಸ್ತುಜಾತ, ನಿಸರ್ಗವೆಂದೆನಿಸಿಕೊಳ್ಳುವ ವಿಶ್ವದ ಮೂಲದ್ರವ್ಯ. ಆದರೆ 'ಆದರ್ಶವಾದ'ವೆಂಬುದು ಮೊದಲು 'ಚಿತ್'—ವ್ಯಾಪಾರ. ಆಮೇಲೇ ವಿಶ್ವದ ವ್ಯವಹಾರ. ಮೊದಲು ತತ್ವ, ಆಮೇಲೆ ನಿಸರ್ಗ. ಮಾರ್ಕ್ಸ್‌ವಾದ (ಭೌತಿಕ ತತ್ವ)ದ ದೃಷ್ಟಿಯಲ್ಲಿ ಇದು (ಆದರ್ಶವಾದದ ತತ್ವ) ಬುಡಮೇಲಾಗಿ ನಿಂತಂತೆ'—ಹೀಗೆ ಚರ್ಚಿಸುತ್ತ ಭೌತಿಕವಾದದ ಎಡ-ಬಲ, ಪರ-ವಿರೋಧ, ಸಂದೇಹ ಸಂದಿಗ್ಧಗಳ, ಜಡಕು-ಮೆಲಕುಗಳ ಎಳೆ(ನೂಲು)ಗಳನ್ನೆಲ್ಲಾ ಸಿಧಾನವಾಗಿ ವಿವೇಕದಿಂದ ಬಿಡಿಸಿ ಬಿಡಿಸಿ ಅದರ ದಿಗ್ದರ್ಶನವನ್ನು ಗೌರೀಶರು ಮಾಡಿಸುತ್ತಾರೆ (ಶ್ರವ್ಯದರ್ಶನ !).

ಹಾಗೆ ಪ್ರದರ್ಶಿಸುತ್ತಾ—"ಭೌತಿಕ ತತ್ವವು ಒಂದು ಕಾರ್ಯಕಾರೀ ಕ್ರಾಂತಿಕಾರೀ ತತ್ವ. ಇದು ಕೇವಲ ಜಗತ್ತನ್ನು 'ಹೀಗಾಯಿತು'. 'ಹೀಗಿದೆ' ಎಂದು ಕಣ್ಣುಮುಚ್ಚಿ ಯೋಗಾರೂಢನಾಗುವುದಿಲ್ಲ. ಆತ್ಮವು ಒಂದು ಸರ್ವತಂತ್ರ ಸ್ವತಂತ್ರವೂ ಆದ ದಿವ್ಯ ಸತ್ವವೆಂದು ಅವನು (ಭೌತಿಕ ತತ್ತ್ವದವ) ತಿಳಿಯುವ ಅಹಂಕಾರಿಯಲ್ಲ. ಹಲವು ಭೌತಿಕ ಘಟಕಗಳ ಸಂಘಟನೆಗಳಿಂದ 'ತಾನೆಂಬ' ಮಾನವತ್ವವು ರೂಪಗೊಂಡಿದೆ ಎಂಬುದನ್ನು ಆತನು ಮನಗಂಡಿರುತ್ತಾನೆ. ವ್ಯಕ್ತಿಯ ಸ್ವಾತಂತ್ರ್ಯವು ಸಮಾಜದ ಸಾಮುದಾಯಿಕ ಸ್ವಾತಂತ್ರ್ಯದ ಒಂದು ಅಂಶವೆಂಬುದನ್ನು ಅವನು ಮರೆಯುವುದಿಲ್ಲ. ಸಮಾಜದಿಂದಲೇ ಸಮಾಜದಲ್ಲಿಯೇ ತನ್ನ ವ್ಯಕ್ತಿತ್ವ, ಮಾನವತೆಯ ಒಂದು ಸಾಮುದಾಯಿಕ-

ಸಾಮೂಹಿಕ ಸಾಧನೆಯ ಫಲ. ವ್ಯಕ್ತಿಗೆ ಸಮಾಜವೇ ಬಲ ಎಂಬ ಸತ್ಯವನ್ನು ಸ್ಮರಿಸಿ ಭೌತಿಕ ತತ್ವಜ್ಞಾನಿಯು ವಿಮರ್ಶಕವೂ ವ್ಯಾವಹಾರಿಕವೂ ಆದ ಚಟುವಟಿಕೆಯಿಂದ ಮಾನವ ಜನಾಂಗದ ಜೀವನದಲ್ಲಿ ಕ್ರಾಂತಿ ಉಂಟಾಗುತ್ತದೆ' ಎಂದೇ ಅರಿಯುತ್ತಾನೆ."–ಹೀಗೆಂದು ಭೌತಿಕವಾದ 'ಮಟೀರಿಯಾಲಿಸಂ'ದ ದಿವ್ಯ ದೃಷ್ಟಿಯನ್ನೂ ಅದರ ಪ್ರತಿ ಫಲಿತವನ್ನೂ ಬೋಧಕಗೊಳಿಸಿ ವಿವೇಚಿಸುತ್ತಾರೆ ; ವಿವರಿಸುತ್ತಾರೆ. ಗೌರೀಶರ 'ವಿಚಾರವಾದ' ಕೃತಿಯಲ್ಲಿಯೂ ಈ ಭೌತಿಕ ತತ್ವದ ಪ್ರಣೀತತೆ ಪ್ರಕಟಗೊಂಡಿದೆ. 'ಮಾನವನ ಮೋಕ್ಷ ಸಾಮೂಹಿಕವಾಗಿಯೇ ಆಗಬೇಕು' ಎಂದು ಪ್ರತಿಪಾದಿಸುವ ಅವರ ನಿಲುವು ಅನ್ಯ ಭೌತಿಕ ವಾದಿಗಳಿಗಿಂತ ಉದಾತ್ತವೆಂಬುದನ್ನು ತೋರಿಸಿಕೊಳ್ಳುತ್ತದೆ. ಇದು ಅವರ ನಿಲುವಿನ ಬದ್ಧತೆ.

ಮಾರ್ಕ್ಸ್‌ವಾದವನ್ನು ಕನ್ನಡಕ್ಕೆ ಪರಿಚಯಿಸಲು ಗೌರೀಶರು ಉದ್ಧೃತಗೊಳಿಸಿಕೊಂಡ 'ಆಕರ'ಗಳಿಗಿಂತಲೂ ಮಿಗಿಲಾಗಿ ಮಾರ್ಕ್ಸ್‌ಸಿದ್ಧಾಂತಗಳನ್ನು ನಮಗೆ ಮನದಟ್ಟುಗೊಳಿಸಲೆಂದು ವಿನಿಯೋಗಿಸಿದ ಅವರ ಸ್ವವಿವರಣೆ ನಿರೂಪಣೆ ಸರಳೀಕೃತ ಉದಾಹರಣೆಗಳಿಂದೊಡಗೂಡಿದ ನಿರರ್ಗಳ ಭಾಷ್ಯವು ದಟ್ಟಗೊಳ್ಳುವುದರಿಂದಲೇ ಅದೊಂದು ಸ್ವತಂತ್ರ ಕೃತಿಯ ಸ್ಥಾನವನ್ನಲಂಕರಿಸಿದೆ. ಉದಾ : ಮಾರ್ಕ್ಸ್‌ನ ಆರ್ಥಿಕ ಸಿದ್ಧಾಂತವನ್ನು ವಿವರಿಸುತ್ತ : "ಯಾವ ಸಮಾಜದ ಉತ್ಪಾದನೆಯು ಮಟ್ಟ ಗಿರಣಿ ಕಾರ್ಖಾನೆಗಳ ಕೆಲಸದ್ದಾಗಿದ್ದು ಅಂಥ ಯಾಂತ್ರಿಕ ಶ್ರಮದಿಂದ ಬಟ್ಟೆ ಮುಂತಾದವುಗಳು ಉಂಟಾಗುವವೋ ಅಂಥ ಪರಿಸ್ಥಿತಿಯಲ್ಲಿ ಕೈಕೆಲಸ ಮನೆಕಸುಬುಗಳ ಬಿಡುವಿಲ್ಲದ ದುಡಿಮೆಯನ್ನು ನಡೆಯಿಸಿ ಅಂಥ ಸರಕುಗಳನ್ನು ಉತ್ಪಾದಿಸಿ ಅವನ್ನು ಅದೆಲ್ಲ ದುಡಿಮೆಯ ಬೆಲೆ ಬರುವಂತೆ ದರದಿಂದ ಮಾರುವುದು ; ಅದನ್ನೇ ಕೊಂಡುಕೊಳ್ಳುವುದು ಪುಣ್ಯವೆಂದೂ, ಧರ್ಮವೆಂದೂ ಸಾರುವುದೂ ಪಾರಮಾರ್ಥಿಕವಾಗಿ ಹಿತಕರವಿರಬಹುದು. ಆದರೆ ಆರ್ಥಿಕವಾಗಿ ಅದು ವ್ಯರ್ಥವೇ ಸರಿ."

(ಖಾದೀ ಗ್ರಾಮೋದ್ಯೋಗ, ಗುಡಿಕೈಕಾರಿಕೆಗಳಂಥ ಆರ್ಥಿಕ ಉತ್ಪಾದನಾ ಪ್ರಯತ್ನವು ಬಂಡವಾಳಶಾಹಿ ಆರ್ಥಿಕ ಬಲದ ನಿರ್ಮೂಲಕ್ಕೆ ಪರಿಹಾರವಾಗದು ಎಂಬುದು ಇಲ್ಲಿಯ ಮಥಿತಾರ್ಥ. ಭಾರತದಲ್ಲಿ ಮಹಾತ್ಮಾ

ಗಾಂಧೀಜಿ ಆರ್ಥಿಕ ಸಿದ್ಧಾಂತಕ್ಕೂ, ಮಾರ್ಕ್ಸ್ ಸಿದ್ಧಾಂತಕ್ಕೂ ಇರುವ ಭಿನ್ನತೆಯನ್ನೂ ಅವರು ಇಲ್ಲಿ ಗುರುತಿಸುತ್ತಾರೆ.)

ಮಾರ್ಕ್ಸ್‌ನ ಸಿದ್ಧಾಂತದ 'ಉಪಯೋಗಮೂಲ್ಯ' ಮತ್ತು 'ವಿನಿಯೋಗ ಮೂಲ್ಯ'ವನ್ನು ವ್ಯಾಖ್ಯಾನಿಸುವಾಗ ಗೌರೀಶರು ನೀಡುವ ಉದಾಹರಣೆ :

“ಬಿಸಿಲಲ್ಲಿ ಬಾಯಾರಿ ಬಳಲುವ ದಾರಿಕಾರನಿಗೆ ಒಂದು ಹಿಡಿ ಮಣಿ-ಮುತ್ತುಗಳಿಗಿಂತಲೂ ಎರಡು ಹನಿ ನೀರು ಹೆಚ್ಚು ಉಪಯುಕ್ತ. ಅಂಥವರಿಗೆ ಮುತ್ತಿಗಿಂತಲೂ ನೀರಿಗೇ ಹೆಚ್ಚು ಬೆಲೆ. ಹೊಳಪಿಗೂ ಬಣ್ಣಕ್ಕೂ ಮರುಳಾಗಿ ಆ ಕಾಜಿನ ಮಣಿಗೆ ಪ್ರತಿಯಾಗಿ ಹಸ್ತಿದಂತವನ್ನಾಗಲೀ, ಉತ್ತಮ ಕಟ್ಟಿಗೆಯನ್ನಾಗಲೀ, ಕಾಡಿನ ಮೃಗಗಳ ತೊಗಲನ್ನಾಗಲೀ ಕೋಡನ್ನಾಗಲೀ ಇತ್ತುಕೊಳ್ಳುವ ಜನರಿರುತ್ತಾರೆ.’

ಬಂಡವಾಳಗಾರಿಕೆ ಎಂಬ ಆಖ್ಯಾನದಲ್ಲಿಯ ಒಂದು ನಿರೂಪಣೆಯನ್ನು ನೋಡಿ :

“‘ಬೆಳೆವಗೆ ನೆಲವೆಲ್ಲ ಹೊಲ’ ಎಂದು ಕವಿಗಳು ಹಾಡಬಹುದು. ಆದರೆ ಕವಿಗಳು ಹೊಲದ ಕಷ್ಟ-ಬೆಳೆಯ ನಷ್ಟಪಟ್ಟವರಲ್ಲ. ಹೆಚ್ಚೆಂದರೆ ಬರೀ ನೋಡಿ ನೊಂದು, ಕೇಳಿ ಕನಿಕರಪಟ್ಟವರು. ಹೊಲವಾಗಬಲ್ಲ ನೆಲವಷ್ಟೇ ಬೆಳೆ ಕೊಡಬಲ್ಲದು !....ಬಂಡವಾಳಗಾರಿಕೆಯಲ್ಲಿ ರೈತನು ಬರೀ ದಿನಗೂಲಿಗೆ ದುಡಿಯುವ ಕೆಲಸಗಾರ. ಗಿರಣಿ ಕಾರಖಾನೆಯಂತೆಯೇ ಹೊಲದಲ್ಲಿ ಯಾಂತ್ರಿಕ, ಕೂಲಿಕಾರ. ನೇಗಿಲಿನ ಎರಡು ಪಶುಗಳನ್ನು ಹಿಂಬಾಲಿಸುವ ಮೂರನೆಯ ಪಶು. ಅವರನ್ನೆಲ್ಲಾ ಸಾಮೂಹಿಕವಾಗಿ ದುಡಿಸಿ ಅದರ ಫಲವನ್ನು ವೈಯಕ್ತಿಕವಾಗಿ ಉಣ್ಣುವವನೇ ಬಂಡವಾಳಗಾರ.”

ಹೀಗೆ ತಮ್ಮ ಪ್ರಬಂಧದುದ್ದಕ್ಕೂ ಗೌರೀಶರ ಉದ್ದಾಮ ವಿವರಣೆ ವ್ಯಾಖ್ಯಾನ ಸ್ರವಿಸುತ್ತಲೇ ಹೋಗುವಾಗ ಹೇಳುವುದು ಇನ್ನಷ್ಟು ಮನದಟ್ಟಾಗಲೀ ಎಂಬ ಮಾಸ್ತರಿಕೆ ಕಾಳಜಿ ಎದ್ದು ತೋರುತ್ತದೆ.

* * *

೧೪

‘ಮಾರ್ಕ್ಸ್‌ನ’ ಸಿದ್ಧಾಂತವನ್ನು ಮನಸ್ಸಿಗೆ ನಾಟಿಸುವಂತೆ ತಾದಾತ್ಮ್ಯಗೊಂಡು ಗೌರೀಶರು ಬರಹದಲ್ಲಿ ನಿರೂಪಿಸಿದ್ದಾರೆ-ಎಂದ ಮಾತ್ರಕ್ಕೆ ಅವರು

ಅಲ್ಲಿಗೇ ಬದ್ಧಗೊಂಡಿರಲಿಲ್ಲ. ತಮ್ಮನ್ನು ಪೂರ್ಣ ಒಪ್ಪಿಸಿಕೊಳ್ಳಲಿಲ್ಲವೆಂಬುದು ಅವರ 'ನವಮಾನವತಾವಾದ' ಕೃತಿಯಲ್ಲಿ ತೆರೆದುಕೊಂಡಿದೆ.

'ಭಾರತ ದೇಶದ ಸಂದರ್ಭಕ್ಕೆ ಕಮ್ಯುನಿಸ್ಟ ನೀತಿಗಳ ಅಂದಾಜುಗಳ ಬಗೆಗೆ ತೋರುವ ಭಿನ್ನಾಭಿಪ್ರಾಯದಲ್ಲಿ ಶ್ರೇಷ್ಠ ಮಾನವತಾವಾದಿ ಮಾನೇಂದ್ರನಾಥ ರಾಯ್‌ರೊಂದಿಗೆ ಗೌರೀಶರು ಧ್ವನಿಗೂಡಿಸಿದ್ದಾರೆ. ಅಷ್ಟೇ ಅಲ್ಲ; ತಾವು ಎಂ. ಎನ್. ರಾಯ್ ವಿಚಾರದ ಅನುಯಾಯಿಗಳೆಂದೂ ಹೇಳಿಕೊಂಡಿದ್ದಾರೆ. ವ್ಯಕ್ತಿಶಃ ಅವರು ಪ್ರೀತಿಸಿದ್ದು ಮಾನವೇಂದ್ರನಾಥರ ತತ್ವಪ್ರಣಾಲಿಕೆಯೊಂದಿಗೆ ಎಂಬುದು ಗೌರೀಶರು ಬರೆದ 'ನವಮಾನವತಾವಾದ' ಎಂಬ ಪುಸ್ತಕದಲ್ಲಿ ವೇದ್ಯಗೊಂಡಿದೆ.

ಒಂದು ದೃಷ್ಟಿಯಿಂದ ಗೌರೀಶರ 'ಮಾರ್ಕ್ಸವಾದ' ಕೃತಿಯಲ್ಲಿಯ ಹಲವಾರು ಅಂಶಗಳೂ ಇಲ್ಲಿ ಉದ್ಧೃತ, ಪುನರುಕ್ತವೆಂದೆನಿಸಿದರೂ ರಾಯರ ಹೊಸ ವಾದವು ಮಾರ್ಕ್ಸವಾದಕ್ಕಿಂತ ಹೇಗೆ ಭಿನ್ನವಾದ ಸತ್ವವನ್ನು ಒಳಗೊಂಡಿದೆ ಎಂಬುದರ ಸರಳ ವಿವೇಚನೆಯಿಂದ ಹೊಸ ಅರಿವಿನತ್ತ ಕೊಂಡೊಯ್ಯುತ್ತದೆ—

"ಮಾನವೇಂದ್ರನಾಥರು ಅಪಹರಿಹಾರ್ಯವಾಗಿ ಮಾರ್ಕ್ಸನ ಮತವನ್ನು ಪುನರ್ವಿಮರ್ಶಿಸಿದರು. ಏಕೆಂದರೆ: ಮಾರ್ಕ್ಸನ ಮತದಂತೆ ಸಿದ್ಧಾಂತ (Theory) ಮತ್ತು ಆಚರಣೆ(Practice)ಗಳು ಒಂದಾಗಿರಬೇಕೆಂಬ ತತ್ವವನ್ನು ಪೂರ್ತಿ ನಂಬಿದ್ದ ಮಾನವೇಂದ್ರರು—ಮಾರ್ಕ್ಸವಾದೀ ಕ್ರಾಂತಿಯಿಂದ ವ್ಯಕ್ತಿಗೆ ಪೂರ್ಣ ಸ್ವಾತಂತ್ರ್ಯವಿರಬೇಕೆಂಬ ಪರಿಕಲ್ಪನೆ ಹೊಂದಿದ್ದರೂ ಆಚರಣೆಯಲ್ಲಿ ರಶಿಯಾ, ಚೀನಾಗಳಲ್ಲಿ (ಲೆನಿನ್, ಸ್ಟಾಲಿನ್, ಚಿಯಾಂಗ ಶೇಖರ) ಏಕ ಸತ್ತಾಧಿಕಾರವು ಸರ್ವಾಧಿಕಾರದ ಇನ್ನೊಂದು ರೂಪ ಹೊಂದಿದ್ದನ್ನು ಕಂಡು ಆಲೋಚನೆಗೊಳಗಾದರು. ಆಗ ಮಾನವೇಂದ್ರರಿಗೆ ಮಾರ್ಕ್ಸನ ಮೂಲ ಸಿದ್ಧಾಂತದಲ್ಲಿಯೇ ದೋಷವಿರಬೇಕು ಎಂತನಿಸಿ, ದೋಷಾನ್ವೇಷಣೆಗೈದು, ಆ ದಿಶೆಯ ಚಿಂತನೆಯ ಮೂಲಕ ಕಂಡುಕೊಂಡಂಥ ಹೊಸ ೨೨ ತತ್ವಗಳನ್ನು ಮುಂದಿಟ್ಟರು" ಎಂಬುದನ್ನು ತುಂಬ ಚಿತ್ತಾಕರ್ಷಕವಾಗಿ ಗೌರೀಶರು ಸಾದರಪಡಿಸುತ್ತಾರೆ.

ಆ ನಿಷ್ಕರ್ಷಿತ ೨೨ ತತ್ತ್ವಗಳಲ್ಲಿ ಅತಿ ಮಹತ್ವದವೆನ್ನುವ ಹನ್ನೊಂದು ತತ್ತ್ವಗಳನ್ನು ವಿವರವಾಗಿಯೇ ನಮೂದಿಸಿದ್ದಾರೆ. ಆ ತತ್ವವು ಮಾರ್ಕ್ಸನ ಮತದ ಪುನರ್ವಿಮರ್ಶಿತ ತತ್ವವಾಗಿ ಸಾಮ್ಯವಾದ(ಕಮ್ಯುನಿಸಂ)ದ ಬದಲು ಜನತೆಯ ಸಾರ್ವಭೌಮತ್ವ, ಮೂಲಗಾಮಿ ಪ್ರಜಾಪ್ರಭುತ್ವ (Radical Democracy) ಎಂದು ಗುರುತಿಸಲ್ಪಟ್ಟಿತು ಎನ್ನುವುದರ ಸಾರಸರ್ವಸ್ವ ಇದರಲ್ಲಿ ತುಂಬಿದೆ.

'ನವ ಮಾನವತಾ' ವಾದದ ಈ ಕೃತಿ ಕೇವಲ ಮಾನವೇಂದ್ರರ ರಾಜಕೀಯ ಸಿದ್ಧಾಂತದ ದರ್ಶನವಲ್ಲ. ಇಂಥ ಒಂದು ಹೊಸ ಸತ್ತಿಗೆ ಮೂಲ ಸತ್ವವಾಗಿ ಅದರೊಳಗೆ ಸಾಂಗತ್ಯಗೊಳ್ಳಬೇಕಾದಂಥ ವ್ಯಕ್ತಿಶಃ ಮೂಲಭೂತವಾಗಿ ವೈಚಾರಿಕ ನೆಲೆಯಲ್ಲಿಯೂ ಬದಲಾಗಬೇಕಾಗಿರುವ ಅಗತ್ಯದ ಅಂಶಗಳನ್ನು ಮಾನವೇಂದ್ರನಾಥರು ಹೇಗೆ ಉದ್ದೇಶಿಸಿದ್ದರು ಎಂಬುದನ್ನೂ ಗೌರೀಶರು ತಮ್ಮ ವಿದ್ವತ್ ಅರಿವಿನ ಪರಿಮಾಣದೊಂದಿಗೆ ಸೊಗಸಾಗಿ ನಿರೂಪಿಸುತ್ತಾರೆ.

"ನವ(ಮೂಲಗಾಮಿ)ಮಾನವತಾವಾದವು ನಮ್ಮೀ ಕಾಲದ ಅತ್ಯಂತ ಮಿಗಿಲಾದ ಅವಶ್ಯಕತೆಯನ್ನೂ ಪೂರೈಸಬಲ್ಲದು. ಏಕೆಂದರೆ ಲೌಕಿಕವಾದಂಥ ಬುದ್ಧಿ ಪ್ರಾಮಾಣ್ಯದ ನೀತಿಮತ್ತೆಯು ಶಕ್ಯವಿದೆ ಎಂಬುದನ್ನು ಅದು ತೋರಿಸಿ ಕೊಡುತ್ತದೆ. ಈ ಶಕ್ಯತೆಯು ಮಾನವ ಜೀವನದ ಹೊಸದೊಂದು ಕ್ಷಿತಿಜವನ್ನೇ ತೆರೆಯುತ್ತದೆ" ಎನ್ನುತ್ತ ಪ್ರತಿಪಾದಿಸುತ್ತಾರೆ.

ನಮ್ಮಲ್ಲಿ ಭಾವಿಕವಾಗಿ ವ್ಯಾಪಿಸಿಕೊಂಡಿರುವ ನಂಬುಗೆಯಾದ "ನಾಹಂ ಕರ್ತಾಂ ಹರಿಃ ಕರ್ತಾ'–ಎಂಬ ಭಾವನೆಯು ಹೊಣೆಗೇಡಿತನವನ್ನಾಗಲೀ, ಹತಾಶಭಾವನೆಯನ್ನಾಗಲೀ ಪ್ರೇರಿಸುತ್ತದೆ. ಹೊರಗಿನ ಶಕ್ತಿಯಿಂದ (ದೇವರು) ತಂತ್ರದಿಂದ (ಪೂಜೆ) ನಾವು ಒಳ್ಳೆಯರಾಗಿ ನಡೆಯುವುದು ನಿಜವಾದ ಒಳ್ಳೆಯತನವಲ್ಲ....ನಿಜವಾದ ಒಳಿತು ನಮ್ಮ ಇಚ್ಛಾ ಸ್ವಾತಂತ್ರ್ಯ (Free will)ದಿಂದ ಬರಬೇಕು. ದೇವರ ಪ್ರೇರಣೆ ಕರ್ಮದ ಫಲ (?) ಶ್ರುತಿ, ಸ್ಮೃತಿ ಪುರಾಣಗಳ ಆದೇಶ ಮುಂತಾದ ಹೊರಗಿನ ಒತ್ತಡಗಳಿಂದ ನಾವು ಒಳ್ಳೆಯವರಾಗುವುದು ಒಳ್ಳೆಯತನವೂ ಅಲ್ಲ; ಸಜ್ಜನಿಕೆಯೂ ಅಲ್ಲ." ಹೀಗನ್ನುವ ಗೌರೀಶರು ಅದನ್ನು ಸಾಧಿಸುವ ಬಗೆ ಆಹ್ಲಾದಕರವಾಗಿ ಸಲ್ಲುತ್ತದೆ.

“ಸಾಮಾಜಿಕ ಅಥವಾ ರಾಜಕೀಯ ವಿಮೋಚನೆಗೂ ಮೊದಲು ಆತ್ಮ ವಿವೇಚನೆಯೂ ಅದಕ್ಕೆ ಬೇಕಾದ ವಿಮೋಚನೆಯೂ ಅವಶ್ಯವು. ನವಮಾನವತಾವಾದವು ಈ ಆತ್ಮಿಕ ವಿಮೋಚನೆಯ ದಾರಿಯನ್ನು ಬೆಳಗುತ್ತದೆ. ‘ತನ್ನ ಅರಿವೆ ತನಗೆ ಗುರು’ ಎಂದು ಸಾರಿದರು ನಮ್ಮ ಬಸವಣ್ಣನವರು. ಆದರೆ ಅವರ ಬೆನ್ನಿಗೇ ಗುರು ಜಂಗಮದ ಮಠಗಳು ಬಸವಣ್ಣನವರ ಮತಕ್ಕಿಂತ ಮುಖ್ಯವಾದವು. ಆದ್ದರಿಂದಲೇ ಮಾನವತಾವಾದದ ಪುನಃ ಪ್ರತಿಷ್ಠಾಪನೆ ಆಗಬೇಕಾಗಿದೆ. ಮಾನವನು ಸ್ವಯಂಸಿದ್ಧ. ತನಗೆ ತಾನೇ ಸಲುವಂಥವನು, ತನಗೆ ತಾನೇ ಸಲ್ಲಬಲ್ಲನು—ಎಂಬುದೇ ಈ ಮೂಲಗಾಮಿ ಮಾನವತಾವಾದದ ಆಶ್ವಾಸನೆ. ಭಗವದ್ಗೀತೆಯ ಮಾತುಗಳಲ್ಲಿ ಹೇಳುವುದೆಂದರೆ ‘ಉದ್ಧರೇತ್ ಆತ್ಮನಾ (ಅ)ತ್ಮಾನಂನ ಆತ್ಮಾನಂ ಅವಸಾದಯೇತ್’ । (ತನ್ನನ್ನು ತಾನೇ ಮೇಲೆತ್ತಬೇಕು. ತನ್ನನ್ನು ತಾನು ಕುಗ್ಗಿಸ—ಮುಳಗಿಸಬಾರದು) ಹೇಳಬೇಕಾದ್ದನ್ನು ಇಂಥ ಸ್ವನಿರೂಪಣೆಯ ಛಟ್ಟೆಯಿಂದ ರಸವತ್ತಾಗಿಸುವ ವೈಖರಿ ಗೌರೀಶರ ವೈಚಾರಿಕ ಲೇಖನದಲ್ಲಿಯ ಪ್ರಕಾಂಡತ್ವವು.

ಮಾನವೇಂದ್ರನಾಥರೊಂದಿಗೆ ಮಹಾತ್ಮಾ ಗಾಂಧೀಜಿಯವರನ್ನೂ ಉಲ್ಲೇಖಿಸುತ್ತಾರೆ. ಮಾನವೇಂದ್ರರಂತೆ ಗಾಂಧೀಜಿಯವರೂ ಮೂಲತಃ ಮಾನವತಾವಾದಿಗಳೇ ಆಗಿದ್ದರೂ ಗಾಂಧೀ ಪ್ರಣೀತ ಮಾನವತಾವಾದದ ತಳಹದಿಗೂ, ಮಾನವೇಂದ್ರ ಪ್ರಣೀತ ನವಮಾನವತಾವಾದದ ತಳಹದಿಗೂ ತಾತ್ವಿಕ ವೈರುಧ್ಯವಿರುವುದನ್ನು ಗೌರೀಶರು ದರ್ಶಿಸುತ್ತಾರೆ. ಗಾಂಧಿಯವರದು ಭಾರತೀಯ ಸಾಂಪ್ರದಾಯಿಕ ಎಳೆಯಲ್ಲೇ ನೇಯ್ದುಕೊಂಡಿರುವ ಭಾವನಾಮಯದ್ದಾಗಿದ್ದರೆ, ರಾಯರದು ಶುದ್ಧ ಆತ್ಮಿಕ ಸಂಸ್ಕಾರದಿಂದ ವ್ಯಕ್ತಿಗತ ಎಳೆಯಲ್ಲಿ ಸ್ವಯಂಸೃಷ್ಟಿಯ ಪ್ರತಿಪಾದನೆಯದು—ಎಂಬುದನ್ನು ಇಲ್ಲಿ ಮನವರಿಕೆ ಮಾಡಿಕೊಡುತ್ತಾರೆ. ಗಾಂಧೀಜಿಯವರ ವಿಚಾರದೊಂದಿಗಿನ ತಮ್ಮ ಮತ ಭೇದವನ್ನು ಗೌರೀಶರು ಅವರ ‘ವಿಚಾರವಾದ’ ಎಂಬ ಕೃತಿಯಲ್ಲಿಯೂ ಉಲ್ಲೇಖಿಸಿದ್ದಾರೆ. ‘ಅವರ (ಗಾಂಧಿ) ಅಧ್ಯಾತ್ಮ, ಆಳವಾದ ಶ್ರದ್ಧೆ, ಒಂದು ಬಗೆಯ ಭಕ್ತಿಮಾರ್ಗ, ಅನೇಕ ವ್ರತ, ದೀಕ್ಷೆ ವಿಧಿಗಳ ಹೊಸದೊಂದು ಗುರುಪೀಠ ಪದ್ಧತಿ ಇವೆಲ್ಲಕ್ಕೂ ಹೆಚ್ಚಾಗಿ ದೇಶದ ಸಮಗ್ರ ಆಂದೋಲನಗಳನ್ನೇ ಅವರೊಬ್ಬರ ಅರಿವಿಗೂ ಸರಿಯಾಗಿ ಅರ್ಥವಾಗದ

'ಒಳದನಿ'ಯ ಪ್ರೇರಣೆಯ ಮೇಲೆ ಅವಲಂಬಿಸಿ ಇಡುವ ರೀತಿ, ಇವೆಲ್ಲವುಗಳ ಪರಿಣಾಮವೆಂದರೆ ಗಾಂಧಿಯುಗದಲ್ಲಿ ಧಾರ್ಮಿಕತೆ, ಗೂಢತೆ, ಮೂಢಭಾವನೆ, ಅಂಧಶ್ರದ್ಧೆ, ಬುದ್ಧಿಗೆ ನಿಲುಕದ ಹಟವಾದ ಇವೆಲ್ಲ ಗುಣಗಳಿಂದ ಯುಕ್ತವಾದ ಒಂದು ಭಾವೋದ್ರೇಕದ ವಾತಾವರಣ ಮಬ್ಬಿನಂತೆ ದೇಶದ ಚಿದಾಕಾಶದಲ್ಲಿ ಹಬ್ಬಿತು. ಭಾವಾವೇಶ ಒಂದು ಸದಾಕಾಲದ ಸ್ಥಿತಿಯಾಗಲಾರದು.'

ಹೀಗೆ ಗೌರೀಶರು ತಮ್ಮ ಬರಹಗಳಲ್ಲಿ ಗಾಂಧೀಜಿಯವರನ್ನು ಅಲ್ಲಲ್ಲಿ ಅಲ್ಲಗಳೆದಂತೆ ಕಂಡರೂ ಅವರು ಗಾಂಧೀಜಿಯವರನ್ನು ಪೂರ್ಣವಾಗಿ ತಿರಸ್ಕರಿಸುವುದಿಲ್ಲ. ಒಪ್ಪಿಗೆಯಾಗುವ ಅನೇಕ ಸಂಗತಿ, ವಿಚಾರಗಳಿಗೆ ಗಾಂಧೀಜಿಯವರನ್ನು ಎತ್ತಿ ಮೆಚ್ಚಿಕೊಂಡಿರುವುದೂ ಉಂಟು. ಇದು ಗೌರೀಶರ ನಿರುಪಾಧಿಕ ಶೀಲ. ಅವರು ಇಂದಿರಾಗಾಂಧಿಯವರ ಬಗೆಗೂ ಆ ತುರ್ತುಪರಿಸ್ಥಿತಿಯ ಕರಾಳತ್ವ, ಅಧಿಕಾರ ವ್ಯಾಮೋಹ, ಸತ್ತ್ಯಾಗ್ರಹ ಮುಂತಾದವನ್ನು ಕಟುವಾಗಿ ಟೀಕಿಸಿಯೂ ಆಕೆಯಲ್ಲಿಯ ಹೆಣ್ಣಿನ ಧಿರೋದಾತ್ತತೆ, ಪ್ರಬಲ ಇಚ್ಛಾಶಕ್ತಿ (Will power)–ಅದು ಹೇಗೂ ಬಳಕೆಗೊಂಡಿರಲಿ–ಬಗ್ಗೆ ಮುಕ್ತವಾಗಿ ಕೊಂಡಾಡಬಲ್ಲರು. ಇದು ಗೌರೀಶರ ದ್ವಂದ್ವವಲ್ಲ. ಮುಕ್ತ ವೈಚಾರಿಕತ್ವ. ನಿರುಂಬಳ ನಿಲುವು.

*　　*　　*

೧೫

ಗೌರೀಶ ಕಾಯ್ಕಿಣಿಯವರಲ್ಲಿ ತುಂಬಿರುವ ಬರಹದ ತುಡಿತ ಅದಮ್ಯವಾದುದು. ಅವರಲ್ಲಿ ಪ್ರವಹಿಸಿದ ವಿಚಾರ ಪ್ರವಾಹದ ಮೂಲದ ಅನೇಕ ತತ್ವವೇತ್ತರು ದಾರ್ಶನಿಕರುಗಳ ಸಮೂಹದಲ್ಲಿ ಗ್ರೀಕಿನ ಜಗತ್ಪ್ರಸಿದ್ಧ ದಾರ್ಶನಿಕ–ಸಾಕ್ರೇಟೀಸ್ ಮತ್ತು ಪ್ಲೇಟೋನನ್ನೂ ಪರಿಚಯಿಸಿದ್ದಾರೆ. ಇದೊಂದು ಪರಪುಷ್ಟ ಕೃತಿ ಎಂದು ಅವರೇ ಹೇಳಿಕೊಂಡಿದ್ದಾರೆ. ಈ ದಾರ್ಶನಿಕರ ಕುರಿತು ಕನ್ನಡಕ್ಕೆ ಸಾಕಷ್ಟು ಗ್ರಂಥಗಳು ಬಂದಿದ್ದರೂ ಗೌರೀಶರು ನೀಡಿದ ವಿಶ್ಲೇಷಣೆಯ ಸೊಗಸಿನಿಂದಾಗಿ ವಿಭಿನ್ನ ಸತ್ವವನ್ನು ತೋರಿಸಿಕೊಂಡಿದೆ. ಗೌರೀಶರಿಗೆ ಋಷಿವಾಕ್ಯ, ತತ್ವದರ್ಶಕರ ವಾಕ್ಯವೆಂದರೆ ಮೋಹ. ಆದರೆ ಕುರುಡು ಮೋಹವಲ್ಲ.

"ದಾರ್ಶನಿಕರು, ತತ್ವವೇತ್ತರೇ ರಾಜ್ಯವನ್ನಾಳಬೇಕು, ಜನಕನಂತೆ, ಧರ್ಮರಾಜನಂತೆ ಜ್ಞಾನಿಯೇ ರಾಜ್ಯವಾಳಲು ಅರ್ಹರು" ಎಂದೇ ಉದ್ಗಾರ ವೆತ್ತುತ್ತಾರೆ.

ಆದರೆ ಇಲ್ಲಿ ಪ್ರಸ್ತುತಪಡಿಸಿದ ಹಲವು ಸಂಗತಿಗಳು, ಉದಾ : "ಈ ದೇವ, ಧರ್ಮ, ಇನ್ನೊಂದು ಶ್ರದ್ಧೆ. ಆತ್ಮದ ಅಮರತ್ವದಲ್ಲಿ ಶ್ರದ್ಧೆಯೂ ಬೇಕು. ಮುಂದಿನ ಜನ್ಮದಲ್ಲಿಯಾದರೂ ತನಗೆ ಸುಖ ಸಿಗುತ್ತದೆ ಎಂಬ ನಂಬುಗೆಯೂ ಬೇಕು" ಎನ್ನುತ್ತಾನೆ ಪ್ಲೇಟೋ" ಎಂದಿದ್ದು ಮತ್ತು "ದೇವ ಧರ್ಮ ಶ್ರದ್ಧೆಯನ್ನು ಅನುತ್ತೀರ್ಣರಿಗೆ, ಅಸಮರ್ಥರಿಗೆ, ಕೆಳತರಗತಿಯ ಅರ್ಹತೆಯುಳ್ಳವರಿಗೆ ಹೀಗೆ ಬಿಂಬಿಸಬೇಕು—'ಅದು ಅವರ ದೇವದತ್ತ ಸ್ಥಾನ ಮಾನ. ಗುಣ ಕರ್ಮ ವಿಭಾಗದ ಅನುವಂಶಿಕ ಸಂಸ್ಕಾರ ಬಲದಿಂದ ಅವರಿಗೆ ಅಂಥ ತರಗತಿ ದೊರೆತು ತಾರತಮ್ಯಕ್ಕೆ ಒಳಪಡಬೇಕಾಗಿ ಬಂದಿದೆ. ಅದು ಈಶ್ವರೇಚ್ಛೆ. ಅದಕ್ಕೆ ತಲೆಬಾಗಬೇಕು". ಇಂಥ ಮಾತುಗಳು ಗೌರೀಶರು ತಮ್ಮ 'ಮಾರ್ಕ್ಸವಾದ', ನವಮಾನವತಾವಾದ, ವಿಚಾರವಾದದಂಥ ಕೃತಿಗಳಲ್ಲಿ ಪ್ರತಿಪಾದಿಸಿದ ವಿಚಾರಕ್ಕೆ ವೈರುಧ್ಯವಾಗಿ ತೋರುತ್ತವೆ. ಆದರೆ ಮೊದಲೇ ತಮ್ಮದಿದು ಪರಿಪುಷ್ಟ ಕೃತಿಯೆಂದು ಸ್ಪಷ್ಟಗೊಳಿಸಿಕೊಂಡಿದ್ದರಿಂದ ಆ ಮಾತುಗಳನ್ನುಳಿಸಿಕೊಡುವ ನಿರ್ಲಿಪ್ತ ಭಾವದ ಕಾರ್ಯವಷ್ಟೇ ಅವರದ್ದಾಗಿರಬಹುದೆಂದು ಭಾವಿಸಬಹುದಾಗಿದೆ. ಹಾಗಿದ್ದರೂ ಈ ವಿಚಾರಗಳೊಂದಿಗೆ ಗೌರೀಶರು ತಮ್ಮನ್ನು ಸಮಾಧಾನಿಸಿಕೊಳ್ಳುವ ಬಗೆಯು : 'ದೇವರೆಂಬುದು ಕೇವಲ ನಮ್ಮ ಪ್ರೀತಿ ಮತ್ತು ಆಸೆಗಳ ಒಂದು ಮೂರ್ತೀಕರಣ, ವ್ಯಕ್ತೀಕರಣವೆಂದಾದರೆ ಅದನ್ನು ನಂಬುವುದರಲ್ಲಿ ನಷ್ಟವೇನೂ ಇಲ್ಲ. ಅದಕ್ಕೆ ನಮ್ಮ ಸುಭಾಷಿತಕಾರರೇ ಹೇಳಿಲ್ಲವೇ ?' ನಾಸ್ತಿಚೇತ್ ನಾಸ್ತಿನೋ ಹಾನಿಃ। ಆಸಿಚೇತ್ ನಾಸ್ತಿಕೋಹತಃ"—ಎಂಬೀ ಮಾತಿನಿಂದ ವೇದ್ಯವಾಗುತ್ತದೆ.

ಈ ನಾಸ್ತಿಕರು–ಆಸ್ತಿಕರು ಎಂಬ ಕುರಿತೇ ಗೌರೀಶರು ಪ್ರತ್ಯೇಕ ಒಂದು ಗ್ರಂಥವನ್ನೇ ಬರೆದು ಸಿರಾಳವಾಗಿ ತಮ್ಮ ವೈಚಾರಿಕತೆಯನ್ನು ಹರವಿಬಿಟ್ಟಿದ್ದಾರೆ. ಅದನ್ನು ಮುಂದೆ ನೋಡೋಣ.

*   *   *

ಪ್ರತಿಭಾ ದರ್ಶನ

ಪಾಶ್ಚಾತ್ಯ ದಾರ್ಶನಿಕ ತತ್ವವೇತ್ತರನ್ನು ಕಾಣಹೊರಟ ಗೌರೀಶರು ಅಷ್ಟಕ್ಕೇ ನಿಲ್ಲಲಿಲ್ಲ. ಅಲ್ಲಿ 'ಪ್ರಭೆ'ಗೊಂಡ ವಿವಿಧ ಪ್ರತಿಭೆಗಳನ್ನು ಗುರುತಿಸಿ ಹೆಮ್ಮೆಪಟ್ಟು, ಪಾಶ್ಚಾತ್ಯ ಪ್ರತಿಭೆ–೧, ಪಾಶ್ಚಾತ್ಯ ಪ್ರತಿಭೆ–೨, ಸತ್ಯಾರ್ಥಿ ಎಂಬ ಗ್ರಂಥಗಳನ್ನೇ ರಚಿಸಿದ್ದಾರೆ. ಆ ಮೂಲಕ ವಿವಿಧ ಕ್ಷೇತ್ರದ ವಿಶಿಷ್ಟ ಹಾಗೂ ವಿಶೇಷಜ್ಞರನ್ನು ನಮ್ಮವರಿಗೆ ಪರಿಚಯಿಸಿದ್ದಾರೆ.

ಅವನ್ನು—೧) ತತ್ವ ಪ್ರತಿಭೆ, ೨) ಕಲಾ ಪ್ರತಿಭೆ, ೩) ಗಾನ ಪ್ರತಿಭೆ, ೪) ಕ್ರಾಂತಿ ಪ್ರತಿಭೆ, ೫) ಕಾವ್ಯ ಪ್ರತಿಭೆ, ೬) ವಿಜ್ಞಾನ ಪ್ರತಿಭೆ, ೭) ಸಾಹಸ ಪ್ರತಿಭೆ, ೮) ರಾಜಕೀಯ ಪ್ರತಿಭೆ ಎಂದು ಕ್ರಮಶಃ ವಿಂಗಡಿಸಿ ಗೌರೀಶರ ಸಮಗ್ರ ಸಾಹಿತ್ಯ ಸಂಪುಟ–೩ರಲ್ಲಿ ಪೋಣಿಸಿ ಅಂಕೋಲೆಯ ರಾಘವೇಂದ್ರ ಪ್ರಕಾಶನದವರು ಪ್ರಕಟಿಸಿದ್ದಾರೆ.

ಹೀಗೆ ಪರಿಚಯಿಸಿದವರಲ್ಲಿ—ಪ್ರಾಚೀನ ತತ್ವವೇತ್ತರಲ್ಲಿ ಪ್ರಥಮ ಶ್ರೇಣಿಯ ಅತ್ಯುನ್ನತ ಜ್ಞಾನಿಯೆನಿಸಿ ಪ್ಲೇಟೋನ ಗುರುವಾಗಿದ್ದ 'ಸಾಕ್ರೇಟೀಸ್'ನ ಜೀವನ ಚಿತ್ರಣ, ಜ್ಞಾನದ ವಿಶ್ವಕೋಶ, ಸರ್ವಜ್ಞನೆನಿಸಿದ್ದ ಅರಿಸ್ಟಾಟಲ್, ಪಾಶ್ಚಾತ್ಯ ಕುಟಿಲ ರಾಜನೀತಿ ಜನಕ ನಿಕಾಲೋ ಮ್ಯಾಕಿಯೋವೆಲ್ಲಿ, ಸಕಲ ಕಲಾ ಪೂರ್ಣಚಂದ್ರ ಲಿಯನಾರ್ಡೊಡಾವಿನ್ಸಿ, ಪಶ್ಚಿಮದ ವಾಗ್ವೈಖರಿಯ ಗಂಗೋತ್ರಿ ಡೊಮೊಸ್ತನೀಜ್; ಪಾಶ್ಚಾತ್ಯ ಶಿಲ್ಪದ ದಿವ್ಯಶಕ್ತಿ ಮೈಕೇಲ್, ಪಾಶ್ಚಾತ್ಯ ಸಂಗೀತದ ಮೊಂಗಳಸಗಳಾದ ರತ್ನತ್ರಯ ಲುಟ್ವಿಗ್ ವಾನ್ ಬಿಥೋವಿನ್, ವೋಲ್‌ಗ್ಯಾಂಗ್ ಮೊಜಾರ್ಟ್, ವಿಲ್ ಹೆಲ್ಮವಾಗ್ನರ್. ರಾಜಕಾರಣದ ಮೂಲ ಸಿದ್ಧಾಂತಗಳನ್ನು ಸಾರಿದ 'ರುಸ್ಸೋ', ವಿಚಾರ ಕ್ರಾಂತಿಯ ಪತ್ರಿಕಾ ಸವ್ಯಸಾಚಿ ವ್ಹಾಲ್ಟಾಯರ್, ಜೀವ ವಿಕಾಸದ ಉತ್ಕ್ರಾಂತಿ ತತ್ವವನ್ನು ಸಾರಿ ಬಿರುಗಾಳಿ ಎಬ್ಬಿಸಿದ್ದ—ಚಾರ್ಲ್ಸ್ ಡಾರ್ವಿನ್ ; ಪಾಶ್ಚಾತ್ಯ ಸಾಹಿತ್ಯದ ಮಿನುಗುತಾರೆಗಳಾಗಿ ವಿಶ್ವದಾದ್ಯಂತ ಮಿಂಚಿದ–ಡಾ|| ಜಾನ್ಸನ್, ಶೆಲ್ಲಿ, ಬಾಯರನ್, ಕೀಟ್ಸ್ ಹಾಗೂ ವಿಜ್ಞಾನಕ್ಕೆ ಅಪೂರ್ವ ಸಂಶೋಧನೆ ನೀಡಿ ಶ್ರೀಮಂತಗೊಳಿಸಿ ದಾರಿತೋರಿರುವ–ನ್ಯೂಟನ್, ಲೂಯಿಪಾಶ್ಚರ್, ಥೋಮಸ್ ಎಡಿಸನ್, ಸಾಹಸಮಯ ಸಂಶೋಧಕರೆನಿಸಿ ಕೀರ್ತಿಶಾಲಿಗಳಾದ–ಕ್ಯಾಪ್ಟನ್ ಕುಕ್, ಕ್ಯಾಪ್ಟನ್ ಸ್ಕಾಟ್,

ಲಿವಿಂಗ್‌ಸ್ಟನ್,ಇವರುಗಳನ್ನೂ;ರಾಜಕೀಯ ಕ್ಷೇತ್ರದಲ್ಲಿ ಪ್ರಜಾಪ್ರಭುತ್ವದ ಔನ್ನತ್ಯದ ರುವಾರಿ ಅಬ್ರಾಹಂ ಲಿಂಕನ್, ಗ್ಯಾರಿಬಾಲ್ಟ, ಬಿಸ್ಮಾರ್ಕ್ ಮುಂತಾದವರನ್ನು ಅವರ ಜೀವನಚಿತ್ರ, ಸಾಧನೆ, ಸಿದ್ಧಿಗಳನ್ನೊಳಗೊಂಡು ಸಾರವತ್ತಾಗಿ, ಜ್ಞಾನವತ್ತಾಗಿ ಪರಿಚಯಿಸಿಕೊಟ್ಟಿದ್ದಾರೆ.

ಯುರೋಪದಲ್ಲಿ ಅಷ್ಟೇ ಏಕೆ ಪಾಶ್ಚಿಮಾತ್ಯ ಸಾಹಿತ್ಯದಲ್ಲಿ ಆಧುನಿಕ ಸಾಹಿತ್ಯದ–ಕನ್ನಡದಲ್ಲಿ ಹೆಸರಿಸುವ ನವ್ಯಸಾಹಿತ್ಯದ–ಪ್ರವರ್ತಕರೆನಿಸಿ ಅಲೆಯ ಹೊಸಗಾಳಿ ಎಬ್ಬಿಸಿದ ಟಿ. ಎಸ್. ಇಲಿಯಟ್, ಡಬ್ಲು. ಬಿ. ಯೇಟ್ಸ್, ಎಜ್ರಾಪೌಂಡ, ಒಡೆನ್‌ವಿಸ್ಟಾನ್‌ಹ್ಯೂ ಇವರುಗಳನ್ನೂ ಅವರ ವ್ಯಕ್ತಿಶಃ ಬದುಕು–ಬವಣೆ ಸಾಧನೆ ಇತ್ಯಾದಿಗಳನ್ನೇ ಮುಖ್ಯವಾಗಿಟ್ಟುಕೊಂಡು ಪರಿಚಯಿಸುವ 'ನವ್ಯದ ನಾಲ್ಕು ನಾಯಕರು' ಎಂಬ ಕೃತಿಯನ್ನೂ ನೀಡಿದ್ದಾರೆ. ಈ ಕೃತಿ ಅವರವರ ಸಾಹಿತ್ಯ ಸಮೀಕ್ಷೆಯಾಗಲೀ, ಸಾಹಿತ್ಯ ಪರಿಚಯವಾಗಲೀ ಆಗಿರದೇ 'ವ್ಯಕ್ತಿಚಿತ್ರದ' ರೂಪದಲ್ಲಿ ರಚಿತವಾದುದು. ಇದೂ ಒಂದು ಪ್ರತಿಭಾ ಪರಿಚಯವೇ ! ಜೊತೆಗೆ ಜೀವನ ಚರಿತ್ರೆಯೂ ಕೂಡ

ಹೀಗೆ ಒಟ್ಟು ೨೪ ಜನರನ್ನು 'ಪಶ್ಚಿಮದ ಪ್ರತಿಭೆ'ಯೆಂದು ಗುರುತಿಸುತ್ತ "ಲೇಖಕರು ಪ್ರತಿಯೊಬ್ಬರ ಜೀವನವನ್ನೂ ಅಚ್ಚುಕಟ್ಟಾಗಿ ಆಕರ್ಷಣೀಯವಾಗಿ ಚಿತ್ರಿಸಿದ್ದಾರೆ. ಪ್ರತಿಯೊಬ್ಬ ವಿಜ್ಞಾನಿಯ ಅಂತರಂಗವನ್ನೂ ಒಳಹೊಕ್ಕು ನೋಡಿದ್ದಾರೆ. ಅಕ್ಲಿಷ್ಟತೆ, ಸ್ಪಷ್ಟತೆ, ಶೈಲಿಯ ವಿಶಿಷ್ಟ ಲಕ್ಷಣ, ನಿರೂಪಣಾ ವಿಧಾನದಲ್ಲಿ ನಿಯತಿ–ಸ್ವಾರಸ್ಯ ತುಂಬಿಕೊಂಡಿದೆ"—ಹೀಗೆಂದು ಈ ಕೃತಿಗಳ ಬಗ್ಗೆ ಮಾನ್ಯ ಶ್ರೀ ದೇ.ಜ.ಗೌ ಪ್ರಶಂಸಿಸಿದ್ದಾರೆ. ಸಂಗ್ರಹಿಸಿದ್ದ ಸಂಗತಿಗಳನ್ನೊಳಗೊಂಡಿದ್ದರೂ ಅಲ್ಲಿ ತಮ್ಮದೇ ಆದ ವಿಶ್ಲೇಷಣೆ–ವಿವಿಧ ವಿಶ್ಲೇಷಣಗಳೊಂದಿಗಿನ ಭಾಷ್ಯ ನೀಡಿ ಜೀವನಚರಿತ್ರೆಯನ್ನು ಸಂಕೀರ್ಣವಾಗಿಯೂ ಬೋಧಕವಾಗಿಯೂ ವಿಶದೀಕರಿಸಿರುವುದರಲ್ಲಿ ಸ್ವತಃ ಗೌರೀಶರಿಗಿರುವ ಜ್ಞಾನಪ್ರತಿಭೆಯೂ ಹೊರಹೊಮ್ಮಿಕೊಂಡಿದೆ.

* * *

ಈ ಜೊತೆಗೇ ಭಾರತೀಯ ವಿಜ್ಞಾನ ಪ್ರತಿಭೆಯನ್ನೂ ಕನ್ನಡಕ್ಕೆ ಪರಿಚಯಿಸಲು ಅವರು ಮರೆಯಲಿಲ್ಲ. ಭಾರತೀಯ ವಿಜ್ಞಾನಿ ಭಾಗ–೧ ರಲ್ಲಿ

ಸಸ್ಯಜೀವನದ ವಿದ್ಯುತ್ ಸ್ಪಂದನ ಗುರುತಿಸಿದ ಪ್ರಾಣಿ ಶಾಸ್ತ್ರಜ್ಞ ಮಹೇಂದ್ರ ಲಾಲ ಸರಕಾರ, ರಸಾಯನ ಶಾಸ್ತ್ರದ ಕುಲಪುರೋಹಿತ ಸರ್ ಜಗದೀಶ್ಚಂದ್ರ ಬೋಸ್, ವಿಜ್ಞಾನಿ–ಸಮಾಜ ಸುಧಾರಕ ಎಂದು ಖ್ಯಾತರಾದ ಪ್ರಫುಲ್ ಚಂದ್ರ ರೇ, ಭೌತಶಾಸ್ತ್ರದ ಜಗದ್ವಿಖ್ಯಾತ ವಿಜ್ಞಾನಿ ಭಾರತರತ್ನ ಡಾ॥ ಸಿ. ವಿ. ರಾಮನ್ ಇವರುಗಳನ್ನು ಪರಿಚಯಿಸಿದ್ದರೆ–ಭಾರತೀಯ ವಿಜ್ಞಾನಿ ಭಾಗ–೨ ರಲ್ಲಿ ಪ್ರಾ. ರಾಮಚಂದ್ರ, ಶ್ರೀನಿವಾಸ ರಾಮಾನುಜನ್ (ಗಣಿತ ಶಾಸ್ತ್ರಜ್ಞ), ಸತ್ಯೇಂದ್ರನಾಥಬೋಸ್ (ಭೌತ ಶಾಸ್ತ್ರಜ್ಞ), ಡಾ॥ ಶಾಂತಿಸ್ವರೂಪ ಭಟನಾಗರ (ವಿಜ್ಞಾನ ಸಂಶೋಧನಾ ಸಂಸ್ಥೆಯ ಪ್ರವರ್ತಕ) ಹಾಗೂ ಶ್ರೇಷ್ಠ ಅಣುವಿಜ್ಞಾನಿ ಡಾ॥ ಹೋಮಿ ಜಹಾಂಗೀರ ಭಾಭಾ ಮುಂತಾಗಿ ಒಂಬತ್ತು ಪೂರ್ವಿಕ ವಿಜ್ಞಾನಿಗಳನ್ನು ಅಭ್ಯಸನೀಯವಾಗಿ ಪರಿಚಯಿಸಿಕೊಟ್ಟಿದ್ದಾರೆ.

ಭಾರತೀಯ ವಿಜ್ಞಾನ ಪರಂಪರೆಯನ್ನೂ ಮತ್ತು ಆ ಕ್ಷೇತ್ರದ ಮಹಾನ್ ವಿಜ್ಞಾನಿಗಳ ಪರಿಚಯವನ್ನೂ ನೀಡುವ ಇವೂ ಮಹತ್ವದ ಕಾಣಿಕೆ. 'ನಮ್ಮ ದೇಶದ ವೈಜ್ಞಾನಿಕ ಪರಂಪರೆಯನ್ನು ನಾವು ಸರ್ ಜಗದೀಶಚಂದ್ರರ ಈಚೆಗೆ ಅಥವಾ ಹೆಚ್ಚೆಂದರೆ ಡಾ॥ ಮಹೇಂದ್ರಲಾಲ ಸರಕಾರರ ತನಕವೇ ಒಯ್ಯುತ್ತೇವೆ. ಆದರೆ ಅವರಿಗೂ ಹಿಂದೆ ಹುಟ್ಟಿ ಬೆಳೆದು ಸಾಧನೆಗೈದು ಬೆಳಕಿಗೆ ಬಂದಿದ್ದ ಪ್ರತಿಭೆಗಳನ್ನು ನಾವು ಇಂದು ಮರೆಯುತ್ತಿದ್ದೇವೆ—ಅಂಥವರ ಜೀವನ ಚರಿತ್ರೆಯನ್ನೂ ಬರೆದು ನಮ್ಮ ಹಳೆಯ ವೈಜ್ಞಾನಿಕ ಪರಂಪರೆಯತ್ತ ನಮ್ಮ ಗಮನ ಸೆಳೆಯುವ ಗೌರೀಶರ ಈ ಪ್ರಯತ್ನವೂ ಶ್ಲಾಘನೀಯ ತಾನೆ !

* * *

ವಿಜ್ಞಾನಿಗಳ, ವೈಜ್ಞಾನಿಕ ಪ್ರತಿಭೆಗಳ ಬಗೆಗೆ ಹೆಚ್ಚು ಆಸಕ್ತಿ ತೋರಿ ಬರಹಗಳಲ್ಲಿ ಸೆಳೆದು ತಂದಿರುವ ಗೌರೀಶರು ಮಾನವತಾವಾದದೊಂದಿಗೇ ಅದನ್ನು ಶೋಧಿಸುತ್ತಾರೆ. ಗೌರೀಶರು ಮಾರ್ಕ್ಸನನ್ನು, ಮಾನವೇಂದ್ರನಾಥರನ್ನೂ ಮೆಚ್ಚಿಕೊಳ್ಳುತ್ತ ಪ್ರಶಂಸಿಸುವುದರ ಒಟ್ಟಿಗೇ ಅವರೆಲ್ಲರಿಗಿಂತ ಭಿನ್ನವಾಗಿ ನಿಂತು ವಿಚಾರಮಾಡಿ ತಮ್ಮ ನಿಲುವನ್ನು ಸಾರಲು ಸಮರ್ಥರಾಗಿದ್ದಾರೆ. ಈ ಬಗೆಯ ವೈಚಾರಿಕ ಮಾನವತಾವಾದ ಪ್ರತಿಪಾದನೆಯೇ ಸಾಂಸ್ಕೃತಿಕ ಸತ್ವವನ್ನೂ ಉಳಿಸಿಕೊಳ್ಳುವ ಲಕ್ಷ್ಯವನ್ನೂ ಹೊಂದಿದ ಅವರ 'ವಿಚಾರವಾದ'ದ ವೈಶಿಷ್ಟ್ಯ.

೧೬

ಆಸ್ತಿಕ್ಯ, ನಾಸ್ತಿಕ್ಯ–ಕರ್ಮವಾದ, ನಿರೀಶ್ವರವಾದ ಎಂಬೀ ನಂಬುಗೆಯ ಪಂಗಡಗಳು ಸಮಾಜದಲ್ಲಿ ಎಂದಿನಿಂದಲೋ ಬೆಳೆದುಕೊಂಡು ಬಂದಿವೆ. ಈ ವಾದ–ಪ್ರತಿವಾದಗಳ ಗುಂಪುಗಳು ಪರಸ್ಪರ ಪೈಪೋಟಿ, ಮೇಲಾಟ ಕೀಳಾಟಗಳಿಂದ ಘರ್ಷಣೆಗಿಳಿದಿವೆ. ಅಲ್ಲಿ ತಮ್ಮ ತಮ್ಮನ್ನು ಉಳಿಸಿಕೊಳ್ಳುವ, ಉಳಿಸಿಕೊಂಡು ಬರುವ ಪ್ರಯತ್ನ ನಡೆದಿವೆ. ಅಂದಿನಿಂದ ಇಂದಿನವರೆಗೂ ಅದು ವ್ಯಾಪಿಸಿಕೊಂಡಿದೆ. ಈ ಎರಡರಲ್ಲಿಯೂ ಪ್ರತಿಪಾದಿತವಾಗಿರುವಂಥ ತತ್ವ ಪ್ರಣಾಲಿಕೆಗಳನ್ನು ಪ್ರಾಬಲ್ಯಗೊಳಿಸುವ ಪ್ರಚಾರ ವೈಖರಿಯೂ ಜೀವಂತ ನಡೆದು ಬರುತ್ತಲಿವೆ. ಇದನ್ನು ಗಮನಿಸಿದ ಮಹಾನ್ ಚಿಂತಕ, ಲೇಖಕ ಗೌರೀಶ ಕಾಯ್ಕಿಣಿಯವರು ಕುತೂಹಲ ಪ್ರಜ್ಞೆಯಿಂದ ಆ ದಿಸೆಯಲ್ಲಿ ಇಣುಕಿ ಪ್ರಶ್ನಿಸಿ ಪರಿಪ್ರಶ್ನಿಸಿ ತಮ್ಮದೇ ಆದ ನಿಲುವಿನಲ್ಲಿ ಕಂಡುಕೊಂಡು ಕನ್ನಡಕ್ಕೆ ತಂದುಕೊಟ್ಟ ವೈಚಾರಿಕ ದರ್ಶನ: 'ಲೋಕಾಯತ' (ಚಾರ್ವಾಕ ಮತ) 'ನಾಸ್ತಿಕನೂ ಮತ್ತು ದೇವರು' ಎಂಬ ಎರಡು ಕೃತಿಗಳಲ್ಲಿ ತುಂಬಿಕೊಂಡಿವೆ.

ಭಾರತದ ಅತಿ ಪ್ರಾಚೀನ, ಪ್ರಪ್ರಥಮ ಎನ್ನಬಹುದಾದ 'ಭೌತಿಕವಾದ' (Materialism) ಅಂತಂದರೇನೆ 'ಚಾರ್ವಾಕ ದರ್ಶನ'ವು. ಇದು ಗ್ರೀಕ ತತ್ವಜ್ಞಾನಿಗಳು ಇತ್ತ 'ಭೌತಿಕವಾದ' ತತ್ವದರ್ಶನಕ್ಕಿಂತಲೂ ಮುಂಚಿನದು. ಭಾರತದ ಋಗ್ವೇದ ಕಾಲದಲ್ಲಿ ಉಪನಿಷತ್ತುಗಳು ಪ್ರಚಲಿತಗೊಳ್ಳುತ್ತಿರುವಾಗಲೇ ಲೋಕ ಪ್ರತೀತ ತತ್ವವಾಗಿ, ಷಡ್ದರ್ಶನಗಳಲ್ಲಿ ಒಂದಾಗಿ, ಪೃಥ್ವಿ, ಅಪ್, ತೇಜ ಈ ಮೂರೇ ತತ್ವಗಳ ಆಧಾರದಿಂದ ಲೋಕಗ್ರಾಹ್ಯವಾದ–ಇಂದ್ರಿಯ ಗಮ್ಯವಾದ ಅರಿವಿಗೆ ಸ್ವಭಾವ ವಾದಕ್ಕೆ ಮಹತ್ವ ನೀಡುವ ಈ 'ಚಾರ್ವಾಕ ದರ್ಶನ'ವನ್ನು ಗೌರೀಶರು ಮಹಾಭಾರತ, ರಾಮಾಯಣ, ಪ್ರಬೋಧ ಚಂದ್ರೋದಯ (ಚಾರ್ವಾಕ ತತ್ತ್ವವನ್ನಾಧರಿಸಿದ ನಾಟಕ) ದೇವೀಪ್ರಸಾದ ಚಟ್ಟೋಪಾಧ್ಯಾಯರ 'ಲೋಕಾಯತ' ಹಾಗೂ ಮಾನವೇಂದ್ರನಾಥರ 'ಮಟೀರಿಯಾಲಿಸಂ' ಇತ್ಯಾದಿ ಗ್ರಂಥಗಳಿಂದ ನಿಮಿತ್ತ ನೆರವು ಪಡೆದು 'ಲೋಕಾಯತ' ಎಂಬ ಹೆಸರಿನ ಕೃತಿಯನ್ನಾಗಿ ರಚಿಸಿದ್ದಾರೆ. ಹೀಗಿದ್ದರೂ ಕೂಡ ಚಾರ್ವಾಕ ಮತದ ಪ್ರಮೇಯಗಳನ್ನು

ಇಷ್ಟು ಕೂಲಂಕುಶವಾಗಿ ವಿಶ್ಲೇಷಿಸಿ ಚರ್ಚಿಸುವಲ್ಲಿ ಇಂಥ ಬೇರೊಂದು ಗ್ರಂಥ ಯಾವುದೂ ಪರಿಸಾಟಿಯಾಗಲಿಕ್ಕಿಲ್ಲ.

'ಚಾರ್ವಾಕರು' ಎಂದರೇ ಚತುರೋಕ್ತಿಯಿಂದ ಬುದ್ಧಿಪ್ರಾಮಾಣ್ಯದಿಂದ (ಪ್ರಜ್ಞಾವಾದ) ಆಕರ್ಷಿಸಿ ವೇದದ, ಕರ್ಮಕಾಂಡದ ವಿರೋಧವನ್ನು ಮಾಡಿದವರು ನಾಸ್ತಿಕವಾದಿಗಳು ಎಂಬಿಷ್ಟು ಸ್ಥೂಲಭಾವನೆ ವ್ಯಾಪಕವಾಗಿರುವಲ್ಲಿ ಗೌರೀಶರ ಈ ಕೃತಿಯು 'ಚಾರ್ವಾಕ'ರ ಕುರಿತು ಹೊಸ ಅರಿವನ್ನೂ, ಆಸಕ್ತಿಯನ್ನೂ, ಜಿಜ್ಞಾಸೆಯನ್ನೂ ಹುಟ್ಟಿಸಿಬಿಡುತ್ತದೆ. ಪ್ರಸ್ತುತದ ವಿಚಾರವಾದಿಗಳಿಗೆಲ್ಲ ಪ್ರಿಯವಾಗುತ್ತದೆ.

—"ಅಂದು ಕೂಡಾ ಚಾರ್ವಾಕ ದರ್ಶನವನ್ನೂ, ವಿಚಾರ ಪ್ರಣಾಲಿಕೆಯನ್ನೂ ಪ್ರೀತಿಸುವವರಿದ್ದರು. ವೇದ ಮತಾನುಯಾಯಿಗಳಾದ ಬ್ರಾಹ್ಮಣರೂ ಕಲಿಯಬೇಕಾದ ದರ್ಶನವೊಂದಾಗಿ ಆಗಿನ ಗುರುಕುಲದಲ್ಲಿ ಅಧ್ಯಯನದ ಪಠ್ಯವೂ ಆಗಿ ಸೇರಿಕೊಂಡಿತ್ತು. 'ಚಾರ್ವಾಕ' ಜ್ಞಾನಿಗಳನ್ನು ಹಲವು ಗಣ್ಯ ರಾಜರೇ ತಮ್ಮ ರಾಜನೀತಿ ಸಲಹೆಗಾರರನ್ನಾಗಿ ಇರಿಸಿಕೊಂಡಿದ್ದರು. ಬಹುಜನ ಸಮೂಹದಲ್ಲಿ, ಸಮಾಜದಲ್ಲಿ ಚಾರ್ವಾಕ ಮತಪ್ರಿಯರಿದ್ದರು. ಕೃಷಿ, ಗೋರಕ್ಷಾ, ವಾಣಿಜ್ಯಗಳ ನೇರಮಾರ್ಗದಿಂದ ಗಳಿಸಿ ಈಗಲೇ ಸುಖವನ್ನು ಅನುಭೋಗಿಸಿರಿ. ಬ್ರಾಹ್ಮಣ್ಯವನ್ನೂ ಅದರ ಕರ್ಮಕಾಂಡ ಯಜ್ಞಯಾಗಾದಿಗಳನ್ನೂ ಕ್ಷತ್ರಿಯರನ್ನೂ ಬುದ್ಧಿಪೂರ್ವಕವಾಗಿ ವಿರೋಧಿಸಿರಿ"—ಎಂಬಿತ್ಯಾದಿ ಚಾರ್ವಾಕರ ಆದೇಶವು ಬಹುಜನರಿಗೆ ಅಪ್ಯಾಯಮಾನವಾಗಿತ್ತು. ಚಾರ್ವಾಕರು—ಇಂದ್ರಿಯಗಮ್ಯವಾದ ಜಗತ್ತು ಮಾತ್ರ ಸತ್ಯ ; ಅನ್ಯಥ ಮಿಥ್ಯ ಎಂದು ಸಾರಿದರು. ಆ ಚಾರ್ವಾಕ ವಾದಿಗಳು ಪ್ರಾಚೀನ ಕಾಲದ ಭೌತಿಕ ವಿಜ್ಞಾನಿಗಳೇ ಆಗಿದ್ದರು. ಅವರು ನಾಸ್ತಿಕರು ನಿಜ. ಆದರೆ ಸಂಯಮಿಗಳು ; ವಿದ್ರೋಹಿಗಳಲ್ಲ. 'ಸಾಲವನ್ನು ಮಾಡಿಯಾದರೂ ತುಪ್ಪವನ್ನು ಕುಡಿಯಿರಿ—ಎಂದರೇ ವಿನಃ ಹೆಂಡವನ್ನು ಕುಡಿಯಿರಿ'ಎನ್ನಲಿಲ್ಲ. ಕಾಮ—ವಾಮ ಆಚಾರವನ್ನು ಪ್ರಚೋದಿಸಿದರೂ ನಿಯತ್ತನ್ನು ಪ್ರತಿಪಾದಿಸಿದರು. ಕೇವಲ ವೈದಿಕ ಕರ್ಮಕಾಂಡದ ಯಜ್ಞಯಾಗ, ಸ್ವರ್ಗ ನರಕ, ಪುನರ್ಜನ್ಮ—ಪರಲೋಕ ಕಲ್ಪನೆಗಳನ್ನೆಲ್ಲಾ ಖಂಡಿಸಿದರು. ವೈದಿಕ ಪಂಥದವರನ್ನು

ಹೀಯಾಳಿಸಿದರು. ವಿರೋಧಿಸಿದರು. (ಇದು ದೈಹಿಕವಾಗಿಯೂ ಘಟಿಸಿತು) ಸತ್ತೆಯೊಂದಿಗೆ ಹೋರಾಡಿದರು.

ಆದರೆ ವೈದಿಕ ವಿಚಾರದ ಭದ್ರಭೂಮಿಕೆಯೊಂದಿಗೆ ತಮ್ಮ ವರ್ಚಸ್ಸಿಗಾಗಿ ಹೋರಾಡುವುದರಲ್ಲಿಯೇ ಆ ಲೋಕಾಯತರ (ಚಾರ್ವಾಕರ) ಬಹುಪಾಲು ಶಕ್ತಿ ಮತ್ತು ಸಮಯ ವ್ಯಯಿಸಿತು. ಜತೆಗೆ ವೈದಿಕ ವಿಚಾರ ಸರಣಿಯವರಿಂದ ನಿಷ್ಠುರ ನಿಂದನೆಯ ಆಘಾತ ಬೇರೆ. ಹೀಗೆಲ್ಲಾ ಸಂದರ್ಭದಿಂದಾಗಿ 'ಲೋಕಾಯತ' (ಜನರ ಮಧ್ಯೆ ಇರುವಂಥ ಎಂಬರ್ಥ) ಮತವು ಅನಂತರದಲ್ಲಿ ಬಂದ ಸಾಂಖ್ಯ, ವೈಶೇಷಿಕ ದರ್ಶನಗಳಂತೆ ಹೆಚ್ಚು ಬೌದ್ಧಿಕ ವಟ್ಟದಲ್ಲಿ ವ್ಯಾಪಿಸಿಕೊಳ್ಳಲಾಗಲಿಲ್ಲ. ಆದರೂ ಕೂಡಾ ನಶಿಸಲಿಲ್ಲ. ಚರಕ, ಸುಶ್ರುತ, ವಾಗ್ಭಟ, ಆರ್ಯಭಟ ಇತ್ಯಾದಿ ನಮ್ಮ ಪುರಾತನ ವಿಜ್ಞಾನಿಗಳು ಲೋಕಾಯತ, ತತ್ವಗಳೊಂದಿಗೆ ನಿಕಟತೆ ಹೊಂದಿದ್ದರು. ಬ್ರಾಹಸ್ಪತ್ಯ ಸೃಷ್ಟಿಯ ಈ ಲೋಕಾಯತ ಮತದ ಸತ್ವದ ಹೊಳಹು ಹರಹು ಬೌದ್ಧ-ಜೈನ ದರ್ಶನಗಳಲ್ಲಿಯೂ ಸೇರಿಕೊಂಡಿತು'-ಇತ್ಯಾದಿ ವಿಶ್ಲೇಷಣೆಯನ್ನು ಇಲ್ಲಿ ನೀಡಿದ್ದಾರೆ.

'ಚಾರ್ವಾಕ ದರ್ಶನವು ಪ್ರಾಥಮಿಕ ಸ್ವರೂಪದ ವೈಚಾರಿಕ ತತ್ವದ ಆವಿಷ್ಕಾರ. ಅದರ ಕಾಲ ಕ್ರಿ.ಶ.ಪೂ. ಏಳನೇ ಶತಮಾನವಿರಬಹುದು. ಅದರ ವಿಚಿಕಿತ್ಸೆ ಅರೆಬರೆ ಅನಿಸಬಹುದು. ಆದರೆ ಆ ನಿರೀಶ್ವರವಾದವು ಪುನಶ್ಚೇತನ ಪಡೆಯಿತು. ಆ ಸ್ವಭಾವವಾದ (ಮನುಷ್ಯನು ಸ್ವಭಾವದಿಂದಲೇ ಸ್ಥಿತಿ-ಗತಿ ಪಡೆಯುತ್ತಾನೆ) ವಿಶ್ವದ ಹುಟ್ಟು ಬೆಳವಣಿಗೆಗೆ ಯಾವುದೇ ಹೇತುವಿಲ್ಲ ಅದು ಸ್ವಭಾವಜನ್ಯ - ಎಂಬಿತ್ಯಾದಿಯಾಗಿ ಅಂದಿನ ಲೋಕಾಯತವು ನೀಡಿರುವ ಸ್ಥೂಲ ಜ್ಞಾನದ ನಿವೇಶನದಿಂದ ನಮ್ಮ ಮುಂದಿನೆಲ್ಲ ತತ್ವಜ್ಞಾನದ ಭೂಮಿಕೆ; ವಿಕಾಸದ ಹೆಜ್ಜೆಗಳನ್ನು ಅರಿತುಕೊಳ್ಳಬಹುದು. ನಮ್ಮ ತತ್ವಜ್ಞಾನದ ಇತಿಹಾಸದಲ್ಲಿ ಇದೊಂದು ಮಿಗಿಲಾದ ಮೈಲಿಗಲ್ಲು'-ಈ ಎಲ್ಲ ಸಂಗತಿ ವಿಚಾರಗಳನ್ನು ಗೌರೀಶ ಕಾಯ್ಕಿಣಿಯವರು ವ್ಯಾಖ್ಯಾನಿಸಿ ಪರಿಚಯಿಸಿದ ರೀತಿಯು ಎಷ್ಟು ರೋಚಕವಾಗಿದೆ ಎಂದರೆ ಚಾರ್ವಾಕ ನಿಷ್ಠುರರೂ-ನಾಸ್ತಿಕ ವಿರೋಧಿಗಳೂ ಚರಿತ್ರೆಯ ಸ್ವಾದವನ್ನಾಗಿ ಕುತೂಹಲದಿಂದ ಪಡೆದುಕೊಳ್ಳುವ ಒಂದು ದರ್ಶನವಾಗಿಬಿಡುತ್ತದೆ. ಆ ಚಾರ್ವಾಕ ಮತದ ಸೋಲು-ಗೆಲುವಿನ

ಅಂಶವನ್ನೂ, ಅದರ ಸ್ವಭಾವ-ಪ್ರಭಾವವನ್ನೂ ಪರ-ವಿರೋಧದ ಸಾರ್ವತ್ರಿಕತೆಯ ಸತ್ವವನ್ನೂ ಓರ್ವ ಕೇವಲ ಪರಿಚಯಕಾರಕ ಪ್ರಜ್ಞೆಯಿಂದಲೇ ಬರೆದಿದ್ದಾರೆ ಎಂಬುದು ನಿಜವಿದ್ದಷ್ಟೇ; ಅದನ್ನು ಸಾಧಿಸಲು ಉಲ್ಲೇಖಿಸಿದ ವಿವಿಧ ಆಕರಗಳ ವಿಪುಲ ಅವತರಣಿಕೆಗಳನ್ನು ಕಂಡಾಗ ಗೌರೀಶರ ಜ್ಞಾನ ವಿಸ್ತಾರವನ್ನೂ ಅಗಾಧ ಬರಹ ದುಡಿಮೆಯನ್ನೂ ಕಂಡುಕೊಂಡು ಎದೆ ತುಂಬಿಕೊಳ್ಳುತ್ತೇವೆ ಚಾರ್ವಾಕ ಮತವನ್ನು ಸುಲಲಿತವಾಗಿ ಪರಿಚಯಿಸಿಕೊಳ್ಳುತ್ತೇವೆ.

* * *

೧೭

ಮುಕ್ತಮನಸ್ಸಿನ ಸಾಂಸ್ಕೃತಿಕ ಸತ್ಯಾನ್ವೇಷಣೆಯನ್ನೇ ತಮ್ಮ ದಿವ್ಯದೃಷ್ಟಿಯನ್ನಾಗಿಸಿ ವಿಚಾರದ ಬೆನ್ನುಹತ್ತಿ ಬಗೆಯುವ ಶೀಲದ ಗೌರೀಶರ ಪ್ರಗಲ್ಭ ವೈಚಾರಿಕ ಜಿಜ್ಞಾಸೆಗೆ ಇನ್ನೊಂದು ಮಹತ್ವದ ಉದಾಹರಣೆ— 'ನಾಸ್ತಿಕನು ಮತ್ತು ದೇವರು' ಎಂಬ ಕೃತಿ.

'ನಾಸ್ತಿಕನು ಮತ್ತು ದೇವರು' ಎಂಬ ಈ ಸಂಪ್ರಬಂಧದಲ್ಲಿ ಗೌರೀಶರು ಮುಖ್ಯವಾಗಿ ಮೂರು ಶಾಸ್ತ್ರೀಯ ನಿಲುಮೆಯಿಂದ ನೋಡಿ ವಿಷಯ-ವಿಚಾರವನ್ನು ವಿಶ್ಲೇಷಿಸುತ್ತಾರೆ. ಆ ಮೂರು ನಿಲುಮೆಗಳೆಂದರೆ—೧) ಬ್ರಹ್ಮಜ್ಞಾನಿಯದು (Cosmology) ೨) ತತ್ವಜ್ಞಾನಿಯದು (Teleology) ೩) ಆತ್ಮಜ್ಞಾನಿಯದು (Ontology).

"ಬ್ರಹ್ಮಜ್ಞಾನ ಅಥವಾ ಕಾಸ್ಮೋಲೋಜಿ ಈ ಬ್ರಹ್ಮಾಂಡದ ಆದಿಕಾರಣವನ್ನು ಹುಡುಕುತ್ತದೆ. ತತ್ವಜ್ಞಾನ ಅಥವಾ ಟೆಲಿಯೋಲೋಜಿ-ವಿಶ್ವವಿಕಾಸದ ಅಥವಾ ಈ ಚರಾಚರ ಸೃಷ್ಟಿಯ ಅಂತಿಮ ಉದ್ದೇಶವನ್ನು, ಹೇತುವನ್ನು, ಗುರಿಯನ್ನು ಹುಡುಕುತ್ತದೆ. ಮತ್ತು ಆತ್ಮಜ್ಞಾನ ಅಥವಾ ಒಂಟೋಲೋಜಿಯು ಮಾನವನ ಅಂತರಂಗದ ಆವಶ್ಯಕತೆ ಪ್ರೇರಣೆ ತುಡಿತಗಳನ್ನು ಹುಡುಕುತ್ತದೆ, ದೇವರ ಅಸ್ತಿತ್ವ ಮತ್ತು ಸ್ವರೂಪಗಳ ಬಗೆಗೆ ಹಾಗೂ ಆದರ ಹುಸಿ, ಭ್ರಮೆಗಳ ಬಗೆಗೆ ಈ ಮೂರೂ ದೃಷ್ಟಿಯಿಂದ ಜರುಗಿದ ಜಿಜ್ಞಾಸೆ ವಿಚಿಕಿತ್ಸೆ, ಪ್ರತಿಪಾದನೆ, ಪ್ರತಿಕ್ರಿಯೆಗಳನ್ನು ವಿಹಂಗಮವಾಗಿ ಅಷ್ಟೇ ಮನೋಜ್ಞವಾಗಿ ಇಲ್ಲಿ ಗೌರೀಶರು ವಿಶ್ಲೇಷಿಸಿದ್ದಾರೆ.

'ನಾಸ್ತಿಕ' ತತ್ವದ ನಿಜತ್ವವನ್ನು ಬಿಂಬಿಸುವುದಕ್ಕೆ ಪೂರ್ವಪಕ್ಷವಾಗಿ ದೇವರ ಪರಿಕಲ್ಪನೆಯ ಹುಟ್ಟು ಬೆಳವಣಿಗೆ, ಅದನ್ನು ನಂಬಿಕೊಂಡ ಮುಗ್ಧತೆ, ಭಾವುಕ ಆಸ್ತಿಕತೆಗಳ ನಿಟ್ಟನ್ನು ಮಂಡಿಸಿ ಪರಿಮಾರ್ಜನೆಗೊಳಿಸುವ ಚಿತ್ರಣ ಚಿತ್ತಾಕರ್ಷಕಗೊಂಡಿದೆ—ವಿಶ್ವದ ಸೃಷ್ಟಿ, ನಿಸರ್ಗದ ಉತ್ಪತ್ತಿ ಇವುಗಳ ಅಗಾಧ ಸ್ವರೂಪವನ್ನು ಕಂಡು ಬೆಚ್ಚಿದ ಮಾನವ, ಸೃಷ್ಟಿಯ ರಹಸ್ಯದ ವೈಜ್ಞಾನಿಕ ಅರಿವಿಲ್ಲದೇ ದಿಗಿಲುಗೊಂಡು ಹೇಗೆ ಅಲ್ಲೊಂದು ಆದಿಶಕ್ತಿಯನ್ನು ಭಾವಿಸಿದ ಆ ಶಕ್ತಿಯು ಒಂದು ತತ್ವವೋ (ಜಡಶಕ್ತಿಯೋ) ಅಥವಾ ಇಚ್ಛಾಸಂಕಲ್ಪದ ಪ್ರೇರಣೆಗಳುಳ್ಳ ಚೇತನೆಯೋ ಎಂಬುದನ್ನು ಸ್ಪಷ್ಟಗೊಳಿಸಿ ಕೊಳ್ಳಲಾಗದೇ ಕವಲು ದಾರಿಯಲ್ಲಿ ನಿಂತು—"ತನ್ನ ಅನುಭವದ ಅನುಮಾನದಲ್ಲಿ ಮಾನವನು, ಆ ಆದಿಶಕ್ತಿಯನ್ನು ಆದಿಕಾರಣವನ್ನು ಆದಿಪುರುಷ-ಪರಮ ಪುರುಷ, ಪರಮಾತ್ಮ-ಪರಮೇಶ್ವರ ಎಂದೆಲ್ಲಾ ಸ್ವಾಭಾವಿಕವಾಗಿಯೇ ಭಾವಿಸಿಕೊಂಡು ಮುಂದುವರಿದು ಆ ಮಾರ್ಗವಾಗಿ ತನ್ನಮಟ್ಟಿಗೆ ಒಂದು ಭಾವನಾಮಯ ಸಾಂತ್ವನೆಯನ್ನೂ, ಸಮಾಧಾನವನ್ನೂ ಕಂಡುಕೊಂಡನು. ಅದನ್ನು ಆರಾಧಿಸತೊಡಗಿದ"—ಎಂಬುದರ ವಿವರವನ್ನು ಗೌರೀಶರು ಸಾಧಾರವಾಗಿ ಸಾಕಾರವಾಗಿ ಉಕ್ತಿ-ಸೂಕ್ತಿಗಳೊಂದಿಗೆ ನೀಡಿ ಅದರ ಬೆಳವಣಿಗೆಯ ಹಂತ, ಅಲ್ಲಿಯ ಪ್ರಕೃತಿ-ಪ್ರವೃತ್ತಿ-ವಿಕೃತಿಗಳನ್ನೂ ವಿಶ್ಲೇಷಿಸುತ್ತಾರೆ. ಆದರೆ—

"ಆ ಆದಿಕಾರಣವು ತತ್ವವೆಂಬ ತಿಳುವಳಿಕೆಯ ನೆಲೆಗೆ ತಲುಪಿದರೂ ಕೂಡ ನಮ್ಮ ತತ್ವವೇತ್ತರೂ, ದಾರ್ಶನಿಕರೂ, ಆಚಾರ್ಯಪುರುಷರೂ ತಮ್ಮನ್ನು ನಂಬಿದ ಜನಸಾಮಾನ್ಯರ ಭಾವಿಕತನದ ತೃಪ್ತಿಗಾಗಿಯೋ ಕರ್ಮ ಸಂಗಿಗಳಾದ ಅಜ್ಞಾನಿಗಳ ಬುದ್ಧಿಭೇದವನ್ನು ಮಾಡಬಾರದು ಎಂಬ ಒಂದು ಅನುಕೂಲ ಸೂತ್ರವನ್ನು ಹಿಡಿದೋ, ತತ್ವಚಿಂತನೆಯ ಬದಲು ಸಗುಣದೇವರ ಉಪಾಸನೆಯನ್ನೇ ಪ್ರೋತ್ಸಾಹಿಸಿದರು"—ಎಂದು ಅಭಿಪ್ರಾಯಪಡುತ್ತ ಇದನ್ನು ಸಾಕಷ್ಟು ಸಾಧಾರ ಉಕ್ತಿಗಳನ್ನೇ ಎತ್ತಿತೋರಿಸಿ ಸಾಧಿಸುತ್ತಾರೆ.

—'ಸಗುಣ ದೇವರಿಗೆ ಅವರವರದೇ ಪರಿಸರದ ಕುಟುಂಬದ ಪರಿಕಲ್ಪನೆ ನೀಡಿದರು, ರೂಪಕಗೊಳಿಸಿದರು. ಈ ದೇವರನ್ನು—ಕರ್ತುಂ! ಅಕರ್ತುಂ! ಅನ್ಯಥಾ ಕರ್ತುಂ! ಎಂದೆಲ್ಲಾ ಬಿಂಬಿಸಿ ಕಥೆಕಟ್ಟಿ ನಂಬಿಸಿದರು'. ಹೀಗೆ ಬೆಳೆದು ಬಂದ ನಂಬುಗೆಯಲ್ಲಿ ಆಸ್ತಿಕರ ಗುಂಪು ಬೆಸೆದುಕೊಂಡ ರೀತಿಯನ್ನೂ

ಬಣ್ಣಿಸುತ್ತ, ಅವನ್ನು ಅಲ್ಲಲ್ಲಿಯೇ ಪ್ರಶ್ನಿಸಿ, ವಿನೋದಗೊಳಿಸಿ ಆ ದೈವಿಕ ಭ್ರಮೆ–ಉನ್ಮಾದವನ್ನು ನಿರಸನಗೊಳಿಸುವ ತತ್ವವನ್ನೂ ಮುಂದಿಡುತ್ತ ಗೌರೀಶರು ನಾಸ್ತಿಕ ತತ್ವದ ನಿಜಕ್ಕೆ ಒಪ್ಪಿಸಿಕೊಳ್ಳುವಂತೆ ಪೌರ್ವಾತ್ಯ, ಪಾಶ್ಚಾತ್ಯ ಚಿಂತಕರ ಚಿಂತನೆ ಚಿಲುಮೆಯಲ್ಲಿ ನಿಷ್ಕರ್ಷಗೊಳಿಸಿ ತಮ್ಮದೇ ಒರೆಹಚ್ಚಿ ಇತ್ಯರ್ಥಗೊಳಿಸಿ ಸಾಧಿಸುವ ಬಗೆಯು ಅನನ್ಯವಾಗಿ ತೋರಿ ಕೊಳ್ಳುತ್ತದೆ ಸಗುಣಾರಾಧನೆ, ದೈವತಾರಾಧನೆ ಸಂಯುಕ್ತಿಕವಲ್ಲವೆಂಬು ದನ್ನು ಭಗವದ್ಗೀತೆ, ಉಪನಿಷತ್ ವಾಕ್ಯಗಳ ಪ್ರಮಾಣದೊಂದಿಗೇ ಸಾಧಿಸಿ ತೋರಿಸುತ್ತಾರೆ.

ವೈಜ್ಞಾನಿಕ ದೃಷ್ಟಿಯಿಂದ 'ವ್ಯಕ್ತಿರೂಪ'ದ ದೇವರ ಸೃಷ್ಟಿಯು ಒಂದು ಅಹಮಿಕೆಯ ಮನೋವೃತ್ತಿಯ ವ್ಯಾಪಾರವೆಂದೂ; ಚಿಂತನಶೀಲ ತತ್ವನಿಷ್ಠ ನಾಸ್ತಿಕನು ಈ ವ್ಯಕ್ತಿರೂಪದ ನಿಗ್ರಾನುಗ್ರಹ ಶಕ್ತಿಯ ಭಕ್ತರಿಗೆ ಇಷ್ಟಾರ್ಥ ವನ್ನೂ ಕರುಣಿಸುವ ಈ ದೇವತ್ವವನ್ನು ಒಪ್ಪಲಾರ. ದೇವರ ಕುರಿತು ಒಂದು ಪ್ರವೃತ್ತಿ ಇದು ಎನ್ನುವುದಕ್ಕಿಂತ ಹೆಚ್ಚಿನ ಸುಳಿವು ಸಿಕ್ಕಿಲ್ಲ. ಕಲೆ, ರಸ, ಸಾಹಿತ್ಯ ಗಣಿತ ಇತ್ಯಾದಿಗಳ ಪ್ರಜ್ಞೆಯಂತೆಯೇ ದೇವರ ಕುರಿತು ಮಾನವ ನಲ್ಲಿ ಬೆಳೆದು ಬಂದ ಒಂದು ಕಾಲ್ಪನಿಕ ಭಾವಗ್ರಂಥಿ. ಮನಸ್ಸಿನ ವಿಕಾರದ ವಿಪಾಕ–ಎಂದು ಚಿತ್ರಿಸುತ್ತಾರೆ.

"ಜನ ಸಮಾಜವನ್ನು ಅಂಕೆಯಲ್ಲಿಡಲು ಅನಾದಿಯಿಂದ ಮಾಡಿಕೊಂಡು ಬಂದ ಕಟ್ಟುಪಾಡು–'ಧರ್ಮ'! ಆಚಾರದಿಂದ ಧರ್ಮವು ರೂಪಗೊಳ್ಳಬೇಕು. ಆದರೆ ಈ ಧರ್ಮಕ್ಕೆ 'ಪ್ರಭು'–ದೇವರು ಎಂಬುದು ನಮ್ಮ ಸಾಂಪ್ರದಾಯಿಕ ಭಾವನೆ. ಇಂದು ನಮ್ಮ ಮಾನವತಾವಾದಿಗಳು ದೇವರಿಲ್ಲದ ಧರ್ಮವನ್ನೇ ಮಾನ ವತೆಯ ತಳಹದಿಯ ಮೇಲೆ ಪ್ರತಿಪಾದಿಸುತ್ತಾರೆ"–ಎಂದನ್ನುತ್ತ ಈ ದೇವರ ಭಯ, ಆಜ್ಞೆ, ಬೋಧನೆಯಿಂದ ಧರ್ಮಾಚರಣೆಯನ್ನು ರೂಢಿಸುವುದು ಹುಸಿ. (ಹೊರಗಿನಿಂದ ಒತ್ತಡ ಪ್ರೇರಣೆಯ ಒಳ್ಳೆಯತನ ನಿಜವಾದುದಲ್ಲ. ಅದು ಒಳಗಡೆಯಿಂದಲೇ ಉದ್ಭವಗೊಳ್ಳಬೇಕು ಎಂದು ಈ ಮುಂಚೆ ಪ್ರತಿಪಾದಿ ಸಿದ್ದನ್ನು ಗಮನಿಸಬಹುದು.) ಮತ್ತು ಈ ದೇವರ ಕಲ್ಪನೆಯ ಧರ್ಮಾಜ್ಞೆಯ ಹಿಂದೆ ಪ್ರಭುತ್ವಶಾಹಿಯ, ಬಂಡವಾಳಶಾಹಿಯ ಸತ್ತೆಯ ಮೇಲ್ವರ್ಗದ ಸಂಘಟನೆಯ ಹುನ್ನಾರು ಇದೆ ಎಂಬುದನ್ನೂ ಗೌರೀಶರು ಗುರುತಿಸುತ್ತಾರೆ.

"ಸಾಮಾಜಿಕ ತಾರತಮ್ಯವನ್ನು, ವರ್ಗೀಯ ವೈಷಮ್ಯವನ್ನು ಶಾಶ್ವತ ಹಾಗೂ ಸುಸೂತ್ರಗೊಳಿಸಲಿಕ್ಕೆ ದೇವರ ಅಧಿಷ್ಠಾನವನ್ನು ಧರ್ಮವೆಂಬ ವಿಚಾರ ಸರಣಿಯು ಸಂಮೋಹನಾಸ್ತ್ರದಂತೆ ಕೆಲಸ ಮಾಡುತ್ತದೆ" ಎನ್ನುವಲ್ಲಿ 'ವಿಚಾರವಾದ' ಬರಹ ನೆನಪಾಗುತ್ತದೆ.

ಗೌರೀಶರಲ್ಲಿ–ಯಾವೊಂದು ವಿಷಯವನ್ನು ಚರ್ಚಿಸುವಾಗಲೂ 'ಪೂರ್ವ ಗ್ರಹಿಕೆ' (ಪೂರ್ವಾಗ್ರಹ) ಅಂಟು ನಂಟು ಇರುವುದಿಲ್ಲವೆಂಬುದಕ್ಕೆ 'ದೇವರು' ಭಾವನೆ ಕುರಿತು ಅವರು ತಳೆಯುವ ನಿರ್ಲಿಪ್ತ ಭಾವವನ್ನು ಈ ಮಾತಿನಲ್ಲಿ ನೋಡಿ : "ಒಂದು ಅರ್ಥದಲ್ಲಿ ದೇವರೆಂಬ ಮಾತಿನ ಬಗೆಗೆ 'ಅಸ್ತಿ' ಎಂದಾಗಲೀ 'ನಾಸ್ತಿ' ಎಂದಾಗಲೀ ಒಂದು ವಿಧಾನವನ್ನು ಮಾಡುವುದೇ ಪ್ರಮಾದವು. ನಾವು ಇದ್ದೇವೆ–ಆದ್ದರಿಂದ ದೇವರು ಉಂಟು ಎಂಬ ಸಿದ್ಧಾಂತ ಒಂದರ್ಥದಲ್ಲಿ ನಿಜ. ನಮ್ಮ ಅಸ್ತಿತ್ವವೇ ದೇವರ ಅಸ್ತಿತ್ವಕ್ಕೆ ಆಧಾರ." (ಸೋಹಂ ಭಾವಯೇತ್)—

"ಭಗವತ್ ಸಮಾಗಮದ ಉತ್ಕಟ ಭಾವದ ಆವೇಶ–ಉನ್ಮಾದಗಳನ್ನುಂಟುಮಾಡುವ 'ಸಮಾಧಿ', ತನ್ಮಯತೆಗಳಾಗಲೀ ಅವರ ಪಾಲಿಗೆ ಅವರ ಅಂತಃಪ್ರಜ್ಞೆಗೆ ಸತ್ಯವೇ ಆಗಿರಬಹುದು. ಪ್ರಾಮಾಣಿಕವಾಗಿಯೇ ಅವರು ದೇವರನ್ನು–ತನ್ನವನಾಗಿ ಕಂಡು ಭಾವಮುಗ್ಧರಾಗಿರಬಹುದು. ಇದು ಮಿಸ್ಟಿಕ್ (Mystic) ಅಂದರೆ-ರಹಸ್ಯಮಯ, ಹೇಳಲೂ ತಿಳಿಯಲೂ ಇತರರಿಗೆ ಅಗಮ್ಯ." ಹೀಗೆಂದ ಮಾತ್ರಕ್ಕೆ ಇದು ಈ ವಿಶ್ವ ಪ್ರಪಂಚದ ರಹಸ್ಯವಲ್ಲ. ಸರ್ವಾಂಗೀಣ ಸತ್ಯವಲ್ಲ. ಸಹಭಾಗಿಯಾಗಿಸುವ ಇತ್ಯರ್ಥ ಅದಕ್ಕಿಲ್ಲ ಎಂಬ ನಿಲುವಿಗೇ ಗೌರೀಶರು ಒಲಿದುಕೊಳ್ಳುತ್ತಾರೆ. ಆದರೆ ಇಲ್ಲಿ ತೋರಿಕೊಳ್ಳುವ ಅವರ ವಿಚಾರ ವೈಶಾಲ್ಯತೆಯೆಂದರೆ—ನಾಸ್ತಿಕ, ಆಸ್ತಿಕ ಯಾವುದೇ ಆದರೂ ಅದು ಒಂದು ನಂಬುಗೆ. ಅವರವರ ಅರಿವಿನದೇ ಪ್ರಾಮಾಣ್ಯದ್ದು ಎಂದು ಗ್ರಹಿಸಿ "ದೇವರ ಬಗೆಗೆ ವಿಶೇಷ ವಿಚಿಕಿತ್ಸೆ ಮಾಡುವ ಇಚ್ಛೆ, ಶಕ್ತಿ ಅಥವಾ ಆಗತ್ಯವಿಲ್ಲದ ನನ್ನ ಅನೇಕಾನೇಕ ಮಿತ್ರರು ದೇವರ ಅನುಗ್ರಹವನ್ನು ಪಡೆಯಲು, ನಂಬಿ ನಡೆಯಲು ಸದಾ ಅಣಿಯಾಗಿರುತ್ತಾರೆ. ಅಂಥವರಲ್ಲಿ ಬುದ್ಧಿ ಭೇದವನ್ನು ಹುಟ್ಟಿಸುವ ಕಿಡಿಗೇಡಿತನ ನನ್ನದಲ್ಲ"–ಎಂದು ಹೇಳಿಕೊಳ್ಳುವ ಮೂಲಕ ಗೌರೀಶರು ತಮ್ಮ ಬರವಣಿಗೆಯಲ್ಲಿ ಯಾವುದೇ ರಾಗ-ದ್ವೇಷ-ಆವೇಶ

ವಿಕಾರವಶತೆಯಿಲ್ಲ. ಕೇವಲ ಸತ್ಯಾನ್ವೇಷಣೆಯ ವಿವೇಚನೆ, ವಿವೇಕತನದ್ದು ಎಂಬುದನ್ನೂ ಪ್ರಕಟಪಡಿಸುತ್ತಾರೆ. ತತ್ವತಃ ನಮಗೆ ನಾವೇ ಸಮರ್ಥಿಸಿ ಕೊಳ್ಳುವ ಪ್ರಜ್ಞಾವಾದದ ಮನೋವ್ಯಾಪಾರ, ಸಂಯುಕ್ತವಾಗಿ ಕಾಣಿಸುವ ಬೌದ್ಧೀಕರಣ(Rationalization)ವೆನ್ನಬಹುದು. 'ದೇವ–ಧರ್ಮ'ಗಳ ಮೀಮಾಂಸೆ ಎನ್ನುತ್ತಾರೆ.

ಗೌರೀಶರು ಆವರೆಗೂ ಚರ್ಚಿಸಿದ ದೇವರ ಅಸ್ತಿತ್ವದ ಸತ್–ಚಿತ್ ವ್ಯಾಪಾರದ 'ಹೇತುವಾದ', 'ಸ್ವಭಾವವಾದ', 'ಸತ್ತಾವಾದ' ಮುಂತಾದ ಸಯುಕ್ತಿಕ ವಿಚಾರದ ನಿಲುಮೆ ನಿಲುಕುಗಳಿಂದ ಕಂಡರಿಸಿದ ಅಂಶಗಳಿಗೆ ಅಂತಿಮವಾಗಿ ತಮ್ಮದೇ ಆದ ಐದು ನಿಖರ ಅಭಿಪ್ರಾಯ ರೂಪದಲ್ಲಿ ಸಮೀಕರಿಸಿ ಮುಕ್ತಾಯಗೊಳಿಸುತ್ತಾರೆ—

"ನೀತಿ ತತ್ವವಾಗಲೀ, ಸೌಂದರ್ಯ ತತ್ವವಾಗಲೀ ದೇವರ ಅಸ್ತಿತ್ವಕ್ಕೆ ಒಂದು ಪ್ರಮಾಣವಲ್ಲ. ಅಸ್ತಿತ್ವಗಳ ಆಯಾಮಗಳೆಲ್ಲಾ ಈ ದೇವರ ಕಲ್ಪನೆಗೆ ಒಪ್ಪುವಂತಿಲ್ಲ. ಆಜ್ಞೇಯವಿದ್ದುದು ಯಾವಾಗಲೂ ಅಂಚಿಂತ್ಯ, ಅಗಮ್ಯ. ಜಗತ್ತು–ಜೀವನ ಇವೆರಡನ್ನೂ ಒಳ ಹೊರಗೆ ವ್ಯಾಪಿಸಿರುವ ಸತ್ಯವೋ, ತತ್ವವೋ 'ದೇವರು' ಎಂದು ಒಪ್ಪಿಕೊಂಡರೂ ಅದನ್ನು ವಿಂಗಡವಾಗಿ ನನ್ನ ನಿಮ್ಮ ಸಂಗಡ ಕಟ್ಟಿಕೊಂಡು ಮೇಲಾಟದಿಂದ ಪೂಜಿಸಬೇಕಾದದ್ದೇನೂ ಇಲ್ಲ. ವಿಶ್ವ ಸೃಷ್ಟಿಯ ಮಹತ್ತು ಬೃಹತ್ತುಗಳ ಇದಿರು ಮಾನವನ ಮನಸ್ಸು ಸಹಜ ವಾಗಿಯೂ ಅತ್ಯಲ್ಪ. ಅದರ ಈ ಅರಿವಿನಿಂದ ಹೊರಹೊಮ್ಮುವ ಅಸಹಾಯಕತೆ ಅದರ ಆರಾಧನೆಯ ಭಾವಗಳನ್ನು ಒಂದು ಭಾವೋನ್ಮಾದದ ವ್ಯಾಯಾಮವಾಗಿ ಅನುಷ್ಠಾನವೆಂದೋ ಪೂಜೆಯೆಂದೋ ಆಚರಿಸುವುದರಲ್ಲಿ ನಮ್ಮ ದ್ರವ್ಯ ಶಕ್ತಿ ಸಮಯಗಳನ್ನು ದುಂದು ಮಾಡುವುದಕ್ಕಿಂತ ಅಂಥ ಒಂದು ಭಾವನಾಮಯ ಸಂತೃಪ್ತಿಯೇ ನಮಗೆ ಅವಶ್ಯವಿದ್ದರೆ–ಅದು ಹಾಗೆ ಇದ್ದೇ ಇರುತ್ತದೆಂಬುದೂ ಸುಳ್ಳಲ್ಲ–ವ್ಯಕ್ತಿಯು ಸಮಾಜಕ್ಕಾಗಿ ವಿಶ್ವದ ಒಳಿತಿಗಾಗಿ ಚೆಲುವಿಗಾಗಿ ಸರ್ವರ ಸಂತೋಷಕ್ಕಾಗಿ ದುಡಿಯುವುದೇ ವಿವೇಕಕ್ಕೂ ವಸ್ತುಸ್ಥಿತಿಗೂ ಒಪ್ಪುವ ನಮ್ಮ ಮನಸ್ಸಿಗೂ ಒಪ್ಪಿಗೆಯಾಗುವ 'ದೈವಭಕ್ತಿ' ಎನ್ನಬಹುದು."

—ಹೀಗೆ ಮುಕ್ತಾಯಗೊಳಿಸುವಲ್ಲಿ ಮಾನವೀಯ ಮೌಲ್ಯಕ್ಕೇ ಒತ್ತುಕೊಟ್ಟು ಅದನ್ನು ಎತ್ತಿಹಿಡಿಯುವ ಗೌರೀಶರ ದೃಷ್ಟಿ ತಾತ್ವಿಕ

ಚಿಕಿತ್ಸೆಯೂ ಆಗಿರುವುದರಿಂದ 'ಕನ್ನಡದಲ್ಲಿ ದೇವರ ಕುರಿತಾದ ಚರ್ಚೆಯ ಇಲ್ಲಿಯವರೆಗಿನ ವಿವೇಚನೆಗಳಲ್ಲೇ ಇದೊಂದು ಮಹತ್ವದ ಪುಸ್ತಕ' ಮತ್ತು ಗಣ್ಯವಾದುದು.

(ಸಾಹಿತ್ಯ ಸಮೀಕ್ಷೆ ಎಂಬ ಗ್ರಂಥವೊಂದರಲ್ಲಿ ಡಾ॥ ಎಂ. ಜಿ. ಹೆಗಡೆ ಅವರು ಗೌರೀಶರ ಈ ಪುಸ್ತಕದ ಬಗ್ಗೆ ಬರೆಯುತ್ತ, ಗೌರೀಶರ 'ನಾಸ್ತಿಕರು ಮತ್ತು ದೇವರು' ಪುಸ್ತಕ ಪ್ರಕಟವಾಗಿ ಮೂರು ವರುಷಗಳ ನಂತರ ೧೯೯೧) ಎ. ಎನ್. ಮೂರ್ತಿರಾವ್ ರವರ 'ದೇವರು' ಎಂಬ ಗ್ರಂಥದಲ್ಲಿ ಗೌರೀಶರ ಈ ಮಹತ್ವದ ಪುಸ್ತಕದ ಬಗ್ಗೆ ಉಲ್ಲೇಖವೇ ಇಲ್ಲದಿರುವ ಬಗ್ಗೆ ಆಶ್ಚರ್ಯ ವ್ಯಕ್ತ ಪಡಿಸಿ, ಮೂರ್ತಿರಾವ್ ಅವರ ಪುಸ್ತಕಕ್ಕಿಂತಲೂ, ಸಾಂಪ್ರದಾಯಿಕ ಆಸ್ತಿಕ ವಾದಗಳೊಂದಿಗೆ ಸಮಾಜ ಸುಧಾರಕರ, ವಿಜ್ಞಾನಿಗಳ ಕಲಾವಿದರ ಆಸ್ತಿಕ್ಯ ವನ್ನೂ ಪೌರ್ವಾತ್ಯ, ಪಾಶ್ಚಾತ್ಯ ಜಗತ್ತಿನಲ್ಲಿ ಈ ಕುರಿತಾಗಿ ನಡೆದ ಚಿಂತನೆ ಗಳನ್ನೂ ಪೂರ್ವಪಕ್ಷವಾಗಿ ಸ್ವೀಕರಿಸಿದ ಗೌರೀಶರ ವಿವೇಚನೆಯ ಆಳ–ವಿಸ್ತಾರ ಹೆಚ್ಚಿನದು. ಅಧ್ಯಯನ ಹಾಗೂ ವಿವೇಚನೆಯ ವಿಧಾನ ಶಾಸ್ತ್ರೀಯವಾದುದು" ಎಂದಿರುವುದು ಗಮನಾರ್ಹ.)

" * *

೧೮

ವಿಮರ್ಶಾಕ್ರಿಯೆ

ಮಾನ್ಯವರ ಡಾ॥ ಗೌರೀಶರ ವೈಚಾರಿಕ ಸಾಹಿತ್ಯದಲ್ಲಿಯ ತುಣುಕು–ಮಿಣುಕುಗಳನ್ನು ಅಷ್ಟಿಷ್ಟು ಕಂಡುಕೊಂಡದ್ದಾಯಿತು. ಇದು ವಿಮಾನವನ್ನೇರಿ ಹಿಮಾಲಯುವನ್ನು ಸುತ್ತಿ ವೀಕ್ಷಣೆ ಮಾಡಿದಂತೆ, ವಿಹಗನೋಟ. ಅಥವಾ ಅವರೇ ಒಮ್ಮೆ ಉದ್ಗಾರವೆಳೆದಿದ್ದಂತೆ ಕಡಲನೀರ ಕೊಡದಲ್ಲಿ ತುಂಬಿಟ್ಟು ತೋರಿಸಿದಂತೆ ಒಂದು ಕಿರು ಪ್ರಯತ್ನವಷ್ಟೇ!

ಗೌರೀಶರ ವಿಚಾರ ಸಾಹಿತ್ಯಕ್ಕೆ ಗಣ್ಯತೆ ಇದ್ದಂತೆಯೇ ಅವರು ನೀಡಿದ ವಿಮರ್ಶಾ ಸಾಹಿತ್ಯ ಕೃತಿಗಳೂ ತನ್ನದೇ ಆದ ವಿಶೇಷತೆ ಗುಣಗಣ್ಯತೆಯನ್ನು ಮೆರೆಸಿವೆ. 'ಸ್ವಯಮೇವ ಮೃಗೇಂದ್ರತಾ' ಅಂದಂತೆ ಗೌರೀಶರದು ಇಲ್ಲಿಯೂ ಸ್ವಯಂಭೂಸತ್ವ. ಭಾರತೀಯ ಕಾವ್ಯಮೀಮಾಂಸಾಶಾಸ್ತ್ರ, ಲಕ್ಷಣಶಾಸ್ತ್ರಗಳು

ಕರಗತವಾಗಿರುವಷ್ಟೇ ಪಾಶ್ಚಾತ್ಯ ವಿಮರ್ಶಾ ಪರಿಪಾಕವೂ ಅವರಲ್ಲಿ ತುಂಬಿಕೊಂಡಿದೆ. ಅರಿವಿನ ಹದವನ್ನು ವಿಮರ್ಶಾಕಾರ್ಯದಲ್ಲಿ ಅನುಸಂಧಾನಗೊಳಿಸಿಕೊಂಡು ಸಿದ್ಧಪಡಿಸುವ ಆ ಅಡುಗೆ ನಿಜವಾಗಿಯೂ ಓದುಗರಿಗೊಂದು ಸ್ವಾದಿಷ್ಟ ರಸಪಾಕ. ಓದುಗನ ಆಸಕ್ತಿಯನ್ನು ಕುದುರಿಸಿ ಮೂಲಕೃತಿಯನ್ನೇ ಓದಿದಂಥ ರಸಾನುಭವ ಒದಗಿಸುವ ಗೌರೀಶರು ವಿಮರ್ಶೆಯಂಥ ಬರಹವನ್ನೂ ತಮ್ಮ ವಿಶಿಷ್ಟ ಶೈಲಿಯಿಂದಾಗಿಯೇ ರಸಾರ್ದ್ರಗೊಳಿಸಿಬಿಡುತ್ತಾರೆ.

ಗೌರೀಶರು ನೀಡಿದ ವಿಮರ್ಶಾ ಬರಹಗಳಲ್ಲಿ–ಒಂದು ಸಾಹಿತ್ಯ ಗ್ರಂಥವನ್ನೇ ಇಟ್ಟುಕೊಂಡು ಅದರ ಸುತ್ತು ತಿರುಗಿ ವಿಮರ್ಶಿಸುವುದು; ಮತ್ತು ಸಾಂದರ್ಭಿಕ–ಸಾನ್ನಿವೇಶಿಕವಾಗಿ ಸಂಗತಿಗಳನ್ನು ಹಿಂಜಿ ನೋಡುವುದು ಎಂಬೀ ಎರಡು ಮುಖ್ಯ ಹಂದರಗಳು ಕಾಣಿಸಿಕೊಳ್ಳುತ್ತವೆ. ಅಂಬಿಕಾತನಯದತ್ತ (ದ. ರಾ. ಬೇಂದ್ರೆ)ರ ಕಾವ್ಯಗಳ ಸಮಗ್ರ ರಸಗ್ರಹಣಾಗ್ಯೆದ 'ಹಂಪಿನ ಕರೆ'; ಕಣವಿಯವರ ಕಾವ್ಯದೃಷ್ಟಿ; ದಿನಕರ ದೇಸಾಯಿರ ಕಾವ್ಯ; ವಿ. ಜಿ. ಭಟ್ಟರ ಕಾವ್ಯ; ಸ್ವಚ್ಛಂದದಿಂದ ನವ್ಯದತ್ತ (ಗಂಗಾಧರ ಚಿತ್ತಾಲರ ಕಾವ್ಯ) ಇವು ಇತ್ತೀಚೆಗೆ ಪ್ರಕಟಗೊಳ್ಳುತ್ತ ಬಂದಿರುವ 'ಗೌರೀಶರ ಸಮಗ್ರ ಸಾಹಿತ್ಯ'ದ ನಾಲ್ಕನೆಯ ಸಂಪುಟದಲ್ಲಿ ಸಮಾವೇಶಗೊಂಡಿವೆ. 'ಮಾನವ್ಯಕವಿ' ಎಂಬುದು ಬಿ. ಎ. ಸನದಿಯವರ ಸಮಗ್ರ ಕಾವ್ಯಾವಲೋಕನ ಕೃತಿ. ಇವು ಆವರವರ ಕೃತಿಗಳನ್ನು ಪ್ರಾತಿನಿಧಿಕವಾಗಿರಿಸಿಕೊಂಡು ಗೈದ ದೀರ್ಘ ವಿಮರ್ಶಾ ಪ್ರಬಂಧಗಳು. 'ಪ್ರಜ್ಞಾನೇತ್ರದ ಬೆಳಕಿನಲ್ಲಿ' ಎಂಬ ಒಂದು ಕೃತಿಯಲ್ಲಿರುವ— ೧. ಶಂ. ಬಾ. ಜೋಶಿಯವರ ಸಾಮಾಜಿಕ ತತ್ವಗಳ ವಿವರಗಳು; ೨. ಕಾಲು ಮತ ದರ್ಶನ; ೩. ಕರ್ನಾಟಕ ಪೂರ್ವಪೀಠಿಕೆಯ ಕೇಂದ್ರ ಪ್ರಮೇಯಗಳು; ಎಂಬವು ಹಾಗೂ 'ಕಟಾಕ್ಷ' ಎಂಬ ವಿಮರ್ಶಾ ಸಂಕಲನದ—೧ ಹೊಸ ಕಾವ್ಯದ ಹಾದಿ; ೨. ಅನುಭವ ಮತ್ತು ಅಭಿವ್ಯಕ್ತಿ; ೩. ಪರಕೀಯ ಪ್ರಜ್ಞೆ; ೪. ಸಾಹಿತ್ಯದಲ್ಲಿ ಶೂದ್ರ ಬ್ರಾಹ್ಮಣ ಸಂದರ್ಭ; ೫. ಕಾವ್ಯದಲ್ಲಿ ದಲಿತ ಪ್ರಜ್ಞೆ; ೬. ರೊಮ್ಯಾಂಟಿಕ್ ಮತ್ತು ನವೋದಯ; ೭. ವಿಮರ್ಶೆಯಲ್ಲಿ ನವ್ಯತೆ; ೮. ವಿಮರ್ಶೆಯ ಬಗೆಗೆ ವಿಮರ್ಶೆ–ಎಂಬ ಎಂಟು ಪ್ರಬಂಧಗಳು. ಇವೆಲ್ಲ ಸಾಹಿತ್ಯಿಕ ಸಂದರ್ಭದ ವಿಮರ್ಶಾ ಪ್ರಬಂಧಗಳು, ವಹಾಲಿಕ ಚರ್ಚೆಗಳೆಂದೆನಿಸಿಕೊಂಡಿವೆ.

'ಗುಣಗೌರವ' ಎಂಬ ಒಂದು ಕೃತಿಯಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರರ ಸುಬ್ಬಣ್ಣ ಕಥೆಯ ಬಗೆಗೆ ಹಾಗೂ ಬೇಂದ್ರೆಯವರ 'ಮೇಘ ದೂತ'ದ ಬಗೆಗೆ ಮತ್ತು ಗೀತನಾಟಕಗಳು, ರಸಿಕರಂಗರ ಭಾವಗೀತಗಳು, ಕಡೆಂಗೋಡ್ಲು-ಆಲಿವರ್ ಗೋಲ್ಡ್‌ಸ್ಮಿತ್ (ಒಂದು ತೌಲನಿಕ); ರಸಾದ್ರ್ರ ವಿಮರ್ಶಕ ಅನಕೃ; ಭೈರಪ್ಪನವರ ಕಾದಂಬರಿಗಳಲ್ಲಿ ಧರ್ಮ; ಇತ್ಯಾದಿ ಹತ್ತು ವಿಮರ್ಶಾ ಪ್ರಬಂಧಗಳಿವೆ. ಇವಲ್ಲದೇ ಸ್ವಾತಂತ್ರ್ಯೋತ್ತರ ವಿಚಾರ ಸಾಹಿತ್ಯ ಎಂಬ ವಿಮರ್ಶಾತ್ಮಕ ಕೃತಿಯನ್ನೂ ನೀಡಿದ್ದಾರೆ.

'ವಾಲ್ಮೀಕಿ ತೂಕಡಿಸಿದಾಗ'-ಎಂಬುದಂತೂ ತೂಕಡಿಸಿದವರನ್ನೆಲ್ಲ ಎಚ್ಚರಿಸಿದ್ದ ಬಿಸಿಗಾಳಿಯ ಪ್ರಬಂಧ. 'ರಾಮಾಯಣದಲ್ಲಿ ಮಾನವೀಯ ಮೌಲ್ಯಗಳು ; ಹಾಗೂ ಇನ್ನೂ ಹಲವು ಸಂಶೋಧನಾತ್ಮಕ ವಿಮರ್ಶೆ, ಪ್ರತಿ ಕ್ರಿಯಾತ್ಮಕ ವಿಮರ್ಶೆಗಳೂ, ನಿಯತಕಾಲಿಕಗಳಿಗೆ ಬರೆದಿದ್ದ ಬಿಡಿ ವಿಮರ್ಶಕ ಬರಹಗಳೂ ಸುಪರಿಚಿತ.

ವಾಲ್ಮೀಕಿಯ ರಾಮಾಯಣ ಮಹಾಕಾವ್ಯವನ್ನು ಸಾಂಪ್ರದಾಯಿಕ ನೋಟದ ಭಾವನಾಪರವಶತೆಯ ಮುಸುಕಿನಿಂದ ಹೊರಬಂದು ನಿಂತು ಅದನ್ನು 'ಮಹಾಕಾವ್ಯ'ವೊಂದರ ನೆಲೆಯಲ್ಲಿ ಮಾತ್ರ ಕಂಡು ತಾಂತ್ರಿಕವಾಗಿ ಬಿಚ್ಚಿರಿಸಿ ಚರ್ಚಿಸಿದ್ದು ಗೌರೀಶರ ಸೂಕ್ಷ್ಮಗ್ರಾಹಿ ತೀಕ್ಷ್ಣಮತೀಯ ನಿದರ್ಶನ ಕಾವ್ಯ ತಂತ್ರದನ್ವಯವಾಗಲೀ, ಪಾತ್ರಸೃಷ್ಟಿಯ ಧೋರಣೆಯಲ್ಲಾಗಲೀ ಪರಿಭಾವಿಸಿ ದಾಗ 'ಮರ್ಯಾದಾ ಪುರುಷೋತ್ತಮ'ನೆಂದು ಕೊಂಡಾಡಿಸಿಕೊಂಡಿದ್ದ ಆ ರಾಮನು ತಪ್ಪಿಬಿದ್ದನೋ-ವಾಲ್ಮೀಕಿ ತೂಕಡಿಸಿದ್ದನೋ ? ಎಂಬ ಮಹತ್ತರ ಪ್ರಶ್ನೆಯನ್ನು ಇಲ್ಲಿ ಎತ್ತಿಕೊಂಡ ಗೌರೀಶರು-'ಮೂಲ ವಾಲ್ಮೀಕಿ ರಾಮಾ ಯಣದ ಕಥೆಯಂತೆ ಶ್ರೀರಾಮನು ವನವಾಸಕ್ಕೆ ಹೋಗಬೇಕಾದ ಪ್ರಸಂಗ ಉಂಟಾಗಿದ್ದುದು ದಶರಥನು ಕಿರಿಪತ್ನಿ ಕೈಕೇಯಿಗೆ ನೀಡಿದ ವಚನವನ್ನು ಪರಿಪಾಲಿಸಲಿಕ್ಕಾಗಿ ಎಂಬುದು ಸುಸ್ಪಷ್ಟ. ಆದರೆ ಆ ವಚನ ಎಂಥದು ? "ತನ್ನ ಮಗ ಭರತನಿಗೆ ಪಟ್ಟ. ರಾಮನಿಗೆ ೧೪ ವರುಷ ವನವಾಸ" ಎಂದು ಆಕೆ ವರ ಕೇಳಿದ್ದನ್ನು ಈಡೇರಿಸಬೇಕಾದ ವಚನವದು. ಇಲ್ಲಿ ೧೪ ವರುಷ ರಾಮ ವನವಾಸಕ್ಕೆ ತೆರಳಿ ಅನಂತರ ಮರಳಿ ಬಂದು ಪಟ್ಟವೇರುವ ಇಂಗಿತವಿಲ್ಲ. ಅಯೋಧ್ಯಾ ರಾಜ್ಯವು ಭರತನದೇ ಹಕ್ಕಿನದು. ಅದು ಕನ್ಯಾಶುಲ್ಕವಾಗಿ

ಕೈಕೇಯಿಗೆ ಎಂದೋ ನೀಡಲ್ಪಟ್ಟಿದು. ಹೀಗಿರುವಾಗ ಭರತ ಕೈಕೇಯಿಯರು ನಂದಿಗ್ರಾಮದಲ್ಲಿ ರಾಮನನ್ನು ತಿರುಗಿ ಬಾ ಎಂದು ಕರೆದಾಗ ವನವಾಸ ಮುಗಿಸಿ ಬಂದು ಪಟ್ಟವೇರುತ್ತೇನೆಂದು ರಾಮನ ಬಾಯಿಯಿಂದ ಒಪ್ಪಿಸಬಾರದಿತ್ತು. ಭರತನ ಆಗ್ರಹಕ್ಕೆ ಹಾಗೆ ಒಪ್ಪಿಕೊಳ್ಳುವುದಾದಲ್ಲಿ ಅವರು ಪ್ರಾರ್ಥಿಸಿದಂತೆ ಆಗಲೇ ಮರಳಿ ಬಂದು ಪಟ್ಟವೇರಬಹುದಿತ್ತಲ್ಲಾ. ಹದಿನಾಲ್ಕು ವರುಷದ ನಂತರ ಬರುವುದೂ ಒಂದೇ, ಆಗಲೇ ಬರುವುದೂ ಒಂದೇ. ಎರಡೂ ಪಿತೃವಚನಕ್ಕೆ ಸಮಾನ ವಿರೋಧವಾದುದು. ಹೀಗೆ ಈ ಸಂಗತಿಯನ್ನು ಗೌರೀಶರು ವಾದಿಸಿದ ವಿಮರ್ಶೆಯು ಪತ್ರಿಕೆಯೊಂದರಲ್ಲಿ ಗಂಭೀರ ವಾದವನ್ನು ಹುಟ್ಟುಹಾಕಿ ಜನಜನಿತವಾಗಿತ್ತು. ಸಾಧಾರಯುಕ್ತ ವಿಮರ್ಶೆಯು ಅನನ್ಯ ವೆನಿಸಿತ್ತು.

ಅದೇ ರೀತಿ ಇಂಥ ಹಲವು ವಿಮರ್ಶೆಗಳನ್ನು ಕೇವಲ ಸಾಹಿತ್ಯಿಕ ನೆಲೆಯಲ್ಲಿಯೇ ಗೌರೀಶರು ನೀಡಿದ್ದಾರೆ. ರಾಮಾಯಣದಲ್ಲಿ ಜೀವನ ಮೌಲ್ಯ, ಅಹಲ್ಯೋದ್ಧಾರ. (ಅಹಲ್ಯವೆಂಬುದು ಶಿಲಾರೂಪದಲ್ಲಿದ್ದ ಸ್ತ್ರೀಯಲ್ಲ. ಅ+ಹಲ್ಯ=ನೇಗಿಲ ಉಳಿಮೆಯಿರದ ಬಂಜರು ಭೂಮಿ–ಎಂಬ ವ್ಯಾಖ್ಯಾನ) ಇತ್ಯಾದಿ ಮನನೀಯ ಚರ್ಚೆಯನ್ನು ಸಾಹಿತ್ಯ ಸಂದರ್ಭಕ್ಕೆ ನೀಡಿದ್ದಾರೆ. ಹೀಗೆ ಹಲವು ಗ್ರಂಥಗಳಲ್ಲಿಯ ಅಂಶಗಳ ಕುರಿತೋ, ಬರಹಗಾರರಿಗೆ- ಹರಸು, ಮುನ್ನುಡಿ, ಹಿನ್ನುಡಿ, ಬೆನ್ನುಡಿ ರೂಪದಲ್ಲಿಯೋ, ಸಂಭಾವನಾ ಗ್ರಂಥಗಳಿಗಾಗಿಯೋ ಗೌರೀಶರು ನೀಡಿರುವ ವಿಮರ್ಶಾ ಬರಹಗಳ ರಾಶಿ ರಾಶಿಯೇ ನಮ್ಮೆದುರಿಗಿವೆ. ಅವುಗಳನ್ನೆಲ್ಲಾ ಪ್ರತ್ಯ ಪ್ರತ್ಯೇಕ–ವಾಗಿ ಗುರುತಿಸಿ ಪರಿಚಯಿಸಿಕೊಡುವುದು ಈ ಲೇಖನದ ಮಿತಿಗೆ ಅಳವಲ್ಲ. ಹಾಗಿದ್ದರೂ ಗೌರೀಶರ ವಿಮರ್ಶಾ ಕಾರ್ಯದ ಸತ್ವ, ಆ ದಿಕ್ಕು ದೆಸೆಯನ್ನು ಮಾತ್ರ ಕಂಡುಕೊಳ್ಳಲೆಂದು ಪ್ರಾತಿನಿಧಿಕವಾಗಿ ಕೆಲವೇ ಕೆಲವನ್ನು ಉಲ್ಲೇಖಿಸುತ್ತೇನೆ.

ಸ್ಥೂಲವಾಗಿ ಗೌರೀಶರ ವಿಮರ್ಶೆಗಳಲ್ಲಿ ಒಂದು ಬಗೆಯ ಸ್ನೇಹ–ಸ್ನಿಗ್ಧ ಸ್ವಭಾವದ ಲೇಪವಿರುವುದು ನಿಜವಾಗಿದ್ದರೂ ಸಾಹಿತ್ಯಿಕ ಧೋರಣೆಯು ಪ್ರಾಮಾಣ್ಯ, ಪ್ರಾಮಾಣಿಕತೆಗೆ ಎಂದೂ ಚ್ಯುತಿ ಉಂಟಾಗದಂತೆ ಒಳಜಾಗೃತಿಯನ್ನಿರಿಸಿಕೊಂಡೇ ಸಂಚರಿಸುವುದು ಸುಸ್ಪಷ್ಟ. ಅಲ್ಲಿ ಹೇಳಬೇಕಾದ್ದನ್ನು ಹೇಳದೇ ಬಿಡುವುದಿಲ್ಲ. ಆದರೆ ಹಾಗೆ ಹೇಳುವಾಗಲೂ ಕೂಡ 'ಸತ್ಯವನ್ನು

ಹೇಳಬೇಕು ; ಅದನ್ನು ಪ್ರಿಯವಾಗುವ ರೀತಿಯಲ್ಲಿ ಹೇಳಬೇಕು. ಸತ್ಯವನ್ನೂ ಅಪ್ರಿಯವಾಗಿ ಹೇಳಬಾರದು ಎಂಬುದು ಸ್ವಭಾವಜನ್ಯ ನೀತಿಯಾಗಿ ಗೌರೀಶರಲ್ಲಿ ತುಂಬಿಕೊಂಡಿದೆ.

ಮಾಸ್ತಿ ವೆಂಕಟೇಶ ಅಯ್ಯಂಗಾರ–ಶ್ರೀನಿವಾಸ–ರ 'ಸುಬ್ಬಣ್ಣ' ಕತೆಯನ್ನು ಪುನರ್‍ವಿಚಾರಕ್ಕೊಳಪಡಿಸಿದ ಗೌರೀಶರ ವೈಖರಿಯು ಅಂಥ ಒಂದು ಉದಾಹರಣೆ : 'ಸುಬ್ಬಣ್ಣ' ಕೃತಿಯ ಕುರಿತ ಗೌರೀಶರ ಮೆಚ್ಚಿಗೆಯ ಕೆಲವು ಮಾತುಗಳನ್ನು ನೋಡಿ—

" 'ಸುಬ್ಬಣ್ಣ' ಇದರಲ್ಲಿ ಲೇಖಕನ ಆತ್ಮಶಿಲ್ಪಕ್ಕೆ ಪ್ರತೀಕವಾಗಿ ಸುಬ್ಬಣ್ಣನ ಬಾಳಿನ ಬಿಂಬ ಒಡಮೂಡಿದೆ. 'ಸುಬ್ಬಣ್ಣ' ಚಿನ್ನದ ಅದಿರು ಅಪರಂಜಿಯಾಗುವಂಥ ವಿಚಿತ್ರ ವಿನ್ಯಾಸವನ್ನು ಇಲ್ಲಿ ಚಿತ್ರಿಸಲಾಗಿದೆ. ಕಲೆಯನ್ನು ಅಡಗಿಸಿಡುವ ಕಲೆಗೆ ಸುಬ್ಬಣ್ಣ ಸಾಕ್ಷಿ. ೮೭ ಪುಟಗಳ ಈ ಪುಟ್ಟ ಸಂಪುಟದಲ್ಲಿ ಮಾಸ್ತಿಯವರ ಜೀವನದರ್ಶನ ಸಾರವೆಲ್ಲ ತುಂಬಿದೆ–ಮಾನವ್ಯದ ಉಪಾಸನೆ, ಚೆಲುವಿನ ಆಶ್ವಾಸನೆ, ಭಗವಂತನ ಆರಾಧನೆ ಈ ಮೂರೂ ಮಾಸ್ತಿಯವರಿಂದ ಬೇರೆ ಅಲ್ಲ. ಮಾನವ ಆದರ್ಶದೊಂದಿಗೆ, ದೇವನೊಂದಿಗೆ ಇಟ್ಟುಕೊಂಡ–ಇಟ್ಟುಕೊಳ್ಳಬೇಕಾದ ಸಂದರ್ಭಗಳ ಸಮಸ್ಯೆಗೆ ಬಗೆಹರಿಕೆಯೇ 'ತತ್ವಜ್ಞಾನ; ಇಲ್ಲವೇ ದರ್ಶನ'. ಅದೆಲ್ಲವೂ ಇಲ್ಲಿ ಬಾಲಕೃಷ್ಣನ ಬಾಯಿಯಲ್ಲಿ ಯಶೋದೆಯು ವಿಶ್ವರೂಪವನ್ನು ಕಂಡಂತೆ ಸುಬ್ಬಣ್ಣನ ಬದುಕಿನ ಚಿಮಟಿಗೆ ಮಣ್ಣಿನಿಂದ ನಾವು ಕಂಡುಕೊಳ್ಳುತ್ತೇವೆ. ಇಲ್ಲಿ 'ಮಾಸ್ತಿಟಚ್, ಮಾಸ್ತಿಟೋನ್'' ಅವರ ಶೈಲಿಯಲ್ಲಿಯ ಭಾವಗೀತ ಪದಲಾಲಿತ್ಯದೊಂದಿಗೆ ಮಹಾಕಾವ್ಯದ ಅರ್ಥಗೌರವವೂ ಎರಕವಾಗಿದೆ. 'ಮಿಥಿಕಲ್' ಗುಣಕ್ಕೆ ಸುಬ್ಬಣ್ಣ ಒಂದು ಸಾಕ್ಷಿ"–ಹೀಗೆ ಇನ್ನೂ ಬಹುವಾಗಿ ವ್ಯಾಖ್ಯಾನಿಸಿದ ಗೌರೀಶರು—

'ಸುಬ್ಬಣ್ಣ ಕಥೆಯ ಮೂಲವಸ್ತು ಮಾಸ್ತಿಯವರದಲ್ಲ; ಕಥೆಯ ೩೭ನೆಯ ಪರಿಚ್ಛೇದದಲ್ಲಿ ಮೂಲಬಿಂಬದ ಉಲ್ಲೇಖ ಬರುತ್ತದೆ....ನವರತ್ನರಾಯರಿಗೆ ಪಿಟೀಲು ಕಲಿಸಲು ಒಪ್ಪಿ ಬೇಸರದಿಂದ ಅವರನ್ನು ಕಾಪಾಡಿದ ವೃದ್ಧ ಗಾಯಕ ಶ್ಯಾಮಣ್ಣನೇ ಸುಬ್ಬಣ್ಣನಾಗಿ ಮಾರ್ಪಟ್ಟಿದೆ' ಎನ್ನುತ್ತ. ಆದರೆ ಕಥೆಯಲ್ಲಿ ಶ್ಯಾಮಣ್ಣ ಸುಬ್ಬಣ್ಣನಾಗಿ ಮಾರ್ಪಟ್ಟಿರುವುದಕ್ಕೆ ಹೊಳವು ಇಲ್ಲ. ಸುಬ್ಬಣ್ಣ ಸಂಗೀತಗಾರನಾಗಿ ಪ್ರವೇಶಿಸಿ ಪಿಟೀಲು ವಾದನಕ್ಕೆ ಶರಣಾದ ಬಗೆಗೂ ಸಕಾರಣ

ಚಿತ್ರಣ ವಿವರ ಸಿಗುವುದಿಲ್ಲ" ಎಂಬ ಗುಮಾನಿ ಎತ್ತಿ ಶ್ಯಾಮಣ್ಣ–ಸುಬ್ಬಣ್ಣ ಪಾತ್ರಗಳಲ್ಲಿಯ ತಾತ್ವಿಕ ವ್ಯತ್ಯಾಸ–ಸ್ವಭಾವ ವ್ಯತ್ಯಾಸವನ್ನು ಒಂದೊಂದಾಗಿ ಗುರುತಿಸುತ್ತಾರೆ. ಆದರೆ ಹೀಗೆ ಆಕ್ಷೇಪಗಳನ್ನು ನುಣ್ಣಗೆ ಕಂಡಿರಿಸುವಾಗ ಅವು ಹಸಿರಾಗಿ ಹಬ್ಬಿದ ಹಂದರದಲ್ಲಿ ಬಾಡಿದ ಎಲೆ ದೇಟುಗಳು ಅವಿತು ಹೋಗಿರುವಂತೆ ಉದ್ದಕ್ಕೂ ಜಾಣತನದಿಂದ ಪುಂಖಾನುಪುಂಖ ವ್ಯಾಖ್ಯಾನಗಳ ಮಧ್ಯೆ ಪ್ರಶ್ನೆಗಳಾಗಿ ಅವಿತಿರುತ್ತದೆ. ಅದೂ ಕೂಡಾ ಪ್ರಿಯಭಾಷಿತ ಅಥವಾ ಸಿಹಿಲೇಪಿತ ಕಹಿ :

—"ಸುಬ್ಬಣ್ಣನ ಆಧ್ಯಾತ್ಮಿಕ ಉತ್ಕ್ರಾಂತಿಯನ್ನು ಕಾದಂಬರಿಯಲ್ಲಿ ನಾದಯೋಗವೆಂದು ಕರೆಯಲಾಗಿದೆ. ಅದು ದೈನ್ಯದ ತಪಸ್ಸೆಂದೂ ಹೇಳಲಾಗಿದೆ. ಸುಬ್ಬಣ್ಣ ಗಾನದ ಮೂಲಕ ಸರ್ವ ತತ್ವಗಳನ್ನೂ ತಿಳಿದುಕೊಂಡನೆಂದು ಕಾದಂಬರಿಯ ಕೊನೆಗೆ ಒಂದು ಮಾತು ಬರುತ್ತದೆ. ಅವನು ಯೋಗಿಯಂತೆ ದೇಹವನ್ನು ತ್ಯಜಿಸಿದನು–ಎಂದು ವಿವರಿಸುತ್ತ ಕಾದಂಬರಿಯಲ್ಲಿ ಸುಬ್ಬಣ್ಣ ಓರ್ವ ಮಹಾನ್ ಸಂಗೀತ ಸಾಧಕ, ಕಲಾತಪಸ್ವಿ ಎಂಬಂತೆ ಘೋಷಿಸಲ್ಪಟ್ಟ ಬಗ್ಗೆ–'ಲೇಖಕರು ಹೇಳುತ್ತಾರೆಂದೇ ನಾವು ನಂಬಬೇಕು' ಎಂದು ಮಾರ್ಮಿಕವಾಗಿ ನುಡಿದ ಗೌರೀಶರು–ಸುಬ್ಬಣ್ಣ ಯೋಗಿಯಂತಾಗಿರುವುದು ಅವನು ಬದುಕಿನ ಅನರ್ಥ ಪರಂಪರೆಯ ಅನುಭವ ಹೊರತು ಸಂಗೀತ ಸಾಧನೆಯಲ್ಲ. ಅವನ ಸಂಗೀತ ಸಾಧನೆಯ ಸ್ವಭಾವ ಸ್ಫುಟವಾಗುವಂತೆ ಯಾವ ಪ್ರಸಂಗವೂ ಕಾದಂಬರಿಯಲ್ಲಿ ಚಿತ್ರಿತವಾಗಿಲ್ಲವೆಂದು ಒಳಮಾತಿನಲ್ಲಿ ಹೇಳುತ್ತಾರೆ. ಸುಬ್ಬಣ್ಣ ಪಾತ್ರ ಸೃಷ್ಟಿಯಲ್ಲಿ ಪಾತ್ರದ ಒಳಗಡೆಗೇ ಸ್ವತಃ ಸಿದ್ಧಿಸದ ಅಭಾವಗಳನ್ನು ಕೆದಕಿ ಕೇವಲ ಪ್ರಶ್ನೆಗಳನ್ನಾಗಿಸಿ ಅತ್ತ ನಮ್ಮ ಗಮನವನ್ನು ಸೆಳೆದುಬಿಟ್ಟು ಆಚೆಗೆ ಸಾಗಿಕೊಳ್ಳುವ ಗೌರೀಶರ ಜಾಣ್ಮೆ ವೇದ್ಯವಾಗುವುದು ಹೀಗೆ : "ಆದರೆ ಇಲ್ಲಿ ('ಸುಬ್ಬಣ್ಣ'ನಲ್ಲಿ) ಏಳುವ ಪ್ರಾಮಾಣಿಕ ಪ್ರಶ್ನೆ....ಆದರೆ ಇದೆಲ್ಲಾ ಅವನು ಸಂಗೀತದಿಂದಲೇ ಸಾಧಿಸಿದ ಸಾಧುತ್ವವೇ ? ಅವನ ಮಾರ್ಪಾಟಕ್ಕೆ ಕಾರಣ ಸಂಗೀತವೋ ? ಅಥವಾ ಅವ್ಯಾಹತವಾಗಿ ಒದಗುತ್ತಹೋದ ಸಂಕಟ ಶೋಕ ಪರಂಪರೆಯೋ ?—ಸುಬ್ಬಣ್ಣನ ಸಂಗೀತ ಸಾಧನೆಯು ಪರಿಯಾದರೂ ಹೇಗೆ ?'—'ಇದು ಲೌಕಿಕ ಶ್ರೇಯಸ್ಸು. ಕಲಾಜೀವಿಯ ಗುರಿಯಲ್ಲ'–'ಆತ ನಡುವೆ ಯಾವ ನಿಮಿತ್ತವಾಗಿ ಯಾರ ನಿರ್ದೇಶನ

ದಿಂದ ಗಾಯನ ಬಿಟ್ಟು ಕೇವಲ ಪಿಟೀಲು ವಾದನಕ್ಕೆ ಹೊರಳುತ್ತಾನೆ?' ಹೀಗೆ ಪ್ರಶ್ನೆಗಳ ಮೂಲಕವೇ ಲೋಪಗಳನ್ನು ಸೂಚಿಸಿಬಿಡುತ್ತಾರೆ.

ಸುಬ್ಬಣ್ಣನು ಸಂಗೀತದಲ್ಲಿ ಅಪ್ರತಿಮ ಪ್ರಾವೀಣ್ಯ ಪಡೆದಿದ್ದನೆಂಬ ಕಥೆಯೊಳಗಿನ ಲೇಖಕರ ಮಾತಿನತ್ತ ಸಾಗಿ—'ಆತನಿಗೆ ಗುರು ಯಾರು?—ತಾಳ ಹಿಡಿಯಲು ಯಾರೂ ಇರದೆ ಏಕಾಂತದಲ್ಲಿ ನೀಲಾಸಾನಿಯ ಮಹಡಿಯಲ್ಲಿ ಅಸಹಾಯಶೂರನಾಗಿ ಅಭ್ಯಾಸಮಾಡಿ ಶ್ರೇಷ್ಠ ಸಂಗೀತಗಾರನಾದನೋ?—ಎಂದು ಸಂದೇಹಿಸಿ "ದೇಶಿ, ತೋಡಿ, ಶಂಕರಾಭರಣ, ಭೈರವಿ ಮುಂತಾದ ಅಭಿಜಾತ ರಾಗಗಳಲ್ಲಿ ಪಳಗಿದವ. ಇದು ಗುರುವಿಲ್ಲದೇ ಫಲಿಸುವ ವಿದ್ಯೆಯೇ? ಎಂಬ ಗಂಭೀರ ಕೊರತೆಯನ್ನು ಗುರುತಿಸಿ ಅತಿ ಸೂಕ್ಷ್ಮವಾಗಿ ಕೃತಿಯ ಪದರುಗಳನ್ನು ಬಿಚ್ಚಿಡುತ್ತಾರೆ. ಹಾಗೂ ಕೃತಿಯಲ್ಲಿಯ ಕಲಾತ್ಮಕ ಬೀಳನ್ನು ಸೂಚ್ಯವಾಗಿಸಿ—"ನಾಯಕನಾಗಲೀ ಇತರ ಪಾತ್ರಗಳಾಗಲೀ ಕೇವಲ ಲೇಖಕನ ಸಂದೇಶ ವಾಹನಕ್ಕಾಗಿಯೇ ಹುಟ್ಟುವುದಲ್ಲ; ಬದುಕುವುದಲ್ಲ. ಪಾತ್ರದ್ದೇ ಒಂದು ಸ್ವಾಯತ್ತತೆ ಇರುತ್ತದೆ" ಎಂಬ ಬಿಚ್ಚುಮಾತನ್ನು ಹೇಳದೇ ಉಳಿಯಲಿಲ್ಲ. ಮೇಲ್ನೋಟಕ್ಕೆ ಇಡೀ ವಿಮರ್ಶೆ 'ಸುಬ್ಬಣ್ಣ' ಕೃತಿಯನ್ನು ವೈಭವೀಕರಿಸಿಕೊಂಡಂತಿದೆ. ಆದರ ಗರ್ಭದಲ್ಲಿ ಸೂಕ್ಷ್ಮವಾಗಿ ಈ ಬಗೆಯ ಚಿ-ಕಿ-ತ್ಸೆ ತುಂಬಿದೆ.

ವಿ. ಕೃ. ಗೋಕಾಕ—ವಿನಾಯಕ—ರ 'ಕಡಲು ಮತ್ತು ಮುಗಿಲು'ನ್ನು ಎಳೆಎಳೆಯಾಗಿ ಹಿಂಜಿ ವಿಶ್ಲೇಷಿಸಿ ಅದರ ರಸವನ್ನು ಕುಡಿಸುತ್ತ 'ಹಾಲ್ ಜೇನು ಸುರಿಯೋಣ' ಎಂದು ಹೇಳಿ ಅಲ್ಲಿರುವ ಗುಣಾವಗುಣಗಳನ್ನು ಪ್ರೌಢವಾಗಿ ಆಂಗ್ಲ ಕವಿಗಳ ಸತ್ವದೊಂದಿಗೆ ತೌಲನಿಕಗೊಳಿಸಿ ಕೊಡುತ್ತ, ತಮ್ಮ ಉಚಿತ ವರಾವರಿಯನ್ನು ಹೇಳುವ ಕ್ರಮ ಗಮನಾರ್ಹ :"

"ಪ್ರಜ್ಞೆಯನು ಪದರು ಪದರಾಗಿ ಬಿಡಿಸಿದರೂನು
ತಿಳಿದಿಲ್ಲ ನಾನಿದರ ಅಂತ ಪಾರ
ಅಂತೆ ಇದು ಕಡಲು ಅನಂತರದ ಒಡಲು" (ವಿನಾಯಕ)

"ಇದು ಕವಿಯ ಕಾವ್ಯ ಪ್ರಕೃತಿಗೂ ಒಪ್ಪುವ ಮಾತು" ಎನ್ನುತ್ತ,

"ಕಡಲು ಮುಗಿಲುಗಳ ಬಗೆಗೆ ಕೆಲವೆಡೆ ಉತ್ಪ್ರೇಕ್ಷೆ ಉತ್ಕಟತೆ ಹೃದಯಂಗಮವಾಗಿ ಬಂದಿದ್ದರೂ ಅವೆಲ್ಲಾ ಬಾಹ್ಯದರ್ಶನ. ಒಳಗಣ್ಣಿ

ಹೊರಗಣ್ಣು ಬೆರೆತು ನೋಡಿದ ನೋಟ ಅಲ್ಲ....ಕಾರಣ ವಿನಾಯಕರು ಮುಖ್ಯತಃ Cerabral ಕವಿ. natural ಕವಿ ಅಲ್ಲ. ಆಂತರಿಕ ತುಮುಲದ ಹಿನ್ನೆಲೆ 'ಕಡಲಿಗೂ' ದ್ವಾವಾ ಪೃಥಿವಿಯ ನೀರದಕ್ಕೂ ಲಭಿಸಿಲ್ಲ" ಎಂದು ಅರ್ಥವತ್ತಾಗಿ ನಿಕಷನಗೊಳಿಸುತ್ತಾರೆ. ನವ್ಯಕವಿಯ ಗಂಭೀರವಾದ ಕಾವ್ಯದ ಅಭ್ಯಾಸಕ್ಕೇ ಇದೊಂದು ಮಾರ್ಗದರ್ಶಿ ವಿಮರ್ಶೆ ಎನ್ನಬಹುದು.

ಸಾಹಿತ್ಯಿಕ ವಿಮರ್ಶಾ ಕಾರ್ಯದಲ್ಲಿ ಗೌರೀಶರನ್ನು ಕಾಣುತ್ತಹೋದರೆ ಒಂದಕ್ಕಿಂತ ಮತ್ತೊಂದರಲ್ಲಿ, ಇನ್ನೊಂದರಲ್ಲಿ ಅವರ ಬಹುಶ್ರುತತ್ವ, ಶಕ್ತ ಸತ್ವದ ದರ್ಶನವಾಗುತ್ತಲೇ ಹೋಗುತ್ತದೆ. ವಿಮರ್ಶಾಲೋಕಕ್ಕೆ ಹೊಸ ಹೊಸ ಬಾಗಿಲನ್ನು ತೆರೆದುಕೊಡುತ್ತಾರೆ. ವಿಮರ್ಶೆಯ ಕುರಿತು ಗೌರೀಶರ ಧೋರಣೆ ಅಲ್ಲಲ್ಲಿ ವ್ಯಕ್ತವಾಗುತ್ತ ಒಂದೊಂದು ಸೂಕ್ತಿಯಂತೆ ದೊರೆಯು ತ್ತಿರುತ್ತದೆ.

'ಕಣವಿಯವರ ಕಾವ್ಯದೃಷ್ಟಿ' ಎಂಬ ಲೇಖನದಲ್ಲಿ ಗೌರೀಶರು ಹೇಳು ತ್ತಾರೆ : "ಕವಿಯು ವಿಚಾರವಾದಿಯೋ, ತತ್ವಜ್ಞಾನಿಯೋ, ವಿಜ್ಞಾನಿಯೋ, ಶಾಸ್ತ್ರಜ್ಞನೋ ಇರಲೇಬೇಕಾಗಿಲ್ಲ. ಅವರ ವಿಚಾರ ಕಾವ್ಯದಲ್ಲಿ ಕಾವ್ಯ ವಾಗಿಯೇ ಮೈತಾಳಬೇಕು. ತನ್ನ ಅನುಭವದ ತಿರುಳನ್ನು ಕವನದ ಹಂದರ ದಲ್ಲಿ ಪ್ರತಿಮಾ ಜಾಲದಲ್ಲಿ ಸೆರೆಹಿಡಿಯುವುದು ಕಾವ್ಯಸತ್ವ." ಹೀಗೆ ನುಡಿ ಯುವ ಅವರು 'ಪ್ರಜ್ಞೆಯ ಪರಿಣಿತಿ ಅವರ ವ್ಯಕ್ತಿತ್ವದ್ದೇ ಒಂದು ಅಂಗವಾಗಿರ ಬೇಕು. ಈ ಪೂರ್ಣತೆಯೇ ಅವರ ಸಾಹಿತ್ಯದ ಎಲ್ಲ ಗೌರವಕ್ಕೆ ಮೂಲ. ಅಂತರ್ಬಾಹ್ಯ ಸಾಮರಸ್ಯ ಹೊಂದಿದ ವ್ಯಕ್ತಿತ್ವವೇ ಕವಿಗೆ ಅವಶ್ಯ. Public face ಮತ್ತು Private face ಎಂಬುದು ಬೇರೆ ಬೇರೆಯಾಗಿರದಿರು ವುದೇ ಶೀಲದಿಂದ ಶೈಲಿ ಎಂಬುದರ ಪಾಕಗೊಂಡ ವ್ಯಕ್ತಿತ್ವ–ಇಂಥವರ ಸಾಹಿತ್ಯಿಕ ಕೃತಿಯಾಗಿರುತ್ತದೆ" ಅನ್ನುತ್ತಾರೆ.

ಸಾಹಿತ್ಯ ಕೃತಿಕಾರನ ರಚನೆಯೊಂದು ಓದುಗನಿಗೆ ತನ್ನ ನಿಜವಾದ ಸಂದೇಶವನ್ನು ತಲ್ಪಿಸುವಂತಾಗಬೇಕಾದರೆ ಅಲ್ಲಿ ಬಳಸಿದ ಪ್ರತ್ಯೇಕ ಪ್ರತಿಮೆ ಗಳೂ ಸಾಹಿತ್ಯ ಸೃಷ್ಟಿಯ ಸಂದರ್ಭ ಅದರ ಹಿನ್ನೆಲೆಯ ಅರಿವೂ ಮುಖ್ಯ ವಾಗುತ್ತದೆ. ಈ ಪ್ರತೀಕ–ಪ್ರತಿಮೆಗಳೂ ಸಾಹಿತ್ಯ ಸೃಷ್ಟಿಯ ಸಂದರ್ಭ ಅದರ ಹಿನ್ನೆಲೆಯ ಅರಿವೂ ಮುಖ್ಯವಾಗುತ್ತದೆ. ಈ ಪ್ರತೀಕ ಪ್ರತಿಮೆಗಳು ಕವಿಯ

ಕೇವಲ ಕಲ್ಪನೆಯ ಖಾಸಗೀ ಅನುಭವ ಕೋಶದಿಂದಲೇ ಆಯ್ದು ವಿದ್ದರೆ ಆ ಕವನ ಅದರ ಆಶಯ ಕವಿಗೆ, ಸಮಾನ ಧರ್ಮಿಗಳಾದ ಸಹೃದಯರಿಗೂ ಅನೇಕ ಸಲ ದುರ್ಬೋಧ, ದುರೂಹವಾಗುತ್ತವೆ. ಬದುಕಿನ ಸರ್ವಪರಿಚಿತ ಸಂಗತಿಗಳಿಂದ ಆಯ್ದುದ್ದಿದ್ದರೆ ಆ ಕಾವ್ಯ ಅಸ್ವಾದ್ಯವಾಗಲು ಅನುಕೂಲ." ಹೀಗೆಂದು ಅಂಬಿಕಾತನಯದತ್ತರ ಕಾವ್ಯದಿಂದ ಹಲವು ತುಂಡುಗಳನ್ನೆತ್ತಿ ಉದಾಹರಿಸಿ ಮನದಟ್ಟುಗೊಳಿಸುತ್ತಾರೆ.

ಅಷ್ಟೇ ಅಲ್ಲ–ಕೃತಿ ಮತ್ತು ಕೃತಿಕಾರನ ನಡುವೆ ಸಜೀವ ಸಂಬಂಧವನ್ನು ಸ್ಥಾಪಿಸಲು ಆ ಕವಿಯ ಕವನದ ಹಿನ್ನೆಲೆಯೂ ತಿಳಿದಷ್ಟು ಬೇಕು; ಮತ್ತು ಕವಿಯ ಚರಿತ್ರೆ ಪರಿಶೀಲನೆಗೆ ದೊರೆಯಬೇಕು. ದುರ್ದೈವಕ್ಕೆ ನಮ್ಮ ಹಿರಿ ಕವಿಗಳ ಬಗೆಗೆ ರವೀಂದ್ರನಾಥರಿಂದ–ಬೇಂದ್ರೆ, ಕುವೆಂಪುರವರೆಗೂ ಇಂಥ ಯಾವುದೇ ಒಳನೋಟಕ್ಕೆ ಬೆಳಕು ಸಿಗುವುದೇ ಕಡಿಮೆ. ಪಾಶ್ಚಾತ್ಯರಲ್ಲಿ ಹಾಗಲ್ಲ, ಅವರವರ ಬಹಿರಂಗದಂತೆಯೇ ಅಂತರಂಗ ಚಾರಿತ್ರಿಕ ವಿವರಗಳೂ ನಮಗೆ ಒದಗುತ್ತವೆ. ಅಂಥ ಕೆಲವು ಪಾಶ್ಚಾತ್ಯ ಕವಿಗಳ ಕಾವ್ಯ ಅರ್ಥವಾಗುವುದಕ್ಕೆ ಅದರ ಚಾರಿತ್ರಿಕ ಹಿನ್ನೆಲೆ ಅರಿವು ಎಷ್ಟು ಮುಖ್ಯವಾಗಿದೆ ಎಂಬುದನ್ನು ವಿವರಿಸುತ್ತಾರೆ. ಬೇಂದ್ರೆಯವರ 'ಹುಬ್ಬಳ್ಳಿಯಂವ' ಪದ್ಯವು ಕವಿಯ ಭಾವನಾತ್ಮಕ ಹಿನ್ನೆಲೆಯ ಅರಿವಿಲ್ಲದೇ ಅದೊಂದು ಮನರಂಜನೆಯ ಪದ್ಯವಾಗಿ ಅನಿಸಿ ಅರ್ಥ ವೈರುದ್ಧ್ಯವನ್ನುಂಟುಮಾಡುವುದಕ್ಕೂ; ಹಿನ್ನೆಲೆಯ ಅರಿವಿನೊಂದಿಗೆ ಅರ್ಥೈಸಿಕೊಂಬಾಗ ದೊರೆಯುವ ಕರುಣರಸಾನುಭವಕ್ಕೂ ಇರುವಂಥ ಅಂತರವನ್ನು ವಿವರಿಸುತ್ತಾರೆ.

'ದ. ರಾ. ಬೇಂದ್ರೆಯವರ ಕಾವ್ಯವನ್ನು ವಿಮರ್ಶಿಸುವಾಗ ಗೌರೀಶರು ಭಾವಪರವಶಗೊಳ್ಳುತ್ತಾರೆ. ಅವರ ಬಗೆಗೆ ಅಪಾರ ಉತ್ಕಟ ಪ್ರೀತಿ....ಎಂದೆಲ್ಲಾ ಹೇಳುವುದು ನಿಜವೇ. ಹಾಗಿದ್ದಾಗ್ಯೂ ಗೌರೀಶರು ವಿಮರ್ಶೆಯ ಬರವಣಿಗೆಯ ತೂಕವನ್ನು ಕಳೆದುಕೊಳ್ಳಲಾರರು. 'ಅಂಬಿಕಾತನಯದತ್ತ ಓರ್ವ ಜಾನಪದ ಕವಿ' ಎಂಬುದನ್ನು ಒಪ್ಪಿಕೊಳ್ಳಲೂ ಆಗದ–ಒಪ್ಪದಿರಲೂ ಆಗದ ಸಂದಿಗ್ಧವನ್ನು ಬಹುಸೂಕ್ಷ್ಮವಾಗಿ ಬಿಡಿಸುತ್ತಾರೆ 'ಅಂಬಿಕಾತನಯದತ್ತರ ಪ್ರಾಜ್ಞ ಪ್ರೌಢಿಮೆಯ ಕವಿತ್ವಕ್ಕೆ ಅವರ ಜಾನಪದ ಜಾಣ್ಮೆ ಒಂದು ನೆಳಲು ಮಾತ್ರ'– ಎಂಬ ಸೂಕ್ತವಾದ ನಿರ್ಣಯ ನೀಡಿದ್ದಾರೆ.

"ಬೇಂದ್ರೆ ಕಾವ್ಯ ಉದ್ಭವ ಕಾವ್ಯ; ಅದ್ಭುತ ದರ್ಶನ ನೀಡಬಲ್ಲ ಕಾವ್ಯ. ತೀರ ಆರಂಭದ ಕೃತಿಯಿಂದ ತೀರ ಈಚಿನ ಕೃತಿಯವರೆವಿಗೂ ಅದು ಒಮ್ಮೆಲೇ ಸಿದ್ಧ. ಸ್ವತಃ ಸಿದ್ಧ ಸ್ವರೂಪದಲ್ಲಿಯೇ ರಸಿಕನನ್ನು ಕೆಣಕುವ, ಅಣಕಿಸುವ, ಕೆರಳಿಸುವ, ಮರಳುಗೊಳಿಸುವ ಒಂದು ಅಲೌಕಿಕ ವಾಗೀಂದ್ರಜಾಲ. ಜತೆಗೇ ಅದು ವ್ಯಕ್ತಿ ವಿಶಿಷ್ಟ ಮತ್ತು ಪ್ರಭುಸಮ್ಮತಿಯ ಕಾವ್ಯವೆಂದಾಗ ಅದು ಒಂದು ರೀತಿ ಋಷಿಕಾವ್ಯ, ಆರ್ಷೇಯ ಮಂತ್ರಕಲ್ಪ"-"ಅಂಬಿಕಾತನಯರು ಇನ್ನೂ ಏನೇನೇ ಇರಲಿ, ಅವರು ಕೇವಲ ಕವಿಗಳು. ಈ ಸಿಟ್ಟಿನಲ್ಲಿ ಅವರ ಪ್ರಯೋಗ ಪರಿಣತಿಯು ಬೆರಗುಗೊಳಿಸುವಂತಿದೆ." ಇತ್ಯಾದಿ ಮಹತ್ವದ ವಿಮರ್ಶನ ಅಭಿಪ್ರಾಯಗಳಿಂದೊಡಗೂಡಿ ಹದಿನೆಂಟು ಅಧ್ಯಾಯಗಳಲ್ಲಿ ಬೇಂದ್ರೆ ಕಾವ್ಯದ 'ಕಂಪಿನ ಕರೆ'ಯನ್ನು ಗೌರೀಶರು ಕನ್ನಡ ಸಾಹಿತ್ಯ ರಸಿಕರಿಗೆ ನೀಡಿದ್ದಾರೆ. ಇದರಲ್ಲಿ ಅಲ್ಲಲ್ಲಿ ಕಂಡಿರಿಸಿದ ಆಕ್ಷೇಪಣಾ ನುಡಿಗಳೂ ಕೂಡಾ ಕಾವ್ಯದ ಅಧ್ಯಯನ ಮಾಪನ ಕ್ರಿಯೆಗೊಂದು ಬೋಧಕ. ಉದಾ : "ಬೇಂದ್ರೆಯವರ 'ನೀನಾದೀನೀ' ಎಂಬ ಪದ್ಯವು ವೈದಿಕ ಋಕ್ ಮಂತ್ರಗಳ ಉಚ್ಚಾರಣೆಯ ಶೈಲಿಯದು. ಈ ಕನ್ನಡ ಮಂತ್ರಗಳು 'ಸಾಮವೇದ ಛಂದಸ್ಸಿನದು' ಎಂದು ಹೇಳಿಕೊಂಡಿರುವುದನ್ನು ಬಲವಾಗಿ ಅಲ್ಲಗಳೆದು ಇದನ್ನು ಒಬ್ಬ 'ಸಾಯಣ' (ಸಾಯಣಾಚಾರ್ಯ)ನೇ ಅರ್ಥೈಸಬೇಕು ಎಂದು ವ್ಯಂಗ್ಯವಾಡುತ್ತ, 'ಸಾಮವೇದವೆಂಬುದು ಛಂದಸ್ಸೇ ಅಲ್ಲ. ಬೇಂದ್ರೆ ಪ್ರಣೀತವಾದ ಈ 'ಸಾಮಛಂದಸ್ಸಿನ' ಸ್ವರೂಪ, ಲಕ್ಷಣಗಳೇನೆಂಬುದು ಇನ್ನೂ ಇತ್ಯರ್ಥವಾಗಿಲ್ಲ. ಆ ತನಕ ನಮ್ಮಂಥವರು ಸಂಶಯಾತ್ಮರೇ"–ಎಂದು ನುಂಪನೆ ಸವರಿ ಏಟು ಬೀಸುತ್ತಾರೆ. ಈ ರೀತಿ ಸೂಕ್ಷ್ಮಗ್ರಾಹಿಕೆಯಿಂದ ಲೋಪದೋಷಗಳನ್ನು ಎತ್ತಿ ದರ್ಶಿಸುವ ಅನೇಕ ಸಂಗತಿಗಳು ನಮ್ಮನ್ನು ಸಂಧಿಸುತ್ತವೆ.

"ಪ್ರಬುದ್ಧ, ರಸಾರ್ದ್ರ, ವಿಧಾಯಕ ದೃಷ್ಟಿಯನ್ನಿರಿಸಿ ಬೇಂದ್ರೆಯವರ ಕಾವ್ಯವನ್ನು ಹಿಂಜುತ್ತ–ಹಿಂಜುತ್ತ–ಹಿಂಡುತ್ತ ಅಂತಿಮವಾಗಿ—'ಅಂಬಿಕಾತನಯದತ್ತರ ಕಾವ್ಯವು ಎಷ್ಟೇ ಸಂಕೀರ್ಣವೂ, ವ್ಯಾಮಿಶ್ರವೂ ಆಗಿ ಕಂಡರೂ ತನ್ನ ಯಾವುದೇ ಮೊಗದಲ್ಲಿ ನೆಲೆಯಲ್ಲಿ ಅದು ಓದುಗನ ನೋಟಕ್ಕೆ, ನಿಲುವಿಗೆ ತಕ್ಕ ಅರ್ಥವನ್ನೂ, ಆನಂದವನ್ನೂ ನೀಡದೇ ಹೋಗುವುದಿಲ್ಲ. ಏಕೆಂದರೆ ಕವಿಯ ಅನುಭವವೂ ಸಹೃದಯರಿಗೆ ರಸದ ಅನುಭವವಾಗಿಯೇ ಸಲ್ಲಬೇಕು"–

ಇಲ್ಲಿ ಅದು ಸಾಧ್ಯ. "ಹೇಗಿದ್ದೂ ಬೇಂದ್ರೆ ಅನುಭಾವ ಕವಿ. (ಅನುಭವ-ಅನುಭಾವಗಳೆಂದರೇನು ಎಂಬ ಕುರಿತೇ ಗೌರೀಶರು ಒಂದು ಸುದೀರ್ಘ ವಿವರಣೆ ವ್ಯಾಖ್ಯಾನ ನೀಡಿದ್ದಾರೆ.) ಅದು ನಮ್ಮಂಥವರಿಗೆ ಅಗಮ್ಯ! ಎಂಬ ವಾದವೋ, ಪ್ರಮಾದವೋ ಈಚೆಗೆ ಬೆಳೆದಿದೆ. ತಮಗೆ ಅರ್ಥವಾಗದಿರುವುದಕ್ಕೆಲ್ಲಾ ಅರ್ಥವೇ ಇರುವುದಿಲ್ಲ-ಎಂಬ ಇಂಥ ಜ್ಞಾನ ಲವ ದುರ್ವಿಗ್ಧರನ್ನು ಯಾರು ರಂಜಿಸಬೇಕು? ಇಂಥವರೇ ಹೆಚ್ಚಾಗಿ ಬೇಂದ್ರೆಯವರ ಕಾವ್ಯದ ಅಪಾರ್ಥ ಸಮೀಕ್ಷೆಯ ಅಪಪ್ರಚಾರವನ್ನೂ ಮಾಡಿದ್ದಾರೆಂದೂ ನಿರ್ದಾಕ್ಷಿಣ್ಯ ಅಭಿಪ್ರಾಯ"-ಹೀಗೆ ಚುಚ್ಚಿ ಎಚ್ಚರಿಸುವ ಗೌರೀಶರ ವಿಮರ್ಶೆಯ ದೃಢತೆಯನ್ನು ಕಂಡುಕೊಳ್ಳುತ್ತೇವೆ. 'ಕಂಪಿನ ಕರೆ' ವಿಮರ್ಶಾ ಕೃತಿಯು ಕಾವ್ಯಾಧ್ಯಯನ ಪ್ರಕಾರಕ್ಕೇ ಒಂದು ಮಹತ್ವಪೂರ್ಣ ಬೆಳಕಿಂಡಿ ಎಂದನ್ನಬಹುದು.

ಕನ್ನಡದ 'ಕಾವ್ಯ' ಪ್ರಪಂಚದಲ್ಲಿ 'ಹೊಸ ಕಾವ್ಯದ ಹಾದಿ'ಯನ್ನೂ ಗುರುತಿಸಿ ದೀರ್ಘ ಪ್ರಬಂಧವನ್ನು ಬರೆದು ಅನೇಕ ಮೂಲಭೂತ ಪ್ರಶ್ನೆಗಳನ್ನೆತ್ತಿ ಚರ್ಚಿಸಿದ್ದಾರೆ. "ನವ್ಯ ಕವಿತೆಯ ಹೆಚ್ಚುಹರೆಯಲ್ಲಿಯೇ ಅದನ್ನು ಕಡೆಗಣಿಸಿ ನಡೆಬಡೆಯುವ ಆಘಾತಗಳೂ ಆಗಹತ್ತಿದವು. ಅದರ ಮೊಳಕೆ ಚಿಗುರೊಡೆದು ಪುಷ್ಟವಾಗಿ ಬೆಳೆಯುವುದು ಹೇಗೆ?" ಎಂದು ಪ್ರಶ್ನಿಸಿಕೊಂಡ ಗೌರೀಶರು 'ನವ್ಯದ ನಾಲ್ಕು ನಾಯಕರು' ಎಂಬ ಪ್ರಬಂಧವನ್ನು ಬರೆದು ನವ್ಯ ಕಾವ್ಯಗಳ ಗುಣದೋಷಗಳನ್ನೂ ಕಾವ್ಯ ಸಂದರ್ಭಗಳನ್ನೂ ಅತ್ಯಂತ ಮಹತ್ವವೆನಿಸುವ ರೀತಿಯಲ್ಲಿ ಬಿಚ್ಚಿಟ್ಟರು. ಗಂಗಾಧರ ಚಿತ್ತಾಲ, ವಿ. ಜಿ. ಭಟ್ಟ, ಗೋಪಾಲಕೃಷ್ಣ ಅಡಿಗ ಮುಂತಾದವರ ಕಾವ್ಯಗಳನ್ನು ಆಕರಗೊಳಿಸಿಕೊಂಡು ಆಕಾರ ದರ್ಶನ ನೀಡಿದ್ದಾರೆ. 'ಸ್ವಚ್ಛಂದದಿಂದ ನವ್ಯದತ್ತ' ಅಂಥ ಒಂದು ಶ್ರೇಷ್ಠ ಬರಹ.

ಗಂಗಾಧರ ಚಿತ್ತಾಲರ 'ಮನುಕುಲದ ಹಾಡು' ಕಾವ್ಯದ ಕುರಿತು ಬರೆಯುವಾಗ ನವ್ಯದವರು ಎತ್ತಿಕೊಂಡ ಮುಕ್ತ ಛಂದಸ್ಸಿನ ವಿಚಾರವನ್ನು ಪ್ರಸ್ತಾಪಿಸಿ, 'ಛಂದಸ್ಸಿನ ಸ್ವೈರತೆಯು, ಸ್ವಚ್ಛಂದತೆಯು ಅದನ್ನು ಪ್ರಯೋಗಿಸುವ ಕವಿಯ ಕೈಯನ್ನೇ ಮೀರಿಸುವಷ್ಟು ಸ್ವೈರವಾಗಲಾರದು. ಮುಕ್ತ ಛಂದಸ್ಸು ಕಾವ್ಯದ ಬಂಧದಿಂದಲೇ ಮುಕ್ತಿಯೆಂದು ಕೇವಲ ಕು-ಕವಿಗಳು ಮಾತ್ರ ಭಾವಿಸಬಲ್ಲರು' ಎನ್ನುತ್ತ ಅವುಗಳ ಸಾರ್ಥಕ ಬಳಕೆಯ ಮಾದರಿ

ಯನ್ನು ನವ್ಯಕಾವ್ಯದಿಂದ ಎತ್ತಿಹಿಡಿದು ತೋರಿಸುತ್ತಾರೆ. ಚಿತ್ತಾಲರ ಕಾವ್ಯದ ಬಗೆಗೆ ಬರೆದ ಈ ವಿಮರ್ಶೆ ಆ ಕುರಿತಾದ ಒಂದು ಅತ್ಯುತ್ತಮ ವಿಮರ್ಶಾ ಪ್ರಕ್ರಿಯೆ ಅಂತನಿಸಿಕೊಂಡಿದೆ. ಈ ಮೊದಲೇ ಉಲ್ಲೇಖಿಸಿದಂತೆ ಗೌರೀಶರ ವಿಮರ್ಶಾ ಬರಹದಲ್ಲಿಯೂ ಪ್ರಯೋಗಿಸುವ ವಾಕ್ಯರಚನೆಯನ್ನು ಓದುವುದೂ ಒಂದು ರಸಾನುಭವ. 'ಮನುಕುಲದ ಹಾಡು' ಲೇಖನದಲ್ಲಿಯ ಒಂದು ವಾಕ್ಯದ ಗಮ್ಮತ್ತು ಹೀಗಿದೆ : "....ಅವುಗಳ ಮಿರುಗು ಮಸಕುಗಳಲ್ಲಿ ಸಂವೇದನೆಯಿಂದ, ಸಮವೇದನೆಯಿಂದ ನಿವೇದಿಸುವ ತಳಮಳದ ತಾಳ್ಮೆ, ಜಿನುಗಾದ ಜಾಣ್ಮೆ ಈ 'ಮನುಕುಲದ ಹಾಡಿ'ನ ಗತ್ತು ಗಮ್ಮತ್ತಾಗಿದೆ." ಈ ಬಗೆಯ ಕಾವ್ಯಾತ್ಮಕ ವಾಕ್ಯ ಸರಣಿಗಳನ್ನು, ನುಡಿಬಂಧವನ್ನು ಎಲ್ಲಾ ಬರಹಗಳೆಡೆಯಲ್ಲಿಯೂ ನಾವು ಸವಿಯಬಹುದು.

ನವ್ಯದ ಸಂದರ್ಭದ ಕವಿ ವಿ ಜಿ. ಭಟ್ಟರ ಕಾವ್ಯದ ಕುರಿತು ಹೇಳುವಾಗ ವ್ಯಕ್ತಪಡಿಸಿದ ಮಾತು ಇಡೀ ವಿಮರ್ಶಾ ಕ್ಷೇತ್ರದ ಗಮನವನ್ನು ಸೆಳೆಯುವಂಥದು : "ಅಡಿಗರ ನವ್ಯ ಸಂಪ್ರದಾಯಕ್ಕೇ ಒಂದರ್ಥದಲ್ಲಿ ಭಟ್ಟರು ಅಗ್ರದೂತರು....ಉತ್ತಮ ಕಾವ್ಯದ ಪುನರ್‌ಮೌಲೀಕರಣ ಪ್ರತಿ ತಲೆಮಾರಿಗೂ ಆಗಬೇಕು. ಈ ದೃಷ್ಟಿಯಿಂದ ಈ ಕವಿಯ ಹಾಗೂ ಕಾವ್ಯದ ಪುನರಭ್ಯಾಸವು ನಡೆಯಲೇಬೇಕು. ಅದರಿಂದ ನವ್ಯ ಕಾವ್ಯದ ಸಂಪನ್ಮೂಲವು ನಮಗೆ ಸಿಗುವುದು" ಹೀಗನ್ನುತ್ತ ತಾವು ಆ ದಿಸೆಯಲ್ಲಿ ಇಟ್ಟ ಇಲ್ಲಿಯ ಹೆಜ್ಜೆಯ ಬಗ್ಗೆ "ಹೊಸ ಹುರುಪಿನ ನಮ್ಮ ನವ್ಯಕಾವ್ಯದ ರಸಿಕರೂ ವಿಮರ್ಶಕರೂ ಈ ಕಾರ್ಯದಲ್ಲಿ ಮುನ್ನಡೆಯುವುದಕ್ಕೆ ನಾನು ಕೆಣಕಿದಂತೆ ಆದರೆ ಅದೇ ನನಗೊಂದು ಸಮಾಧಾನ!" ಎಂದು ಹೇಳಿಕೊಳ್ಳುತ್ತಾರೆ. (ಆದರೆ ಈ ಆಹ್ವಾನಕ್ಕೆ ಓಗೊಡುವಂತೆ ಗೌರೀಶರಂಥ ದೃಷ್ಟಿ ಬಗೆ ಯಾರಿಗೆ ? ಎಲ್ಲಿಂದ ? ಎಂಬ ಪ್ರಶ್ನೆ.)

ಗೌರೀಶರ ಈ ದೃಷ್ಟಿ ಅನನ್ಯವಾದುದೆಂದೇ ಹೇಳಬಹುದು. ಕಾವ್ಯ ವಿಮರ್ಶೆಯನ್ನು ಗೌರೀಶರು ಪ್ರಸೂತಿ ಕ್ರಿಯೆಯೆಂದೇ ಭಾವಿಸಿದ್ದಾರೆ. 'ಕಾವ್ಯ ಪುಷ್ಪವು ರಸಫಲವನ್ನು ಕೊಡಬೇಕಾದರೆ ಅಲ್ಲಿ ನಡೆಯಬೇಕು ಕಾವ್ಯ ಸಮೀಕ್ಷಾ ಕ್ರಿಯೆ. ಆ ಕ್ರಿಯೆಗೆ, ಪ್ರಸೂತಿಗೆ ಸೂಲಗಿತ್ತಿಯಾಗುವುದೇ ವಿಧಾಯಕ ವಿಮರ್ಶೆಯ ಕೆಲಸ. ಮಧುರಸವನ್ನು ಮೂಸಿ ಹೀರುವ ರಸಿಕ ಭ್ರಮರ ಕಾರ್ಯ

ವಿದೆಂದೂ ಅವರು ಭಾವಿಸಿದ್ದು ತಮ್ಮ ಈ ನಿಲುವನ್ನು ಎಲ್ಲಿಯೂ ಬಿಟ್ಟು ಕೊಡಲೊಲ್ಲರು.

ಕೃತಿ ಮತ್ತು ಕೃತಿಕಾರನ ಸಜೀವ ಸಂಬಂಧವನ್ನು ಸ್ಥಾಪಿಸಿಕೊಳ್ಳ ಬೇಕೆಂಬ ಅಭಿಪ್ರಾಯ ಹೊಂದಿರುವ ಗೌರೀಶರಿಗೆ, ಕವಿಗಿಂತ ಕಾವ್ಯ ಮುಖ್ಯ ವೆಂಬ ತರ್ಕ ಸರಣಿ ಮಾನ್ಯವಾಗುವುದಿಲ್ಲ. ಕವಿಯ ಹಾಗೂ ಆತನ ಚಾರಿತ್ರಿಕ ಅಂಶವೂ ಕಾವ್ಯದ ಸತ್ವದ ಅರಿವಿಗೆ ಅವಶ್ಯವೆಂಬ ನಿಲುವನ್ನು ತಾಳಿರುವುದನ್ನು ದಿನಕರ ದೇಸಾಯಿ ಅವರ ಕಾವ್ಯವನ್ನು ಪರಿವೀಕ್ಷಿಸುವಾಗ ನಿದರ್ಶನಗೊಳಿಸು ತ್ತಾರೆ. ದೇಸಾಯರ ಕಾವ್ಯ, ಮಕ್ಕಳ ಪದ್ಯ, ಚುಟುಕು, ಚೌಪದಿಗಳನ್ನೆಲ್ಲ ಬೇರೆ ಬೇರೆ ಗಂಗಾಳದಲ್ಲಿಟ್ಟು ಪರಿವೀಕ್ಷಿಸಿ ಒಂದು ಸುಸಂಗತ ಅಧ್ಯಯನವನ್ನೇ ಒದಗಿಸುತ್ತಾರೆ. ಇಲ್ಲಿ ಗೌರೀಶರ ವಿವೇಕ ಅದೆಷ್ಟು ಜಾಗ್ರತವಾಗಿ ಚರ್ಯೆ ಗೊಂಡಿದೆಯೆಂದರೆ—'ಈ ಕವಿಗೆ ಕಲೆಯ ಕುಸುರಿನ ಕೆಲಸದ ವ್ಯವಧಾನ ಕಡಿಮೆ' ಎಂದು ಹೇಳಿರುವ ಮಾತಿನೊಂದಿಗೇ ಕವಿಯ ವ್ಯಕ್ತಿತ್ವವನ್ನು ಎದುರಿ ಗಿರಿಸಿಕೊಳ್ಳುತ್ತ "ಈ ಕವಿ ಜನಸೇವಕ. ಆಜೀವ ಕರ್ಮಯೋಗಿ. ಜನಸೇವಕ ನಾಗಿ ಈ ಕವಿ ದಿನಕರರು ವ್ಯಾವಸಾಯಿಕ ಅಥವಾ ಶುದ್ಧ ಕಲೋಪಾಸಕ ಕವಿಯಲ್ಲ. ಕವನಗಾರಿಕೆ ಅವರ ಕಾರ್ಯದ ಕೈಗಾರಿಕೆಯ ಕೀಲುಗಳನ್ನು ಸಡಿಲುಗೊಳಿಸಲು ಕೀಲೆಣ್ಣೆ" ಎಂಬ ವಾಸ್ತವಿಕ ನೆಲೆಯನ್ನು ದಿಟ್ಟಿಸಿ ಗುಣ ಗೌರವದೊಂದಿಗೆ ದಿನಕರರ 'ಕವನ' ಕಾರ್ಯದಲ್ಲೂ ತುಂಬಿಕೊಂಡಿರುವಾಗ ಸತ್ವವನ್ನು ಹೊರಗೆಡವುತ್ತಾರೆ. ಇದೇ ಗೌರೀಶರ ನಿಜವಾದ ಬರಹದ ಬದ್ಧತೆ.

ಗೌರೀಶ ಕಾಯ್ಕಿಣಿಯವರ ವಿಮರ್ಶಾತ್ಮಕ ಬರಹಗಳ ಕುರಿತು 'ಯಾರಿಗೆ ಏನುಬೇಕೋ ಅದನ್ನೇ ನೀಡುವ ಸರಕಿನ ದೊಡ್ಡ ಗುದಾಮು' ಹೀಗೆಂದು ಕೀಟಲೆ ಮಾತಾಡುವವರೂ ಇದ್ದಾರೆ. ಆದರೆ ಗೌರೀಶರಲ್ಲಿ ಒಮ್ಮುಖವಾಗಿ ಕಾಣಬರುವ ಈ ಧಾರಾಳಿತನವು ದೌರ್ಬಲ್ಯದ ಅರ್ಥವಲ್ಲ ಈ ಮೊದಲೇ ನಾನು ಸ್ಪಷ್ಟಪಡಿಸಿರುವಂತೆ, ವಸ್ತು ವಿಚಾರಗಳಲ್ಲಿಯ ಗುಣವನ್ನಷ್ಟು ಎತ್ತಿ ಎತ್ತಿ ಹೇಳಿ ದೋಷವನ್ನು ಸೂಚ್ಯವಾಗಿ ಸಭ್ಯತೆಯಿಂದ ತಿದ್ದಿ ಹೇಳುತ್ತಾರೆಯೇ ವಿನಃ ಅಪ್ರಿಯವಾಗಿ ನಿಂದಿಸುವ ಧಾಟಿಯಲ್ಲಿ ಹೇಳಲಾರರು. ಒಂದು ಬುಟ್ಟಿ ಯಲ್ಲಿಟ್ಟ ಹಣ್ಣುಗಳಲ್ಲಿ ಕೊಳೆತುಹೋದವನ್ನು ಎತ್ತಿಹಿಡಿದು ತೋರಿಸುವಲ್ಲಿ ಉತ್ಸಾಹ ತೋರದೇ 'ಇವುಗಳಲ್ಲಿ ಈ ಎರಡು ಹಣ್ಣು ಚೆನ್ನಾಗಿದೆ' ಎಂದಿಷ್ಟೇ

ಹೇಳಿದರೆ ಉಳಿದವೆಲ್ಲಾ ಚೆನ್ನಾಗಿಲ್ಲವೆಂದು ಹೇಳಿದ ಅರ್ಥವೇ ಆಗುವುದಿಲ್ಲವೇ? ಹಾಗೆ.

"ಗೌರೀಶರದು ಮಾಸ್ತರಿಕೆ ಉದ್ಯೋಗ. ಮಾಸ್ತರರು ಮಾಡುವ ಮುಖ್ಯ ಕೆಲಸವೆಂದರೆ ಮಕ್ಕಳನ್ನು ತಿದ್ದುವುದು. ಅಭಿರುಚಿಯನ್ನು ತಿದ್ದುವುದು. ಗೌರೀಶರು ವಿಮರ್ಶಕರಾಗಿಯೂ ಕೂಡಾ ಅದನ್ನೇ ಮಾಡಿದ್ದಾರೆ. ಸಹೃದಯರ ಅಭಿರುಚಿಯನ್ನು ತಿದ್ದುವುದನ್ನು ಮಾಡಿದರು. ಅದೇ ಹೊತ್ತಿಗೆ ಸಾಹಿತ್ಯದ ಒಡಲನ್ನು ಸಾಮಾಜಿಕರಿಗೆ ಪರಿಚಯಿಸಿದರು. ಇದು ಸಾಮಾನ್ಯ ಅವಶ್ಯಕತೆಯೇನೂ ಆಗಿರಲಿಲ್ಲ" ಹೀಗೆಂದು ಮಿತ್ರ ಡಾ|| ಆರ್. ವಿ. ಭಂಡಾರಿ ಒಂದೆಡೆ ಅಭಿಪ್ರಾಯಪಟ್ಟಿರುವುದು ಇಲ್ಲಿ ಉಲ್ಲೇಖನೀಯ.

ಗೌರೀಶರು ಅನೇಕರ ಕೃತಿಗಳಿಗೆ ಮುನ್ನುಡಿ, ಬೆನ್ನುಡಿ, ಹಿನ್ನುಡಿ ಮತ್ತು ಸಂಭಾವನಾ ಗ್ರಂಥಕ್ಕೆ ಬರೆದುಕೊಟ್ಟಿರುವ ಕ್ರಿಯೆಗಳಿಗೂ ಈ ಮಾತು ಸಲ್ಲುತ್ತದೆ. 'ಸ್ವಾತಂತ್ರ್ಯೋತ್ತರ ವಿಚಾರ ಸಾಹಿತ್ಯ' ಎಂಬ ಪ್ರಬಂಧದಲ್ಲಿ ಈ ಕುರಿತು ತಮ್ಮ ಭಾವನೆಯನ್ನು ಸ್ಪಷ್ಟಗೊಳಿಸಿದ್ದಾರೆ–"ನಮ್ಮಲ್ಲಿ ವಿಚಾರ ಸಾಹಿತ್ಯವೆಂದು ಪರಿಗಣಿಸಲಾಗುವ ಇನ್ನೊಂದು ಪ್ರಕಾರವೆಂದರೆ 'ಪ್ರಶಸ್ತಿ' ಹಾಗೂ 'ಸಂಭಾವನಾ' ಗ್ರಂಥಗಳು. ಕವಿ ಕಾವ್ಯ ವಿಮರ್ಶೆಗಳಿಗೆ ಮೀಸಲಾದ ಇಂಥ ಸಂಪುಟಗಳಿಗೆ ನಮ್ಮ ಸಾಹಿತ್ಯದಲ್ಲಿ ವಿಶಿಷ್ಟವಾದ ಸ್ಥಾನವಿದೆ ಆದರೆ ಇವು ಕವಿಯ ಗೌರವ ಪ್ರಸಂಗದ ನಿಮಿತ್ತವೇ ಪ್ರಕಟವಾಗುವುದರಿಂದ ಇವುಗಳಿಗೆ ಪೂರ್ತಿ ಮುಕ್ತಮನಸ್ಸಿನ ವಿಮರ್ಶೆ–ಚರ್ಚೆಗಳಿಗೆ ಅಷ್ಟೊಂದು ಆಸ್ಪದವಿರುವುದಿಲ್ಲ"–"ಅದೇ ರೀತಿ ಇತರ ಗ್ರಂಥಗಳ ಮುನ್ನುಡಿ, ಪ್ರಸ್ತಾವನೆಗಳು.... ಏಕೆಂದರೆ ಇವುಗಳ ಉದ್ದೇಶವೇ ಸಂಬಂಧಪಟ್ಟ ಪುಸ್ತಕಕ್ಕೆ ಒಂದು ಪ್ರಶಸ್ತಿ ಪ್ರೋತ್ಸಾಹ ನೀಡುವುದೇ ಆಗಿದೆ." ಇದೊಂದು ಸಹಜ ಸಭ್ಯತೆ. ಇವು ಗೌರೀಶರ ಬರಹದ, ವಿಮರ್ಶೆಯ ಪರಿಮಾಣಕ್ಕೆ ಗ್ರಹಿಸುವ ಮಾನದಂಡವಲ್ಲ.

ಬೇಂದ್ರೆಯವರ 'ಕನ್ನಡ ಮೇಘದೂತ' ಕುರಿತೇ ಒಂದು ಸುದೀರ್ಘ ರಸ ವಿಮರ್ಶೆಯನ್ನು ಗೌರೀಶರು ನೀಡಿದ್ದಾರೆ. ಮೇಘದೂತದ ಓದಿಗೆ ಬೇಕಾದ ಸಿದ್ಧತೆಯನ್ನೂ ಅಲ್ಲಿಯ ರಸಪಾಕವನ್ನೂ ಅದು ನಮಗೆ ಒದಗಿಸಿ ಕೊಡುತ್ತದೆ. ಹಾಗೆ ಗೀತನಾಟಕಗಳ ಕುರಿತು 'ಗೀತನಾಟಕ' ಎಂಬ ಉದ್ಬೋಧಕ ಬರಹವನ್ನೂ ನೀಡಿದ್ದಾರೆ. ಇದರಲ್ಲಿ ಕನ್ನಡದ ಹತ್ತು ಗೀತ ನಾಟಕಗಳನ್ನು

ಚರ್ಚೆಗಾಗಿ ಎದುರಿಗಿಟ್ಟುಕೊಂಡು ಆ ಮೂಲಕ 'ಗೀತನಾಟಕ' ಪ್ರಕಾರದ ಸತ್ವ ರಸಗಳ ಕುರಿತು ಪ್ರಬುದ್ಧ ವ್ಯಾಖ್ಯಾನವನ್ನೇ ನೀಡುತ್ತಾರೆ. ಗೀತನಾಟಕಗಳ ಗುಣ ಲಕ್ಷಣ ಸ್ವಾರಸ್ಯವನ್ನರಿಯಲು ಇದೊಂದು ಅಭ್ಯಾಸನೀಯವಾಗಿದೆ. ಕಡೆಂಗೋಡ್ಲು ಶಂಕರಭಟ್ಟರ ಕಾವ್ಯವನ್ನು ಗೋಲ್ಡ್‌ಸ್ಮಿತ್ ಆಲಿವರ್‌ರ ಕಾವ್ಯಗಳೊಂದಿಗೆ ಇಟ್ಟು ನೋಡಿದ ತೌಲನಿಕ ಮೌಲ್ಯಮಾಪನ ; ಪ್ರಗತಿಶೀಲ ಕಾಲದ ಮಹಾನ್ ಕಾದಂಬರಿಕಾರರಾದ ಅ.ನ.ಕೃ.ರವರ ವಿನ.ಶರ್ಾಕಾರ್ಯವನ್ನು ಪರಿಶೀಲಿಸುತ್ತ ವಿಮರ್ಶೆಯ ಸಾಧ್ಯತೆಗಳ ಸಾಧನದ ಬಗೆಯನ್ನೇ ಬಗೆದಿಟ್ಟಿರುವುದು ; ಅ.ನ.ಕೃ.ರವರ ವೈಚಾರಿಕ ರಸಾದ್ರ್ರತೆಯನ್ನು ಪರಿಚಯಿಸಿರುವುದು–ಇವೆಲ್ಲ ಗೌರೀಶರು ನಮಗಿತ್ತ ಅತ್ಯುಪಯುಕ್ತ ಕೊಡುಗೆಗಳೇ ಆಗಿವೆ.

ಆಧುನಿಕ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಗಣ್ಯ ಹೆಸರಾಗಿರುವ ಭೈರಪ್ಪನವರ ಕಾದಂಬರಿಗಳನ್ನು ಮುಖ್ಯವಾಗಿ ಅವರ ಕಾದಂಬರಿಗಳಲ್ಲಿ ಬಹುವಾಗಿ ವ್ಯಾಪಿಸಿಕೊಂಡಿರುವ ಹಿಂದೂ ಧರ್ಮ ಧೋರಣೆಯ ಆಶಯವನ್ನು ತಮ್ಮ ವಿಮರ್ಶೆಯ ನಿಕಷಕ್ಕೆ ಮುಖಾಮುಖಿಗೊಳಿಸಿದ್ದಾರೆ ಗೌರೀಶರು. ಭೈರಪ್ಪನವರ 'ಧರ್ಮಶ್ರೀ', 'ತಬ್ಬಲಿಯು ನೀನಾದೆ ಮಗನೆ', 'ವಂಶವೃಕ್ಷ', 'ದಾಟು', 'ನಾಯಿ ನೆರಳು' ಕಾದಂಬರಿಗಳನ್ನು ಎದುರಿಗಿಟ್ಟುಕೊಂಡು ಅವುಗಳಲ್ಲಿ ಬಂದ ಧರ್ಮಮೂಲದ ಜಿಜ್ಞಾಸೆ ವಿಚಿಕಿತ್ಸಕತೆಯನ್ನು ಗೌರೀಶರು ತಮ್ಮ ಪ್ರಬುದ್ಧ ಧೀಚಕ್ಷುವಿನಲ್ಲಿ ತೋರಿಸಿರುವುದು ಅನನ್ಯವೇ ಸರಿ. ಬಿ. ಎ. ಸನದಿಯವರ ಎಲ್ಲ ಕಾವ್ಯವನ್ನೂ 'ಮಾನವ್ಯ ಕವಿ' ಎಂಬ ತಮ್ಮದೊಂದು ಕೃತಿಯಲ್ಲಿ ಇಡಿಯಾಗಿ ವಿಮರ್ಶಿಸಿ ಅಥವಾ ಬಗೆದು ನೋಡಿದ ವೈಖರಿಯು ವಿಮರ್ಶೆಯ ಎಲ್ಲಾ ಬಗೆಯ ಸಾಧ್ಯತೆಗಳನ್ನು ಪ್ರದರ್ಶಿಸಿ ತಮ್ಮ ಆ ಸಾಮರ್ಥ್ಯದ ದರ್ಶನವನ್ನೀಯುವುದೇ ಮುಖ್ಯವಾಗಿಕೊಳ್ಳುತ್ತದೆ. ಕಾವ್ಯಗಳ ಕುರಿತು ಬೋಧಕ ಪ್ರಬಂಧವಾಗಿ ಲಭಿಸುತ್ತದೆ. ಅವರ ಸಾಹಿತ್ಯಿಕ ವಿಮರ್ಶೆಗಳ ಎಲ್ಲ ಕೃತಿಗಳಲ್ಲಿಯೂ ಹೀಗೆ ಕಾವ್ಯ ರಸಗ್ರಹಿಕೆ, ಕಾವ್ಯ ಸ್ವರೂಪಗಳ ಒಂದು ಶಾಸ್ತ್ರೀಯ ಅಧ್ಯಯನದ ಅರಿವು ಸಹೃದಯರಿಗೆ ಲಭಿಸುವುದು ನಿಶ್ಚಿತ.

ನಿರ್ದಿಷ್ಟ ಸಾಹಿತ್ಯ ಕೃತಿಗಳನ್ನು ಹಿಡಿದು ಪ್ರವೇಶಿಸಿ ಕಾವ್ಯ ಮೌಲ್ಯಮಾಪನಗೈದಂತೆಯೇ ಕೇವಲ ಸಾಹಿತ್ಯಿಕ ಸಂದರ್ಭಗಳಲ್ಲಿ ನಿಂತು ತಮ್ಮ ಕಡೆ

ನೋಟ ಬೀರಿ ಅಲ್ಲಿ ಏನು? ಹೇಗೆ? ಎಂಬುದನ್ನೂ ಬಹು ಚುರುಕಾಗಿ ಗೌರೀಶರು ಪರಿವೀಕ್ಷಿಸಿ ಬರೆದ ವೈಚಾರಿಕ ಪ್ರಬಂಧಗಳು, ಲೇಖನಗಳು ನಮ್ಮನ್ನು ಗಣ್ಯವಾಗಿ ತಬ್ಬಿಕೊಳ್ಳದೇ ಬಿಡುವುದಿಲ್ಲ. ಅಂಥವು ಸಾಕಷ್ಟು ಸಂಖ್ಯೆಯಲ್ಲಿ ಬಿಡಿ ಬರಹಗಳಾಗಿಯೇ ಉಳಿದುಕೊಂಡಿದ್ದರೂ ಕೆಲವಷ್ಟು ಸಂಕಲನ ರೂಪದಲ್ಲಿ ಲಭ್ಯ. ಮುಖ್ಯವಾಗಿ 'ಕಟಾಕ್ಷ' ಎಂಬ ಸಂಕಲನ. ('ಕಟಾಕ್ಷ' ಸಂಕಲನದಲ್ಲಿರುವ ಪ್ರಬಂಧಗಳನ್ನೂ ಒಳಗೊಂಡು ಒಟ್ಟು ಇಪ್ಪತ್ತೊಂದು ವೈಚಾರಿಕ ವಿಮರ್ಶಕ ಬರಹಗಳು ಇತ್ತೀಚೆಗೆ ಬಿಡುಗಡೆಗೊಂಡಿರುವ ಅಂಕೋಲೆಯ ರಾಘವೇಂದ್ರ ಪ್ರಕಾಶನದವರು ತರುತ್ತಿರುವ 'ಗೌರೀಶ ಕಾಯ್ಕಿಣಿ ಸಮಗ್ರ ಸಾಹಿತ್ಯ' ಐನೆಯ ಸಂಪುಟದಲ್ಲಿ ಬೆಳಕು ಕಂಡಿವೆ) 'ಕಟಾಕ್ಷ'- ಎಂದರೇನೇ ಕರುಣಾಮಯ ಅಥವಾ ಕಣ್ಣಂಚಿನ ಕೋರೆನೋಟ. ಈ ನೋಟದಲ್ಲೊಂದು ಸವಿಯಿದೆ. ಆಕರ್ಷಣೆಯಿದೆ ಹಾಗೆಯೇ 'ಕಟಾಕ್ಷ' ಸಂಕಲನದ ಬರಹಗಳಲ್ಲಿಯೂ ಆ ಅನುಭವ ವೇದ್ಯ. ಇವುಗಳಲ್ಲಿ ಒಂದು ಬರಹ 'ಹೊಸ ಕಾವ್ಯದ ಹಾದಿ ' ಈ ಪ್ರಬಂಧದಲ್ಲಿ ನವ್ಯಕಾವ್ಯವು ಸಾಗಿಬಂದ ದಾರಿಯ ದೂರದವರೆಗಿನ ಅವಲೋಕನವಿದೆ. ನವ್ಯವು ಭಾರತದಲ್ಲಿ ಪ್ರವೇಶಿಸಲು ಕಾರಣವನ್ನು ಯಾರು ಏನೇ ಗುರುತಿಸಿರಲಿ ಗೌರೀಶರಿಗೆ ಅದು ಪೂರ್ಣ ಮಾನ್ಯವೂ ಅಲ್ಲ ; ಪೂರ್ಣ ಅಮಾನ್ಯವೂ ಅಲ್ಲ. ಅಂಥ ಅಭಿಪ್ರಾಯಗಳನ್ನೆಲ್ಲಾ ಉಲ್ಲೇಖಿಸಿಕೊಂಡೇ ತಮ್ಮದೇ ಆದ ಅಭಿಪ್ರಾಯವನ್ನು ತೆರೆದಿಡುತ್ತಾರೆ : 'ಇಷ್ಟಂತೂ ಒಪ್ಪಲೇಬೇಕು. ನಮ್ಮ ತರುಣ ಕವಿಗಳಿಗೆ ಬೇಂದ್ರೆ, ಪುಟ್ಟಪ್ಪನವರಂಥ ಹಿರಿಯ ಕವಿಗಳ ಪ್ರತಿಭಾನಾಳದಿಂದ ಬಿಡುಗಡೆ ಅಗತ್ಯವಿತ್ತು. '....ಬೇಂದ್ರೆ ಮತ್ತು ಪುಟ್ಟಪ್ಪ ಇವರ ಪ್ರಭಾವದಿಂದ ಶಕ್ತರು ಮಾತ್ರ ತಪ್ಪಿಸಿಕೊಳ್ಳಬಲ್ಲರು' ಈ ಆತ್ಮಸ್ವಾತಂತ್ರ್ಯವನ್ನು ಸಾಧಿಸಬೇಕೆಂಬ ಹಟವೇ ನವ್ಯಕಾವ್ಯದ ನಾಂದಿಯನ್ನು ಹಾಡಿತು ; ಪಶ್ಚಿಮದ ಹೊಸ ಕಾವ್ಯದ ಉತ್ತೇಜಕ ಗಾಳಿಯೂ ಅದೇ ಹಂಗಾಮಿನಲ್ಲಿ ಬೀಸಹತ್ತಿತು. ಹೊಸ ಹೆಜ್ಜೆಯಿಟ್ಟೂ ಆತ್ಮಪ್ರತ್ಯಯವನ್ನು ಅನುಭವಿಸಬೇಕೆಂಬ ಲವಲವಿಕೆ ಕೆಲವು ಧೀಮಂತ ಕವಿ ಹೃದಯಗಳಲ್ಲಾದರೂ ಪ್ರಾಮಾಣಿಕವಾಗಿ ಕೊನರಿತು. ಅದಕ್ಕಾಗಿ ಅವರು ಈ ರೀತಿ ಆತ್ಮಸ್ವಾತಂತ್ರ್ಯವನ್ನು ಪಡೆದರು" ಎಂದೇ ವಿಶ್ಲೇಷಿಸುತ್ತಾರೆ. ಮತ್ತು 'ನವ್ಯವು ಒಂದು ಸಂಪ್ರದಾಯದ ರೂಪ ತಾಳದಿದ್ದರೂ ಅದು ಒಂದು

ಪ್ರಭಾವೀ ತಂತ್ರವಾಗಿ ಬಳಗಬಹುದು ಎಂಬ ಮುನ್ನುಡಿಯನ್ನೂ ಹಾಡುತ್ತ, ಆದರೆ "ನವ್ಯಕಾವ್ಯ ಆರಂಭವಾದ ದಶಕದಲ್ಲಿಯೇ ಅದು ತಂತ್ರ–ಶೈಲಿಯ ಒಂದು ವಿಶೇಷವಾಗಿ ಉಳಿದುಕೊಂಡಿತೇ ಹೊರತು ರಸ ಸಂಪ್ರದಾಯವಾಗಿ ಬಲಿತು ಹಬ್ಬಿಲ್ಲ" ಎಂಬುದನ್ನೂ ಸ್ಪಷ್ಟಪಡಿಸುತ್ತಾರೆ.

'ವಿಮರ್ಶೆಯಲ್ಲಿ ನವ್ಯತೆ', 'ವಿಮರ್ಶೆಗೆ ಯಾವ ಹಾದಿ' ಪ್ರಬಂಧಗಳೂ ವಿಮರ್ಶಾ ಕಾಯಕಕ್ಕೊಂದು ಕೈಗನ್ನಡಿ. ವಿಮರ್ಶೆಯ ಕುರಿತು ಅದು ಸಾಗಿ ಬಂದ ನಡೆಯನ್ನು ಸಂಕ್ಷಿಪ್ತವಾಗಿಯಾದರೂ ಅವಲೋಕಿಸುತ್ತ ಆ ಕುರಿತು ನಿರ್ದಾಕ್ಷಿಣ್ಯವಾಗಿ ಹಲವು ಅಭಿಪ್ರಾಯಗಳನ್ನು ಮಂಡಿಸುತ್ತಾರೆ. ಉದಾಹರಣೆಗಾಗಿ ಅಂಥ ಒಂದು ಮಾತು : "ಆಳವಾದ ಸತ್ಯವನ್ನು ಅರಿತೋ, ಅರಿಯುದೆಯೋ ಮರೆಯಿಸಿ ಇಲ್ಲವೆ ಮೇಲೆ ತೇಲಿಸಿ ಒಟ್ಟಾರೆ ಆ ಕೃತಿಯ ವಿಮರ್ಶೆಯ ಹುತ್ತ ಬಡಿಯುವ ಒಂದು ದೌರ್ಬಲ್ಯವೂ ಅಲ್ಲಲ್ಲಿ ಸ್ಪಷ್ಟವಾಗುತ್ತದೆ. ಸಮಕಾಲೀನ ಕವಿಗಳ ಬಗೆಗೆ ನಿರ್ದಾಕ್ಷಿಣ್ಯವಾಗಿ ವಿಮರ್ಶಿಸುವ ಧೈರ್ಯ ಮತ್ತು ಮನೋಬಲ ಅನೇಕ ನವ್ಯ ವಿಮರ್ಶಕರಲ್ಲಿಯೂ ಕಡಿಮೆ. ಅದು ಇದ್ದಲ್ಲಿಯೂ ಧಾರಾಳವಾಗಿ ವ್ಯಕ್ತವಾಗುವುದು–ತಮಗೆ ಆಗದ ಅಂದರೆ ಆರಾಧ್ಯರಲ್ಲದ ಕವಿಗಳ ಬಗೆಗೇ ಆಗಿದೆ !"

—ಇಂಥ ಶುದ್ಧ, ನಿರ್ದಾಕ್ಷಿಣ್ಯ ಅಭಿಪ್ರಾಯಗಳನ್ನು ಹೇಳಲು ಗೌರೀಶರಿಗೆ ಮಾತ್ರ ಸಾಧ್ಯ.

ಈ ಸಂಕಲನದಲ್ಲೇ 'ಅನುಭವ ಮತ್ತು ಅಭಿವ್ಯಕ್ತಿ' ಎಂಬ ಒಂದು ಪ್ರಬಂಧವೂ ಇದೆ. ಗೌರೀಶರು ಇಲ್ಲಿ 'ಅನು–ಭವ' ಅಂದರೆ ಯಾವುದು ? ಹೇಗೆ ? ಎಂದು ವಿಶ್ಲೇಷಿಸಿರುವುದೇ ಒಂದು ದಿವ್ಯ ಅನುಭವ. ಅದನ್ನಿಲ್ಲಿ ಉಲ್ಲೇಖಿಸುವುದು ದೀರ್ಘವಾದೀತು. ಆದರೆ ಹಾಗೆ ವಿವರಿಸುತ್ತ ಅಡಿಗರ ಕಾವ್ಯವನ್ನೂ ಪ್ರಶ್ನಿಸುತ್ತಾರೆ : ಅಂಥ 'ಅನುಭವ' ಕಾವ್ಯದಲ್ಲಿ ನಿಜವಾಗಿ ಅಭಿವ್ಯಕ್ತಗೊಂಡಿದೆಯೇ? ಎಲಿಯಟ್‌ನ ಮಾತು, ಅಡಿಗರ ಮಾತು ಇವನ್ನೆಲ್ಲಾ ಇಟ್ಟುಕೊಂಡು ತರ್ಕಬದ್ಧವಾಗಿ ನಮ್ಮ ನವ್ಯಕಾವ್ಯದಲ್ಲಿ ಅಭಿವ್ಯಕ್ತಗೊಳ್ಳುವ ಅನುಭವದ ಮಿತಿಯನ್ನೂ ತೋರಿಸಿಕೊಡುತ್ತಾರೆ.

ಸಾಹಿತ್ಯ ಸಂದರ್ಭದಲ್ಲಿ ಕೇಳಿಬರುವ 'ಪರಕೀಯ ಪ್ರಜ್ಞೆ' ಎಂಬುದರ ಕುರಿತೂ ಗೌರೀಶರು ತಮ್ಮ ವ್ಯಾಖ್ಯಾನವನ್ನು ಹರಿಬಿಟ್ಟ ಒಂದು ಪ್ರಬಂಧವೂ

ಒಂದು ದಿವ್ಯ ಅಧ್ಯಯನ. "ನವ್ಯ ಮತ್ತು ಬಂಡಾಯ ಕಾವ್ಯವಿಮರ್ಶೆಗೂ ಒಂದು ಬೀಗದ ಕೈ ಸಿಕ್ಕಂತಾಗಿದೆ" (ಆರ್ವಿ) ಎಂಬುದು ಇಡೀ ಪ್ರಬಂಧದ ಫಲಿತತೆ. ಇತ್ತೀಚೆಗೆ ಪ್ರಮುಖ ಚರ್ಚೆಯಾಗಿರುವ 'ಸಾಹಿತ್ಯದಲ್ಲಿ ಶೂದ್ರ ಬ್ರಾಹ್ಮಣ ಸಂದರ್ಭ' ಎಂಬ ವಿಚಾರವನ್ನೆತ್ತಿಕೊಂಡು ಅದನ್ನು ಚಾರಿತ್ರಿಕ, ಐತಿಹಾಸಿಕ, ಸಾಮಾಜಿಕ ಹಾಗೂ ವೈಚಾರಿಕ ಹಿನ್ನೆಲೆಯೊಂದಿಗೆ ಕ್ರಮಬದ್ಧವಾಗಿ, ನಿರ್ಲಿಪ್ತ, ನಿರುಪಾಧಿಕವಾಗಿ ಚರ್ಚಿಸಿ ವಿಚಾರ-ವಿಮರ್ಶೆಗೊಂದು ತೀಕ್ಷ್ಣ ಬೆಳಕು ಹಾಯಿಸಿದ್ದಾರೆ. ಈ ಪ್ರಜ್ಞೆಯ ಸಂಯಮ, ಸಂಕೋಚ, ಉಪಜಾಗ್ರತ, ಅಜಾಗ್ರತ ಮನೋವ್ಯಾಪಾರದ ನಿಲುವನ್ನು ಚಿತ್ರಿಸಿ ಕೃತಿಯನ್ನು ಬೆಲೆಕಟ್ಟುವಾಗಿನ ದೃಷ್ಟಿ, ಆ ತಕ್ಕಡಿ, ಕಲ್ಲು ಹೇಗಿರಬೇಕು ಎಂಬ ಬಗ್ಗೆ ಗೌರೀಶರು ವ್ಯಕ್ತಪಡಿಸುವ ಅಭಿಪ್ರಾಯ ತುಂಬಾ ಮನೋಜ್ಞವಾದುದು. 'ಒಂದು ಅನ್ಯಾಯವನ್ನು ಪ್ರತಿಭಟಿಸಲು ನಾವು ಹೊಸ ಅನ್ಯಾಯ ಮಾಡಬೇಕಿಲ್ಲ' ಎಂಬ ಅವರ ವಿವೇಕವಾಣಿ ತುಂಬಾ ಮಾರ್ಮಿಕವಾದುದು. ಹಾಗೇನೇ 'ಕಾವ್ಯದಲ್ಲಿ ದಲಿತ ಪ್ರಜ್ಞೆ' ಎಂಬ ಕುರಿತು ಗೌರೀಶರು ಮಹತ್ವದ್ದಾಗಿ ತಮ್ಮ ವಿಚಿಕಿತ್ಸಕ ದೃಷ್ಟಿಯನ್ನು ಹಾಯಿಸಿದ್ದಾರೆ. ಸಾಹಿತ್ಯಿಕ ವಿವಿಧ ಪ್ರಕಾರಗಳನ್ನೂ ಹಾಯ್ದು ಬಂದಿರುವ ಗೌರೀಶರು ತುಂಬಿಕೊಂಡಿರುವ ಆ ಚಲನಶೀಲತೆ, ವಿಮರ್ಶಕತ್ವದ ನಿರ್ವ್ಯಾಜ ಸತ್ವ, ಆ ಜಾಗೃತಿ, ಸಂದರ್ಭಕ್ಕೆ ಸ್ಪಂದಿಸುವ ಪ್ರಾಮಾಣಿಕ ದೃಷ್ಟಿ ಇವೆಲ್ಲಾ ತೆರೆದುಕೊಂಡು ಗೌರೀಶರನ್ನು ಬಹಳ ಎತ್ತರಕ್ಕೆ ನಿಲ್ಲಿಸಿ ತೋರಿಸುತ್ತಿದೆ.

ಗೌರೀಶರ ವೈಚಾರಿಕ ಗಂಭೀರ ವಿಮರ್ಶಾ ಸತ್ವಕ್ಕೆ 'ಪ್ರಜ್ಞಾನೇತ್ರದ ಬೆಳಕಿನಲ್ಲಿ' ಎಂಬ ಕೃತಿಯೂ ಒಂದು ನಿದರ್ಶನ. ಈ ಕೃತಿಯಲ್ಲಿ ಮುಖ್ಯವಾಗಿ ಡಾ॥ ಶಂ. ಬಾ. ಜೋಶಿಯವರ ಕೃತಿ ಮತ್ತು ವಿಚಾರಗಳೇ ವಸ್ತು. ೧. ಜೋಶಿಯವರ ಸಾಮಾಜಿಕ ತತ್ವಗಳ ವಿಚಾರ, ೨. ಹಾಲು ಮತ ದರ್ಶನ, ೩. ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆಯ ಕೇಂದ್ರ ಪ್ರಮೇಯಗಳು- ಎಂಬೀ ಮೂರು ಮೌಲಿಕ ಉನ್ನತ ವೈಚಾರಿಕ ವಿಮರ್ಶಾ ಪ್ರಬಂಧಗಳಿವೆ.

ಈ ಎಲ್ಲ ಲೇಖನಗಳಲ್ಲೂ ಗೌರೀಶ ಕಾಯ್ಕಿಣಿಯವರು ಶಂಬಾ ರವರ ವಿಚಾರಗಳನ್ನು ಎದುಗಿಟ್ಟುಕೊಳ್ಳುತ್ತ ತಮ್ಮ ವಿವರಣೆ, ವಿಶ್ಲೇಷಣೆ ಯೋಚನೆಗಳೊಂದಿಗೆ ಅವನ್ನು ವರೆಹಚ್ಚುವಾಗ ಟೀಕೆ-ಟಿಪ್ಪಣಿಗಳು, ಸಮ್ಮತ-ಅಸಮ್ಮತ

ಗಳು ಎತ್ತಿತೋರುವ ಶಂಬಾ ವಿಚಾರಗಳಲ್ಲಿಯ ವೈರುಧ್ಯ ಅಂಶಗಳು ಇವನ್ನೆಲ್ಲಾ ಚರ್ಚಿಸಿ ತಮ್ಮ ಮಾತನ್ನು ಸಮರ್ಥಿಸಲು ಪೌರ್ವಾತ್ಯ, ಪಾಶ್ಚಾತ್ಯ ವಿವಿಧ ವಿದ್ವತ್ ನುಡಿಗಳನ್ನೂ ವಿಚಾರಗಳನ್ನೂ ವಿಪುಲವಾಗಿಯೇ ಉದ್ಧರಣೆಗೊಳಿಸಿ ನಮ್ಮನ್ನು ಜ್ಞಾನವಿಹಾರದಲ್ಲಿ ತೇಲಿಸಿ ಚಕಿತಗೊಳಿಸುತ್ತಾರೆ. ಹಲವೆಡೆ ಇದು ಪಂಡಿತ–ಪಂಡಿತರ ಮಧ್ಯೆಯ ಗಂಭೀರ ವಾದವಾಗಿ ತೋರ್ಪಟ್ಟು ಓದುಗನ ಅರ್ಹತೆಯನ್ನು ಬಯಸುತ್ತದೆ. ಪ್ರಶ್ನಿಸಿ ತಬ್ಬಿಕೊಳ್ಳುತ್ತದೆ.

ಈ ಎಲ್ಲವುಗಳ ಜೊತೆಗೇ ಗೌರೀಶರು ನೀಡಿದ 'ಸ್ವಾತಂತ್ರ್ಯೋತ್ತರ ವಿಚಾರ ಸಾಹಿತ್ಯ' ಎಂಬ ಪ್ರಗಲ್ಭ ಪ್ರಬಂಧವೂ ಮರೆಯುವಂಥದಲ್ಲ. "ನಮ್ಮಲ್ಲಿ ಸಮಾಜ ಶಾಸ್ತ್ರದ ಅಭ್ಯಾಸ, ಜಿಜ್ಞಾಸೆ ಕಡಿಮೆಯೇ ! ವಸ್ತುತಃ ಸದ್ಯದ ಸಂದರ್ಭದಲ್ಲಿ ವಿಚಾರ ಸಾಹಿತ್ಯದ ಬಹು ಭಾಗವು ಈ ವಿಷಯವನ್ನೇ ವ್ಯಾಪಿಸಬೇಕು." ಪರಂಪರೆಯು ಎಂಥದು ? ಪರಿಷ್ಕಾರಗಳು ಹೇಗೆ ? ಫಲಿತಾಂಶವೇನು ? ಅವು ವ್ಯಷ್ಟಿ ಸಮಷ್ಟಿ ಮನೋಧರ್ಮದಲ್ಲಿ ಯಾವ ರೂಪದಲ್ಲಿ ಕಾಣಿಸಿಕೊಂಡಿವೆ ; ಕೊಳ್ಳಲಿವೆ ? ಎಂಬ ತಮ್ಮ ಅಭಿಪ್ರಾಯದೊಂದಿಗೆ ಆ ನಿಟ್ಟಿನಲ್ಲಿ ವಿಚಾರ ಸಾಹಿತ್ಯದ ಕೊಡುಗೆ ಹೇಗೆ ? ಎಂಬಿತ್ಯಾದಿ ಚರ್ಚೆಗಳು ಸಾಂಗತ್ಯಗೊಳ್ಳುತ್ತವೆ.

ಒಟ್ಟಿನಲ್ಲಿ ಡಾ॥ ಗೌರೀಶ ಕಾಯ್ಕಿಣಿಯವರ ವಿಮರ್ಶಾಕಾರ್ಯವು ವೈಚಾರಿಕ ಹರವು ಆಳ ಎತ್ತರದೊಂದಿಗೆ ತನ್ನ ಅನನ್ಯತೆಯನ್ನು ತೋರಿಕೊಂಡು ನಮಗೆ ಓದಿನ ಸೊಗಸು, ಬೌದ್ಧಿಕ ಆಹ್ಲಾದವನ್ನು ನೀಡಿ ರಸವುಣಿಸನ್ನು ಬಡಿಸುವುದರ ಜೊತೆಗೇ ಬೋಧಕವೂ ಆಗಿ ತಿಳಿವನ್ನು ತಿಳಿಗೊಳಿಸುವ ಸಫಲ ಸಿದ್ಧಿಯಾಗಿದೆ ಎಂದರೆ ಅತ್ಯುಕ್ತಿಯಲ್ಲ.

'ಅವರದು ಉದಾರವಾದಿ ವಿಮರ್ಶೆ' ಅಂತಂದರೂ ಅಲ್ಲಿ "ಜನಾಭಿರುಚಿಯನ್ನು ತಿದ್ದಿ, ಶುಚಿಗೊಳಿಸಿ ಸಂಸ್ಕೃತಿಯ ಪಾತಳಿಯನ್ನು ಏರಿಸುವುದು ಗೌರೀಶರ ಉದ್ದೇಶವಾಗಿದೆ. ಇಂಥ ವಿಮರ್ಶೆಯು ಸಾಂಸ್ಕೃತಿಕ ಅಗತ್ಯ ಎಂದು ತಿಳಿದು ಗೌರೀಶರು ಅನೇಕ ವಿಮರ್ಶೆಯನ್ನು ಬರೆದರು" (ಪ್ರೊ॥ ಎಂ. ಎನ್. ಹೆಗಡೆ) ಎಂಬುದನ್ನು ಗಮನದಲ್ಲಿಸಿಕೊಳ್ಳಬೇಕಾಗುತ್ತದೆ.

ಅವರು ಪಾಶ್ಚಾತ್ಯ ವಿಮರ್ಶಾ ಪರಿಕಲ್ಪನೆ ಮತ್ತು ಭಾರತೀಯ ವಿಮರ್ಶಾ ಮಾನದಂಡಗಳೆರಡನ್ನೂ ಸಮಯೋಚಿತವಾಗಿ ಬಳಸುತ್ತಾರೆ.

ಶೈಲಿಯಲ್ಲಿ ಅಲಂಕಾರಿಕತೆ, ವರ್ಣನಾತ್ಮಕತೆ ತುಂಬಿ, ಕೆಲವೊಮ್ಮೆ ಹಲವು ಭಾಷೆಯ ಒಡನಾಟ, ಭಾಷೆಯ ಜೊತೆಗಿನ ಆಟ–ಸರಸ ಕಾಣುವಂತಾಗುತ್ತದೆ ಅಂತನಿಸಿದರೂ–ಇದು ಕೃತಿಯ ಮೌಲ್ಯಮಾಪನ ಕ್ರಿಯೆಗಾಗಲೀ, ಮೌಲ್ಯಮಾಪನ ಸತ್ವಕ್ಕಾಗಲೀ ಅಡ್ಡಿ ತಾಳುವುದಿಲ್ಲ. ಮಾರ್ಗಸೂಚಿಯಾಗಿದ್ದರೂ ಮಾಪಕದಲ್ಲಿ ಖಚಿತತೆ ಅಲ್ಲಿರುತ್ತದೆ.

ಸಾಹಿತ್ಯದ ಎಲ್ಲ ಪ್ರಕಾರಗಳ ಮೇಲೆ, ಸಾಹಿತ್ಯದ ಎಲ್ಲ ಕಾಲದ ಕೃತಿಗಳ ಬಗ್ಗೆ ವಿಮರ್ಶೆಯನ್ನೂ ಸಮೀಕ್ಷೆಯನ್ನೂ ಗೌರೀಶರು ಬರೆದಿದ್ದಾರೆ. ನವೋದಯ, ನವ್ಯ, ಬಂಡಾಯ, ದಲಿತ ಎಲ್ಲ ಸಾಹಿತ್ಯವನ್ನೂ ಅಷ್ಟೇ ತೆರೆದ ಮನಸ್ಸಿನಿಂದ ವಿಶ್ಲೇಷಿಸುವ ವ್ಯವಧಾನ ಗೌರೀಶರಲ್ಲಿ ತುಂಬಿದೆ. ಸಾಹಿತ್ಯಿಕದ ಎಲ್ಲಾ ಸ್ಥಿತ್ಯಂತರ, ಪ್ರಗತಿ, ವಿಗತಿಗಳ ಬಗೆಗೆ ಬರೆಯುವಾಗ ಸಮಾನ ಹುಮ್ಮನಸ್ಸಿನಿಂದ ಸ್ಪಂದಿಸುತ್ತಾರೆ. ಇದು ಗೌರೀಶರ ಬರಹದ ಸಮನ್ವಯ ವ್ಯಕ್ತಿತ್ವ, ಸಾಮರ್ಥ್ಯ.

* * *

೧೯

'ನಾಟಕ' ಸಾಹಿತ್ಯ

ಪ್ರಾರಂಭದಲ್ಲೇ ಉಲ್ಲೇಖಿಸಿದಂತೆ ಬಾಲ್ಯ, ತಾರುಣ್ಯ ದೆಸೆಯಲ್ಲೇ ನಾಟಕಕ್ಕೆ ಒಲಿದಿದ್ದ ಗೌರೀಶ ಕಾಯ್ಕಿಣಿಯವರ ಲೇಖನಿಯಿಂದ ಹೊರಬಂದ ಮೊಟ್ಟಮೊದಲ ನಾಟಕ (ರೂಪಕ) ಕೃತಿ "ಒಲವಿನ ಒಗಟು". ಇದು ಮುದ್ರಿತಗೊಂಡು ಪ್ರಪ್ರಥಮ ಪ್ರಕಾಶನಗೊಂಡ ಕೃತಿಯೂ ಕೂಡಾ (೧೯೪೦).

ಈ ನಾಟಕದ ವಸ್ತು ಪುರಾಣಕಥೆಯೊಳಗಿನದು. ಶ್ರೀಕೃಷ್ಣ ಮತ್ತು ದ್ರೌಪದಿ ಮಧ್ಯೆ ಬೆಳೆದಿದ್ದ ಪರಸ್ಪರ ಮಮತ್ಕಾರಕ್ಕೆ ಮತ್ಸರಗೊಂಡ ಕೃಷ್ಣ ಪತ್ನಿಯರಾದ ರುಕ್ಮಿಣಿ, ಸತ್ಯಭಾಮೆಯರ ಗರ್ವೋತ್ಕೃಷ್ಟತೆಯನ್ನು ದಮನಗೊಳಿಸಲು ನಾರದ ಋಷಿಯ ಕುಟಿಲ ತಂತ್ರದ ಮೂಲಕ ಶ್ರೀಕೃಷ್ಣನು ಒಂದು ದಿನ ರಾಣಿವಾಸದೊಂದಿಗೆ ವಿನೋದ ಸಮಯದಲ್ಲಿರುವಾಗ ತನ್ನ ಕೈಬೆರಳಿಗೆ

ಗಾಯವನ್ನುಂಟುಮಾಡಿಕೊಂಡು ರಕ್ತಹರಿಸಿ ಆಗ ಪತ್ನಿಯರು ಪ್ರತೀಕ್ಷಿಯುಸು ವುದನ್ನೂ ; ಅಲ್ಲಿಯೇ ಮೌನವಾಗಿ ಇದ್ದ ದ್ರೌಪದಿಯು ಚಡಪಡಿಸುತ್ತ ತನ್ನ ಉಟ್ಟ ಪಟ್ಟೆ ಪೀತಾಂಬರ ಸೀರೆ ಸೆರಗಿನ ಚುಂಗಿಯನ್ನೇ ಹರಿದು ತಕ್ಷಣ ಕೃಷ್ಣನ ರಕ್ತಗಾಯಕ್ಕೆ ಕಟ್ಟುಬಿಗಿದು ಆ ಹನಿರಕ್ತ ಧರೆಗೆಡಹದಂತೆ ಕಾಳಜಿ ವಹಿಸಿದ ಪ್ರಾಂಜಲ ಮಮತ್ಕಾರವನ್ನೂ ಒರೆಗೊಳಿಸಿ, ಸಾದೃಶ್ಯಗೊಳಿಸಿ 'ಅಹಂ' ಏರಿದ ತನ್ನ ಪತ್ನಿಯರಿಗೆ ಜ್ಞಾನೋದಯವಾಗುವಂತೆ ಮಾಡಿರುವುದೇ ನಾಟಕದಲ್ಲಿ ಅಳವಟ್ಟ ಕಥೆಯ ಹಂದರ. ಇದು ಪರಿಚಿತವಿರುವ ಸಿದ್ಧವಸ್ತುವೇ ಆಗಿದ್ದರೂ ಗೌರೀಶರು ನಿರ್ಮಿಸಿದ ಆಯಾ ಪಾತ್ರಗಳ ಸಂಭಾಷಣೆಯ ಮೂಲಕ ಕಥೆಯಿಂದ ಗ್ರಹಿಸಬೇಕಾದ ಸಂದೇಶವನ್ನು ಶ್ರುತಪಡಿಸುತ್ತಿದೆ-ಆ ಸಂದೇಶದ ಶಾಶ್ವತ ಮೌಲ್ಯವನ್ನು ಬಿಂಬಿಸುತ್ತದೆ. (ಈ ನಾಟಕದ ರಚನೆ ೧೯೪೦.)

ಬಾನುಲಿ ಕೇಂದ್ರದೊಂದಿಗೆ ಬೆಸೆದ ಸಂಬಂಧವು ಪ್ರೇರಣೆಯೊಡ್ಡಿ ಅದರ ಅವಶ್ಯಕತೆಯ ದೃಷ್ಟಿಯನ್ನಿರಿಸಿಕೊಂಡು ಗೌರೀಶ ಕಾಯ್ಕಿಣಿಯವರು ಬರೆದ ಇಂಥ ನಾಟಕಗಳು ಇಪ್ಪತ್ತೈದಕ್ಕೂ ಅಧಿಕ. ಅವೆಲ್ಲ 'ನಾಟಕ' ಎಂಬ ಪ್ರಕಾರದ ಪರಿಪೂರ್ಣ ಲಕ್ಷಣಗಳಿಗೆ ಒಳಪಡದವಾದ್ದರಿಂದ ಗೌರೀಶರು ಇವನ್ನು 'ರೂಪಕ'ವೆಂದೇ ಹೆಸಂಸಿದ್ದಾರೆ. ಗದ್ಯ-ಪದ್ಯ ಎರಡೂ ವಿಧದಲ್ಲಿ ಅವು ರಚಿತ ಗೊಂಡಿವೆ. ಕೆಲವು ಕೇವಲ 'ನಾಟ್ಯ' ಇಲ್ಲವೇ ನೃತ್ಯಕ್ಕಷ್ಟೇ ಸೀಮಿತವಾದವೂ ಇವೆ ಅವರು ಬರೆದಿರುವ ಬಾನುಲಿ ರೂಪಕಗಳಲ್ಲಿ 'ಕ್ರೌಂಚಧ್ವನಿ', 'ಕರ್ಣಾಮೃತ', 'ಆಕಾಶ ನಾಟಕಗಳು' ಎಂಬ ಹೆಸರಿನ ಮೂರು ಸಂಕಲನ ಗಳಷ್ಟೇ ಮುದ್ರಿತಗೊಂಡು ಪ್ರಕಾಶನ ಪಡೆದಿವೆ.

"ಕ್ರೌಂಚಧ್ವನಿ"ಸಂಕಲನದಲ್ಲಿ—೧) ಚೈತ್ರಚಿತ್ರ, ೨) ರಂಗಪಂಚಮಿ, ೩) ಕಾಮದಹನ, ೪) ಕ್ರೌಂಚಧ್ವನಿ, ೫) ವರ್ಷಾಗಮನ, ೬) ಯಶೋಧರಾ ಎಂಬೀ ಆರು ರೂಪಕಗಳೂ ; "ಕರ್ಣಾಮೃತ" ಸಂಕಲನದಲ್ಲಿ—೧) ಕರ್ಣಾ ಮೃತ, ೨) ವಾಸವದತ್ತಾ, ೩) ದೇವಿಕೊಟ್ಟ ಬೆಳಕು, ೪) ಶಿವಯೋಗ ಸಿದ್ಧಿ ಎಂಬೀ ನಾಲ್ಕು ರೂಪಕಗಳೂ ; "ಆಕಾಶ ನಾಟಕಗಳು" ಸಂಕಲನದಲ್ಲಿ— ೧) ಅಗ್ನಿ-ಕನ್ಯಾ, ೨) ದ್ರೌಪದಿ, ೩) ಕಿಸಾಗೌತಮಿ, ೪) ಸಂಕ್ರಾಂತಿ, ೫) ನ್ಯೂಟನ್ನನ ಮೂರನೆಯ ನಿಯಮ, ೬) ಮನೆ ತುಂಬ ಮಕ್ಕಳು-ಎಂಬೀ ಐದು ರೂಪಕಗಳೂ ಸೇರಿಕೊಂಡಿವೆ. ಇವುಗಳಲ್ಲಿ 'ಕ್ರೌಂಚಧ್ವನಿ' ಸಂಕಲನ

ದಲ್ಲಿರುವ ಆರೂ ರೂಪಕಗಳೂ 'ಗೀತ ರೂಪಕ'ದವಾಗಿದ್ದು ಕರ್ಣಾಮೃತ ಮತ್ತು ಆಕಾಶ ನಾಟಕ ಸಂಕಲನದಲ್ಲಿರುವವೆಲ್ಲವೂ ಗದ್ಯರೂಪದವಾಗಿವೆ.

ಹಳೆ ಕಾಯ- ಹೊಸ ಭಾವ

ಪ್ರಕಟಿತ ಮೂರೂ ಸಂಕಲನಗಳಲ್ಲಿಯ ಹಲವು ರೂಪಕಗಳ ಕಥಾವಸ್ತುಗಳು ಲೇಖಕರ ಸ್ವಕಪೋಲ ಕಲ್ಪಿತವಲ್ಲ ; ನಿಜ. ಸಿದ್ಧವಸ್ತುವನ್ನು ರೂಪಕದ ಮೂಲದ್ರವ್ಯವನ್ನಾಗಿಸಿಕೊಂಡವೂ ಇವೆ. ಸ್ವಕಲ್ಪಿತ ವಸ್ತುವಿನವೂ ಇವೆ. ಸಿದ್ಧವಸ್ತುವೇ ಆಗಿದ್ದರೂ ಗೌರೀಶರು ಅವನ್ನು ಪಾತ್ರಗಳ ಮೂಲಕ ಪ್ರತ್ಯುತ್ಪತ್ತಿಗೊಳಿಸಿ ಸ್ವಾರಸ್ಯಕರ ಸಂಭಾಷಣೆಗಳ ಮೂಲಕ ರಸಾನುಭೂತಿ ಸಿದ್ಧಿಯಿಂದ ಪರಿಣಾಮಕಾರಿಗೊಳಿಸಿರುವುದೇ ಇವುಗಳ ವಿಶಿಷ್ಟ ಯಶಸ್ಸು. ಸ್ವತಃ ರಂಗಕ್ರಿಯೆಯಲ್ಲಿ ಅನುಭವವುಳ್ಳ ಅವರಿಗೆ ಹಾಗೂ ಗೀತನಾಟಕ ರೂಪಕಗಳ ರಚನಾ ವಿಧಾನದ ಬಗೆಗೆ ಆಳವಾದ ತಾಂತ್ರಿಕ ಅರಿವೂ ಇದ್ದುದರಿಂದ ಅಂಥ ಪ್ರಭಾವಿ ಸಿದ್ಧಿಯು ದಕ್ಕಿದೆ ಎಂದೇ ಅನ್ನಬೇಕು. ಪ್ರಾಸ–ಅನುಪ್ರಾಸ ಶ್ಲೇಷೆಗಳುಳ್ಳ ಕಾವ್ಯಬಂಧದ ಸಂಭಾಷಣೆಯೊಂದೇ ಅವುಗಳ ಗಣ್ಯತೆಗೆ ಸಾಕು. ಅಂದರೆ ಉಳಿದ ಅಂಶ ಗೌಣವೆಂದರ್ಥವಲ್ಲ.

"ಈ ರೂಪಕಗಳ ವಿಮರ್ಶೆ ಹೋಗಲಿ, ಉಲ್ಲೇಖ ಕೂಡ ಅನೇಕ ರೂಪಕ ಸಂಬಂಧಿ ಗ್ರಂಥಗಳಲ್ಲಿ ಇಲ್ಲದಿರುವುದು ವಿಷಾದನೀಯ....ಇದು ಸಾಹಿತ್ಯ ಪ್ರಪಂಚದ ದುರಂತ." ಹೀಗೆ ಗೌರೀಶರ ಬಗೆಗಿನ ಸಾಹಿತ್ಯ ಸಮೀಕ್ಷೆ ಸಂದರ್ಭದಲ್ಲಿ ಲೇಖಕ ಮಹೇಶ ಅಡಕೋಳಿ ಹೇಳಿರುವ ಮಾತು ನಿಜಕ್ಕೂ ಒಂದು ಆಹ್ವಾನ. ಅವರೆಲ್ಲಾ ರೂಪಕಗಳು ತೌಲನಿಕ ಅಧ್ಯಯನಕ್ಕೆ ಆಹಾರವಾಗುವಂತಿವೆ. ಹೊಸ ದಾಖಲೆಯನ್ನೊದಗಿಸುವಂಥವಾಗಿವೆ.

ನನಗಿರುವ ಪುಟಮಿತಿಯ ಪ್ರಜ್ಞೆಯಲ್ಲಿ ಗೀತನಾಟಕ–ರೂಪಕಗಳನ್ನು ಒಂದೊಂದೇ ಎತ್ತಿ ಪರಿಚಯಿಸಲು ಅಸಹಾಯಕನಾಗಿರುವೆ. ಆದರೂ ಒಂದು ಮಾತು ಸತ್ಯ. ಗೌರೀಶರು ಸಾಧಿಸಿದ ಉಳಿದೆಲ್ಲ ಸಾಹಿತ್ಯದ ಪ್ರಗಲ್ಭಕ್ರಿಯೆಯೊಂದಿಗೇ ಬರಹದ ಪ್ರಾರಂಭದ ಸೃಜನಾತ್ಮಕ ಕ್ರಿಯೆಯಾಗಿರುವ 'ನಾಟಕ ಸಾಹಿತ್ಯ' ಕೃತಿಗಳೂ ಅವರ ಬರಹ ಬದುಕಿನ ವ್ಯಕ್ತಿತ್ವದ ಒಂದು ಗಣ್ಯ ಅಂಶವೇ ಆಗಿವೆ.

೨೦

ಕಾವ್ಯನಾಡಿ

ಗೌರೀಶರು ಹುಟ್ಟಾ ಕವಿ ಹೃದಯಿ. ಕವನ ರಚನೆಯು ಅವರಿಗೆ ಬಾಲ್ಯದಿಂದಲೇ ಕರಗತವಾಗಿದ್ದ ಸಂಗತಿ. ಮುಂಬೆ ಆಕಾಶವಾಣಿಯಲ್ಲಂತೂ ಅವರ ಕವನ ವಿಪುಲವಾಗಿ ಧ್ವನಿಸಿದೆ. ಧಾರವಾಡ ಆಕಾಶವಾಣಿಯು ಏರ್ಪಡಿಸಿದ್ದ ಕವಿಗೋಷ್ಠಿಯೊಂದರಲ್ಲಿ ಯುವ ಗೌರೀಶರು ಓದಿದ ಕವನವೊಂದನ್ನು ದ. ರಾ. ಬೇಂದ್ರೆಯವರೇ ಕೊಂಡಾಡಿ ಬೆನ್ನು ಚಪ್ಪರಿಸಿದ್ದರು. ನಂತರ ನಿರಂತರವಾಗಿ ಬಹುಕಾಲದವರೆವಿಗೂ ಗೌರೀಶರ ಬಗೆ ಬಗೆಯ ಕವನಗಳು ಧಾರವಾಡ, ಮಂಗಳೂರು ಆಕಾಶವಾಣಿ ನಿಲಯದಿಂದ, ವಾಚನ–ಗಾಯನ ಎರಡೂ ವಿಧದಲ್ಲಿ ಪ್ರಸಾರಗೊಂಡಿವೆ. ಧಾರವಾಡ, ಬೆಳಗಾಂವ್, ಶಿರಹಟ್ಟಿ, ಹೊನ್ನಾವರ ಮುಂತಾದೆಡೆಯಲ್ಲಿ ಜರುಗಿದ್ದ ಕವಿಗೋಷ್ಠಿಗಳಲ್ಲಿ ತಮ್ಮ ಕವನಗಳನ್ನು ಪ್ರಸ್ತುತ ಪಡಿಸಿದ್ದಾರೆ.

'ಜೀವನ', 'ಜಯಂತಿ', 'ಜನಸೇವಕ', 'ಮುನ್ನಡೆ' ಹಾಗೂ ಇನ್ನೂ ಹಲವಾರು ನಿಯತಕಾಲಿಕಗಳಲ್ಲೂ ಗೌರೀಶರ ಮಹತ್ವಪೂರ್ಣ ಕವನಗಳು ಪ್ರಕಟಗೊಂಡಿವೆ. ಪ್ರಸಾರಗೊಂಡಿವೆ.

ಗೌರೀಶರ ಕವನಗಳನ್ನು ಗಮನಿಸಿದಾಗ ದೊರೆಯುವ ಖುಶಿ ಅಸಾಮಾನ್ಯ. ಆ ಕವನಗಳೆಲ್ಲವೂ ರಸಪೂರಿತ, ಭಾವವೇಷ್ಟಿತ. ಬಂಧಗಳಲ್ಲಿ ಛಂದೋವಿಲಸಿತ. ಗೇಯ ಪರಿಪುಷ್ಟಿತ, ಸುಶಿಷ್ಟಿತ. ಅಷ್ಟೇ ಪ್ರಗಲ್ಭ ವಿಚಾರ ಸ್ಫುಲ್ಲಿತ. ಅರ್ಥಗರ್ಭಿತ. ಅಂಥ ಕೆಲವು ಮಾದರಿಗಳು :

"ದ್ವೇಷಯುಕ್ತ, ದೇಶಭಕ್ತ ದೋಷಮುಕ್ತನೇ ?
ವಿಶ್ವ ಬಾಂಧವ್ಯದಿಂದ ತಾ ವಿಭಕ್ತನೇ
ಲೋಕಮಾತೆ ನಮ್ಮ ತಾಯಿಯಲ್ಲಿ ಕಾಂಬೆನೆ ?
ಎಲ್ಲ ತಾಯಿಯಲ್ಲು ಅವಳ ಬಿಂಬವೆ." (ಘಂಟಾಘೋಷ)

"ಕರುಳಿನ ಕುಲಿಮ್ಯಾಗ, ಬಾಳಿನ ಒಲಿಮ್ಯಾಗ
ಬೆಂಪರೆ ಮಧುಪಾಕ ಬೇಂದರೆ—" [illegible])

"ಪಂಜಾಬ ಸಿಂಧು ಗುಜರಾಥ ಮರಾಠಾ, ದ್ರಾವಿಡ ಉತ್ಕಲವಂಗ ।
ಜನಮನ ಪುನರುಜ್ಜೀವನಗೊಳಿಸುವ ಉಜ್ವಲ ಜಲಧಿತರಂಗ ।
ನೀನೆ ಭವ್ಯ ಹಿಮಾಚಲ ಮಾನಸದುಗುಮಾವದಕೆ ಉತ್ತುಂಗ ।
ಪ್ರವಿಸಿ ಪ್ರವಿಸಿತೈ ಕಾಂಚನ ಗಂಗಾ
ನಿಜರೀರ ಸ್ವಪ್ನ ಭಂಗ (ಗುರುದೇವಗಾಥೆ)

—ಗೌರೀಶ ಕಾಯ್ಕಿಣಿಯವರ ಕಾವ್ಯ ಕುಸುಮಗಳು ಸಾಕಷ್ಟಿದ್ದರೂ ಅವುಗಳಾವುವೂ ಸಂಕಲನ ರೂಪದಲ್ಲಿ ಓದುಗರ ಕೈಗೆ ಬರದೇ ಇದ್ದುದು ದೊಡ್ಡ ಹಾನಿ. ಅವರ ಕಾವ್ಯ ರಚನಾ ಕ್ರಿಯೆ ಮುಖ್ಯವಾಹಿನಿಯಾಗದೇ ನೇಪಥ್ಯಕ್ಕೆ ಸರಿದು ವಿರಮಿಸಿದಂತೆನಿಸುತ್ತದೆ. ಆದರೂ ಅವರಲ್ಲಿರು ಆ ಕಾವ್ಯತ್ವದ ಸತ್ವ ಗದ್ಯ ಪ್ರಕಾರದೊಳಗಡೆ ಪರಕಾಯ ಪ್ರವೇಶಗೈದು ದುಡಿಯುತ್ತ ಗೌರೀಶರ ಗದ್ಯವಿಶೇಷತೆಯ ಛಾಪನ್ನು ಕೂಡ್ರಿಸಿಕೊಂಡಿದೆ. ಕಾವ್ಯರಚನೆಯ ಅಕ್ಕಪಕ್ಕದಲ್ಲೇ ಗೌರೀಶರು ನಾಟಕ–ರೂಪಕಗಳನ್ನು ರಚಿಸುತ್ತಲಿದ್ದುದರಿಂದ ಅಲ್ಲೊಂದು ಕಾವ್ಯಸತ್ವದ ಮೆರಗು ಮಿಂಚಿಕೊಂಡಿರಬೇಕು. ಮುಂದೆ ಪೂರ್ಣ ಗದ್ಯದತ್ತಲೇ ಮುಖಮಾಡಿ ಹೊರಟಾಗಲೂ ಕಾವ್ಯಗುಣ ಸಹಚರ ಸಂಗಾತಿಯಾಗಿಯೇ ಸಾಗಿರುವುದು ವೇದ್ಯ.

* * *

೨೧

ಡಾ|| ಗೌರೀಶರ ವಿಚಾರ ಮತ್ತು ವಿಮರ್ಶಾ ಸಾಹಿತ್ಯದಂತೆ ಕಂಡಂತೆ ಅವರ ಅನುವಾದ ಸಾಹಿತ್ಯ ಕೃತಿಗಳನ್ನೂ ಗಮನಿಸಿದರೂ, ಗಾತ್ರ ಮತ್ತು ವೈವಿಧ್ಯಗಳೆರಡರಲ್ಲಿಯೂ ಅಚ್ಚರಿ ಹುಟ್ಟಿಸುವಂತಿದೆ. ದೇಶೀಯ ಹಾಗೂ ವಿದೇಶೀಯ ಅನ್ಯಭಾಷಾ ಸಾಹಿತ್ಯ ಕೃತಿಗಳನ್ನು ಕನ್ನಡಕ್ಕೆ ನೀಡಿ ಅವರೊಬ್ಬ ಸಮರ್ಥ ಅನುವಾದಕರೂ ಹೌದೆಂದು ತೋರಿಸಿಕೊಂಡಿದ್ದಾರೆ. ಕನ್ನಡ, ಕೊಂಕಣಿ, ಇಂಗ್ಲಿಷ್, ಸಂಸ್ಕೃತ, ಹಿಂದಿ, ಮರಾಠಿ ಇಷ್ಟೆಲ್ಲ ಭಾಷಾ ಪರಿಣತಿ–ಪಾಂಡಿತ್ಯದ ಹಿನ್ನೆಲೆಯಲ್ಲಿ ಅನುವಾದ ಸಾಮರ್ಥ್ಯವೂ ಸಿರಾಳಗೊಂಡಿದೆ.

"....ಆದರೂ ಗೌರೀಶರ ಸಾಹಿತ್ಯಿಕ ಮೇರುತ್ವವು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಗಮನಿಸಲ್ಪಡದಿರುವಂತೆಯೇ ಅವರ ಅನುವಾದ ಕಾರ್ಯವೂ ಉಪೇಕ್ಷೆಗೊಳಪಟ್ಟಿದೆ ಎಂದೇ ವಿಷಾದ ಪಡಬೇಕು." ಅವರು ಅನುವಾದ ಕಾರ್ಯ ಕೈಕೊಂಡಿದ್ದು ತಮ್ಮ ಬರವಣಿಗೆಯ ಇಪ್ಪತ್ತು ವರುಷಗಳ

ನಂತರ, ಅಂದರೆ ಬರಹ ಕ್ರಿಯೆಯಲ್ಲಿ ಗಟ್ಟಿತನ ಸಿದ್ಧಿಸಿದ ನಂತರವೇ. ಅಮೆರಿಕನ್ ಕಥೆಗಾರರಾದ ಜಾರ್ ಲಂಡನ್, ನೇತಾನಿಯಲ್ ಹಾಥಾರ್ನ್, ವಿಲಿಯಂ ಫಾಕನ್ ಇವರುಗಳ ಆರು ಕಥೆಗಳನ್ನೊಳಗೊಂಡ 'ಬಿಳಿ ಕೋಸ್ಕರೆ' ಗೌರೀಶರಿಂದ ಪ್ರಥಮ ಅನುವಾದ ಕೃತಿಯಾಗಿ ೧೯೪೮ರಲ್ಲಿ ಪ್ರಕಟಗೊಂಡಿತು. ಅನಂತರದಲ್ಲಿ ಮಹತ್ವದ ಅನುವಾದ ಕೃತಿಯೆಂದು ಭಾವಿಸಲಾಗಿರುವ 'ಮಲೆನಾಡಿಗರು' – ಥಾಮಸ್ ಹಾರ್ಡಿಯ 'ದಿ ವುಡ್ ಲ್ಯಾಂಡರ್' – ಕೃತಿ ಪ್ರಕಟಗೊಂಡಿದೆ. ಈ ಕೃತಿಯು ಗೌರೀಶರ ಅನುವಾದ ಕ್ರಿಯೆಯ ಸಿದ್ಧಿಗೆ ಒಂದು ಉದಾಹರಣೆಯಾಗಿದೆ. ಹಾಗೇ ಅವರ ಅನುವಾದ ಸಾಮರ್ಥ್ಯದ ಅಗಾಧತೆಗೆ ಅರವಿಂದಘೋಷರ 'ದಿ ಫ್ಯೂಚರ್ ಪೊಯಿಟರಿ'ಯನ್ನು 'ಭವಿಷ್ಯ ಕಾವ್ಯ' ಎಂದು ಕನ್ನಡದಲ್ಲಿ ನೀಡಿರುವುದು ಸಾಕ್ಷಿಯಾಗಿದೆ. ಆದರೆ ಇನ್ನು ಪ್ರಕಟಣೆಗಾಗಿ ಪಡೆದುಕೊಂಡಿದ್ದು ಅದು ಇನ್ನೂ ಅಪ್ರಕಟಿತ ಸ್ಥಿತಿಯಲ್ಲೇ ಮಲಗಿಬಿಟ್ಟಿದೆ.

'ಬಾಳಿನ ಗುಟ್ಟು' ಎಂಬ ವೈಚಾರಿಕ ಪ್ರಬಂಧ ಡೆಸ್ಟಿನೀ ಆಲ್ಫ್ರೆಡ್ ಕೃತಿಯ ಭಾವಾನುವಾದ. ಹಾಗೆಯೇ ಕ್ಯಾಂಡಲ್ ಸ್ವಿಚ್‌ನ 'ಬೆಳ್ಳಿ ಬಟ್ಟಲು', ಗ್ರೇಟ್ ಅಡ್ವಂಚರನ 'ಚಿದಂಬರ ರಹಸ್ಯ' ಈ ಎರಡೂ ಅನುವಾದಿತ ನಾಟಕ ಕೃತಿಗಳು. ವಿಶ್ವದ ಪ್ರಾಚೀನ ಶ್ರೇಷ್ಠ ಜನಪದ ಆಖ್ಯಾಯಿಕೆಗಳಿಂದ ಇಪ್ಪತ್ತು ಕಥೆಗಳನ್ನು ಸಂಗ್ರಹಿಸಿ 'ಪ್ರಾಚೀನ ಅಮರ ಕಥೆಗಳು' ಎಂಬ ಸಂಕಲನವನ್ನು ನೀಡಿದ್ದಾರೆ. ಇದು ಇಂಗ್ಲಿಷ್ ಸಾಹಿತ್ಯದಿಂದ ಕನ್ನಡಕ್ಕೆ ಇಳಿಸಿದ್ದಾದರೆ 'ಪಂಜಾಬಿ ಕಥೆಗಳು' ಎಂಬ ಇಪ್ಪತ್ತೊಂದು ಕಥೆಗಳ ಗುಚ್ಛವನ್ನು ಹಿಂದಿ ಭಾಷೆಯಲ್ಲಿಂದ ಕನ್ನಡಕ್ಕೆ ತಂದುಕೊಟ್ಟಿದ್ದಾರೆ.

ಮರಾಠೀ ವಾಙ್ಮಯ ಸಾಹಿತ್ಯದಿಂದಲೂ ಹಲವಾರು ಮೌಲಿಕ–ಕೃತಿಗಳನ್ನು ಕನ್ನಡಕ್ಕೆ ನೀಡಿದ್ದಾರೆ. ಅವುಗಳಲ್ಲಿ ಶ್ರೀಮತಿ ದುರ್ಗಾಪ್ರಸಾದರ 'ವ್ಯಾಸ ಪರ್ವ' ಒಂದು ಗಣ್ಯ ಅನುವಾದ ಕೃತಿ. ಎಸ್. ಜಿ. ಸರದೇಸಾಯರ ಕೃತಿಯನ್ನು 'ಬರ್ಲಿನ್ ಬಂದಿತು ಗಂಗೆಯ ತಡಿಗೆ' ಎಂದು ಕನ್ನಡಕ್ಕೆ ತಂದು ಕನ್ನಡದಿಂದ ರಂ. ಶ್ರೀ. ಮುಗಳಿಯವರ 'ಕನ್ನಡ ಸಾಹಿತ್ಯ ಚರಿತ್ರೆ'ಯನ್ನು ಮರಾಠಿಗೆ ತರ್ಜುಮೆಗೊಳಿಸಿ ಕೊಟ್ಟಿದ್ದಾರೆ. ಕರ್ನಾಟಕದ ಮಹೋನ್ನತ ಸಂಗೀತಜ್ಞ ಡಾ|| ಮಲ್ಲಿಕಾರ್ಜುನ ಮನ್ಸೂರರ ಕುರಿತು ಜೀವನ ಚರಿತ್ರೆ

ಯನ್ನು ಮರಾಠಿ ಭಾಷೆಗೆ ಇಳಿಸಿಕೊಟ್ಟಿದ್ದಾರೆ. ಇಲ್ಲಿ ಒಂದು ಮಾತು ಉಲ್ಲೇಖನೀಯ. ಗೌರೀಶ ಕಾಯ್ಕಿಣಿಯವರಿಗೆ ಶ್ರೇಷ್ಠ ವ್ಯಕ್ತಿಗಳ ಜೀವನ ವನ್ನು ಅರಿತುಕೊಳ್ಳುವುದು ತುಂಬಾ ಇಷ್ಟ. ಪಶ್ಚಿಮದ ಪ್ರತಿಭೆಗಳು ಎಂಬ ಕೃತಿಯಲ್ಲಿಯೂ ಹಲವು ಶ್ರೇಷ್ಠ ವ್ಯಕ್ತಿಗಳ ಜೀವನದ ಚಿತ್ರಣವನ್ನು ನೀಡಲು ಆಸಕ್ತಿ ತೋರಿದಂತೆ, ಭಾರತೀಯ ವಿಜ್ಞಾನ ಪುರುಷರನ್ನು ಪರಿಚಯಿಸಿದಂತೆ ಇನ್ನೂ ಹಲವು ವ್ಯಕ್ತಿಜೀವನವನ್ನು ಚಿತ್ರಿಸಿದ್ದಾರೆ. ಥಾಮಸ್ ಎಡಿಸನ್ ಹಾಗೂ ಸತ್ಯಾರ್ಥಿ ಕೃತಿಯಲ್ಲಿ ಬರುವ ಗಣ್ಯರುಗಳ ಜೀವನ ಚರಿತ್ರೆಯನ್ನು ಸುಲಭ ಕನ್ನಡದಲ್ಲಿ ನೀಡಿದಂತೆಯೇ ಉದ್ದಾಮ ಪಂಡಿತ ಪಾಂಡೇಶ್ವರ ಗಣಪತ ರಾಯರು, ಶ್ಯಾಮರಾವ ವಿಠಲರಾವ ಕಾಯ್ಕಿಣಿ ಇವರುಗಳ ಕುರಿತು ಜೀವನ ಚಿತ್ರ ನೀಡಿದ ಪ್ರತ್ಯೇಕ ಕೃತಿಗಳೂ ಪ್ರಕಟವಾಗಿವೆ. 'ಶ್ಯಾಮರಾವ ಕಾಯ್ಕಿಣಿ' ಜೀವನ ಚರಿತ್ರೆ ಕನ್ನಡ, ಇಂಗ್ಲಿಷುಗಳೆರಡರಲ್ಲೂ ಪ್ರಕಟಣೆ ಕಂಡಿದೆ.

ಹಾಗೆಯೇ ಮರಾಠಿಯ ಹಿರಿಯ ಕವಿ 'ಕೇಶವಸುತ' ಹಾಗೂ ಗುಜರಾಥಿ ಹಿರಿಯ ಕವಿ 'ನಾನಾಲಾಲ'ರ ಜೀವನ ಚರಿತ್ರೆಯನ್ನೂ ಬರೆದಿದ್ದು ಪ್ರಕಟ ವಾಗಿವೆ. ಹಿಂದಿಯಿಂದ 'ದೇವತಾತ್ಮಾ' ಎಂಬ ಪ್ರವಾಸ ಕಥನವನ್ನೂ (ಮಹಾದೇವಿಯಕ್ಕ ದೊಡ್ಮನೆ ಅವರು ಬರೆದದ್ದು) ಕನ್ನಡಕ್ಕೆ ನೀಡಿದ್ದಾರೆ.

"ಒಂದು ಕೃತಿಯ ಅಂತರಾಳ ಭೇದಿಸಿ ಅದರ ತಿರುಳನ್ನು ಗ್ರಹಿಸುವ ಪ್ರತಿಭೆ, ಸಹೃದಯತೆ ಗೌರೀಶರಲ್ಲಿ ತುಂಬಿದೆ. ಬಹುಭಾಷಾಭಿಜ್ಞತೆ ಅದರಲ್ಲೂ ಸಂಸ್ಕೃತ ವ್ಯುತ್ಪತ್ತಿ ಸಾಧಿಸಿದ್ದರಿಂದ ಹೊಸ ಪರ್ಯಾಯ ಪದ ಸೃಷ್ಟಿ, ಹೊಸ ಪದಪುಂಜವೊಂದನ್ನು ನಿರಾಯಾಸವಾಗಿ ಹೆಣೆಯುವ ಶಕ್ತಿ ಅವರಿಗೆ ದಕ್ಕಿದೆ" ಹೀಗೆಂದು ಗೌರೀಶರ ಅನುವಾದ ಕಾರ್ಯವನ್ನು ಸಮೀಕ್ಷಿಸಿದ ಪ್ರೊ|| ವಿ. ಎನ್. ಹೆಗಡೆ ಗೋಕರ್ಣ ಅಭಿಪ್ರಾಯ ವ್ಯಕ್ತಪಡಿಸಿದ್ದು ಉಲ್ಲೇಖನೀಯ. ಕನ್ನಡಕ್ಕೆ ಪರಭಾಷೆಗೆ ತಕ್ಕುದಾದ ಹಲವಷ್ಟು ಪರ್ಯಾಯ ಪದಪುಂಜಗಳನ್ನು ಗೌರೀಶರೇ ಸೃಷ್ಟಿಸಿಕೊಟ್ಟಿರುವುದನ್ನು ಅವರ ಅನುವಾದ ಕೃತಿಗಳಲ್ಲೆಲ್ಲಾ ಕಾಣುತ್ತೇವೆ. ಉದಾ: Inspiration ಉತ್‌ಸ್ಫೂರ್ತಿ, Rationalisation-ಪ್ರಜ್ಞಾವಾದ, Oedipus complex-ಮನೋಗಂಡ, Short frock-ಉಂಡಲಂಗ, Rain cats & Dogsನ್ನು ಕುಂಭದ್ರೋಣ ಮಳೆ— ಹೀಗೆ ಇನ್ನೂ ಎಷ್ಟೋ! ಎಷ್ಟೋ! ದೊರೆಯುತ್ತವೆ

೨೨

ಗೌರೀಶ ಕಾಯ್ಕಿಣಿಯವರ ಬರಹ ಕಾರ್ಯದಲ್ಲಿ ಅವಿಶ್ರಾಂತ, ಅಸಂಖ್ಯಾತ, ಅಸ್ಖಲಿತ ಬರಹ ರಾಶಿಗಳೆಂದರೆ ಪತ್ರಿಕಾ ಲೇಖನಗಳು. ಪತ್ರಿಕಾ ರಂಗದಲ್ಲಿ ಕಾರ್ಯನಿರತ ಪತ್ರಕರ್ತ (Working Journalist) ನಂತೆ ಅಥವಾ ಅದನ್ನೂ ಮೀರಿಸುವ ಕಾರ್ಯವೆಸಗಿದ್ದಾರೆ. ಇಂದಿಗೂ ಈ ೮೪ರ ವಯಸ್ಸಿನಲ್ಲಿಯೂ ಅದು ಸ್ಥಗಿತಗೊಂಡಿಲ್ಲ. ಈ ಪತ್ರಿಕಾ ಲೇಖನದ ಅವರ ಕ್ರಮಣ ಹೆಜ್ಜೆ ೧೯೪೦ ರಿಂದ ಪ್ರಾರಂಭಗೊಂಡಿತು. ಪ್ರಥಮತಃ : 'ನಂದಿನಿ' ಎಂಬ ಪತ್ರಿಕೆಯಲ್ಲಿ ಪತ್ರಿಕಾ ಬರಹ ಒಡಮೂಡಿತು. ನಂತರ ಸ್ನೇಹಿತರೊಂದಿಗೆ ಸೇರಿ ಧಾರವಾಡದಲ್ಲಿ ಪ್ರಾರಂಭಿಸಿದ 'ಬೆಳಕು' ಪತ್ರಿಕೆಯ ಸಂಪಾದಕತ್ವವನ್ನೇ ನಿರ್ವಹಿಸಿದರು. ಜಿಲ್ಲೆಯಲ್ಲೇ ಹೊರಬರುತ್ತಿದ್ದ 'ನಾಗರೀಕ' ಪತ್ರಿಕೆಯ ಸಂಪಾದಕರಾಗಿಯೂ ಕೆಲವು ಕಾಲ ದುಡಿದರು. ಈ ಎಲ್ಲಕ್ಕಿಂತ ಮಿಕ್ಕಿದ ಅವರ ಪತ್ರಿಕಾ ರಂಗದ ಸೇವೆ ಸಲ್ಲುವುದು—ದಿನಕರ ದೇಸಾಯರ 'ಜನಸೇವಕ' ಸಾಪ್ತಾಹಿಕದ ಅಂಕಣದಲ್ಲಿ. ನಿಯಮಿತ ಅಂಕಣಕಾರರಾಗಿ ಬರೆಯಲು ತೊಡಗಿದ ಗೌರೀಶರು ಜನಸೇವಕದ ಪುಟಗಳಲ್ಲಿ—ಗೌರೀಶ ಕಾಯ್ಕಿಣಿ, ವೈಶ್ವಾನರ, ಅಡಿಗೆಭಟ್ಟ ಎಂಬೀ ಮೂರು ಹೆಸರುಗಳಿಂದ ಪ್ರತಿವಾರವೂ 'ಅಂಕಣ' ಬರೆಯುತ್ತಿದ್ದರು. ಅವು ಜನಪ್ರಿಯತೆ ಮತ್ತು ಮಹತ್ವವನ್ನು ಗಳಿಸಿದ್ದವು.

ಇವಲ್ಲದೇ ಕಸ್ತೂರಿ, ಜನಪ್ರಗತಿ, ತರಂಗ, ತಾಯಿನಾಡು. ಸಹಚರ ಮುನ್ನಡೆ (ಆಗ ನಾನೇ ಈ ಮುನ್ನಡೆ ಪತ್ರಿಕೆಯ ಸಂಪಾದಕನಾಗಿದ್ದೆ) ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಜಯಂತಿ, ಸಂಕ್ರಮಣ, ಕರ್ಮವೀರ, ಪ್ರಪಂಚ, ಜೀವನ, ಸುಡಿಜೇನು, ಉದಯವಾಣಿ ಹೀಗೆ ಅನೇಕ ಪತ್ರಿಕೆಗಳಲ್ಲಿ ಗೌರೀಶರ ವಿವಿಧ ಮಾದರಿಯ, ವಿವಿಧ ವಿಚಾರಗಳ ಲೇಖನಗಳು ಪ್ರಕಟಗೊಂಡಿವೆ. ಈಗಲೂ ಮುಂದರಿದಿದೆ. ಗೌರೀಶರಿಗೆ ಹೀಗೆ ಲೇಖನ ಬರೆಯುವಾಗ ಸಣ್ಣಪತ್ರಿಕೆ ದೊಡ್ಡಪತ್ರಿಕೆ ಎಂಬ ತಾರತಮ್ಯವಾಗಲೀ ಅವುಗಳ ಪ್ರಸಿದ್ಧಿ–ಪ್ರಸಾರ ಪ್ರಭಾವಗಳ ಗಮನವಾಗಲೀ ಇರುವುದಿಲ್ಲ. ಬರೆಯುವುದನ್ನು ಪ್ರಾಮಾಣಿಕವಾಗಿ ಗಟ್ಟಿಯಾಗೇ ಬರೆಯುವುದು ಅಂಟಿಕೊಂಡ ಸ್ವಭಾವ.

ಪತ್ರಿಕೆಗಳಿಗಾಗಿ ಗೌರೀಶರು ಬರೆದ ವಿವಿಧ ಲೇಖನಗಳ ಸಂಖ್ಯೆ ನಾಲ್ಕಂಕೆಗೆ ಸಮೀಪಿಸಿದೆ. ಜನಸೇವಕ ಒಂದರಲ್ಲೇ ಅವರ ಲೇಖನಗಳು ಮೂರು ನೂರಕ್ಕೂ ಮಿಕ್ಕಿವೆ. ಅವರ ಈ ಬರಹದ ಮಾದರಿ ಪದಶೈಲಿ ವೈಚಾರಿಕ ವೈಖರಿ ವಿಶಿಷ್ಟ ಮಾದರಿಯದು. ಅವು ಬಹುಮುಖಿವಾಗಿ ಅಲೆ–ಅಲೆಯಾಗಿ ಅಪ್ಪಳಿಸಿವೆ. ರಾಜಕೀಯ, ಸಾಮಾಜಿಕ, ಆರ್ಥಿಕ, ವೈಚಾರಿಕ, ಶೈಕ್ಷಣಿಕ, ಕಲೆ, ಬದುಕು ಇತ್ಯಾದಿ ಎಲ್ಲವನ್ನೂ ಕಂಡರಿಸಿದ್ದಾರೆ. ಬರಹದಲ್ಲಿ ವಿಶ್ವವನ್ನೇ ಸುತ್ತಿದ್ದಾರೆ. ಹೊತ್ತು ತಂದಿದ್ದಾರೆ. ಅಂಥವುಗಳಲ್ಲಿ ಕೆಲವು ಮಹತ್ವದವು ಸಂಕಲನ ರೂಪದಲ್ಲಿಯೂ ಹೊರಬಂದಿವೆ. 'ಆರ್ಕೆಸ್ಟ್ರಾ ಮತ್ತು ತಂಬೂರಿ', 'ವಾಲ್ಮೀಕಿ ತೂಕಡಿಸಿದಾಗ' ಇವೆಲ್ಲಾ ನಿಯತ ಕಾಲಿಕೆಗಳಲ್ಲಿ ಪ್ರಕಟವಾದ ಲೇಖನಗಳದ್ದೇ ಸಂಕಲನ.

'ಸತ್ಯಮೇವ ಜಯತೇ'–ಎಂಬೀ ನುಡಿಯ ಬಗ್ಗೆ, 'ಓಂಕಾರ' ಶಬ್ದದ ಬಗ್ಗೆ ವಿಶ್ಲೇಷಿಸಿ ಹೊಸಬೆಳಕು ಬೀರಿದ್ದು, ಅವತಾರಗಳೆಂಬ ಅವಿವೇಕ, ಆದಿಶಂಕರರು ನಿರೀಶ್ವರ ವಾದಿಗಳೇ ?' 'ಮಧ್ವಮತದ ಮೇಲೆ ಜೈನ ದರ್ಶನ', 'ಹೈಗನಾಡೇ ಗೋರಾಷ್ಟ್ರವೇ ?', 'ರಸ ನಿಷ್ಪತ್ತಿ' 'ಯಕ್ಷಗಾನ ಬಯಲಾಟದ ಮೂಲ ಗೊಂಬೆಯಾಟವೇ ?' ಹೃದಯ 'ಸಂಸ್ಕಾರಕ್ಕೆ ಕಾವ್ಯಗಾಯನ', 'ರಾಮರಾಜ್ಯ ಹೇಗೆ ನಡೆದಿದೆ', 'ಸಂಸ್ಕೃತವಿಲ್ಲದೇ ಸಂಸ್ಕೃತಿಯಿಲ್ಲ', 'ರಸಾಯನ ಶಾಸ್ತ್ರವನ್ನು ಹೇಗೆ ಕಲಿಸಬೇಕು', 'ಹಿಂದುಗಳು ಮತ್ತು ಧರ್ಮಾಂತರ' ಹೀಗೆ ನೂರಾರು ಲೇಖನಗಳು ಸರ್ವಕಾಲಿಕ ಮೌಲ್ಯ ಹೊಂದಿರುವುದನ್ನು ಪಟ್ಟಿ ಮಾಡಬಹುದು. ಹಾಗೆ ಅವರ ಬರಹಗಳ ವ್ಯಾಪ್ತಿ ಮತ್ತು ವೈಶಿಷ್ಟ್ಯವು. ಅವರ ಪತ್ರಿಕಾ ಬರಹಗಳಲ್ಲಿ ಕಾಣಿಸಿಕೊಂಡ ಮುಖ್ಯ ಶೀಲವೆಂದರೆ–ವೈಯಕ್ತಿಕ ಸಂಬಂಧ—ಸ್ನೇಹ ಬಂಧವನ್ನು ಎಣಿಸದೇ ಸಾರ್ವಜನಿಕ ನಡವಳಿಕೆ, ಅಲ್ಲಿಯ ತಪ್ಪು ತಡೆಗಳನ್ನು ಲೋಪ ದೋಷಗಳನ್ನು ಎತ್ತಿ ಬರೆಯಲು ಸಂಕೋಚ ಗೊಳ್ಳದೇ ಬರಹಗಾರ–ಪತ್ರಿಕಾಕರ್ತನ ನಿರ್ಲಿಪ್ತತೆಯನ್ನು ಕಾಯ್ದು ಕೊಂಡಿರುವುದ. ಹೀಗೆ ನಿರ್ಮಮತ್ವ, ನಿರ್ದಾಕ್ಷಿಣ್ಯದಿಂದ ಬರೆಯುವಾಗಲೂ ಅವನ್ನು ತಿದಿ ಕೊಳ್ಳುವಂತಾಗಬೇಕೆಂಬ ಆ ಸಹೃದಯತೆ, ಕಾಳಜಿಯನ್ನೇ ಉಳಿಸಿ ಕೊಂಡಿದ್ದಾರೆ. ಪ್ರಿಯಭಾಷಿಕರಾಗಿಯೇ ಧ್ವನಿ ಎತ್ತಿದ್ದಾರೆ.

* * *

ಹೀಗೆ–ಹೀಗೆ ಡಾ|| ಗೌರೀಶ ಕಾಯ್ಕಿಣಿಯವರನ್ನು ಅವರ ಬರಹ ವ್ಯಕ್ತಿತ್ವವನ್ನು ಇನ್ನೂ ಇನ್ನೂ ಎಷ್ಟೇ ಪರಿಚಯಿಸುತ್ತ ಹೋದರೂ ಅದರ ಗಡಿ ಮತ್ತೆ ಮುಂದಕ್ಕೆ ಹೋಗುತ್ತಲೇ ಇರುತ್ತದೆ. ಅಂತಿಮವು ದುರ್ಲಭ. ಹಾಗಿದ್ದರೂ 'ಕನ್ನಡಿಯಲ್ಲಿ ಮೇರು ಪರ್ವತವನ್ನು' ಕಾಣಿಸಲು ನಾನಿಲ್ಲಿ ಪ್ರಾಮಾಣಿಕ ಪ್ರಯತ್ನವೆಸಗಿದ್ದೇನೆ. ಪಥಿಕನಿಗೆ ಆ ದಿಕ್ಕು, ಆ ದಾರಿ ತೋರುಬೆರಳಿಂದ ತೋರಿದ್ದೇನೆ. ಆ ದಿಶೆಯಲ್ಲಿ ಸ್ವಯಂ ಸಾಗಿ ಹೊಕ್ಕು ನೋಡಿಕೊಳ್ಳಲು ಓದುಗ ಆಸಕ್ತನಾಗಲಿ ಎಂಬುದಿಷ್ಟೇ ನನ್ನೀ ಪ್ರಯತ್ನದ ಸಾಧನೆ. ಅದಾದರೆ ಓದುಗನ ಭಾಗ್ಯ, ಆಗದಿದ್ದರೆ ಬರಹಗಾರನ ವಿಫಲತೆ. ಕ್ಷಮಿಸಿ ಬಿಡಿ.

* * *

ಅನುಬಂಧ

ಡಾ|| ಗೌರೀಶ ಕಾಯ್ಕಿಣಿಯವರ ಚರಿತ್ರೆಯ ಕೆಲವು ಮುಖ್ಯ ಸಂಗತಿಗಳು :

೧೨–೯–೧೯೧೨ ಜನನ ; ಏಪ್ರಿಲ್ ೧೯೩೧ ಮೆಟ್ರಿಕ್ಯುಲೇಶನ್ ಮತ್ತು ನಂತರ F Y A ವರೆಗೆ ಶಿಕ್ಷಣ ಘಟ್ಟ ಸ್ಥಗಿತ. ಜೂನ್ ೧೯೩೭ ಪ್ರಥಮತಃ ಅಧ್ಯಾಪಕ ವೃತ್ತಿ ಪ್ರಾರಂಭ. ೧೯೩೯. ಮಿಡ್ಲ ಸ್ಕೂಲ ಅಧ್ಯಾಪಕ ೧೯೪೫ ಎಸ್.ಟಿ.ಸಿ. ಉತ್ತೀರ್ಣ, ಹಿಂದಿ ಪದವಿ ೧೯೫೩—ಶಾಂತಾ ಕಾಯ್ಕಿಣಿಯವರೊಂದಿಗೆ ವಿವಾಹ.

೨೪–೧–೧೯೫೪ ಏಕಮಾತ್ರ ಪುತ್ರ ಜಯಂತನ ಜನನ.

ಸಾಮಾಜಿಕ ಸ್ಥಾನ ಮಾನ :

೧೯೬೪ರಲ್ಲಿ 'ಪ್ರೊಗ್ರೆಸ್ಸಿವ್ ಆಫ್ ಮೈಸೂರು ಪತ್ರಿಕಾ ಮಂಡಳಿ ಸದಸ್ಯ ; ೧೯೬೫ ರಿಂದ ೭೦ರವರೆಗೆ ಕ. ವಿ. ವಿ. ವ್ಯಾಸಂಗ ವಿಸ್ತರಣಾ

ವಿಭಾಗದ ಸಲಹಾ ಸಮಿತಿ ಸದಸ್ಯ ; ೧೯೭೩ ರಿಂದ ೮೩ ರ ವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ ; ೧೯೭೩ರಲ್ಲಿ ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ; ೧೯೭೪-೭೫ರಲ್ಲಿ ಧಾರವಾಡ ಆಕಾಶವಾಣಿ ಕೇಂದ್ರದ ಸಲಹೆಗಾರ ಸದಸ್ಯತ್ವ ;

೧೯೭೩ರಲ್ಲಿ ಆದರ್ಶ ಶಿಕ್ಷಕ ರಾಜ್ಯ ಪ್ರಶಸ್ತಿ ; ೧೯೮೮ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ವಾಲ್ಮೀಕಿ—ತೂಕಡಿಸಿದಾಗ ಕೃತಿಗೆ); ೧೯೯೧ ರಲ್ಲಿ ಪ್ರತಿಷ್ಠಿತ 'ವರ್ಧಮಾನ ಸಾಹಿತ್ಯ ಪ್ರಶಸ್ತಿ' ; ೧೯೯೩ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ; ಸರಕಾರದಿಂದ ಗೌರವ ಮಾಸಾಶನ ; ೧೯೯೪-೧೯೯೫ರಲ್ಲಿ ಕ. ವಿ. ವಿ ಯಿಂದ ಡಾಕ್ಟರೇಟ ಪ್ರಶಸ್ತಿ ; ಇವಲ್ಲದೇ ಹಲವೆಡೆ ವಿವಿಧ ಸಂಘ ಸಂಸ್ಥೆಗಳಿಂದ ಸನ್ಮಾನ-ಪ್ರಶಸ್ತಿಗಳೂ ಲಭಿಸಿವೆ. ಗೋಕರ್ಣ ದಲ್ಲಿ ಷಷ್ಟ್ಯಬ್ಧಿ ಸಮಿತಿಯಿಂದ ಸನ್ಮಾನವೇರ್ಪಟ್ಟಿದೆ. ಗೌರೀಶರ ಕುರಿತು 'ನಿಲಾಂಜನ' 'ಗುಣಗೌರವ' ಸಂಸ್ಕರಣ ಗ್ರಂಥ ಪ್ರಕಟವಾಗಿವೆ.

ಪ್ರಕಟಿತ ಗ್ರಂಥಗಳು :

೧. ಒಲವಿನ ಒಗಟು (ನಾಟಕ : ಪ್ರಪ್ರಥಮ ಪ್ರಕಾಶಿತ) ೨. ವಿಚಾರವಾದ ೧, ೩. ವಿಚಾರವಾದ ಮತ್ತು ನಿರಾಶಾವಾದ, ೪. ವಿಚಾರವಾದ ಉತ್ತರಾರ್ಧ , ೫. ಮಾರ್ಕ್ಸವಾದ, ೬. ನವಮಾನವತಾವಾದ, ೭. ನಾಸ್ತಿಕನು ಮತ್ತು ದೇವರು, ೮. ಗಂಡು ಹೆಣ್ಣು, ೯. ಪ್ರೀತಿ, ೧೦. ಬಾಳಿನ ಗುಟ್ಟು, ೧೧. ಮನೋವಿಜ್ಞಾನ ರೂಪರೇಶೆಗಳು. ೧೨. ಗ್ರೀಕ್ ದಾರ್ಶನಿಕರು, ೧೩. ಪಶ್ಚಿಮ ಪ್ರತಿಭೆ-೧, ೧೪. ಸತ್ಯಾರ್ಥಿ, ೧೫. ನವ್ಯದ ನಾಲ್ಕು ನಾಯಕರು, ೧೬. ಕಂಪಿನಕರೆ ೧೭ ದಿನಕರ ದೇಸಾಯರ ಸಾಹಿತ್ಯ, ೧೮. ಕಣವಿ ಕಾವ್ಯ ದೃಷ್ಟಿ, ೧೯. ಕಟಾಕ್ಷ, ೨೦. ಗುಣಗೌರವ, ೨೧. ಪ್ರಜ್ಞಾನೇತ್ರದ ಬೆಳಕಿನಲ್ಲಿ, ೨೨. ಸ್ವಾತಂತ್ರ್ಯೋತ್ತರ ವಿಚಾರ ಸಾಹಿತ್ಯ, ೨೩. ಭಾರತೀಯ ವಿಜ್ಞಾನಿಗಳು ಭಾಗ-೧, ೨೪. ಭಾರತೀಯ ವಿಜ್ಞಾನಿಗಳು ಭಾಗ-೨, ೨೫. ದೇವತಾತ್ಮಾ, ೨೫. ವಿಶ್ವದ ಆಖ್ಯಾಯಿಕೆಗಳು, ೨೬. ವಾಲ್ಮೀಕಿ ತೂಕಡಿಸಿದಾಗ, ೨೭ ಕರ್ಣಾಮೃತ (ರೇಡಿಯೋ ನಾಟಕಗಳು) ೨೮. ಆಕಾಶ ನಾಟಕಗಳು

(ನಾಟಕ ಸಂಕಲನ), ೨೯. ಕ್ರೌಂಚಧ್ವನಿ (ಗೀತ ರೂಪಕ), ೩೦. ನಾನಾಲಾಲ, ೩೧. ಶ್ಯಾಮರಾವ ವಿಠ್ಠಲರಾವ್ ಕುಲಕರ್ಣಿ, ೩೨. ಥಾಮಸ್ ಎಡಿಸನ್, ೩೩. ಪಾಂಡೇಶ್ವರ ಗಣಪತರಾಯರು, ೩೪. ಕೇಶವಸುತ, ೩೫. ಭಾರತೀಯ ತತ್ತ್ವಜ್ಞಾನದ ಇತಿಹಾಸ, ೩೬. ಪಂಜಾಬಿ ಕಥೆಗಳು (ಅನು), ೩೭. ಬಿಳಿ ಕೊಕ್ಕರೆ (ಅನು), ೩೮. ಮಣ್ಣಿನ ಮನುಷ್ಯ (ಅನು), ೩೯. ಮಲೆನಾಡಿಗರು (ಅನು), ೪೦. ಬರ್ಲಿನ್ ಬಂದಿತು ಗಂಗೆಯ ತಡಿಗೆ (ಅನು), ೪೧. ವ್ಯಾಸಪರ್ವ (ಅನು), ೪೨. ಗೋಕರ್ಣದ ಕಥೆ, ೪೩. ಸಂಪ್ರದಾಯ ಮತ್ತು ಸಣ್ಣ ಕುಟುಂಬ, ೪೪. ಕರ್ನಾಟಕದ ಸಿಂಡ್ರೆಲ್ಲಾ, ೪೫. ಆರ್ಕೆಸ್ಟ್ರಾ ಮತ್ತು ತಂಬೂರಿ, ೪೬. ಲೋಕಾಯತ, ೪೭. ವಿಮರ್ಶೆಗೆ ಯಾವ ಹಾದಿ, ೪೮. ಸ್ವಾದಪುಟ (ಕಾವ್ಯ ವಿಮರ್ಶೆ), ೪೯. ಮಾನವ್ಯ ಕವಿ, ೫೦. ಮೀನಾಕ್ಷಿ (ಕೊಂಕಣಿ ಕಾವ್ಯ), ೫೧. ಕನ್ನಡ ಸಾಹಿತ್ಯಾಚಾ ಇತಿಹಾಸ (ಮರಾಠಿ), ೫೨. ಭಗವಾನ್ ನಿತ್ಯಾನಂದ (ಮರಾಠಿ), ೫೩. ಮಾರಿಷೀ ರಸಯಾತ್ರಾ (ಮರಾಠಿ) ೫೪. ಅಗ್ನಿವರ್ಣ (ಮರಾಠಿ).

ಪ್ರಕಟಗೊಂಡಿರುವ ಈ ಮೇಲಿನ ಕೃತಿಗಳನ್ನು ಬಿಡಿ–ಬಿಡಿಯಾಗಿ ಬೇರೆ–ಬೇರೆ ಪ್ರಕಾಶಕರು ಪ್ರಕಾಶನಗೊಳಿಸಿದ್ದಾರೆ. ಅವುಗಳಲ್ಲಿ ಅ. ನಂ. ೧ ರಿಂದ ೨೧ರ ವರೆಗಿನ ಗ್ರಂಥಗಳು ಶ್ರೀ ರಾಘವೇಂದ್ರ ಪ್ರಕಾಶನ ಅಂಬಾರಕೊಡ್ಲ, ಅಂಕೋಲಾ, ಉ.ಕ. ಇವರು ಪ್ರಕಟಿಸುತ್ತಲಿರುವ 'ಗೌರೀಶರ ಸಮಗ್ರ ಸಾಹಿತ್ಯ' ಎಂಬ ಪ್ರಕಟಣೆಯ ಅಂಗವಾಗಿ ಬೇರೆ–ಬೇರೆಯಾದ ೫ ಸಂಪುಟಗಳಲ್ಲಿ ಕ್ರೋಢೀಕರಿಸಲ್ಪಟ್ಟು ಪುನರ್ ಪ್ರಕಾಶನ ಕಂಡಿವೆ. ಒಟ್ಟು ಹತ್ತು ಸಂಪುಟಗಳನ್ನು ಹೊರತರಲು ಆ ಪ್ರಕಾಶನ ಸಂಸ್ಥೆ ಉದ್ದೇಶಿಸಿದೆ.

ಅಪ್ರಕಾಶಿತ ಕೃತಿಗಳು

(ಅ) ರೇಡಿಯೋ ರೂಪಕಗಳು : (ಪ್ರಸಾರಿತ) ೧. ಮೇನಕಾ, ೨. ತಾರಾ, ೩. ದೀಪಾವಳಿ, ೪. ದೀಪಾವಳಿ, ೫. ನರಕ–ಚತುರ್ದಶಿ, ೬. ನೃಸಿಂಹಾವತಾರ, ೭. ಅಂಬಾ (ಕೊಂಕಣಿ), ೮. ಶಬರಿ, ೯. ಗೋಪೀಕೃಷ್ಣ, ೧೦. ವಿಷಯ ಪತ್ರಲೇಖನ, ೧೧. ಧ್ರುವಕುಮಾರ (ಕೊಂಕಣಿ), ೧೨. ಕೊಂಕಣಿ ಕವನಗಳು.

(ಬ) ನಾಟಿಕಗಳು : ೧. ಚಿದಂಬರ ರಹಸ್ಯ, ೨. ಮಾಡಿದ್ದೊಂದು ಆದದ್ದೊಂದು, ೩. ಅತ್ತೆಗೆ ಲತ್ತೆ, ೫. ಮೀರಾರಾಣಿ,

(ಕ) ಕೇವಲ ಪ್ರಯೋಗಾರ್ಥ ಬರೆದ ನಾಟಿಕಗಳು : ೧. ಭೂಕೈಲಾಸ (ಅನು), ೨. ಆಶಾ ನಿರಾಶಾ (ಅನು), ೩. ಅದಃಪಾತ (ಅನು), ೪. ಚಂದ್ರಗ್ರಹಣ (ಅನು), ೫. ತ್ರಿದಂಡಿ ಸನ್ಯಾಸ, ೬. ರಾಜ್ಯಾರೋಹಣ (ಅನು), ೭. ಸ್ವಯಂಸೇವಕ, ೮. ಏಕಲವ್ಯ (ಅನು), ೯. ಬೆಳ್ಳಿ ಬಟ್ಟಲು, ೧೦. ಮನೆಯಾರದು ?, ೧೧. ನಾಟ್ಯವೀರ.

(ಡ) ಇವಲ್ಲದೇ ಇಂಗ್ಲಿಷಿನಲ್ಲಿ ರಚಿಸಿದ ಕೃತಿಗಳು :

1. National Integration in Action (Published), 2. Shri M. Vishweshvarayya (Published), Sham Rao Vithal Kaikini (Published), 4. Caste & Castism It's Cause and Cure, 5. Influence of Kannada on Konkani (Both's unpublished)

ಕೃತಿ ಪ್ರಕಟಿಸಿದ ಪ್ರಮುಖ ಪ್ರಕಾಶಕರು

೧. ಆರಂಭದ ದಿನಗಳಲ್ಲಿ ಮಿಂಚಿನ ಬಳ್ಳಿ ಪ್ರಕಾಶನ ಧಾರವಾಡ ಇವರಿಂದಲೇ ೯ ಪುಸ್ತಕಗಳು, ೨. ಕರ್ನಾಟಕ ಸಹಕಾರೀ ಪ್ರಕಾಶನ, ಬೆಂಗಳೂರು, ೩. ಸುಬೋಧ ಪ್ರಕಾಶನ, ೪. ಸಮಾಜ ಪುಸ್ತಕಾಲಯ ಧಾರವಾಡ, ೫. ನ್ಯಾಶನಲ್ ಬುಕ್ ಟ್ರಸ್ಟ್, ಬೆಂಗಳೂರು, ೬. ಸಾಹಿತ್ಯ ಅಕಾಡೆಮಿ ಬೆಂಗಳೂರು, ೭. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೮. ಕರ್ನಾಟಕ ವಿಶ್ವ ವಿದ್ಯಾಲಯ ೯. ಕೇರಳ ಗ್ರಂಥ ಪ್ರಕಾಶನ, ೧೦. ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ, ೧೧. ಪರ್ಣಕುಟಿ ಗ್ರಂಥಮಾಲೆ ಗೋಕರ್ಣ, ೧೨. ಸುಲಭ ಸಾಹಿತ್ಯಮಾಲೆ ಕುಮಟಾ,

ಅಪ್ರಕಾಶಿತ ಅನುವಾದಗಳು :

೧. ಮೈಸೂರು ವಿಶ್ವವಿದ್ಯಾಲಯಕ್ಕಾಗಿ The Survey of Human Destiny,

೨. ಕರ್ನಾಟಕ ವಿಶ್ವವಿದ್ಯಾಲಯಕ್ಕಾಗಿ The Future Poetry by Aurobindo.

ಗಣ್ಯ ಸ್ಮರಣ ಸಂಚಿಕೆಗಳಲ್ಲಿ ಪ್ರಕಟಿತ ಲೇಖನಗಳು

೧. ಡಾ॥ ಅ.ನ.ಕೃ., ೨. ಡಾ॥ ಮಾಸ್ತಿ ವೆಂಕಟೇಶ ಐಯ್ಯಂಗಾರ, ೩. ಡಾ॥ ದಿನಕರ ದೇಸಾಯಿ, ೪. ಡಾ॥ ವಿ.ಕೃ. ಗೋಕಾಕ, ೫. ಡಾ॥ ರಂ. ಶ್ರೀ. ಮುಗಳಿ, ೬. ಡಾ॥ ಶಿವರಾಮ ಕಾರಂತ, ೭. ಡಾ॥ ವಿ. ಸೀ, ೮. ಡಾ॥ ಜ.ಚ.ನಿ., ೯. ಡಾ॥ ಭೈರಪ್ಪ, ೧೦. ಡಾ॥ ಶಂ. ಬಾ. ಜೋಶಿ, ೧೧. ಡಾ॥. ಆರ್. ಸಿ. ಹಿರೇಮಠ, ೧೨. ಡಾ॥ ದ. ರಾ. ಬೇಂದ್ರೆ, ೧೩. ಬೀchi, ೧೪. ಗಾಂಧೀ ತತ್ತ್ವದರ್ಶನ, ೧೫. ಸಾಹಿತ್ಯ ಮತ್ತು ರಾಷ್ಟ್ರೀಯ ಪ್ರಜ್ಞೆ, ೧೬. ಜನತೆ ಮತ್ತು ಸಾಹಿತ್ಯ, ೧೭. ಕನ್ನಡದಲ್ಲಿ ಬಾಲ ಸಾಹಿತ್ಯ, ೧೮. ಶ್ರೀ ಸ.ಪ. ಗಾಂವ್ಕರ, ೧೯. ಶ್ರೀ ಶ್ರೀಪಾದ ಹೆಗಡೆ ಕಡವೆ, ೨೦. ಪೊಳಲಿ ಶಂಕರ ನಾರಾಯಣ ಶಾಸ್ತ್ರಿ, ೨೧. ಸೀತಾರಾಮಯ್ಯ ಬೇರಾಜೆ, ೨೨. ಟಿ.ಎಂ.ಎ. ಪೈ, ೨೩. ವಿದ್ವಾನ್ ಗಣಪತಿ ಭಟ್ ಹಾಸಣಗಿ, ೨೪. ಬಸವರಾಜ ಕಟ್ಟೀಮನಿ, ೨೫. ಎಸ್. ಎಸ್. ಒಡೆಯರ್, ೨೬. ಚೆನ್ನವೀರ ಕಣವಿ, ೨೭. ಮಹಾಬಲಹೆಗಡೆ ಕೆರೆಮನೆ, ೨೮. ಶಂಭು ಹೆಗಡೆ, ೨೯. ಭಾರತೀಸುತ, ೩೦. ಸಿಂಪಿ ಲಿಂಗಣ್ಣ, ೩೧. ವಿಲಿಯಂ ಶೇಕ್ಸಪೀಯರ, [ಒಬ್ಬರದೇ ಲೇಖನ ಇಷ್ಟು ಸ್ಮರಣ ಸಂಚಿಕೆಗಳಲ್ಲಿ ಸೇರಿಕೊಳ್ಳುವುದೂ ಆ ಬರಹದ ವಿಶೇಷತ್ವದ ಮಹತ್ವ.]

ಪತ್ರಿಕಾ ರಂಗದಲ್ಲಿ : ಪ್ರಧಾನ ಸಂಪಾದಕ : ೧. ಬೆಳಕು (ಧಾರವಾಡ), ೨. ನಾಗರಿಕ (ಕಾರವಾರ)

ಅಂಕಣ ಬರಹ : ೧. ಜನ ಸೇವಕ (ಅಂಕೋಲಾ) ೨೬–೧–೧೯೫೫ ರಿಂದ ೨–೮–೭೨ರ ವರೆಗೆ ನಿರಂತರ.

ಅ) ವಾರದ ಉಪ್ಪಿನಕಾಯಿ, ಅಂಕಣ : 'ಅಡಿಗೆ ಭಟ್ಟ' ಕಾವ್ಯನಾಮ'.

ಬ) ವಾರದ ವಿಶ್ವ, ಅಂಕಣ : ವೈಶ್ವಾನರ' ಹೆಸರಿನಲ್ಲಿ

ಕ) ಸಾಹಿತ್ಯ ದರ್ಪಣ, ಅಂಕಣ : ಜಿ.ವಿ.ಕೆ. ಹೆಸರಿನಲ್ಲಿ.

೨. ಜನಪ್ರಗತಿ ಸಾಪ್ತಾಹಿಕದಲ್ಲಿ 'ವೈಶ್ವಾನರ' ಹೆಸರಿನಿಂದ.

೩. ಸಮನ್ವಯ (ಶಿರಸಿ) ಪತ್ರಿಕೆ 'ಗೌರೀಶಂಕರ'ರಿಂದ ಎಂಬ ಅಂಕಣ.

೪. ಕರಾವಳಿ ಗ್ರಾಮ ವಿಕಾಸ (ಹೊನ್ನಾವರ)ದಲ್ಲಿ 'ಕಂಡಿದ್ದು ಆಡಿದ್ದು' ಅಂಕಣ.

೫. ಗ್ರಾಮ ಜೀವನ, ಮಾಸಿಕದಲ್ಲಿ.

೬. ಕಸ್ತೂರಿ ಮಾಸಿಕದಲ್ಲಿ 'ನನಗೆ ನೆನಪಾದಂತೆ' ಅಂಕಣ.

ಪತ್ರಿಕೆಗಳಲ್ಲಿ ಪ್ರಕಟವಾದ—ಆದರೆ ಪುಸ್ತಕ ರೂಪದಲ್ಲಿ ಬರದ ಕೆಲವು ಮಹತ್ವದ ಲೇಖನಗಳು ೧. ಜಾಗತಿಕ ಯುದ್ಧಗಳು ಏಕೆ ಜರುಗಬೇಕು (ನಂದಿನಿ ಶಿರಸಿ ೧೯೩೦), ೨. 'ವಿವಾಹ' (ಜಯಕನಾ ೧೯೫೦–೫೫ರ ಮಧ್ಯೆ),– ೩. ವ್ಯಾಸ-ವಾಲ್ಮೀಕಿ—ಭಾಸ (ಜೀ ೪. ಸೌಂದರ್ಯ ಶೋಧ—ಆನಂದ ಬೋಧ (ಜೀವನ), ೫. ಮೈ... ಯುವರಾಜರು (ಕರ್ಮವೀರ), ೬. ಉ. ಕ. ದ ಜಾತಿಗಳು (ಕರ್ಮವೀರ), ೭. ವಾಕ್ಯ ವಿಡಂಬನೆ (ಕಸ್ತೂರಿ), ೮. ಹಾಲಕ್ಕಿ ಒಕ್ಕಲು (ಸಂ. ಕ.) ೯. ಪಂಪ–ಒಂದು ವಿವೇಚನೆ (ಕರ್ನಾಟಕ ಭಾರತಿ) ಹಾಗೂ

ಕೆಲವು ದೀರ್ಘ ಪ್ರಬಂಧಗಳು : ೧. ಮಾನವನ ಜೀವನದ ದಶಾಂತರಗಳು, ೨. ಬ್ರಹ್ಮ ಮತ್ತು ಯಜ್ಞ, ೩. ರಸ ನಿಷ್ಪತ್ತಿ, ೪. ಗಾಂಧೀಜಿ ಭಾಷೆ ಮತ್ತು ಶಿಕ್ಷಣ, ೫. ಯಕ್ಷಗಾನ ರಂಗ ಹಾಗೂ ಸಮಕಾಲೀನ ನಾಟಕ, ೬. ವಿಜ್ಞಾನ ಉ. ಕ. ಇತಿಹಾಸದ ಮೂಗುತಿ, ೭. ಮರಾಠಿಗೆ ಸೇರಿದ ಕೆಲವು ಕನ್ನಡ ಶಬ್ದಗಳು, ೮. ಕಾಲ ನಿಲ್ಲುವುದಿಲ್ಲ, ೯. ವೈಶಾಖದ ಪಾತ್ರ ಪ್ರಸಂಗಗಳು, [ಇವು ಬಿಡಿ ಬರಹಗಳಾಗಿದ್ದರೂ ದೀರ್ಘ ಪ್ರಬಂಧಗಳೆಂಬ ಕಾರಣಕ್ಕೆ ಇಲ್ಲಿ ದಾಖಲಿಸಿದೆ. ಇವುಗಳ ಹೊರತಾಗಿರುವ ಲೇಖನಗಳೂ ಅಸಂಖ್ಯ.]

ಇದೇ ರೀತಿ–ಇಂಗ್ಲಿಷ್, ಹಿಂದಿ, ಮರಾಠಿಗಳಲ್ಲಿ ಬರೆದ ಕೆಲವು ಮಹತ್ವದ ಲೇಖನಗಳೂ ಬಿಡಿ–ಬಿಡಿಯಾಗಿ ಪ್ರಕಟಗೊಂಡಿವೆ.

ಸೃಜನಾತ್ಮಕ ರಚನೆಗಿಂತ ಸೃಜನೇತರದಲ್ಲಿ ಗೌರೀಶ ಕಾಯ್ಕಿಣಿ ಅವರದು ಬಹು ದೊಡ್ಡ ಹೆಸರು. ಕನ್ನಡ ವಿಚಾರ ಸಾಹಿತ್ಯದ ಆದ್ಯ ಪ್ರವರ್ತಕರೆಂದು ಹೇಳುವಲ್ಲಿ ಹೆಮ್ಮೆ ಇದೆ. ವಿಚಾರ ವಾದದ ಹಲವು ಮಗ್ಗಲುಗಳನ್ನು ಹಲವು ಮಜಲುಗಳಲ್ಲಿ ಗುರುತಿಸಿ ವಿಶ್ಲೇಷಿಸುವ ಮೂಲಕ ಕನ್ನಡ ಸಾಹಿತ್ಯದಲ್ಲಿ ವೈಚಾರಿಕತೆಯ ಹೊಸ ಕ್ಷಿತಿಜವನ್ನೇ ನಿರ್ಮಾಣ ಮಾಡಿದರು. ವಿಚಾರ ವಾದವು (Rationalists) ಪ್ರಜ್ಞಾವಾದ (Rationalisation) ದಿಂದ ಸಂಪೂರ್ಣ ಭಿನ್ನ ಹಾಗೂ ಅರ್ಥಪೂರ್ಣ ಎಂಬುದನ್ನು ಪ್ರತಿಪಾದಿಸು ವಲ್ಲಿ ತಮ್ಮ ಸ್ವೋಪಜ್ಞತೆಯನ್ನು ಮೆರೆದು ಕನ್ನಡ ಕ್ಕೊಂದು ಹೊಸ ಆಯಾಮವನ್ನೇ ನಿರ್ಮಿಸಿಕೊಟ್ಟ ಕೀರ್ತಿ ಗೌರೀಶ ಕಾಯ್ಕಿಣಿಯವರಿಗೆ ಸಲ್ಲುತ್ತದೆ. 'ವಿಚಾರವಾದ' ಕುರಿತ ಅವರ ಮೂರೂ ಪುಸ್ತಕ ಗಳನ್ನು ಓದಿದಾಗ ಅವರನ್ನೇ ನಾನು ಕಂಡೆ. ಆ ಮಹಾನ್ ವ್ಯಕ್ತಿತ್ವವನ್ನು ನಾನು ಮೆಚ್ಚಿದ್ದೇನೆ. ಮಾಸದ ಎರಡು ಮಾತುಗಳನ್ನಾಡಿ ಮಣಿದಿದ್ದೇನೆ.

ಸಾ. ಶಿ. ಮರುಳಯ್ಯ
ಅಧ್ಯಕ್ಷ